ಮುಂಗಾರು
ಶನಿವಾರ, ಜನವರಿ 3, 1987

ಸೆರೆಮನೆಯೇ ವಾಸಿ

ಫೆಬ್ರುವರಿ ಒಂದನೇ ದಿನಾಂಕದಿಂದ ತೊಡಗಿ ಕರ್ನಾಟಕದಲ್ಲಿ ಇಡೀ ವರ್ಷ ಜೈಲ್ ಭರೋ ಚಳವಳಿ ನಡೆಸಲು ಕರ್ನಾಟಕ ರಾಜ್ಯ ರೈತ ಸಂಘವು ತೀರ್ಮಾನಿಸಿದೆ. ಪ್ರತಿ ತಿಂಗಳ 10ನೇ ದಿನಾಂಕ ಪ್ರತಿ ಊರಿನಲ್ಲಿಯೂ ರೈತರು ಸರದಿಯ ಮೇಲೆ ಈ ಚಳವಳಿ ನಡೆಸಬೇಕೆಂದು ನಿರ್ಧರಿಸಲಾಗಿದೆ.

ರೈತರ ಸಮಸ್ಯೆಗಳ ಬಗ್ಗೆ ಸರಕಾರಕ್ಕಿರುವ ಔದಾಸೀನ್ಯವನ್ನು ಕಿತ್ತೊಗೆಯುವ ಉದ್ದೇಶವನ್ನು ಈ ಚಳವಳಿ ಹೊಂದಿದೆ. ಸಮಸ್ಯೆಗಳಿಗೆ ಪರಿಹಾರ ಕೋರಿ ಸರಕಾರಕ್ಕೆ ಬರೆದ ಪತ್ರಗಳಿಗೆ ಸರಕಾರ ಉತ್ತರವನ್ನೇ ಕೊಡುತ್ತಿಲ್ಲವೆಂದು ರೈತನಾಯಕರು ಆರೋಪಿಸಿದ್ದಾರೆ. ಉತ್ತರವನ್ನು ಕೊಡುವ ಸೌಜನ್ಯವನ್ನೂ ಸರಕಾರ ತೋರಿಸಿಲ್ಲವೆಂದಾದರೆ ರಾಜ್ಯದ ರಾಜಕೀಯದ ಆಗುಹೋಗುಗಳಲ್ಲಿ ರೈತರ ಮಾತನ್ನು ಕೇಳಬೇಕಾದ್ದೇನೂ ಇಲ್ಲವೆಂಬ, ರೈತರಿಗೆ ರಾಜಕೀಯ ತೂಕ ಏನೂ ಇಲ್ಲವೆಂಬ, ರೈತರಿಗೆ ಅನ್ಯಾಯ ಅಸಮಾಧಾನಗಳಾದರೆ ಅದರಿಂದ ಆಕಾಶವೇನೂ ಕಳಚಿ ಬೀಳುವುದಿಲ್ಲವೆಂಬ ಉಪೇಕ್ಷೆಯೂ ಉಡಾಫೆಯೂ ಸರಕಾರಕ್ಕಿದೆ ಎಂದಾಯಿತು. ಇಂತಹ ಪರಿಸ್ಥಿತಿಯಲ್ಲಿ ರೈತರ ಶಕ್ತಿ ಸಾಮರ್ಥ್ಯಗಳೇನು, ಅವರ ಸಂಘಟನಾಬಲವೇನು, ಇಂದಿನ ಸಾಮಾಜಿಕ–ಆರ್ಥಿಕ ವ್ಯವಹಾರಗಳಲ್ಲಿ ರೈತರ ಪಾತ್ರ–ಪಾಲುದಾರಿಕೆ ಎಷ್ಟು ಎಂಬುದನ್ನು ಸರಕಾರಕ್ಕೂ ಸಮಾಜಕ್ಕೂ ತಿಳಿಯಪಡಿಸುವಂತಹ ಕಾರ್ಯಕ್ರಮವಾಗಿ ಜೈಲ್ ಭರೋ ಚಳವಳಿಯನ್ನು ರೈತಸಂಘವು ಹಮ್ಮಿಕೊಂಡಿದೆ ಎಂದು ತಿಳಿದುಕೊಂಡರೆ ತಪ್ಪಲ್ಲ.

ಇಂದು ಆರ್ಥಿಕವಾಗಿ ಒಳ್ಳೆಯ ಸ್ಥಿತಿಯಲ್ಲಿರುವ ರೈತರ ಸಂಖ್ಯೆ ಬಲು ಕಡಿಮೆ. ಹತ್ತಿಪ್ಪತ್ತು ಎಕ್ರೆಗಳಿಗಿಂತ ಜಾಸ್ತಿ ತರಿ ಜಮೀನಿನ ಮಾಲೀಕರಾದವರು ಮಾತ್ರವೇ ಇಂದು ಕೈಯಲ್ಲಿ ನಾಲ್ಕು ಕಾಸು ಮಾಡಿಕೊಂಡು ಆರಾಮ ಸ್ಥಿತಿಯಲ್ಲಿರುವವರು. ಶೇಕಡಾ 90ರಷ್ಟು ರೈತರೂ ಹತ್ತಕ್ಕಿಂತ ಕಡಿಮೆ ಎಕ್ರೆ ಜಮೀನು ಹೊಂದಿದವರಾಗಿದ್ದು ಅವರ ಪೈಕಿಯೂ ಬಹುಮಂದಿ ಒಂದೆರಡು ಎಕ್ರೆಗಳ ಚಿಕ್ಕ ರೈತರು.

ಈ ರೈತರಿಗೆ ಕೃಷಿಯನ್ನು ಉದ್ದಿಮೆಯ ಗಾತ್ರದಲ್ಲಿ ನಡೆಸುವಂತಹ ಸಾಧನ ಸಂಪತ್ತು ಕೈಯಲ್ಲಿಲ್ಲ. ಅವರ ನೆರವಿಗೆ ಬರುವ ಹಣಕಾಸು ಸಂಸ್ಥೆಗಳಾಗಲಿ ಸರಕಾರಿ ಇಲಾಖೆಗಳಾಗಲಿ ಇಲ್ಲ. ಬಹುತೇಕ ಜಮೀನುಗಳಿಗೆ ನೀರಾವರಿ ಸೌಲಭ್ಯಗಳಿಲ್ಲ. ಕೊಳವೆ ಬಾವಿಯಂತಹ ನೀರಾವರಿ ಸೌಲಭ್ಯ ಮಾಡಿಕೊಂಡು, ಜಮೀನನ್ನು ಕೃಷಿಯ ತೆಕ್ಕೆಗೆ ತಂದು ಒಳ್ಳೆಯ ಬೀಜ ಗೊಬ್ಬರ ಹಾಕಿ ದುಡಿದು ಬೆಳೆ ತೆಗೆಯಲು ಬಂಡವಾಳ ಒದಗಿಸಿ ಕೊಡುವ ಆರ್ಥಿಕ ವ್ಯವಸ್ಥೆಯು ನಮ್ಮ ನಾಡಿನಲ್ಲಿ ತುಂಬಾ ದುರ್ಬಲವಿದೆ. ಯಾರೋ ಕೆಲಮಂದಿ ಅದೃಷ್ಟಶಾಲಿಗಳಿಗೆ ಇಂತಹ ಅನುಕೂಲತೆಗಳು ಒದಗಿಬರುತ್ತವೆ.

ಇಷ್ಟನ್ನು ಮಾಡಿಕೊಂಡು ರೈತರು ಮಣ್ಣನ್ನು ಹದಮಾಡಿ ಬೆಳೆ ತೆಗೆದರೆ ಅದಕ್ಕೆ ಸೂಕ್ತ ಬೆಲೆ ಇಲ್ಲ. ಹೆಚ್ಚಿನೆಲ್ಲ ಕೃಷ್ಯುತ್ಪನ್ನಗಳಲ್ಲಿ ಬರುವ ಸ್ವಲ್ಪಾಂಶ ಲಾಭವನ್ನು ಪೇಟೆಗಳಲ್ಲಿರುವ ಮಾರುಕಟ್ಟೆ ದಲ್ಲಾಳಿಗಳೇ ನುಂಗಿ ಹಾಕುತ್ತಾರೆ. ರೈತರ ಕೈಯಲ್ಲಿ ಕವಡೆ ಕೊಟ್ಟು ಕಳಿಸುತ್ತಾರೆ.

ಇದು ನಮ್ಮ ಮುಕ್ತ ಮಾರುಕಟ್ಟೆಯಲ್ಲಿ ಈಗ ಇರುವ ವಿಷಮಮಾನ, ಅದನ್ನು ಬದಲಾಯಿಸಬೇಕು ಎಂಬುದು ರೈತ ಸಮುದಾಯದ ಆಕಾಂಕ್ಷೆ. ತಾವು ಬೆಳೆದುದಕ್ಕೆ ಯೋಗ್ಯ ಬೆಲೆ ಸಿಗಬೇಕೆಂಬುದು ಅವರ ನ್ಯಾಯ ಸಮ್ಮತವಾದ ಕೇಳಿಕೆ. ಯಾವುದೇ ವೃತ್ತಿ, ದಂಧೆ ಅಥವಾ ಉದ್ಯಮವು ಸ್ವಂತ ಕಾಲಲ್ಲಿ ನಿಲ್ಲಲು ಸಾಧ್ಯವಾಗುವಂತಹ ಆರ್ಥಿಕ ಸ್ವರೂಪವನ್ನು ಹೊಂದಿರಬೇಕು. ಅಂದರೆ ಆರ್ಥಿಕವಾಗಿ ಲಾಭದಾಯಕವಾಗಿರಬೇಕು ಎಂದು ಅರ್ಥಶಾಸ್ತ್ರವು ಹೇಳುತ್ತದೆ. ಇಲ್ಲವಾದರೆ ಅಂಥ ಉದ್ಯಮವು ಸ್ವಂತ ಬಲವಿಲ್ಲದೆ ನಾಶವಾಗಿ ಹೋಗುತ್ತದೆ. ಜನರಿಗೆ ಅನ್ನಪಾನಾದಿಗಳನ್ನೂ ಕೈಗಾರಿಕೆಗೆ ಕಚ್ಚಾ ಮಾಲುಗಳನ್ನು ಒದಗಿಸುವ ಕೃಷಿರಂಗವು ಉಳಿದು ಬೆಳೆಯಲು ಬೇಕಾದ ನೀತಿಯನ್ನು ಅನುಸರಿಸಬೇಕೆಂದು ರೈತಾಪಿ ಜನರು ಅನೇಕ ಕಾಲದಿಂದ ಸರಕಾರವನ್ನು ಕೇಳುತ್ತ ಬಂದಿದ್ದಾರೆ.

ಕರ್ನಾಟಕದಲ್ಲಿ ಇದೇ ಉದ್ದೇಶದಿಂದ ಹೋರಾಟ ನಡೆದಿವೆ. ರೈತರ ನಡುವೆ ಕರ್ನಾಟಕದ ಕಥೆಯೂ ಸಾಹಸ ಗಾಥೆಯೇ ಆಗಿದೆ. ಆದರೆ ನಮ್ಮ ಸರಕಾರಗಳು ಇದಾವುದನ್ನೂ ಕಿವಿಗೇ ಹಾಕಿಕೊಂಡಿಲ್ಲ. ಈ ಸಣಕಲು ರೈತರೇನು ಮಾಡಿಯಾರೆಂಬ ಉಡಾಫೆ ಬೆಂಗಳೂರಿನ ಭೂಪರಲ್ಲಿ ಮನೆ ಮಾಡಿದೆ. ನಮ್ಮ ಸರಕಾರಕ್ಕೆ ರೈತರ ಹೆದರಿಕೆಯೇನಾದರೂ ಇರುತ್ತಿದ್ದರೆ ಎರಡು ರೂಪಾಯಿ ಬೆಲೆಗೆ ಕೆ.ಜಿ. ಅಕ್ಕಿಯನ್ನು ಪುರಜನರಿಗೆ ಕರೆದು ವಿತರಣೆ ಮಾಡುವ ನೀತಿಯನ್ನು ಅನುಸರಿಸುತ್ತಿದ್ದಿಲ್ಲ. ಎರಡು ರೂಪಾಯಿಗೆ ಅಕ್ಕಿ ಪಡೆಯುವ ಪೇಟೆಯ ಜನರು ಇಂದು ಹಳ್ಳಿಯಲ್ಲಿ ಆ ಅಕ್ಕಿಯನ್ನು ಬೆಳೆಯುವ ರೈತನಿಗಿಂತಲೂ ಹೆಚ್ಚು ಸಂಪಾದನೆ ಮಾಡುವವರೇ ಆಗಿದ್ದಾರೆ. ಇಂದು ನಮ್ಮ ಪೇಟೆಗಳಲ್ಲಿ ಹಾಗೂ ಆಂಶಿಕ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡಾ ದಿನಕ್ಕೆ 25 ರೂಪಾಯಿ ಸಂಪಾದನೆ ಮಾಡದ ವ್ಯಕ್ತಿಗಳಿಲ್ಲ. ಇಂಥವರಿಗೆ ದಿನಕ್ಕೆ ಬೇಕಾದ ಒಂದು ಕೆ.ಜಿ. ಅಕ್ಕಿಯನ್ನು ಎರಡು ರೂಪಾಯಿಗೆ ಒದಗಿಸಬೇಕಾದ ಅನಿವಾರ್ಯ ಪ್ರಾರಬ್ಧ ನಮ್ಮ ಸರಕಾರಕ್ಕೆ ಯಾಕೆ ಬೇಕು? ನಗರವಾಸಿಗಳನ್ನು ಸದಾ ಸಂತೋಷಿಗಳಾಗಿ ಇರಿಸಲು ಬಡರೈತನ ಹೊಟ್ಟೆಗೆ ಹೊಡೆಯುವ ಅಮಾನುಷ ಕ್ರೌರ್ಯವೆಂದೇ ಇದನ್ನು ಕರೆಯಬೇಕಾಗಿದೆ.

ಜಮೀನಿನಲ್ಲಿ ದುಡಿಯುವ ರೈತನಿಗೆ ಏನಾದರೂ ನಾಲ್ಕು ಕಾಸು ಕೈಯಲ್ಲಿ ಉಳಿಯಬೇಕಿದ್ದರೆ ಒಂದು ಟನ್ ಕಬ್ಬಿಗೆ ಈಗ ಕಟ್ಟಿಗೆಗಿರುವ ಕ್ರಯವಾದರೂ ಸಿಗಬೇಕು. ಒಂದು ಕ್ವಿಂಟಾಲ್ ಭತ್ತಕ್ಕೆ 400 ರೂಪಾಯಿಗಳಾದರೂ ಸಿಗಬೇಕು. ಇಲ್ಲವೆಂದಾದರೆ ಕೃಷಿ ಕಾರ್ಯವೇ ನಿರರ್ಥಕ. ಕಾಲಾನುಕ್ರಮದಲ್ಲಿ ಈ ದಂಧೆಯೇ ನಾಶವಾಗಿ ಹೋದೀತು. ನಮ್ಮ ಕೃಷಿಭೂಮಿಯೆಲ್ಲ ಬಂಜರಾಗಿ ಹೋದೀತು. ಅಂಥ ಕಾಲ ಬರುವುದಕ್ಕೆ ಮೊದಲೇ ಜೈಲು ಸೇರಿಕೊಂಡರೆ ಮೂರು ಹೊತ್ತು ಸರಕಾರದ ಲೆಕ್ಕದಲ್ಲಿ ಹೊಟ್ಟೆತುಂಬ ಊಟ ಮಾಡಬಹುದೆಂಬ ರೈತನ ಲೆಕ್ಕಾಚಾರದಲ್ಲಿ ಯಾವ ತಪ್ಪೂ ಇಲ್ಲ.

ಈ ದೇಶದಲ್ಲಿ ಬಂಡಾಯ ನಡೆಸುವ ಹಕ್ಕಿದ್ದರೆ ಅದು ರೈತ ಸಮುದಾಯಕ್ಕೆ ಮಾತ್ರ. ಪುರ-ಪಟ್ಟಣಗಳಲ್ಲಿ ಭವ್ಯ ಮಹಲುಗಳನ್ನು ಕಟ್ಟಲು ಹೊಟ್ಟೆಗೆ ಹೊಡೆಯುವ ಶೋಷಕ ಗಣವನ್ನು ಮುರಿದು ಮುಕ್ಕಲು ರೈತ ಹೊರಟರೆ ಅದು ಸರ್ವಥಾ ಸಮರ್ಥನೀಯ.

ಮುಂಗಾರು
ಭಾನುವಾರ, ಜನವರಿ 4, 1987

ಆಶಯಕ್ಕೊಂದು ಆಕಾರ

ಕರ್ನಾಟಕದಲ್ಲಿರುವ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಈಗ ಎಷ್ಟರ ಮಟ್ಟಿಗೆ ಪ್ರಾತಿನಿಧ್ಯ ಇದೆ ಮತ್ತು ಎಷ್ಟು ಇರಬೇಕು ಎಂದು ವರದಿ ಮಾಡಿ ಶಿಫಾರಸುಗಳನ್ನು ಸಲ್ಲಿಸಲು ನೇಮಿಸಲಾಗಿರುವ ಸರೋಜಿನಿ ಮಹಿಷಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ.

ಕೇಂದ್ರ ಸರಕಾರದ ಉದ್ಯಮ ಹಾಗೂ ವಾಣಿಜ್ಯ ಸಂಸ್ಥೆಗಳಲ್ಲಿ ನಾಲ್ಕನೆಯ ದರ್ಜೆಗೆ ಶೇಕಡಾ 100ರಷ್ಟು ಕನ್ನಡಿಗರನ್ನೇ ನೇಮಿಸಬೇಕು. 1250 ರೂ. ವರೆಗಿನ ವೇತನ ಬರುವ ಇತರ ಹುದ್ದೆಗಳಿಗೆ ಶೇಕಡ 80ರಷ್ಟು ಕನ್ನಡಿಗರಿರಬೇಕು, ಉಳಿದ ಉನ್ನತ ಹುದ್ದೆಗಳಲ್ಲಿ ಶೇಕಡಾ 65ರಷ್ಟು ಕನ್ನಡಿಗರಿರಬೇಕು ಎಂಬುದು ಸಮಿತಿಯ ಶಿಫಾರಸು. ಉಳಿದಂತೆ ರಾಜ್ಯ ಸರಕಾರದ ಹಾಗೂ ಖಾಸಗಿ ರಂಗದ ಉದ್ದಿಮೆಗಳಿಗೂ ಸಾಮಾನ್ಯವಾಗಿ ಇದೇ ಮಾದರಿಯಲ್ಲಿ ಕನ್ನಡಿಗರಿಗೆ ಕೋಟಾ ಶಿಫಾರಸು ಮಾಡಲಾಗಿದೆಯಲ್ಲದೆ ಕನ್ನಡಿಗರು ಯಾರು ಎಂದು ತೀರ್ಮಾನಿಸಲು ನಿರ್ದಿಷ್ಟ ವ್ಯಾಖ್ಯಾನವನ್ನು ಸಮಿತಿ ನಿಗದಿ ಪಡಿಸಿದೆ. ಕನ್ನಡಿಗ ಎಂಬ ಅರ್ಹತೆ ಪಡೆಯಲು ಕನಿಷ್ಠ 15 ವರ್ಷ ಕಾಲ ಕರ್ನಾಟಕದಲ್ಲಿ ವಾಸಮಾಡಿರಬೇಕು ಎಂಬ ಶರ್ತವನ್ನು ಸೂಚಿಸಲಾಗಿದೆ.

ಇಂತಹ ಒಂದು ನೀತಿಯ ಅಗತ್ಯ ಏನು ಎಂಬುದನ್ನು ಕರ್ನಾಟಕದಲ್ಲಿ ಕೇಂದ್ರ ಸರಕಾರದ ಕೈಗಾರಿಕೆಗಳಲ್ಲಿಯೂ ಖಾಸಗಿ ಉದ್ಯಮಗಳಲ್ಲಿಯೂ ಇರುವಂತಹ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವಿಮರ್ಶೆ ಮಾಡಬೇಕು. ಕರ್ನಾಟಕ ರಾಜ್ಯದಲ್ಲಿಯೇ ಉದ್ಯೋಗದಲ್ಲಿ ಕನ್ನಡಿಗರಿಗೆ ಅನ್ಯಾಯವಾಗಿದೆ ಎಂಬ ಸತ್ಯವೇ ಸರೋಜಿನಿ ಮಹಿಷಿ ಸಮಿತಿಯಂತಹ ಸಂಸ್ಥೆಯೊಂದರ ನೇಮಕಕ್ಕೆ ಕಾರಣವೆನಿಸಿತು ಎಂಬುದನ್ನು ಯಾರೂ ಮರೆಯತಕ್ಕದ್ದಲ್ಲ. ವರದಿಯ ಶಿಫಾರಸುಗಳನ್ನು ಅಥವ ಅದರ ಹಿಂದಿನ ಮನೋಭಾವವನ್ನು ಸಂಕುಚಿತ ಪ್ರಾದೇಶಿಕ ವಾದವೆಂದು ಅರ್ಥವಿಸಿಕೊಳ್ಳುವವರು ಕರ್ನಾಟಕದೊಳಗಿನ ಕೇಂದ್ರೀಯ ಸಂಸ್ಥೆಗಳಲ್ಲಿ ಎಷ್ಟು ಮಂದಿ ಕನ್ನಡಿಗರಿದ್ದಾರೆ ಎಂಬ ವಿಚಾರವನ್ನು ಪರಿಶೀಲಿಸಬೇಕು.

ಬೆಂಗಳೂರಿನಲ್ಲಿ ಹಲವಾರು ಕೇಂದ್ರ ಸರಕಾರದ ಕೈಗಾರಿಕಾ ಸಂಸ್ಥೆಗಳನ್ನು ಸ್ಥಾಪಿಸಿ ಅನೇಕ ದಶಕಗಳೇ ಆದುವು. ಈ ಸಂಸ್ಥೆಗಳಲ್ಲಿ ನೂರಕ್ಕೆ ತೊಂಬತ್ತರಷ್ಟು ಕೂಡಾ ತಮಿಳ್ನಾಡಿನವರೂ ಕೇರಳದವರೂ ತುಂಬಿಕೊಂಡಿದ್ದಾರೆ. ಉನ್ನತ ಅಧಿಕಾರಿಗಳೆಲ್ಲರೂ ಹೊರನಾಡಿನವರೇ. ಎಲ್ಲೋ ಮೂರನೇ ಹಾಗೂ ನಾಲ್ಕನೇ ದರ್ಜೆ ಹುದ್ದೆಗಳಲ್ಲಿ ಶೇಕಡಾ ಹತ್ತೋ ಇಪ್ಪತ್ತೋ ಅಂಶ ಹುದ್ದೆ ಕನ್ನಡಿಗರಿಗೆ ದಕ್ಕಿದೆ. ಖಾಸಗಿ ಉದ್ಯಮಗಳಲ್ಲಿಯೂ ಅಷ್ಟೆ. ಕರ್ನಾಟಕದ ಸಂಪನ್ಮೂಲದ ನೆರವಿನಿಂದ ಉದ್ಯಮ ಕಟ್ಟಿ ಬೆಳೆಸಲು ಹೊರಗಿನಿಂದ ಬಂದವರು ತಮ್ಮವರನ್ನೇ ತಂದು ಎಲ್ಲಾ ಹುದ್ದೆಗಳಿಗೆ ತುಂಬಿದ್ದಾರೆ.

ಇದರ ಪರಿಣಾಮ ಕರ್ನಾಟಕದ ಸಾಮಾಜಿಕ ಜೀವನದ ಮೇಲೆಯೂ ಆಗಿದೆ. ಬೆಂಗಳೂರಿನಲ್ಲಿಯೂ ಇತರ ಕಡೆಗಳಲ್ಲಿಯೂ ಹೊರ ರಾಜ್ಯಗಳವರೇ ತುಂಬಿಕೊಂಡ ಪರಿಣಾಮವಾಗಿ ಸಾಮಾಜಿಕ ವಿರಸಕ್ಕೂ ಘರ್ಷಣೆಗೂ ಇಂಬು ಕೊಟ್ಟಿದೆ.

ಯಾವುದೇ ಒಂದು ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಯ ಉದ್ದೇಶ ಉತ್ಪಾದನೆ ಹೆಚ್ಚಿ ದೇಶದ ಸಂಪತ್ತು ಬೆಳೆಯಬೇಕು ಎಂಬುದೊಂದೇ ಅಲ್ಲ. ದೇಶದ ಅಭಿವೃದ್ಧಿಯ ಜತೆಗೆ ಆಯಾ ರಾಜ್ಯಗಳ ಜನರಿಗೆ ಉದ್ಯೋಗ ದೊರೆತು ಅವರು ತಮ್ಮ ಬದುಕಿಗೆ ಬಲ ತಂದುಕೊಳ್ಳಬೇಕು. ಕೈಗಾರಿಕೆಯ ಫಲಗಳು ಆಯಾ ಪ್ರದೇಶದಲ್ಲಿ ಬಿದ್ದು ಇನ್ನಷ್ಟು ಅಭಿವೃದ್ಧಿಗೆ ಕಾರಣವಾಗಬೇಕು ಎಂಬುದೂ ಆಗಿದೆ.

ಈ ಉದ್ದೇಶ ಸಫಲವಾಗದೆ, ಯಾವುದೋ ರಾಜ್ಯದಲ್ಲಿ ಯಾರ್‍ಯಾರಿಗೋ ಕೆಲಸ ಎಂದಾದರೆ ಖಂಡಿತವಾಗಿ ಇಂದು ದೇಶದ ಕೆಲವೆಡೆ ಹುಟ್ಟಿಕೊಂಡ ಪ್ರಾದೇಶಿಕವಾದ, ಪ್ರತ್ಯೇಕತಾವಾದಗಳು ಕಾಣಿಸಿಕೊಂಡಾವು. ಜನಾಂಗ ದ್ವೇಷವು ತಲೆಹಾಕೀತು. ಎಲ್ಲ ಕಡೆ ಎಲ್ಲಾ ರಾಜ್ಯಗಳಲ್ಲಿ ಅಭಿವೃದ್ಧಿಯ ಒಂದೇ ಮಟ್ಟದಲ್ಲಿದ್ದು ಅಸಮತೋಲನಕ್ಕೂ ಅಸಮಾಧಾನಕ್ಕೂ ಎಡೆ ಇಲ್ಲ ಎಂದಾಗಿದ್ದರೆ ಯಾರಿಗೆ ಎಲ್ಲಿ ಉದ್ಯೋಗ ಕೊಟ್ಟರೂ ಏನೂ ಅನಾಹುತ ಆಗದು. ಆದರೆ ಒಂದು ರಾಜ್ಯದಲ್ಲಿ ಅಲ್ಲಿನ ಮಂದಿಗೇ ಸಾಕಷ್ಟು ಉದ್ಯೋಗ ಇಲ್ಲ, ಸಂಪಾದನೆ ಇಲ್ಲ ಎಂಬ ಪರಿಸ್ಥಿತಿ ಇರುವ ವೇಳೆ ಹೊರಗಿನ ಮಂದಿಯೇ ಕೈತುಂಬ ಸಂಬಳ ಬರುವ ಎಲ್ಲಾ ಹುದ್ದೆಗಳನ್ನೂ ಕಬಳಿಸಿ ಕೂತರೆ ಸ್ಥಳೀಯ ಜನರ ಹೊಟ್ಟೆಯಲ್ಲಿ ಸಹಜವಾಗಿಯೇ ತಳಮಳ ಉಂಟಾಗುತ್ತದೆ.

ಆದ್ದರಿಂದ ಸರೋಜಿನಿ ಮಹಿಷಿ ವರದಿ ಅಭಿವೃದ್ಧಿಯ ಅಸಮಾನತೆಯ ನಿವಾರಣೆಯ ದೃಷ್ಟಿಯಿಂದ ಬಹಳ ಪ್ರಯೋಜನಕಾರಿಯಾದದ್ದು. ಈ ಸಮಿತಿ ಶಿಫಾರಸು ಮಾಡಿರುವ ನೀತಿಯು ಕರ್ನಾಟಕಕ್ಕೆ ಮಾತ್ರವಲ್ಲ. ಎಲ್ಲಾ ರಾಜ್ಯಗಳೂ ಅನುಸರಿಸಲು ತಕ್ಕಂತಹದು. ಆಯಾ ರಾಜ್ಯಗಳಲ್ಲಿ ಆಯಾ ರಾಜ್ಯಗಳ ಪ್ರಜೆಗಳಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವುದರಲ್ಲಿ ಯಾವ ತಪ್ಪು ಕೂಡಾ ಇಲ್ಲ. ಉನ್ನತ ತಾಂತ್ರಿಕ ಮತ್ತು ಆಡಳಿತೆಯ ಸೀಮಿತ ಹುದ್ದೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಉದ್ಯೋಗವನ್ನು ಸ್ಥಳೀಯ ಜನರಿಗೇ ಕೊಡುವುದು ತುಂಬಾ ಸೂಕ್ತವಾದ ನೀತಿ.

ಈ ನೀತಿಗೆ ಕಾಯಿದೆಯ ಬಲ ಕೊಡಬೇಕು ಎಂಬ ಶಿಫಾರಸನ್ನೂ ಸಮಿತಿ ಮಾಡಿದೆ. ಅದನ್ನು ಸರಕಾರ ತಪ್ಪದೆ ಬೇಗನೆ ಮಾಡಬೇಕು. ಇಲ್ಲವಾದರೆ ಸಮಿತಿಯ ಶಿಫಾರಸುಗಳಿಗೆ ಕವಡೆಯ ಬೆಲೆಯೂ ದೊರೆಯಲಾರದು: ಸ್ಥಳೀಯರಿಗೆ ಕೆಲಸಕೊಡಬೇಕೆಂಬ ನೀತಿಯನ್ನು ಯಾರೂ ಗೌರವಿಸಲಾರರು.

ಮುಂಗಾರು
ಮಂಗಳವಾರ, ಜನವರಿ 6, 1987

ರಾಜಕೀಯದ ಕೊಚ್ಚೆ ಮಾಡಬೇಡಿ

ಕರ್ನಾಟಕದ ಹೊಸ ಪ್ರಯೋಗವಾದ ಜಿಲ್ಲಾ ಪರಿಷತ್ ಚುನಾವಣೆ ನಡೆದು ಫಲಿತಾಂಶ ಪ್ರಕಟವಾಗಿದೆ. 19 ಜಿಲ್ಲೆಗಳ ಪೈಕಿ 12ರಲ್ಲಿ ಜನತಾಪಕ್ಷ ಸ್ಪಷ್ಟ ಬಹುಮತ ಗಳಿಸಿದೆ. ಐದು ಜಿಲ್ಲೆಗಳಲ್ಲಿ ಕಾಂಗ್ರೆಸ್ (ಐ) ಪಕ್ಷವು ಜನತಾ ಪಕ್ಷಕ್ಕಿಂತ ಹೆಚ್ಚು ಸ್ಥಾನಗಳನ್ನು ಪಡೆದಿದೆ. ಜಿಲ್ಲೆಗಳಲ್ಲಿರುವ ಶಾಸಕರ ಸದಸ್ಯತನದ ಬಲದಿಂದ ಒಟ್ಟು 17 ಜಿಲ್ಲೆಗಳಲ್ಲಿ ಜನತಾ ಪಕ್ಷವು ನಿಚ್ಚಳ ಬಹುಮತವನ್ನು ಸಾಧಿಸಿದೆ. ಹೀಗೆ ರಾಜ್ಯದಲ್ಲಿ ಆಳುತ್ತಿರುವ ಜನತಾ ಪಕ್ಷವೇ ರಾಜ್ಯದ 17ಜಿಲ್ಲಾ ಪರಿಷತ್ತುಗಳನ್ನೂ ನಿಯಂತ್ರಿಸುವಂತಾಗಿದೆ.

ಎರಡೂ ಪಕ್ಷಗಳು ಚುನಾವಣೆಯಲ್ಲಿ ಪಡೆದಿರುವ ಸ್ಥಾನಗಳ ಸಂಖ್ಯೆಯನ್ನು ಪರಿಶೀಲಿಸಿದರೆ ಸ್ಪರ್ಧೆಯು ತುಂಬಾ ನಿಕಟವಾದದ್ದು ಕಂಡು ಬರುತ್ತಿದೆ. ಜನತಾ ಪಕ್ಷವು 449 ಸ್ಥಾನಗಳನ್ನು ಪಡೆದರೆ ಕಾಂಗ್ರೆಸ್ (ಐ) ಪಕ್ಷವು 395 ಸ್ಥಾನಗಳನ್ನು ಗಳಿಸಿದೆ. ಸಮರ್ಥ ನಾಯಕತ್ವದ ಬಲವಿಲ್ಲದೆ. ಪಕ್ಷದೊಳಗೆ ಗುಂಪು ರಾಜಕಾರಣದ ಹಾವಳಿಯನ್ನೆದುರಿಸುತ್ತಾ ಕಾಂಗ್ರೆ ಪಕ್ಷವು ಈ ಚುನಾವಣೆಯನ್ನು ಅಧೋಮುಖಿಯಾಗಿ ಎದುರಿಸಿದ್ದರೂ ಅದು ಕಣದಲ್ಲಿ ಸಮರ್ಥ ಹೋರಾಟವನ್ನು ನೀಡಿದೆ ಎನ್ನಲಡ್ಡಿಯಿಲ್ಲ. ವಿರೋಧಪಕ್ಷವಾಗಿರುವ ಕಾಂಗ್ರೆಪಕ್ಷದತ್ತ ರಾಜ್ಯದಜನ, ಅಂದರೆ ಈ ಚುನಾವಣೆಯಲ್ಲಿ ಪ್ರಧಾನ ಅಂಗವಾಗಿರುವ ರೈತಾಪಿ ಜನ ಯಾಕೆ ಹೆಚ್ಚು ಹೆಚ್ಚಾಗಿ ಮನ ಸೋಲುತ್ತಿದ್ದಾರೆ ಎಂಬ ಬಗ್ಗೆ ಆಳುವ ಜನತಾ ಪಕ್ಷದವರು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾದ ಅಗತ್ಯವುಂಟು. ನಗರವೇ ಬೆಂಬಲದ ದೊಡ್ಡ ಬಲವಾಗಿರುವ ಜನತಾ ಪಕ್ಷ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಳ್ಳಿಗಳತ್ತ ದೌಡು ನಡೆಸಿದರೂ ಅಲ್ಲಿ ಯಾಕೆ ಬೇರು ಬಿಡುವುದಕ್ಕಾಗುತ್ತಿಲ್ಲ ಎಂಬ ಬಗ್ಗೆ ವಿಚಾರ ವಿಮರ್ಶೆ ಮಾಡಬೇಕು.

ಈ ಹಿನ್ನೆಲೆಯಲ್ಲಿ ಫಲಿತಾಂಶದ ಬಗ್ಗೆ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಪ್ರತಿಕ್ರಿಯೆ ನೀಡಿದ ರೀತಿಯು ತುಂಬ ವಿಚಾರಶೀಲವಾದದ್ದು. ಕಾಂಗ್ರೆಸ್ (ಐ) ನಡೆಸಿದ ಹೋರಾಟ ಉದ್ದೇಶ ಪೂರಿತವಾಗಿತ್ತು, ಆದ್ದರಿಂದ ಅದಕ್ಕೆ ವಿಶ್ವಾಸಾರ್ಹತೆ ಬಂದಿದೆ ಎಂದಿರುವ ಅವರು ಈ ಫಲಿತಾಂಶದಿಂದ ಜನತಾ ಪಕ್ಷ ಶಾಸಕರು ಪಾಠ ಕಲಿಯಬೇಕಾಗಿದೆ ಎಂದಿದ್ದಾರೆ. ಜನರ ಸಮಸ್ಯೆಗಳತ್ತ ಹೆಚ್ಚು ಗಮನ ಕೊಡಬೇಕು. ರಾಜಕೀಯ ಚಟುವಟಿಕೆಯ ಉದ್ದೇಶ ಜನರ ಅಗತ್ಯಗಳ ಪೂರೈಕೆ, ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಆಗಬೇಕು ಎಂಬ ಇಂಗಿತ ಅವರ ಮಾತಿನಲ್ಲಿದೆ.

ಈಗ ಇರುವ ಈ ರಾಜಕೀಯ ಪಕ್ಷಗಳಿಗೆ, ಪರ್ಯಾಯ ಜನಪರ ಸಂಸ್ಥೆಯೊಂದು ಇಲ್ಲದಿರುವ ಜನ ಸಮುದಾಯದ ಅನಿವಾರ್ಯ ಸಂಕಟವು ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಸ್ಪಷ್ಟವಾಗಿ ಒಡಮೂಡಿ ಬಂದಿದೆ. ರಾಜಕೀಯ ಪಕ್ಷಗಳ ಟೊಳ್ಳು ಭರವಸೆಗಳು. ಅವುಗಳು ಜನರಿಗೆ ಆಕಾಶದೆತ್ತರಕ್ಕೆ ನಿರ್ಮಿಸಿ ತೋರಿಸುವ ಹುಸಿ ಗಾಳಿ ಗೋಪುರಗಳು—ಇವುಗಳನ್ನು ಚೆನ್ನಾಗಿ ಅರ್ಥ ಮಾಡಿ ಕೊಂಡಿರುವ ಮತದಾರ ಯಾರನ್ನು ಬೆಂಬಲಿಸಬೇಕು ಎಂಬ ಖಚಿತ ನಿಲುವಿಗೆ ಬರಲಾಗದೆ ಅನಿಶ್ಚಿತ ಮನಸ್ಸಿನಲ್ಲಿ ಒದ್ದಾಡುವುದು ಕಂಡು ಬರುತ್ತಿದೆ. ಇಂದಿನ ರಾಜಕೀಯ ಪಕ್ಷಗಳು ಮಾತಿನ ಶೂರರಾಗಿ ಕೃತಿಯಲ್ಲಿ ಹಿಂದಕ್ಕೋಡುವ ಉತ್ತರ ಕುಮಾರರಾಗಿ ಮತದಾರರಿಗೆ ಕಾಣಿಸಿರುವುದರ ಸ್ಪಷ್ಟಚಿತ್ರ ಜಿಲ್ಲಾ ಪರಿಷತ್ ಚುನಾವಣೆಯ ಫಲಿತಾಂಶದಲ್ಲಿದೆ.

ಈ ಹಿನ್ನೆಲೆಯಲ್ಲಿ ಗ್ರಾಮ ಸ್ವರಾಜ್ಯದ ಸಂಸ್ಥೆಗಳನ್ನು ಪಕ್ಷ ರಾಜಕೀಯದಿಂದ ವಿಮುಕ್ತಿಗೊಳಿಸಲು ಇದು ಸಕಾಲ. ಜಿಲ್ಲಾ ಪರಿಷತ್ ಅಂತೂ ಪಕ್ಷ ರಾಜಕೀಯದ ನೆಲೆಯಲ್ಲಿ ರೂಪುಗೊಂಡಿದೆ. ಅದರ ದುಷ್ಪರಿಣಾಮಗಳು ಈಗಾಗಲೇ ಕಾಣಿಸತೊಡಗಿವೆ. ನಮ್ಮ ಹಳ್ಳಿಗಳು ರಾಜಕೀಯದ ರಣರಂಗವಾಗಿವೆ. ಕ್ಷುದ್ರ ಕಲಹಗಳ ಬೀಜ ಮೊಳಕೆಯೊಡೆಯುತ್ತಿದೆ. ಅಂಥ ಮೊಳಕೆಗಳನ್ನು ಚಿವುಟಿ ತೆಗೆಯಬೇಕು. ಈ ವಿಚಾರದಲ್ಲಿ ರಾಜ್ಯದ ಎರಡೂ ದೊಡ್ಡ ಪಕ್ಷಗಳ ನಾಯಕರು ಮುತ್ಸದ್ದಿತನ ತೋರಿಸಬೇಕು. ಮುಂಬರುವ ಮಂಡಲ ಪಂಚಾಯತ್ ಚುನಾವಣೆಗೆ ಅಗತ್ಯಕ್ಕಿಂತ ಜಾಸ್ತಿ ಪಕ್ಷ ರಾಜಕಾರಣದ ಒತ್ತು ಕೊಡುವುದನ್ನು ನಿಲ್ಲಿಸಬೇಕು. ರಾಜಕೀಯಸ್ಥರು ಗ್ರಾಮ ಜೀವನದಿಂದ ಹೊರಹೋಗಬೇಕು ಎಂದು ಯಾರೂ ನಿರೀಕ್ಷಿಸುವುದಿಲ್ಲ. ಹಳ್ಳಿಗಳಿಗೆ ನಾಯಕತ್ವ ನೀಡಿ ಆಗುಹೋಗುಗಳನ್ನು ನೋಡಿಕೊಳ್ಳುತ್ತ ಆಗಬೇಕಾದ ಅಭಿವೃದ್ಧಿಗೆ ಅಂಥವರು ಚಾಲನೆ ಕೊಡಬೇಕೆಂಬುದೇ ಎಲ್ಲರ ನಿರೀಕ್ಷೆ. ಆದರೆ ಈ ಕ್ಷೇತ್ರಕ್ಕೆ ಲೆಕ್ಕಕ್ಕಿಂತ ಹೆಚ್ಚು ಪಕ್ಷ ರಾಜಕೀಯವನ್ನು ಎಳೆ ತಂದರೆ ಅದೊಂದು ಕೊಚ್ಚೆಯ ರಾಡಿಯಾಗಿ ಊರಿನ ಬದುಕು ಅಂದಗೆಟ್ಟು ಹೋದೀತು.

ಅಂತೂ ರಾಜ್ಯದ 17 ಜಿಲ್ಲಾ ಪರಿಷತ್ತುಗಳಲ್ಲಿ ಕಾರ್ಯ ನಿರ್ವಹಿಸಬೇಕಾದ ಕರ್ತವ್ಯ ರಾಜ್ಯದಲ್ಲಿ ಆಳುತ್ತಿರುವ ಜನತಾ ಪಕ್ಷದ ಮೇಲೆ ಬಿದ್ದಿದೆ. ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್ ಕಾಯಿದೆಯನ್ನು ರೂಪಿಸಿದ್ದು ಕೂಡ ಜನತಾ ಸರಕಾರವಾಗಿರುವ ಹಿನ್ನೆಲೆಯಲ್ಲಿ ಈ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದ ದೊಡ್ಡ ಹೊಣೆಗಾರಿಕೆ ಜನತಾ ಪಕ್ಷದ ಮೇಲೆ ಬಿದ್ದಿದೆ. ಈ ಹೊಸ ವ್ಯವಸ್ಥೆಯಲ್ಲಿ ಬಹಳ ಮಟ್ಟಿಗೆ ಅಧಿಕಾರ ವಿಕೇಂದ್ರೀಕರಣ ಆಗುತ್ತದೆ. ಅಧಿಕಾರ ಹಾಗೂ ಕರ್ತವ್ಯ ಯಾರಿಗೆ ಸೇರಿದ್ದೆಂದು ಸ್ಪಷ್ಟವಿಲ್ಲದ ಅನೇಕ ವಿಚಾರಗಳೂ ಜಿಲ್ಲಾ ಪರಿಷತ್ ಕಾಯಿದೆಯಲ್ಲಿವೆ. ಕಾರ್ಯ ನಿರ್ವಹಣೆಯ ಪ್ರಕ್ರಿಯೆಯಲ್ಲಿ ಇಂತಹ ವಿಚಾರಗಳು ಸಮಸ್ಯೆಗಳಿಂದ ಬಿಡಿಸಿ ಕೊಂಡು ಖಚಿತ ಸ್ವರೂಪವನ್ನು ಪಡೆದುಕೊಳ್ಳಬೇಕು. ಅಧಿಕಾರ ವಿಕೇಂದ್ರೀಕರಣವು ನಿಜಕ್ಕೂ ಅರ್ಥಪೂರ್ಣವಾಗುವಂತೆ ಗ್ರಾಮಸ್ವರಾಜ್ಯದ ಕ್ರಾಂತಿಯು ಹುಸಿಯಾಗದಂತೆ ನೋಡಿಕೊಳ್ಳಬೇಕಾದ ಹೊಣೆಯನ್ನು ಆಳುವ ಪಕ್ಷ ನಿರ್ವಹಿಸಬೇಕು.

ಮುಂಗಾರು

ಬುಧವಾರ ಜನವರಿ 7, 1987

ಒಣ ಚರ್ಚೆಯ ಸಂತೆಯಾದೀತು

ಜಿಲ್ಲಾ ಪರಿಷತ್ತುಗಳಲ್ಲಿ ಪದ ನಿಮಿತ್ತ ಸದಸ್ಯರಾಗಿರುವ ಶಾಸಕರು ಹಾಗೂ ಸಂಸತ್ ಸದಸ್ಯರಿಗೆ ಈ ಸದನಗಳಲ್ಲಿ ಮತ ನೀಡಿಕೆ ಹಕ್ಕು ಇರಬಾರದು ಎಂದು ಕಾಂಗ್ರೆಸ್ ಪಕ್ಷದ ನಾಯಕ ಹಾಗೂ ಮಾಜಿ ವಿರೋಧ ಪಕ್ಷ ಮುಖಂಡ ಎಂ. ವೀರಪ್ಪ ಮೊಯ್ಲಿ ಅವರು ವಾದಿಸಿದ್ದಾರೆ. ಹೀಗೆ ಮತ ನೀಡಿಕೆ ಅಧಿಕಾರವನ್ನು ಶಾಸಕರಿಗೂ ಸಂಸತ್ ಸದಸ್ಯರಿಗೂ ಕೊಡುವುದರಿಂದ ಜಿಲ್ಲಾ ಪರಿಷತ್ತಿಗೆ ನೇರವಾಗಿ ಆಯ್ಕೆಗೊಂಡವರ ಅಧಿಕಾರ ಕ್ಷೀಣಿಸುವುದರ ಮೂಲಕ ಜನತಂತ್ರಕ್ಕೆ ಅರ್ಥವಿಲ್ಲವಾಗುವುದೆಂದೂ ಅವರು ವಾದಿಸಿದ್ದಾರೆ.

ವೀರಪ್ಪ ಮೊಯ್ಲಿಯವರು ಈ ವಿಚಾರದಲ್ಲಿ ತಾಂತ್ರಿಕವೆನ್ನಬಹುದಾದ ನಿಲುಮೆಯನ್ನು ವಹಿಸಿದ್ದಾರೆಂದು ಅನಿಸುತ್ತದೆ. ಶಾಸಕರು ಜನರನ್ನು ವಿಧಾನ ಸಭೆಯಲ್ಲಿ ಪ್ರತಿನಿಧಿಸುವವರಾದ್ದರಿಂದ ಅವರು ಜಿಲ್ಲಾ ಪರಿಷತ್ತಿನಲ್ಲಿ ಹೇಳ ಬೇಕಾದ್ದೇನೂ ಇಲ್ಲ. ಸಂಸತ್ಸದಸ್ಯರೂ ಸಂಸತ್ತಿನಲ್ಲಿ ಕಾರ್ಯನಿರ್ವಹಿಸ ತಕ್ಕವರಾಗಿದ್ದು ಜಿಲ್ಲಾ ಪರಿಷತ್ತಿನಲ್ಲಿ ಅವರಿಗೆ ತೀರ್ಮಾನದ ಹಕ್ಕು ಸಲ್ಲದು ಎಂಬ ಕಾನೂನಿನ ಚೌಕಟ್ಟಿಗೆ ಮಾತ್ರವೇ ಸೀಮಿತಗೊಂಡ ತುಂಬಾ ಅಗಲ ಕಿರಿದಾದ ಯೋಚನೆಯ ದಾರಿ ಇದಾಗಿದೆ.

ಶಾಸಕರು ಹಾಗೂ ಸಂಸತ್ ಸದಸ್ಯರು ಕೂಡ ಆಯಾ ಪ್ರದೇಶಗಳ ಜನ ಪ್ರತಿನಿಧಿಗಳೇ ಆಗಿದ್ದಾರೆ. ಆಯಾ ಜಿಲ್ಲೆಯ ಅಭಿವೃದ್ಧಿ ಅಗತ್ಯಗಳ ಬಗ್ಗೆ ಜಿಲ್ಲೆಯ ನಾಯಕರಿಗಿಂತ ವಿಶಾಲವಾದ ತಿಳುವಳಿಕೆಯೂ ಅನುಭವವೂ ಅವರಿಗೆ ಇರುವುದು ಸಾಧ್ಯ. ರಾಜ್ಯ ಮಟ್ಟದಲ್ಲಿಯೂ ರಾಷ್ಟ್ರಮಟ್ಟದಲ್ಲಿಯೂ ವ್ಯವಹರಿಸುವವರು ಇವರಾದ್ದರಿಂದ ಇಂತಹ ಅರ್ಹತೆಯು ಅವರಿಗೆ ಬರುತ್ತದೆ. ಅಲ್ಲದೆ ಶಾಸಕರು ಮತ್ತು ಸಂಸತ್ ಸದಸ್ಯರು ಜಿಲ್ಲಾ ಪರಿಷತ್ತಿಗೂ-ರಾಜ್ಯ ಸರಕಾರಕ್ಕೂ-ಕೇಂದ್ರ ಸರಕಾರಕ್ಕೂ ನಡುವೆ ಸಂಪರ್ಕ ಸೇತುವೆ ನಿರ್ಮಿಸುತ್ತಾರೆ. ಆಗ ಬೇಕಾದ ಕಾರ್ಯಗಳನ್ನು ಮುತುವರ್ಜಿಯಿಂದ ಮಾಡಿಸಲು, ದೊರೆಯಬೇಕಾದ ಹಣಕಾಸನ್ನು ತ್ವರಿತವಾಗಿ ತರಿಸಲು ಎಂಪಿಗಳ ಹಾಗೂ ಶಾಸಕರ ವರ್ಚಸ್ಸು ಹಾಗೂ ಪ್ರಭಾವ ಖಂಡಿತವಾಗಿ ಬೇಕಾಗುತ್ತದೆ.

ಜಿಲ್ಲೆಯ ಕೆಲಸ ಕಾರ್ಯಗಳ, ಅಭಿವೃದ್ಧಿ ಯೋಜನೆಗಳ ರೂಪುರೇಷೆ ನಿರ್ಮಿಸಲು ರಾಜ್ಯ ಹಾಗೂ ರಾಷ್ಟ್ರಮಟ್ಟದ ರಾಜಕಾರಣಿಗಳಾದ ಈ ಜನಪ್ರತಿನಿಧಿಗಳ ಸೇವೆ ಖಂಡಿತಾ ಬೇಕು. ಅದನ್ನು ಯಾರೂ ಅಲ್ಲಗಳೆಯುವುದಕ್ಕಾಗುವುದಿಲ್ಲ. ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಕಾರ್ಯವೆಸಗುವ, ನೀತಿ ನಿರ್ಮಾಣ ಮಾಡುವ, ಆರ್ಥಿಕ, ಸಾಮಾಜಿಕ, ರಾಜಕೀಯ ದಿಕ್ಕು ದೆಸೆಗಳನ್ನು ಜನರಿಗೆ ತೋರಿಸಿಕೊಡುವ ಈ ರಾಜಕಾರಣಿಗಳ ಸಲಹೆ-ಸಹಕಾರ ಜಿಲ್ಲಾ ಪರಿಷತ್‌ಗಳಿಗೆ ಬೇಕೆಂದಾದರೆ ಅವರೆಲ್ಲ ಪರಿಷತ್ತಿನ ಕಾರ್ಯಕಲಾಪಗಳಲ್ಲಿ, ಚರ್ಚೆ-ಸಂವಾದಗಳಲ್ಲಿ ಭಾಗವಹಿಸುವ ಅವಕಾಶ ನೀಡಬೇಕು.

ಸಲಹೆ ಕೊಡುವವನಿಗೆ, ಅಭಿಪ್ರಾಯ ಹೇಳುವವನಿಗೆ ನಿರ್ಣಯದ ಪ್ರಕ್ರಿಯೆಯಲ್ಲಿ ಭಾಗವಹಿಸುವ ಹಕ್ಕು ಇಲ್ಲವೆಂದಾದರೆ ಆತನ ಮಾತುಗಳನ್ನು ಯಾರೂ ಕೇಳಲಾರರು. ಅಂಥವನು ಹೇಳುವ ಅಭಿಪ್ರಾಯಗಳಿಗೆ ಯಾವ ತೂಕವೂ ಬರಲಾರದು. ಶಾಸಕರ ಹಾಗೂ ಎಂಪಿಗಳ ಅಭಿಪ್ರಾಯ ಮಂಡನೆಯಲ್ಲಿ ತಿರುಳು-ಇರಲಿ ಇಲ್ಲದಿರಲಿ, ಅವರಿಗೆ ನಿರ್ಧಾರದಲ್ಲಿ ಭಾಗವಹಿಸುವ ಅಧಿಕಾರ ಇಲ್ಲವೆಂದಾದರೆ ಅವರನ್ನು ಸದಸ್ಯರಾಗಲಿ, ಜಿಲ್ಲಾ ಪರಿಷತ್ ಅಧಿಕಾರಿಗಳಾಗಲಿ ಗಂಭೀರವಾಗಿ ಪರಿಗಣಿಸುವ ಸಾಧ್ಯತೆ ಕಮ್ಮಿ. ಇಂಥ ಪರಿಸ್ಥಿತಿಯಲ್ಲಿ ನಡೆಯುವುದು ಕೇವಲ ಒಣಚರ್ಚೆಯಾಗಿ ಕೆಲಸಕ್ಕೆ ಬಾರದ ಕಾಟಾಚಾರವಾದೀತು.

ಶಾಸಕರಾಗಲಿ ಎಂಪಿಗಳಾಗಲಿ ಅವರು ಕೂಡ ಜನತೆಯ ಪ್ರತಿನಿಧಿಗಳು ಎಂಬುದೇ ಇಲ್ಲಿ ಮುಖ್ಯ. ಅವರೂ ಜಿಲ್ಲೆಯ ಜನರ ಆಶೋತ್ತರಗಳ ಅರಿವು ಪಡೆದವರೇ ಆಗಿದ್ದಾರೆ. ಮಂಡಲದ ಹಾಗೂ ಜಿಲ್ಲೆಯ ಆಡಳಿತದ ಮತ್ತು ಅಭಿವೃದ್ಧಿಯ ಕೆಲಸ ಕಾರ್ಯಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ಪಕ್ಷ ರಾಜಕಾರಣದ ಪರಿಗಣನೆಗಳು ತಲೆಹಾಕಿದಾಗ ಮೊಯ್ಲಿಯವರಿಗೆ ಬಂದಿರುವಂತಹ ಆಲೋಚನೆಗಳೂ ವಿವಾದಗಳೂ ಹುಟ್ಟಿಕೊಳ್ಳುತ್ತವೆ. ಇದರಿಂದ ಗ್ರಾಮಾಂತರದ ಬದುಕಿನ ಅಂದ ಕೆಟ್ಟು ಹೋಗುತ್ತದೆ. ಆದ್ದರಿಂದಲೇ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್ ಕ್ಷೇತ್ರವನ್ನು ಪಕ್ಷ ರಾಜಕಾರಣದಿಂದ ದೂರ ಇರಿಸಿ ಎಂದು ನಾವು ಪ್ರತಿಪಾದಿಸುತ್ತಿದ್ದೇವೆ.

ಮುಂಗಾರು

ಶುಕ್ರವಾರ, ಜನವರಿ 9, 1987

ಮಹಿಳೆಯರಿಗೆ ಮೀಸಲಾತಿ

ಪ್ರಧಾನಮಂತ್ರಿ ರಾಜೀವ ಗಾಂಧಿಯವರು ಬುಧವಾರ ಬೆಂಗಳೂರಿನಲ್ಲಿ ಮಹಿಳೆಯರ ಉದ್ಧಾರದ ಬಗ್ಗೆ ಬಹಳ ಮಾತುಗಳನ್ನಾಡಿದ್ದಾರೆ. ಮಹಿಳೆಯರು ಭಾರತೀಯ ಸಮಾಜದ ಯಾವುದೇ ಜಾತಿ–ಪಂಗಡ–ವರ್ಗಗಳಲ್ಲಿರಲಿ ಅವರೆಲ್ಲ ಶೋಷಣೆಗೊಳಗಾಗಿರುವ ಒಂದು ದೊಡ್ಡ ಸಮುದಾಯ ಎಂದು ಅವರು ವ್ಯಾಖ್ಯಾನಿಸಿದ್ದಾರೆ. ಈ ಮೂಲಕ ಪರೋಕ್ಷವಾಗಿ ಭಾರತೀಯ ಸ್ತ್ರೀಯರು ಎರಡನೇ ದರ್ಜೆ ಪ್ರಜೆಗಳು ಎಂದು ಅವರು ಒಪ್ಪಿಕೊಂಡಂತಾಗಿದೆ. ಆದರೆ ಸ್ತ್ರೀಯರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ವಿಚಾರಕ್ಕೆ ಬಂದಾಗ ಅದು ಸಲ್ಲದು ಎಂದಿದ್ದಾರೆ, ಮಹಿಳೆಯರು ತಾವಾಗಿಯೇ ವಿದ್ಯೆ ಬುದ್ಧಿ–ಸಂಘಟನೆ–ಸಾಮರ್ಥ್ಯಗಳನ್ನು ಪಡೆದುಕೊಂಡು ಸಮಾಜದಲ್ಲಿ ಮುಂದೆ ಬರಬೇಕು ಎಂದು ನಮ್ಮ ಪ್ರಧಾನಮಂತ್ರಿ ನಿರೀಕ್ಷಿಸುತ್ತಾರೆ.

ಭಾರತದಲ್ಲಿ ಸ್ತ್ರೀಯರ ಸ್ಥಿತಿಗತಿ ಏನು ಎಂಬುದರ ಬಗ್ಗೆ ನಮ್ಮ ಪ್ರಧಾನಿಯವರಿಗೆ ತಿಳುವಳಿಕೆ ಚೆನ್ನಾಗಿರುವಂತೆ ಕಾಣಿಸುತ್ತದೆ. ನಮ್ಮ ಯಾವ ಜಾತಿ ಮತ್ತು ವರ್ಗದಲ್ಲಿಯೂ ಗಂಡಸರಿಗಿರುವ ಪ್ರಾಬಲ್ಯ ಸ್ತ್ರೀಯರಿಗಿಲ್ಲ ಎಂದು ಅವರು ಹೇಳುತ್ತಾರೆ. ಒಟ್ಟಾರೆ ಮಹಿಳೆಯರದೇ ಒಂದು ಶೋಷಿತ ವರ್ಗವಾಗಿದ್ದು ಭಾರತೀಯ ಪರಂಪರೆ, ಸಂಪ್ರದಾಯ ಹಾಗೂ ಸಂಸ್ಕೃತಿ ಇಂತಹ ಪರಿಸ್ಥಿತಿಗೆ ಕಾರಣವೆಂಬ ವಿಷಯ ಜ್ಞಾನ ಅವರಿಗಿದೆ. ಗಂಡು ಮಗುವಿಗಿರುವ ಸ್ಥಾನ–ಮಾನ ಗೌರವಗಳು ಹೆಣ್ಣಿಗಿಲ್ಲ, ಹುಟ್ಟಿನಿಂದಲೇ ಅವಳು ಶೋಷಿತಳೆಂಬುದನ್ನೂ ಅರಿತುಕೊಂಡಿದ್ದಾರೆ. ಎಲ್ಲವನ್ನೂ ಅರಿತು ನಿರ್ಣಾಯಕ ವಿಷಯವಾದ ಉದ್ಯೋಗಾವಕಾಶಕ್ಕೆ ಬಂದಾಗ ಮೀಸಲಾತಿ ಕೂಡದು ಎನ್ನುತ್ತಾರೆ. ಮಹಿಳೆ ಸಾಕ್ಷರಳಾಗಿ ಆರ್ಥಿಕವಾಗಿ ಸ್ವಾವಲಂಬಿಯಾಗುವಂತೆ ಮಾಡಬೇಕುಎಂದುನಮ್ಮ ಪ್ರಧಾನಿ ಪ್ರತಿಪಾದಿಸುತ್ತಾರೆ.

ಇದನ್ನು ಬಹಳ ಮಂದಿ ಹೇಳುತ್ತ ಬಂದಿದ್ದಾರೆ. ಈ ದೇಶದ ಮೊದಲ ಪ್ರಧಾನ ಮಂತ್ರಿ ಜವಾಹರಲಾಲ ನೆಹರೂ ಅವರೂ ಮಹಿಳಾ ಸ್ವಾತಂತ್ರ್ಯದ ಪ್ರಬಲ ಪ್ರತಿಪಾದಕರಾಗಿದ್ದರು. ಇಂದಿರಾ ಗಾಂಧಿಯವರೂ ಈ ದೇಶದ ಮಹಿಳೆಯರ ಆಶೋತ್ತರಗಳ ಪ್ರತೀಕವಾಗಿದ್ದರು. ಇಷ್ಟೆಲ್ಲ ಮಂದಿ ಸ್ತ್ರೀಯರ ಸ್ವಾತಂತ್ರ್ಯದ ಸಮರ್ಥಕರಾದರೂ ಭಾರತೀಯ ಮಹಿಳಾ ಸಮುದಾಯದ ಗುಲಾಮಗಿರಿ ಹಾಗೆಯೇ ಉಳಿದುಕೊಂಡು ಬಂದಿದೆ. ಈ ದೇಶದ ಎಲ್ಲ ಹುಡುಗಿಯರಿಗೂ ಕಡ್ಡಾಯವಾಗಿ ಕನಿಷ್ಠ ಪ್ರಾಥಮಿಕ ಶಿಕ್ಷಣವನ್ನಾದರೂ ಒದಗಿಸುವುದಕ್ಕೆ ನಮ್ಮ ಯಾವ ಸರಕಾರದಿಂದಲೂ ಯಾವ ನಾಯಕನಿಂದಲೂ ಆಗಿಲ್ಲ. ಮಹಿಳೆಯರು ಸ್ವಂತ ಉಮೇದಿನಿಂದ ಅಥವ ಪರಿಸ್ಥಿತಿಯ ಅಗತ್ಯಕ್ಕನುಗುಣವಾಗಿ ವಿದ್ಯೆ ಕಲಿತು ಉದ್ಯೋಗ ಹಿಡಿಯುವ ವಾತಾವರಣವನ್ನೂ ಯಾರೂ ಸೃಷ್ಟಿಸಿಲ್ಲ.

ಅಂತಹ ವಾತಾವರಣ ಸೃಷ್ಟಿಯಾಗಬೇಕಿದ್ದರೆ ಸ್ತ್ರೀಯರಿಗೆ ಉದ್ಯೋಗದಲ್ಲಿ ಮೀಸಲಾತಿ ಒದಗಿಸಬೇಕು. ಹಾಗೆ ಮೀಸಲಾತಿ ಕೊಟ್ಟರೆ ಮುಂದಿನ ಹತ್ತು ವರ್ಷಗಳಲ್ಲಿ ನಮ್ಮ ಸ್ತ್ರೀಸಮುದಾಯದ ಅರ್ಧಾಂಶ ಮಂದಿಯಾದರೂ ವಿದ್ಯೆ ಕಲಿತು ಉದ್ಯೋಗ ಹಿಡಿಯಲು ಪೈಪೋಟಿ ನಡೆಸುತ್ತಾರೆ. ಸ್ತ್ರೀಯರು ವಿದ್ಯೆ ಕಲಿಯಬೇಕು, ಉದ್ಯೋಗ ಹಿಡಿಯಬೇಕು, ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎಂದು ಬಾಯುಪಚಾರಕ್ಕೆ ಹೇಳುತ್ತ ಅಂತಹ ಸಾಧನೆಗೆ ಚಾಲನೆ ಕೊಡುವಂತಹ ಮೀಸಲಾತಿಯನ್ನು ನಿರಾಕರಿಸುವುದು ಪ್ರತಿಗಾಮಿ ಮನೋಭಾವವನ್ನು ತೋರಿಸುತ್ತದೆ; ಅಷಾಢ ಭೂತಿತನವನ್ನು ಪ್ರದರ್ಶಿಸುತ್ತದೆ.

ಇಂದು ಹೆಂಗಸರು ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲ ಅನೇಕ ಕ್ಷೇತ್ರಗಳಿವೆ. ಸ್ಥಳೀಯ ಸಂಸ್ಥೆಗಳು, ಶಿಕ್ಷಣ ಕ್ಷೇತ್ರ, ವೈದ್ಯಕೀಯ ರಂಗ, ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳ ಆಡಳಿತೆ ಇಲ್ಲೆಲ್ಲಾ ಮಹಿಳೆಯರಿಗೆ ಉದ್ಯೋಗ ನಿರ್ವಹಿಸಲು ಸಾಕಷ್ಟು ಅವಕಾಶಗಳಿವೆ. ನಮ್ಮ ಸಂಸ್ಥೆಗಳು ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾಗಿ ಶ್ರದ್ಧೆಯಿಂದ ದುಡಿಯಲು ಅವುಗಳಲ್ಲಿ ಹೆಚ್ಚೆಚ್ಚಾಗಿ ಮಹಿಳೆಯರಿರಬೇಕು. ಮಹಿಳೆಯರು ಪ್ರಾಮಾಣಿಕರಾಗಿ, ನಿಯತ್ತಿನಿಂದ, ಶ್ರದ್ಧೆಯಿಂದ ಕೆಲಸ ಮಾಡಬಲ್ಲರು ಎಂಬುದರಲ್ಲಿ ಸಂದೇಹವಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಈಗ ಸ್ತ್ರೀಯರಿಗೆ ಸ್ವಲ್ಪಾಂಶ ಮೀಸಲಾತಿ ಉಂಟು. ಅದು ಸಾಲದು. ಮಹಿಳೆಯರಿಗೆ ಮೀಸಲಾತಿ ಶೇಕಡಾ 50ರಷ್ಟಿರಬೇಕು ಅಲ್ಲದೆ ಅದನ್ನು ಹೆಚ್ಚಿನೆಲ್ಲಾ ಸರಕಾರಿ ಇಲಾಖೆಗಳಿಗೂ ಖಾಸಗಿ ಸಂಸ್ಥೆಗಳಿಗೂ ವಿಸ್ತರಿಸಬೇಕು. ಅದೊಂದು ಸಾಮಾಜಿಕ ಕ್ರಾಂತಿಯನ್ನೇ ತಂದೀತು. ಎರಡನೇ ದರ್ಜೆ ಪ್ರಜೆಗಳಾಗಿರುವ ಒಂದು ದೊಡ್ಡ ಜನ ವಿಭಾಗಕ್ಕೆ ಆತ್ಮಗೌರವವನ್ನು ಕೊಟ್ಟೀತು.

ಮುಂಗಾರು

ಭಾನುವಾರ, ಜನವರಿ 11, 1987

ಸರಿ ದಾರಿಯಲ್ಲ

ಬಾಬ್ರಿ ಮಸೀದಿಯ ವಿವಾದಕ್ಕೆ ಸಂಬಂಧಪಟ್ಟಂತೆ ಮತ್ತೊಂದು ವಿವಾದ ಈಗ ಹುಟ್ಟಿಕೊಂಡಿದೆ. ಬಾಬ್ರಿ ಮಸೀದಿಯ ಮೇಲಿನ ಮುಸ್ಲಿಮರ ಹಕ್ಕನ್ನು ಒಪ್ಪಿಕೊಳ್ಳುವಂತೆ ಸರಕಾರದ ಮೇಲೆ ಒತ್ತಡ ಹೇರಲು ಈ ಬಾರಿಯ ಗಣರಾಜ್ಯೋತ್ಸವವನ್ನು ಬಹಿಷ್ಕರಿಸುವಂತೆ ಜನತಾ ಪಕ್ಷದ ಸಂಸತ್ ಸದಸ್ಯ ಎಸ್.ಸೈಯದ್ ಶಹಬುದ್ದೀನ್ ಅವರು ಮುಸ್ಲಿಂ ಸಮುದಾಯಕ್ಕೆ ನೀಡಿರುವ ಕರೆಯು ದೇಶದಾದ್ಯಂತ ದೊಡ್ಡ ವೈಚಾರಿಕ ಕೋಲಾಹಲಕ್ಕೆ ಕಾರಣವೆನಿಸಿದೆ.

ಇಂತಹ ಕರೆಯನ್ನು ತಾನು ವೈಯಕ್ತಿಕವಾಗಿ ನೀಡಿಲ್ಲವೆಂದು ವಾದಿಸುತ್ತಿರುವ ಶಹಬುದ್ದೀನ್ ಕರೆಯನ್ನು ಮೂರು ಮುಸ್ಲಿಂ ಸಂಘಟನೆಗಳು ನೀಡಿದ್ದು ಕರೆಯನ್ನು ಹಿಂದೆಗೆದು ಕೊಳ್ಳುವ ಕೆಲಸವನ್ನು ಅವುಗಳೇ ಮಾಡಬೇಕು ಹೊರತು ತಾನಲ್ಲ ಎನ್ನುತ್ತಿದ್ದಾರೆ. ಭಾರತೀಯ ಮುಸ್ಲಿಂಲೀಗ್, ಮುಸ್ಲಿಂ ಮಜ್ಲಿಸ್–ಎ–ಮುಷಾವ ಾತ್ ಹಾಗೂ ಉತ್ತರಪ್ರದೇಶ ಮತ್ತು ದೆಹಲಿಗಳ ಬಾಬ್ರಿ ಮಸೀದಿ ಕ್ರಿಯಾಸಮಿತಿಗಳು ಸಭೆ ನಡೆಸಿ ಅಂಗೀಕರಿಸಿದ ಘೋಷಣೆಯಲ್ಲಿ ಗಣರಾಜ್ಯೋತ್ಸವ ಬಹಿಷ್ಕಾರಕ್ಕೆ ಸಂಬಂಧಪಟ್ಟ ಕರೆ ಇದೆಯೆಂದು ಶಹಬುದ್ದೀನ್ ಸ್ಪಷ್ಟಪಡಿಸಿದ್ದಾರೆ.

ಮೂರೂ ಸಂಸ್ಥೆಗಳ ಜಂಟಿ ಸಭೆಯನ್ನು ನಡೆಸಿದ ಸಂಚಾಲಕರು ಶಹಬುದ್ದೀನ್ ಅವರೇ ಆಗಿದ್ದಾರೆ. ಗಣರಾಜ್ಯೋತ್ಸವವನ್ನು ಬಹಿಷ್ಕರಿಸುವಂತೆ ಮುಸ್ಲಿಮರಿಗೆ ಕರೆ ನೀಡುವ ಘೋಷಣೆಯ ಹಿಂದಿನ ಚಾಲಕ ಶಕ್ತಿಯೂ ಶಹಬುದ್ದೀನರೆಂಬುದು ಈಗ ಗುಟ್ಟಾಗಿ ಉಳಿದಿಲ್ಲ. ಈ ಕರೆಯಿಂದ ಉಂಟಾಗಿರುವ ಪೇಚಿನ ಪ್ರಸಂಗದಿಂದ ತಪ್ಪಿಸಿಕೊಳ್ಳಲು ಅವರು ಈ ಕರೆಗೆ ಹೊಸ ವ್ಯಾಖ್ಯಾನಗಳನ್ನು ಹೇಳುತ್ತಿದ್ದಾರೆ. ಗಣರಾಜ್ಯೋತ್ಸವವನ್ನು "ಬಹಿಷ್ಕರಿಸಬೇಕು" ಎಂದು ಸಭೆಯು ತೀರ್ಮಾನಿಸಿದ್ದಲ್ಲವೆಂದೂ "ಭಾಗವಹಿಸದಿರಬೇಕು" ಎಂಬುದು ಮಾತ್ರವೇ ಸಭೆಯ ತೀರ್ಮಾನವೆಂಬುದೇ ಈ ಹೊಸ ವ್ಯಾಖ್ಯಾನ. ಇವುಗಳೆರಡರಲ್ಲಿ ಅಪಾರ ವ್ಯತ್ಯಾಸವಿದೆಯೆಂದು ಅವರನ್ನುತ್ತಾರೆ.

ರಾಮಜನ್ಮ ಭೂಮಿ, ಹಾಗೂ ಬಾಬ್ರಿ ಮಸೀದಿಗೆ ಸಂಬಂಧ ಪಟ್ಟ ವಿವಾದ ಏನೇ ಇರಲಿ. ನಾವಿಲ್ಲಿ ಪರಿಶೀಲಿಸಲಿಕ್ಕೆ ಹೊರಟಿರುವುದು ಈ ವಿವಾದಕ್ಕೆ ಸಂಬಂಧ ಪಟ್ಟಂತೆ ಸೈಯದ್ ಶಹಬುದ್ದೀನರ ಹಾಗೂ ಅವರು ಹೇಳುವಂತೆ ಸಂಬಂಧಪಟ್ಟ ಮೂರು ಸಂಸ್ಥೆಗಳ ನಡೆವಳಿಕೆಗಳನ್ನು. ವಿವಾದಗಳ ಪರಿಹಾರಕ್ಕೆ ಮಾತುಕತೆಯ ದಾರಿಯಿದೆ. ಚರ್ಚೆ–ಸಂವಾದಗಳ ಮೂಲಕ ಬಗೆ ಹರಿಯಲಾರದ ಪ್ರಶ್ನೆಗಳು ಕಮ್ಮಿ. ಬಾಬ್ರಿ ಮಸೀದಿಯ ವಿಚಾರವೂ ಅಷ್ಟೆ. ಎರಡೂ ಕೋಮುಗಳ ನಾಯಕರು, ಪ್ರತಿನಿಧಿಗಳು ಕಲೆತು ಚರ್ಚಿಸಿ ಒಡಂಬಡಿಕೆಗೆ ಬರಲು ಸಾಧ್ಯವಿದೆ. ಇಂತಹ ಮಾರ್ಗವನ್ನು ತೆರೆಯುವ ಕಾರ್ಯದಲ್ಲಿ ಸರಕಾರವೂ ಸಹಾಯ ಮಾಡಬಹುದಾಗಿದೆ.

ಬದಲಾಗಿ ಗಣರಾಜ್ಯೋತ್ಸವದಂತಹ ರಾಷ್ಟ್ರೀಯತೆಯ ಲಾಂಛನವಾಗಿರುವ ಉತ್ಸವವನ್ನು ಬಹಿಷ್ಕರಿಸುವ ಮಾರ್ಗವನ್ನು ಅನುಸರಿಸುವುದರಿಂದ ಬಿಕ್ಕಟ್ಟು ಹೆಚ್ಚೀತೇ ಹೊರತು ಕಮ್ಮಿಯಾಗಲಾರದು. ಬಹಿಷ್ಕಾರವಲ್ಲ–ಭಾಗವಹಿಸದಿರುವಿಕೆ ಎಂಬ ತಾಂತ್ರಿಕ ವ್ಯತ್ಯಾಸದ ಸಬೂಬುಗಳು ಕೃತ್ಯದ ಗಂಭೀರತೆಯನ್ನು ಕಡಿಮೆ ಮಾಡುವುದಿಲ್ಲ. ಮಾತ್ರವಲ್ಲ ಇದರಲ್ಲಿ ಶಹಬುದ್ದೀನರ ಪಾತ್ರವೇನೂ ಇಲ್ಲವೆಂಬುದನ್ನೂ ಯಾರೂ ನಂಬುವುದಿಲ್ಲ.

ಈ ದೇಶದಲ್ಲಿ ಮತ–ಧರ್ಮಗಳ ಆಚರಣೆಯ ವಿಧಾನಗಳು ವಿವಾದ ಮಾಡಿದ್ದುಂಟು. ವಿಶ್ವಾಸಗಳ ಘರ್ಷಣೆಯಿಂದ ಕೋಮು ಸೌಹಾರ್ದ ಕೆಟ್ಟುಹೋಗಿ ಕ್ಷೋಭೆ ತಾಂಡವವಾಡಿದ್ದುಂಟು. ಇಂತಹ ಸನ್ನಿವೇಶದಲ್ಲಿ ಗಣರಾಜ್ಯೋತ್ಸವವನ್ನು ಬಹಿಷ್ಕರಿಸುವಂತಹ ಕೃತ್ಯಗಳು ಕ್ಷೋಭೆಯನ್ನು ಹೆಚ್ಚಿಸುತ್ತವೆ. ಸೌಹಾರ್ದವನ್ನು ಕೆಡಿಸುತ್ತವೆ. ಪರಿಹಾರವನ್ನು ಕಷ್ಟಕರವಾಗಿ ಮಾಡುತ್ತವೆ. ಸಮಸ್ಯೆಗಳನ್ನು ಬಿಡಿಸುವ ಬದಲು ಬೆಳೆಸುವುದರಿಂದ ಬಾಬ್ರಿ ಸಮಸ್ಯೆ ಪರಿಹಾರವಾಗದು. ಇಂಥ ಮಾರ್ಗವನ್ನು ಅನುಸರಿಸುವುದರಿಂದ ಮುಸ್ಲಿಂ ಸಮುದಾಯಕ್ಕೇ ತುಂಬ ಹಾನಿಯುಂಟು.

ಮುಂಗಾರು
ಗುರುವಾರ, ಜನವರಿ 15, 1987

ಒಳ್ಳೆಯ ಉಪಕ್ರಮ

ಪಂಜಾಬು ಸಮಸ್ಯೆಯ ನಿವಾರಣೆಗೆ ಸಂಬಂಧಪಟ್ಟಂತೆ ಮಾತುಕತೆ ನಡೆಸಲು ಪ್ರಧಾನಮಂತ್ರಿ ರಾಜೀವ ಗಾಂಧಿಯವರು ಮುಖ್ಯಮಂತ್ರಿ ಸುರ್ಜಿತ್ ಸಿಂಗ್ ಬರ್ನಾಲಾರನ್ನು ಆಹ್ವಾನಿಸಿದ ವರದಿ ಬಂದಿದೆ. ಈ ಮಾತುಕತೆ ದೆಹಲಿಯಲ್ಲಿ ದಿನಾಂಕ 16ರಂದು ನಡೆಯಲಿದೆ.

ಪ್ರಧಾನಿಯವರು ಮುಖ್ಯಮಂತ್ರಿಯವರಿಗೆ ನೀಡಿದ ಈ ಆಹ್ವಾನಕ್ಕೆ ಹಿನ್ನೆಲೆಯುಂಟು. ಪಂಜಾಬಿನ ಸಮಸ್ಯೆಗೆ ಸಂಬಂಧಪಟ್ಟು ಮಾಡಿಕೊಳ್ಳಲಾದ ರಾಜೀವ್-ಲೊಂಗೋವಾಲ್ ಒಡಂಬಡಿಕೆಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಪಂಜಾಬಿನ ಆಳುವ ಅಕಾಲಿ ದಳವು ಕೇಂದ್ರ ಸರಕಾರಕ್ಕೆ ಕೊನೆಯೆಚ್ಚರಿಕೆ ನೀಡಿದ್ದೇ ರಾಜೀವ್ ಗಾಂಧಿಯವರು ಈ ಮಾತುಕತೆಯ ಆಹ್ವಾನ ನೀಡಲು ಕಾರಣವಾಯಿತು. ಅಕಾಲಿದಳದ ಕೊನೆಯೆಚ್ಚರಿಕೆಯ ಅವಧಿ ಬುಧವಾರ, ದಿನಾಂಕ 14ಕ್ಕೆ ಮುಕ್ತಾಯಗೊಳ್ಳಲಿದ್ದು ಇದರಿಂದುಂಟಾಗುವ ಪೇಚಿನ ಪ್ರಸಂಗದಿಂದ ತಪ್ಪಿಸಿಕೊಳ್ಳಲು ಬರ್ನಾಲಾರಿಗೆ ಸಹಾಯವಾಗುವಂತೆ ಆಹ್ವಾನ ನೀಡುವ ಪತ್ರವನ್ನು ರಾಜೀವಗಾಂಧಿ ಬರೆದಿದ್ದಾರೆ. ಬುಧವಾರ ಮುಕ್ತಸರದಲ್ಲಿ 'ಮಾಘಿ ಮೇಳ'ದಲ್ಲಿ ಸೇರುವ "ಸಿಕ್ಖ ಸಂಗತ್"ನ್ನು ಮುಖ್ಯಮಂತ್ರಿ ಬರ್ನಾಲಾ ಎದುರಿಸಬೇಕಿದ್ದು ರಾಜೀವ ಗಾಂಧಿಯವರ ಪತ್ರದ ಆಧಾರದಲ್ಲಿ ಪಂಜಾಬು ಸಮಸ್ಯೆಗೆ ಸಮಗ್ರ ಪರಿಹಾರ ಹುಡುಕುವ ಆಶಾವಾದವನ್ನು ಅವರು ಸಿಕ್ಖರ ಮುಂದಿರಿಸುವ ನಿರೀಕ್ಷೆಯಿದೆ.

ದಿನಾಂಕ 14ರೊಳಗೆ ರಾಜೀವ್-ಲೊಂಗೋವಾಲ್ ಒಡಂಬಡಿಕೆಯ ಅನುಷ್ಠಾನಕ್ಕೆ ಮೂರ್ತವಾದ ಹೆಜ್ಜೆಗಳನ್ನು ಕೈಗೊಳ್ಳದೇ ಇದ್ದರೆ ಮುಂದಿನ "ಸಕ್ರಿಯ ಕಾರ್ಯಾಚರಣೆ"ಯನ್ನು ಘೋಷಿಸುವುದಾಗಿ ಅಕಾಲಿ ದಳವು ಘೋಷಿಸಿದ ಹಿನ್ನೆಲೆಯಲ್ಲಿ ಈ ಬೆಳವಣಿಗೆಗಳು ನಡೆದಿವೆ. ರಾಜೀವ ಗಾಂಧಿಯವರ ಪತ್ರವು ಪಂಜಾಬು ಸಮಸ್ಯೆಯ ಹಿನ್ನೆಲೆಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಸಮಸ್ಯೆಗೆ ಸಮಗ್ರ ಪರಿಹಾರ ಹುಡುಕುವುದಕ್ಕಾಗಿ ಮಾತನಾಡೋಣ ಎಂಬ ಒಕ್ಕಣೆಯು ಪತ್ರದಲ್ಲಿರುವುದೇ ಈ ಆಶಾವಾದಕ್ಕೆ ಕಾರಣ. ಈ ಮುತುವರ್ಜಿಯು ರಾಜಕೀಯ ಪರಿಹಾರದ ದಾರಿಯನ್ನು ಮತ್ತೆ ತೆರೆಯುವಂತಹದಾಗಿದ್ದು ರಾಜೀವ್ – ಲೊಂಗೋವಾಲ್ ಒಪ್ಪಂದದ ಪ್ರಕ್ರಿಯೆಯ ಮುಂದುವರಿಕೆಯೇ ಆಗಿದೆ.

ಆದ್ದರಿಂದಲೇ ಇದೀಗ "ಸಕ್ರಿಯ ಕಾರ್ಯಾಚರಣೆ"ಯ ಘೋಷಣೆಯನ್ನು ಆಳುವ ಅಕಾಲಿದಳವು ಮುಂದಕ್ಕೆ ಹಾಕಿರುವ ವಾರ್ತೆ ಬಂದಿದೆ.

ಪಂಜಾಬು ವಿದ್ಯಮಾನಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರಕಾರದ ಹೊಸ ಉಪಕ್ರಮವು ಕತ್ತಲೆಯ ಕೂಪದಲ್ಲಿ ಕಾಣಿಸುತ್ತಿರುವ ಒಂದು ಸಣ್ಣ ಬೆಳಕಾಗಿದ್ದರೆ ಸ್ವಾಗತಾರ್ಹವಾದ ಇನ್ನೊಂದು ಬೆಳವಣಿಗೆಯೂ ಕಂಡು ಬಂದಿದೆ. ಹೋರಾಟ ನಿರತವಾಗಿರುವ ಸಿಖ್ ಸಂಘಟನೆಗಳ ಜತೆ ಮಾತುಕತೆಗೆ ಕೇಂದ್ರ ಸರಕಾರ ಸಿದ್ಧವಿದ್ದರೆ ಮಾತುಕತೆಯ ಮೂಲಕ ರಾಜಕೀಯ ಪರಿಹಾರ ಸಾಧಿಸಲು ತಾವು ತಯಾರಿದ್ದೇವೆಂದು ಬಾದಲ್ ಬಣಕ್ಕೆ ಸೇರಿದ ಅಕಾಲಿ ಸಂಸದೀಯ ಗುಂಪು ಹೇಳಿಕೆ ನೀಡಿರುವುದೇ ಈ ಹೊಸ ಬೆಳವಣಿಗೆಯಾಗಿದೆ.

ಯಾರೊಡನೆ ಮಾತನಾಡಬೇಕು ಎಂಬುದರ ಮೊದಲು ಪಂಜಾಬಿನ ಕ್ಷೋಭೆಗೆ ಮಾತುಕತೆಯ ಮೂಲಕ ರಾಜಕೀಯ ಪರಿಹಾರ ಹುಡುಕುವುದರ ಅಗತ್ಯ ಹಾಗೂ ಅನಿವಾರ್ಯತೆಯ ಬಗ್ಗೆ ಕೇಂದ್ರ ಸರಕಾರದ ನಾಯಕರು ಮೊದಲು ಮಾನಸಿಕ ಸಿದ್ಧತೆ ಮಾಡಿಕೊಳ್ಳಬೇಕಾಗಿದೆ. ಅಷ್ಟೇ ಅಲ್ಲದೆ ಈ ಸಮಸ್ಯೆಗೆ ಕಂಡುಕೊಳ್ಳಬೇಕಾದ ಪರಿಹಾರದ ಬಗ್ಗೆ ಮನಸ್ಸನ್ನು ಮುಚ್ಚಿಕೊಳ್ಳದೆ ಮುಕ್ತವಾಗಿ ಇರಿಸಿಕೊಳ್ಳಬೇಕಾದ ಅಗತ್ಯವೂ ಇದೆ. ಪಂಜಾಬಿನಲ್ಲಿ ಹಿಂಸೆಯ ತಾಂಡವ ನಡೆದಿದೆ, ಭಯೋತ್ಪಾದಕರು ನಿರಪರಾಧಿಗಳನ್ನು ಕೊಲ್ಲುತ್ತಿದ್ದಾರೆ ಎಂಬ ಕಾರಣಕ್ಕೆ ಪರಿಹಾರದ ಸ್ವರೂಪದ ಬಗ್ಗೆ ಪೂರ್ವನಿರ್ಧಾರ ಮಾಡಿಕೊಂಡು ಹೊರಟರೆ ಉಂಟಾಗುವ ಪರಿಹಾರ ಪರಿಸ್ಥಿತಿಯ ಅಗತ್ಯಕ್ಕೆ ಸಾಕಾಗದೆಯೂ ಹೋಗಬಹುದು.

ಅಷ್ಟರ ಮಟ್ಟಿಗೆ ಮಾನಸಿಕ ಸಿದ್ಧತೆ ಮಾಡಿಕೊಂಡು ಆ ಮೇಲೆ ಮಾತನಾಡಬೇಕಾದ ಸಂಘಟನೆಗಳು, ಸಮುದಾಯಗಳು ಯಾವುದೆಂಬ ಬಗ್ಗೆ ಪರಿಶೀಲಿಸಬಹುದಾಗಿದೆ. ಮಾನಸಿಕವಾಗಿ ಮಾತುಕತೆಗೆ ತಯಾರಾದ ಮೇಲೆ ಪ್ರಾತಿನಿಧಿಕ ಸಂಸ್ಥೆಗಳನ್ನು ಗುರುತಿಸುವುದು ಕಷ್ಟಕರವಾಗಲಾರದು. ಕೇಂದ್ರಸರಕಾರವೇ ಈಗ ಒಪ್ಪಿಕೊಂಡಿರುವ ಸಿಕ್ಖರ ಪ್ರತಿನಿಧಿಯಾದ ಆಳುವ ಅಕಾಲಿ ಪಕ್ಷದೊಡನೆಯೂ ಸಿಕ್ಖರ ಒಂದು ದೊಡ್ಡ ವಿಭಾಗವನ್ನು ಪ್ರತಿನಿಧಿಸುವುದೆಂದು ಬಹಳಷ್ಟು ಮಂದಿ ನಂಬಿರುವ ಅಕಾಲಿ (ಬಾದಲ್) ಗುಂಪಿನ ಜತೆಯೂ ಸರಕಾರ ಸಂವಾದ ನಡೆಸಬಹುದಾಗಿದೆ. ಈ ಸಮಾಲೋಚನೆಯಲ್ಲಿ ಸಿಕ್ಖರ ಪ್ರಾತಿನಿಧ್ಯವನ್ನು ವ್ಯಾಪಕಗೊಳಿಸಿ ಬೇರೆಯವರನ್ನು ಸೇರಿಸಿಕೊಳ್ಳಬಹುದಾಗಿದೆ.

ರಾಜೀವ ಗಾಂಧಿಯವರು ಇದೀಗ ತಾನೇ ತೋರಿಸಿರುವ ಉಮೇದು ಪಂಜಾಬಿನ ಹಿಂಸೆಯ ದಾವಾನಲವನ್ನು ತಣಿಸಬಹುದೇ ಎಂಬುದನ್ನು ಕಾದು ನೋಡಬೇಕಾಗಿದೆ. ಆದರೆ ಈ ದಾರಿ ಮಾತ್ರವೇ ಪರಿಹಾರ ತರುವುದಲ್ಲದೆ ಖಂಡಿತಾ ಘರ್ಷಣೆಯದ್ದಲ್ಲವೆಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕಾಗಿದೆ.

ಮುಂಗಾರು

ಮಂಗಳವಾರ, ಜನವರಿ 20, 1987

ಪಾಕಿಸ್ತಾನದ ಸಮರಸಿದ್ಧತೆ

ಪಾಕಿಸ್ತಾನವು ಭಾರತದ ಜತೆಗಿನ ತನ್ನ ಗಡಿ ಯುದ್ಧಕ್ಕೂ ಸೈನ್ಯವನ್ನು ಜಮಾವಣೆ ಮಾಡಿರುವ ಸುದ್ದಿ ಬಂದಿದೆ.

ಈ ಸೇನಾ ಜಮಾವಣೆ ಮಾಮೂಲಿ ವಿದ್ಯಮಾನವಲ್ಲ; ವಿಶೇಷವಾದದ್ದು. ಸಾಮಾನ್ಯವಾಗಿ ಎರಡೂ ದೇಶಗಳು ಪ್ರತಿವರ್ಷವೂ ಚಳಿಗಾಲದಲ್ಲಿ ಗಡಿ ಪ್ರದೇಶದಲ್ಲಿ ಸಮರಾಭ್ಯಾಸ ನಡೆಸುವುದುಂಟು. ಆದರೆ ಪಾಕಿಸ್ತಾನದ ಸೇನಾ ಜಮಾವಣೆಯು ಆ ವರ್ಗಕ್ಕೆ ಸೇರಿದ್ದಲ್ಲ. ಪಾಕಿಸ್ತಾನ ತನ್ನ ಒಟ್ಟು 22ಸೇನಾ ಡಿವಿಜನುಗಳ ಪೈಕಿ 16ನ್ನು ಭಾರತದ ಜತೆಗಿನ ಗಡಿಯಲ್ಲಿ ನೆಲೆಗೊಳಿಸಿದೆ. ಅಫ್ಘಾನಿಸ್ತಾನದ ಜತೆಗಿನ ಗಡಿಯಲ್ಲಿ ಕೇವಲ ಮೂರುಡಿವಿಜನುಗಳು ಮಾತ್ರವೇ ಇವೆ. ಸಾಮಾನ್ಯವಾಗಿ ಜಮ್ಮು-ಕಾಶ್ಮೀರದ ನಿಯಂತ್ರಣ ರೇಖೆಯುದ್ದಕ್ಕೆ ಮಾತ್ರವೆ ಸೈನ್ಯದ ನೆಲೆ ಇರುವುದಾದರೆ ಈ ಬಾರಿ ಪಾಕಿಸ್ತಾನ, ಕಾಶ್ಮೀರದಿಂದ ತೊಡಗಿ ಪಂಜಾಬು ಹಾಗೂ ರಾಜಸ್ತಾನಗಳ ಗಡಿಯುದ್ದಕ್ಕೂ ಸೇನೆನಿಲ್ಲಿಸಿದೆ. ದಾಳಿ ನಡೆಸಲು ಬೇಕಾದ ಟ್ಯಾಂಕುಗಳನ್ನೂ ಶಸ್ತ್ರಾಸ್ತ್ರಗಳನ್ನೂ ಯುದ್ಧಕ್ಕೆ ಸಿದ್ಧತೆಯೆಂಬಂತೆ ಜಮಾಯಿಸಿದೆ. ಸೈನಿಕರ ರಜೆಯನ್ನು ರದ್ದುಗೊಳಿಸಿದೆ. ಎರಡು ತಿಂಗಳ ಹಿಂದೆ ಕರೆಸಿಕೊಳ್ಳಲಾದ ಹತ್ತುಸಾವಿರ ಮಂದಿ ವಿರಾಮಕ್ಕಾಗಿ ವಾಪಸಲು ಪಡೆಯುವರನ್ನು ಮರಳಿ ಕಳಿಸಿಲ್ಲ. ಘಟಕದಿಂದ ಘಟಕಕ್ಕೆ ವರ್ಗಾವಣೆಯನ್ನು ಅಮಾನತುಗೊಳಿಸಲಾಗಿದೆ. ಮುಂಚೂಣಿಯ ಪ್ರದೇಶಕ್ಕೆ ಅಪಾರ ಪ್ರಮಾಣದ ಮದ್ದು ಗುಂಡುಗಳನ್ನು ಪೂರೈಸಲಾಗಿದೆ. ಇಂಧನ ಪೂರೈಕೆಯು ನಿರಂತರವಾಗಿರುವಂತೆ ವ್ಯವಸ್ಥೆ ಮಾಡಲಾಗಿದೆ.

ಪಾಕಿಸ್ತಾನವು ಗಡಿಯಲ್ಲಿ ಅಸಾಮಾನ್ಯ ಪರಿಸ್ಥಿತಿಯನ್ನು ಉಂಟುಮಾಡುತ್ತಿದೆಯೆಂಬುದನ್ನು ಈ ಸೇನಾ ಜಮಾವಣೆಯು ಸ್ಪಷ್ಟಪಡಿಸುತ್ತದೆ. ಪಾಕಿಸ್ತಾನದಲ್ಲಿ ಆಂತರಿಕ ಗೊಂದಲವಿದೆ. ಅಲ್ಲಿನ ರಾಜಕಾರಣವು ಅಭದ್ರವಿದೆ. ಸಿಂಧ್ ಪ್ರಾಂತದಲ್ಲಿ ಜನಾಂಗವಾದಿ ಕ್ಷೋಭೆಯಿದೆ. ಈ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವುದಕ್ಕೆ ಪಾಕಿಸ್ತಾನದ ಆಳುವ ಕೂಟಕ್ಕೆ ಸಮರವು ಬೇಕಾಗಿದೆ. ಇತ್ತ ಭಾರತದಲ್ಲಿನ ಗೊಂದಲಗಳು ಪಾಕಿಸ್ತಾನಕ್ಕೆ ಅನುಕೂಲಕರವಾಗಿ ಪರಿಣಮಿಸಿದೆ.

ಭಾರತಕ್ಕಿರುವ ತಲೆನೋವು ಒಂದೆರಡಲ್ಲ. ಪಂಜಾಬಿನ ಕ್ಷೋಭೆ ತಣಿಯುವ ಬದಲು ಉಲ್ಬಣವಾಗುತ್ತಿದೆ. ಕಾಶ್ಮೀರದ ಗಡಿಯಲ್ಲಿ ಚೀನದ ಪಾತ್ರದಿಂದಾಗಿ ಅಭದ್ರತೆಯಿದೆ. ಚೀನವು ನುಂಗಿ ಹಾಕಿದ ಸಿಯಾಚಿನ್ ಪ್ರದೇಶದ ಮೇಲಿನ ಹಕ್ಕು ಭಾರತ ಬಿಟ್ಟುಕೊಡದೆ ಇರುವುದರಿಂದ ಅತಂತ್ರ ಪರಿಸ್ಥಿತಿಯಿದೆ. ಕಾಶ್ಮೀರದಲ್ಲಿ ಒಟ್ಟು 39,000 ಚದರ ಮೈಲು ಪ್ರದೇಶ ಚೀನದ ವಶವಿದೆ. 2900 ಚದರ ಮೈಲು ಪಾಕಿಸ್ತಾನದ ಬಳಿಯಿದೆ. ಇದೀಗ ಪಾಕಿಸ್ತಾನವು 4500 ಚದರ ಮೈಲು ಪ್ರದೇಶವನ್ನು ಚೀನಕ್ಕೆ ಬಿಟ್ಟುಕೊಟ್ಟಿರುವ ಸುದ್ದಿ ಬಂದಿದೆ.

ಎಲ್ಲದಕ್ಕಿಂತ ಮಹತ್ವದ್ದೂ ಗಂಭೀರವೂ ಆಗಿರುವಂತಹದ್ದು ಪಂಜಾಬಿನ ವಿದ್ಯಮಾನ. ಆನಂದಪುರ ಸಾಹಿಬ್ ನಿರ್ಣಯದ ಮೂಲಕ ಅಧಿಕಾರ ವಿಕೇಂದ್ರೀಕರಣದ ಬೇಡಿಕೆಯಾಗಿ ಹುಟ್ಟಿಕೊಂಡ ಪಂಜಾಬಿನ ಸಮಸ್ಯೆ ಇಂದು ವಿವಿಧ ಮುಖಗಳನ್ನು ಪಡೆದುಕೊಂಡು ಗಂಭೀರವಾಗಿದೆ.

ಈ ಗೋಜಲನ್ನು ಸ್ವಂತ ಲಾಭಕ್ಕೆ ಉಪಯೋಗಿಸಿಕೊಳ್ಳುವ ವ್ಯೂಹರಚನೆಯನ್ನು ಈಗ ಪಾಕಿಸ್ತಾನ ಮಾಡುತ್ತಿದೆ ಎಂದೇ ಹೇಳಬೇಕಾಗಿದೆ. ಭಾರತದ ಸರಕಾರದ ಮುಖಂಡರು, ರಾಜಕೀಯ ಚಿಂತಕರು ಹಾಗೂ ಕಾರ್ಯಕರ್ತರು ಹಾಗೂ ಸಾಮಾನ್ಯ ಜನ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾದಂತಹ ವಿಚಾರ ಇದಾಗಿದೆ. ಈ ಸಂದರ್ಭದಲ್ಲಿ ಭಾರತದ ಜತೆ ಕಾಲು ಕೆರೆದು ಜಗಳಕ್ಕಿಳಿಯುವುದರಿಂದ ಅಪಾರ ಲಾಭವಿದೆಯೆಂದು ಪಾಕಿಸ್ತಾನ ತಿಳಿದು ಕೊಂಡರೆ ಅದರ ತಪ್ಪಲ್ಲ. ಅಂಥ ಪರಿಸ್ಥಿತಿಯನ್ನು ಉಂಟು ಮಾಡಿದ ಹಾಗೂ ಬೆಳೆಸಿಕೊಂಡು ಬರುತ್ತಿರುವ ನಮ್ಮ ತಪ್ಪು.

ಇಂದಿನ ವಾತಾವರಣದಲ್ಲಿ ಭಾರತ–ಪಾಕಿಸ್ತಾನ ಯುದ್ಧ ಸಂಭವಿಸಿದರೆ ಉಂಟಾಗುವ ವಿದ್ಯಮಾನಗಳ ಚಿತ್ರವನ್ನು ಕಲ್ಪಿಸಿಕೊಳ್ಳುವುದೇನೂ ಕಷ್ಟಕರವಲ್ಲ. ಈ ಹಿಂದಿನ ಯುದ್ಧಗಳಲ್ಲಿ ಪಂಜಾಬಿನ ಸಿಕ್ಖರು ಭಾರತದ ಸೈನ್ಯದ ದೊಡ್ಡ ಬಲವಾಗಿದ್ದರು. ಪಾಕಿಸ್ತಾನಕ್ಕೆ ಎದುರಾಗಿರುವ ಪಂಜಾಬಿನಲ್ಲಿ ಸಿಕ್ಖ ಸಮುದಾಯವು ಪಾಕಿಸ್ತಾನೀಯರ ಆಕ್ರಮಣವನ್ನು ಎದುರಿಸುವ ಅಭೇದ್ಯವಾದ ಕೋಟೆಯೋಪಾದಿಯಲ್ಲಿ ಕೆಲಸ ಮಾಡಿತ್ತು. ಭಾರತವು ಎರಡೂ ಸಮರಗಳಲ್ಲಿ ಪಡೆದ ಮಹತ್ವದ ವಿಜಯಗಳಲ್ಲಿ ಸಿಕ್ಖರ ಪಾಲು ದೊಡ್ಡದು. ಸಿಕ್ಖರು ಭಾರತದ ರಾಷ್ಟ್ರೀಯತೆಯಲ್ಲಿ ದೈಹಿಕವಾಗಿಯೂ ಮಾನಸಿಕವಾಗಿಯೂ ಮಿಳಿತವಾದ ಅವಿಭಾಜ್ಯ ಅಂಗವಾಗಿದ್ದರು. ಮೊದಲೆರಡು ಯುದ್ಧಗಳು ಪಂಜಾಬಿನ ಗಡಿಯಲ್ಲೇ ನಡೆದವು. ಸಿಯಾಲ್‌ಕೋಟ್ ಕದನವು ಐತಿಹಾಸಿಕವಾದ ಘಟನೆ. ಪಂಜಾಬಿನ ಮೂಲಕವೇ ಭಾರತದ ಸೇನೆ ಮುನ್ನುಗ್ಗಿ ಲಾಹೋರಿನ ಸಮೀಪಕ್ಕೆ ಬಂದಿತ್ತು.

ಇದೆಲ್ಲವೂ ಆಗಿ ಹೋದ ಕತೆ. ಇಂದಿನ ಭಾರತೀಯ ಪರಿಸ್ಥಿತಿಯಲ್ಲಿ ಸಿಕ್ಖರ ಸಮಸ್ಯೆ ಒಂದು ವ್ಯಥೆ. ಇಂದು ಭಾರತ-ಪಾಕಿಸ್ತಾನ ಯುದ್ಧ ನಡೆದರೆ ಸಿಕ್ಖರ ನಿಷ್ಠೆ ಭಾರತದ ರಾಷ್ಟ್ರೀಯತೆಯಲ್ಲಿ ಸಮ್ಮಿಲನಗೊಂಡು ಕೆಲಸ ಮಾಡೀತು ಎಂಬುದಕ್ಕೆ ಭರವಸೆಯಿಲ್ಲ. ಈ ಜನಾಂಗ ನಿಷ್ಠೆ ಬದಲಿಸಿ ಪಾಕಿಸ್ತಾನಕ್ಕೆ ನೆರವಾದೀತು ಎಂಬುದು ಇದರ ಅರ್ಥವಲ್ಲ; ಆದರೆ ಪಂಜಾಬಿನಲ್ಲಿ ದೊಡ್ಡ ಸಮಸ್ಯೆ ಉಂಟಾದೀತು ಎಂಬುದಂತೂ ಖಂಡಿತ. ಸಿಕ್ಖ ಜನಾಂಗ ನಿರ್ಲಿಪ್ತರಾಗಿ ನಿಲ್ಲಲೂ ಬಹುದು. ಇದುವೇ ಅವಕಾಶವೆಂದು ಬಗೆದು ಪ್ರತ್ಯೇಕ ಖಾಲಿಸ್ತಾನದ ಘೋಷಣೆಯಾಗಲೂ ಬಹುದು. ಭಾರತದ ಸೇನೆಯಲ್ಲಿ ಸುಮಾರು ಎರಡುಲಕ್ಷದಷ್ಟಿರುವ ಸಿಕ್ಖರ ನಿಲುವೇನೆಂದು ನಿರೀಕ್ಷಿಸುವುದು ಕಷ್ಟ.

1971ರಲ್ಲಿ ಪೂರ್ವದಲ್ಲಿ ಕಾಣಿಸಿಕೊಂಡ ಬಾಂಗ್ಲಾದೇಶ ವಿದ್ಯಮಾನ ಮುಂದೊಂದು ದಿನ ಪಶ್ಚಿಮದಲ್ಲಿ ಉಂಟಾಗದೆ ಇರಲು ಮಾಡಬೇಕಾದ ಮುನ್ನೆಚ್ಚರಿಕೆ ಕಾರ್ಯಗಳ ಬಗ್ಗೆ ಭಾರತ ಸರಕಾರವೂ ಜನತೆಯೂ ಸಮೂಹ ಚಿಂತನೆ ಮಾಡಬೇಕು. ಪಾಕಿಸ್ತಾನ ಗಡಿಯುದ್ದಕ್ಕೂ ಸೇನೆಯನ್ನು ಸಮರ ಸಿದ್ಧತೆಯೊಡನೆ ನೆಲೆಗೊಳಿಸಿರುವ ಹಿನ್ನೆಲೆಯಲ್ಲಿ ಆಲೋಚಿಸಬೇಕು. ಅನಾಹುತಕಾರಿಯಾದ ರಾಷ್ಟ್ರೀಯ ಗಂಡಾಂತರವನ್ನೂ ಮಹಾದುರಂತವನ್ನೂ ತಪ್ಪಿಸಲು ಮುಂದಾಗಬೇಕು.

ಅದುವೇ ಪಂಜಾಬಿನ ಕ್ಷೋಭೆಗೆ ಪರಿಹಾರ. ಅದನ್ನು ತಣಿಸದೆ ಇದ್ದರೆ ಆ ಬೆಂಕಿಯಲ್ಲಿ ಭಾರತದ ರಾಷ್ಟ್ರೀಯತೆಯು ಬಿದ್ದು ರೆಕ್ಕೆಪುಕ್ಕಗಳನ್ನು ಉರಿಸಿಕೊಳ್ಳಬೇಕಾದೀತು.

ಮುಂಗಾರು

ಶುಕ್ರವಾರ, ಜನವರಿ 30, 1987

ಕೇಂದ್ರದ ಯೋಜನೆಗಳು

ಕೇಂದ್ರ ಸರಕಾರವು ಘೋಷಿಸಿದ, ಆದರೆ ಕೆಲಸವು ಪ್ರಾರಂಭವಾಗದ ಇರುವ ಅಥವಾ ಕುಂಟುತ್ತಲೇ ನಡೆಯುತ್ತಿರುವ ಕೆಲವು ಕೇಂದ್ರ ಸರಕಾರದ ಯೋಜನೆಗಳ ವಿಚಾರವಾಗಿ ಇಬ್ಬರು ರಾಜ್ಯ ರಾಜಕಾರಣಿಗಳು ಕೇಂದ್ರ ಸರಕಾರವನ್ನು ತರಾಟೆಗೆ ತೆಗೆದು ಕೊಂಡಿದ್ದಾರೆ.

ಮೊದಲನೆಯವಾಗಿ ಮಾಜಿ ಮುಖ್ಯಮಂತ್ರಿಗಳೂ ಕೇಂದ್ರ ಸರಕಾರದ ಮಾಜಿಸಚಿವರೂ ಆಗಿರುವ ವೀರೇಂದ್ರ ಪಾಟೀಲರು ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದು ಮಂಗಳೂರಿನಲ್ಲಿ ಸ್ಥಾಪಿಸಲು ಪ್ರಸ್ತಾಪಿಸಲಾಗಿರುವ ತೈಲ ಶುದ್ಧೀಕರಣ ಕಾರ್ಖಾನೆಗೆ ಕೇಂದ್ರ ಪೆಟ್ರೋಲಿಯಂ ಖಾತೆಯ ಮಂಜೂರಾತಿಯನ್ನು ಬೇಗನೆ ಪ್ರಕಟಿಸಬೇಕೆಂದು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಅವರು 1971ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಶಿಲಾನ್ಯಾಸ ಮಾಡಿದ ಬಳಿಕ ನನೆಗುದಿಗೆ ಬಿದ್ದಿರುವ ವಿಜಯನಗರ ಉಕ್ಕಿನ ಕಾರ್ಖಾನೆ ಯೋಜನೆಗಾದ ಗತಿಯನ್ನು ನೆನಪಿಸಿ ಕೊಟ್ಟಿದ್ದಾರೆ ಅದೇ ಗತಿ ಮಂಗಳೂರು ತೈಲಾಗಾರಕ್ಕೂ ಆದರೆ ಕರ್ನಾಟಕದ ಜನರಿಗೆ ತುಂಬಾ ನಿರಾಸೆಯಾಗುವುದೆಂದು ವೀರೇಂದ್ರ ಪಾಟೀಲರು ಹೇಳಿದ್ದಾರೆ. ಕೇಂದ್ರದಲ್ಲಿ ಆಳುತ್ತಿರುವ ಕಾಂಗ್ರೆಸ್ ಪಕ್ಷದ ಸದಸ್ಯರೇ ಆಗಿದ್ದು ವೀರೇಂದ್ರ ಪಾಟೀಲರಿಗೆ ಇದಕ್ಕಿಂತ ಕಠಿಣವಾಗಿ ಪತ್ರವೊಂದನ್ನು ಪ್ರಧಾನ ಮಂತ್ರಿಯವರಿಗೆ ಬರೆಯುವುದು ಕಷ್ಟವಾಗಬಹುದು. ಆದರೂ ಈ ಪತ್ರಕ್ಕೆ ಸಾಕಷ್ಟು ಮಹತ್ವವಿದೆ.

ರಾಜ್ಯದಲ್ಲಿನ ಕೇಂದ್ರ ಯೋಜನೆಗಳು ಕುಂಟುತ್ತಿವೆ ಎಂದು ಆರೋಪಿಸಿರುವ ಇನ್ನೊಬ್ಬ ರಾಜಕಾರಣಿ ಜನತಾ ಪಕ್ಷದ ಸಂಸತ್ ಸದಸ್ಯ ಹಾಗೂ ಮಾಜಿ ಸಚಿವರಾಗಿರುವ ಎ. ಎಸ್. ಕೃಷ್ಣ ಅಯ್ಯರ್. ಪ್ರತಿಪಕ್ಷದಲ್ಲಿರುವದರಿಂದ ಅವರು ನೇರವಾಗಿ ಕೇಂದ್ರ ಸರಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಹರ್ಯಾನಾದ ಕರ್ನಾಲ್ ಹಾಗೂ ಮಂಗಳೂರಿನ ತೈಲಾಗಾರಗಳ ಪ್ರಸ್ತಾಪ ಒಟ್ಟಿಗೇ ಬಂದಿದ್ದರೂ ಇದೀಗ ಮೊನ್ನೆ ತಾನೇ ರಾಜೀವ ಗಾಂಧಿಯವರು ಹರ್ಯಾನದಲ್ಲಿ ಕರ್ನಾಲ್ ಸ್ಥಾವರದ ಮಂಜೂರಾತಿಯನ್ನು ಮತ್ತೆ ಪ್ರಕಟಿಸಿದ್ದು ಮಂಗಳೂರಿನ ಸುದ್ದಿಯನ್ನೇ ಬಿಟ್ಟಿದ್ದಾರೆಂದು ಅಯ್ಯರ್ ಖಂಡಿಸಿದ್ದಾರೆ. ಹರ್ಯಾನದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ಈ ಹೇಳಿಕೆ ನೀಡಿರಬೇಕೆಂದೂ ಸಂದೇಹಿಸಿದ್ದಾರೆ. ಬೆಂಗಳೂರು– ಮೈಸೂರು ಬ್ರಾಡ್ ಗೇಜ್ ರೈಲ್ವೇದಾರಿ, ಚಿತ್ರದುರ್ಗ–ರಾಯದುರ್ಗ ಹೊಸ ರೈಲು ಮಾರ್ಗ ರಚನೆ, ಬೆಂಗಳೂರು–ಜೋಲಾರ್ ಪೇಟೆ ವಿದ್ಯುದೀಕರಣ ಮೊದಲಾದವುಗಳಿಗೆ ಕೇಂದ್ರವು ಜುಜುಬಿ ಹಣ ನೀಡಿ ಸತಾಯಿಸುತ್ತಿದೆಯೆಂದು ಟೀಕಿಸಿದ್ದಾರೆ.

ಕರ್ನಾಟಕದ ಜನರಿಗೆ ಹೊಸ ಕೇಂದ್ರ ಯೋಜನೆಗಳಿಗೆ ಸಂಬಂಧ ಪಟ್ಟಂತೆ ಅನ್ಯಾಯವಾಗುತ್ತಿದೆ

ವರೇ ಆದ ರೈಲ್ವೆ ಸಚಿವ ಮಧು ದಂಡವತೆಯವರು ಮಹಾರಾಷ್ಟ್ರದ ತುದಿಯ ಕಾರ್ಯವನ್ನು ತ್ವರಿತಗೊಳಿಸಿದರು. ಮಂಗಳೂರನ್ನು ಸುಲಭದಲ್ಲಿ ಮರೆತು ಬಿಟ್ಟರು.

ಇದೊಂದು ಯೋಜನೆ ಕನ್ನಡ ಕರಾವಳಿಯ ಆರ್ಥಿಕ ಹಾಗೂ ಕೈಗಾರಿಕಾಭಿವೃದ್ಧಿಗೆ ಮಹತ್ವದ ಕೊಡುಗೆಯನ್ನು ನೀಡುವಂತಹದು. ಈ ದಾರಿ ನಿರ್ಮಾಣಗೊಂಡರೆ ಕರಾವಳಿಯುದ್ದಕ್ಕೂ ಸಂಚಾರ ಸುಗಮವೂ ಅಗ್ಗವೂ ಆಗುತ್ತದೆ. ಕರಾವಳಿಯುದ್ದಕ್ಕೂ ಕೈಗಾರಿಕೆಗಳ ಸಾಲೇ ಸ್ಥಾಪನೆಗೊಳ್ಳಲು ಸಾಧ್ಯವಾಗುತ್ತದೆ. ಇಂಥ ಒಂದು ಯೋಜನೆಯಿಂದ ಜನರಿಗೆ ಎಷ್ಟು ಪ್ರಯೋಜನವಾದೀತು ಎಂಬ ಕಲ್ಪನೆಯೇ ಸಂಬಂಧಪಟ್ಟ ರಾಜಕಾರಣಿಗಳಿಗೆ ಇದ್ದಂತಿಲ್ಲ. ಇಂದು ಉಡುಪಿ ಹಾಗೂ ಕುಂದಾಪುರಗಳಿಂದ ದಿನಕ್ಕೆ ಸುಮಾರು ಹತ್ತು ಸಾವಿರ ಮಂದಿ ಉದ್ಯೋಗಕ್ಕಾಗಿ ಪ್ರತಿದಿನ ಮಂಗಳೂರಿಗೆ ರಸ್ತೆ ಸಾರಿಗೆ ಮೂಲಕ ಪ್ರಯಾಣಿಸುತ್ತ ತಮ್ಮ ಸಂಪಾದನೆಯ ಸರಾಸರಿ ಮೂರನೇ ಒಂದಂಶವನ್ನು ಅದಕ್ಕಾಗಿಯೇ ವೆಚ್ಚ ಮಾಡುತ್ತಾರೆ, ರೈಲ್ವೆ ಸೌಲಭ್ಯ ಬಂದರೆ ಇವರಿಗೆಲ್ಲ ಬದುಕಿನ ಭಾರ ಕೊಂಚ ಕಡಿಮೆಯಾಗುತ್ತದೆ. ಅದಕ್ಕಾಗಿಯೇ ಕೊಂಕಣ ರೈಲು ಮಂಗಳೂರಿನಿಂದಲೂ ಪ್ರಾರಂಭವಾಗಲಿ ಎಂಬ ಕೂಗು ಬಹುಕಾಲದಿಂದ ಕೇಳಿಸುತ್ತಿದೆ. ಆದರೆ ಅದಕ್ಕೆ ಕಿವಿಗೊಡುವವರು ಯಾರೂ ಇಲ್ಲವಾಗಿದ್ದಾರೆ.

ಆಶ್ಚರ್ಯದ ಸಂಗತಿಯೆಂದರೆ ಈ ಬಗ್ಗೆ ರಾಜಕಾರಣಿಗಳು ಭರವಸೆಯ ನುಡಿಗಳನ್ನಾಡುತ್ತಲೇ ಬಂದರೂ ಯೋಜನೆಯ ಸ್ಥಿತಿ–ಗತಿ ಯಾವ ಹಂತದಲ್ಲಿದೆ ಎಂದು ಪರಿಶೀಲಿಸುವ ಗೋಜಿಗೇ ಹೋಗಿಲ್ಲ. ಸರ್ವೇ ಕಾರ್ಯ ಮುಗಿದಿದೆ ಎಂದು ಹೇಳಲಾಗುತ್ತಿದ್ದರೂ ರೈಲು ಹಾದಿಗೆ ಬೇಕಾದ ಜಮೀನುಗಳು ಯಾವುವು ಎಂದು ಗುರುತಿಸುವ ಕೆಲಸವೇ ನಡೆದಿಲ್ಲ. ಸರ್ವೇ ನಂಬರುಗಳನ್ನು ಜಿಲ್ಲಾಧಿಕಾರಿಗಳಿಗೆ ಒದಗಿಸಲಾಗಿಲ್ಲ. ಆಮೇಲೆ ತಾನೇ ಅವರು ಭೂಮಿ ವಶಪಡಿಸುವ ಪ್ರಕಟಣೆ ಹೊರಡಿಸಬೇಕು. ಜಿಲ್ಲಾಧಿಕಾರಿ ಈ ವಿವರಗಳಿಗಾಗಿ 1975ರಿಂದೀಚೆಗೆ ಹಲವಾರು ಬಾರಿ ಸೆಂಟ್ರಲ್ ರೈಲ್ವೆ ಕೇಂದ್ರ ಕಚೇರಿಗೆ ಬರೆದುಕೊಂಡರೂ ವಿವರ ದೊರೆತಿಲ್ಲ. ನಮ್ಮ ರಾಜಕಾರಣಿಗಳು ಜನರ ಬದುಕನ್ನು ನೇರವಾಗಿ ತಟ್ಟುವ ಕಾಮಗಾರಿಗಳ ವಿಚಾರದಲ್ಲಿ ಮನಸ್ಸಿಗೆ ತೋಚಿದ್ದನ್ನು ಹೇಳುತ್ತ ಮೋಸ ಮಾಡುವ ಜಾಯಮಾನದವರೇ ಹೊರತು ಪಟ್ಟುಹಿಡಿದು ಕೆಲಸ ಮಾಡಿಸಿಕೊಳ್ಳುವ ಪ್ರವೃತ್ತಿಯವರಲ್ಲವೆಂಬುದನ್ನಿದು ತೋರಿಸುತ್ತದೆ.

ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂಬುದು ನಿಜ. ಇದು ಕ್ಷುಲ್ಲಕ ರಾಜಕಾರಣದಿಂದಾಗಿ ಆಗುತ್ತಿದೆ. ರಾಜ್ಯದಲ್ಲಿ ಬೇರೆ ಪಕ್ಷ ಅಧಿಕಾರದಲ್ಲಿದೆ ಎಂಬ ಕಾರಣಕ್ಕೆ ಕೇಂದ್ರವು ಯೋಜನೆಗಳ ವಿಚಾರದಲ್ಲಿ ಕಣ್ಣು ಮುಚ್ಚಾಲೆಯಾಟವಾಡುತ್ತ, ರಾಜ್ಯದವರು ಕೇಂದ್ರ ಮಾಡಿಕೊಟ್ಟಿಲ್ಲ, ಆದ್ದರಿಂದ ಏನೂ ಮಾಡಲಾಗುವುದಿಲ್ಲ ಎಂದು

ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇಲ್ಲಿನ ಯೋಜನೆಗಳ ವಿಚಾರದಲ್ಲಿ ಕೇಂದ್ರವು ಕಾಲೆಳೆಯುತ್ತಲೇ ಬಂದಿದೆ. ವಿಜಯ ನಗರ ಉಕ್ಕಿನ ಕಾರ್ಖಾನೆ. ಮಂಗಳೂರು ತೈಲಾಗಾರ ಹಾಗೂ ಬೆಂಗಳೂರು ಮೈಸೂರು ಲೈನು ಪರಿವರ್ತನೆ ಎಲ್ಲರಿಗೂ ಕಾಣಿಸುವಂತಹ, ರಾಜ್ಯದ ರಾಜಕಾರಣಿಗಳ ಪೈಕಿ ಅನೇಕರು ಚರ್ಚಿಸುವಂತಹ ವಿಚಾರವಾದರೆ ಕರಾವಳಿಯ ಎರಡು ಜಿಲ್ಲೆಗಳ ಜನರಿಗೆ ಅತ್ಯಂತ ಮಹತ್ವವಾದ, ಆದರೆ ಯಾವ ರಾಜಕಾರಣಿಯೂ ತಲೆ ಕೆಡಿಸಿಕೊಳ್ಳದಿರುವ ಒಂದು ಯೋಜನೆಯಿದೆ; ಅದುವೇ ಕೊಂಕಣ ರೈಲು ಎಂದೇ ಖ್ಯಾತವಾಗಿರುವ ಕರಾವಳಿ ರೈಲು ದಾರಿ ಯೋಜನೆ.

ಈ ಯೋಜನೆಯ ಕಲ್ಪನೆ ಕಳೆದ ಶತಮಾನದಲ್ಲೇ ಆಗಿತ್ತಾದರೂ ಟಿ. ಎ. ಪೈ ಅವರು ಸಚಿವರಾಗಿದ್ದಾಗ 1974ರಲ್ಲಿ ಇದಕ್ಕೆ ಚಾಲನೆ ದೊರೆಯಿತು. ಅವರ ಕಾಲದಲ್ಲೇ ಮಂಗಳೂರು ಕಡೆಯಿಂದ ಸರ್ವೇ ಕಾರ್ಯಕೂಡ ನಡೆದಿತ್ತು. ಅವರ ಮುತುವರ್ಜಿಯಿಂದಲೇ ಕೊಂಕಣ ರೈಲು ಯೋಜನೆ ರೈಲ್ವೆ ಬಜೆಟ್‌ನಲ್ಲಿ ಸೇರಿಕೊಂಡು ಮಹಾರಾಷ್ಟ್ರದ ತುದಿಯಿಂದ ಕೆಲಸವೂ ಆರಂಭಗೊಂಡಿತು, ನಂತರ ಬಂದ ಮಹಾರಾಷ್ಟ್ರದ

ದೂರುತ್ತ ತಿರುಗುವುದರಿಂದ ಜನರಿಗೆ ಪರಮ ಅನ್ಯಾಯವಾಗುತ್ತಿದೆ. ಇದೀಗ ವೀರೇಂದ್ರ ಪಾಟೀಲರೂ, ಕೃಷ್ಣ ಅಯ್ಯರರೂ ಮಾಡಿದ್ದು ಇದೇ ರಾಜಕಾರಣದ ಕೆಲಸವನ್ನು ಹೊರತು ಬೇರೆಯಲ್ಲ. ತಾವೇನೋ ತಮ್ಮಿಂದಾದ್ದು ಮಾಡಿದ್ದೇವೆ ಎಂದು ಹೇಳಿಕೊಳ್ಳುವ ಕರಾಮತ್ತು ಇದು.

ರಾಜ್ಯದ ಅಭಿವೃದ್ಧಿಯ ಬಗ್ಗೆ ನಮ್ಮ ರಾಜಕಾರಣಿಗಳಿಗೆ ಕಾಳಜಿ ಇದ್ದರೆ ಜನತಾ ಪಕ್ಷದವರೂ ಕಾಂಗ್ರೆಸ್ (ಐ) ಪಕ್ಷದವರೂ ಒಟ್ಟಿಗೆ ಕೂತು ರಾಜ್ಯಕ್ಕೆ ಏನು ಬೇಕು, ಕೇಂದ್ರದಿಂದ ಸಲ್ಲ ಬೇಕಾದ್ದೇನು ಎಂದು ಚರ್ಚಿಸಿ, ಅಧ್ಯಯನ ಮಾಡಿ ತೀರ್ಮಾನಿಸಬೇಕು ಇಬ್ಬರೂ ಸೇರಿ ಅದನ್ನು ಕೇಂದ್ರಕ್ಕೆ ವಿಶದಪಡಿಸಬೇಕು. ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರದ ನೆರವು, ಸಹಕಾರಗಳನ್ನು ದೊರಕಿಸಬೇಕು. ರಾಜ್ಯಕ್ಕಾಗುವ ಅನ್ಯಾಯವೇನು, ಅದರಿಂದ ಜನರಿಗಾಗುವ ಹಾನಿಯೇನು ಎಂದು ಕೇಂದ್ರಕ್ಕೆ ಮನವರಿಕೆ ಮಾಡಬೇಕು. ಮಾಜಿ ಮುಖ್ಯಮಂತ್ರಿಯೂ ರಾಜ್ಯದ ಹಿರಿಯ ರಾಜಕಾರಣಿಯೂ ಆಗಿರುವ ವೀರೇಂದ್ರ ಪಾಟೀಲರೇ ರಾಜ್ಯದ ಹಿತಕ್ಕಾಗಿ ಈ ಪಕ್ಷರಹಿತ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದಾಗಿದೆ.

ಮುಂಗಾರು
ಬುಧವಾರ ಫೆಬ್ರವರಿ 11, 1987

ಪಂಜಾಬಿನ ಉಳಿವಿನ ದಾರಿ

ಪಂಜಾಬಿನಲ್ಲಿ ಈ ತಿಂಗಳ ಮೊದಲಿನಿಂದ ತ್ವರಿತದ ರಾಜಕೀಯ ಬೆಳವಣಿಗೆಗಳಾಗುತ್ತಿವೆ. ಅಲ್ಲಿನ ಈಗಿನ ಪರಿಸ್ಥಿತಿ ಯಾವ ಘಟ್ಟದಲ್ಲಿ ಕೊನೆ ಮುಟ್ಟದಲ್ಲಿ ಬಹುದು ಯಾವಾಗ ತಹಬಂದಿಗೆ ಬರಬಹುದು ಎಂಬುದನ್ನು ಹೇಳುವಂತಿಲ್ಲ. ಮುಖ್ಯಮಂತ್ರಿ ಸುರ್ಜಿತ್ ಸಿಂಗ್ ಬರ್ನಾಲಾ ಅವರು ಧಾರ್ಮಿಕವಾಗಿ ತಪ್ಪಿತಸ್ಥನೆಂದು ಅಕಾಲ್ ತಖ್ತ್‌ನ ಜಾತೇದಾರರಾದ ಐವರು ಪಂಚ ಪ್ರಧಾನರು ಘೋಷಿಸಿದ್ದಾರೆ. ಬುಧವಾರ ಅಪರಾಹ್ನ ಎರಡು ಗಂಟೆಯ ಒಳಗೆ ತಮ್ಮ ಮುಂದೆ ಹಾಜರಾಗಿ ಸ್ಪಷ್ಟೀಕರಣ ನೀಡಬೇಕೆಂಬ ಹುಕುಂನಾಮೆ ಅವರಿಂದ ಬಂದಿದೆ. ಅದನ್ನು ಉಲ್ಲಂಘಿಸುವ ಸೂಚನೆಯು ಆಳುವ ಅಕಾಲಿ ದಳದ ಅಧ್ಯಕ್ಷರೂ ಆಗಿರುವ ಬರ್ನಾಲಾರಿಂದ ಬಂದಿದೆ. ಅಂತಹ ಪಕ್ಷದಲ್ಲಿ ಬರ್ನಾಲಾರನ್ನು ಸಿಖ್ ಧರ್ಮದಿಂದ ಬಹಿಷ್ಕರಿಸುವ ಸಾಧ್ಯತೆ ಉಂಟು,

ಸದ್ಯದ ಈ ಬೆಳವಣಿಗೆಗಳು ಜನವರಿ ತಿಂಗಳ 25ನೇ ದಿನಾಂಕ ಸ್ವರ್ಣ ದೇವಾಲಯದಲ್ಲಿ ನಡೆದುದೆನ್ನಲಾದ ಸರ್ಬತ್ ಖಾಲ್ಸಾದ ಬಳಿಕ ಹೊಳಹು ಹಾಕಲಾದವುಗಳು ಎಂಬುದರಲ್ಲಿ ಸಂದೇಹವಿಲ್ಲ. ದಮ್‌ದಮಿ ತಕ್ಸಾಲ್‌ನ ಉಸ್ತುವಾರಿಯಲ್ಲಿ ನಡೆಯಿತೆನ್ನಲಾದ ಸರ್ವ ಸಿಕ್ಖರ ಆ ಸಭೆಯಲ್ಲಿ ಪ್ರಧಾನ ಅರ್ಚಕರಾಗಿ ಹೊಸಬರ ನೇಮಕವಾಯಿತು. ಈ ಹೊಸ ಅರ್ಚಕರೇ ಇಂದು ಸಿಖ್ ಧರ್ಮದ ಹೆಸರಿನಲ್ಲಿ ಸಿಕ್ಖರ ಮಹತ್ವವನ್ನು ಮೆರೆಯುವುದಕ್ಕಾಗಿ ಒಂದರ ಬಳಿಕ ಒಂದರಂತೆ ಆಜ್ಞೆಗಳನ್ನು ಹೊರಡಿಸುತ್ತಿದ್ದಾರೆ.

ಇದರ ಪರಿಣಾಮವಾಗಿ ವಸ್ತುಶಃ ಪಂಜಾಬಿನ ಆಡಳಿತವನ್ನು, ಸರಕಾರದ ಸೂತ್ರವನ್ನು ಸಿಕ್ಖ್ ಪಂಥದ ಧಾರ್ಮಿಕ ಮುಖ್ಯಸ್ಥರು ಅಮೃತಸರದ ಸ್ವರ್ಣ ದೇವಾಲಯದಲ್ಲಿ ಕುಳಿತು ನಿಯಂತ್ರಿಸುವಂತಾಗಿದೆ. ಪಂಜಾಬಿನಲ್ಲಿ ಇಂದು ಧರ್ಮಕ್ಕೂ ರಾಜಕೀಯಕ್ಕೂ ಯಾವ ಅಂತರವೂ ಇಲ್ಲದಂತಾಗಿದೆ. ಇದರ ಪರಿಣಾಮವಾಗಿ [illegible] ಜನರ, ಸಿಕ್ಖ್ ಸಮುದಾಯದ ರಾಜಕೀಯ ಆಶೋತ್ತರಗಳು ದಿಕ್ಕು ತಪ್ಪಿಹೋಗುವ ಸಾಧ್ಯತೆಗಳು ನಿಚ್ಚಳವಾಗಿ ಕಾಣಿಸುತ್ತದೆ. ಪಂಜಾಬಿನ ಆಂದೋಲನದಲ್ಲಿ ಹುದುಗಿರುವ ನೈಜ ಪ್ರಶ್ನೆಗಳು ಗೋಜಲು – ಗೊಂದಲದಲ್ಲಿ ಸಿಕ್ಕಿ ಅಸ್ಪಷ್ಟವಾಗುವ ಸೂಚನೆಯಿದೆ.

1985ರ ಸೆಪ್ಟೆಂಬರದಲ್ಲಿ ಚುನಾವಣೆ ಗೆದ್ದು ಅಧಿಕಾರಕ್ಕೆ ಬಂದ ಬರ್ನಾಲಾ ಸರಕಾರ ಸಿಕ್ಖರ ರಾಜಕೀಯ ಆಶೋತ್ತರಗಳ ಸಾಕಾರ ರೂಪವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಸಿಕ್ಖರಿಗೆ ದೊರೆಯಬೇಕಾದ ಮಹತ್ವವನ್ನು ಅವರಿಗಾದ ಅನ್ಯಾಯದ ನಿವಾರಣೆಯನ್ನು ಸಾಧಿಸುವುದಕ್ಕೆ ಅಕಾಲಿ ದಳ ಶಕ್ತವೆಂಬುದನ್ನು ಸಿಕ್ಖ ಜನಾಂಗ ಕಂಡುಕೊಂಡಿದೆಯೆಂಬ ಸತ್ಯ ಅಂಶ ಚುನಾವಣಾ ಫಲಿತಾಂಶದಲ್ಲಿ ವ್ಯಕ್ತವಾಗಿತ್ತು.

ಆದರೆ ರಾಜೀವ ಗಾಂಧಿ ಜತೆ ಒಡಂಬಡಿಕೆ ಮಾಡಿಕೊಂಡ ಲೋಂಗೋವಾಲರನ್ನು ಮುಗಿಸಿದ ಸಿಕ್ಖರ ಉಗ್ರವಾದಿ ಗುಂಪು ಅಂದಿನಿಂದ ಇಂದಿನವರೆಗೂ ತನ್ನ ದಾರಿ ಪ್ರತ್ಯೇಕವೆಂದು ಸಾಬೀತುಪಡಿಸುತ್ತಲೇ ಬಂದಿದೆ. ಈ ವಿಭಾಗವು ಪಂಜಾಬಿನ ಹಳ್ಳಿಗಳಲ್ಲಿ ಬೇರು ಬಿಟ್ಟಿದೆ. ನಗರಗಳಲ್ಲಿ ಹಾವಳಿ ನಡೆಸುತ್ತಿದೆ. ಹೆಚ್ಚೆಚ್ಚು ಸಿಕ್ಖರನ್ನು ತಮ್ಮ ಗುಂಪಿಗೆ ಸೇರಿಸುತ್ತ ಉಗ್ರವಾದಿಗಳು ನಡೆದಿದ್ದಾರೆ. ಇತ್ತೀಚೆಗಿನ ದಿನಗಳಲ್ಲಿ ಕೆಲವು ಮಂದಿ ರಾಜಕಾರಣಿಗಳೂ ಅವರ ದಾರಿ ತುಳಿ[illegible]ರೆ. ಇದೀಗ ಸ್ವರ್ಣ ದೇವಾಲಯದಿಂದ ಹೊರಡುತ್ತಿರುವ ಹುಕುಂನಾಮೆಗಳ ಹಿಂದಿನ ಸೂತ್ರಧಾರರು ಈ ಭಯೋತ್ಪಾದಕರೇ ಅಲ್ಲದೆ ಬೇರೆಯಲ್ಲ. ಇವರಿಗೆ ರಾಜಕೀಯ ತಂತ್ರಗಾರಿಕೆಯನ್ನು ಸಲಹೆಯ ಕೆಲಸವನ್ನು ಬರ್ನಾಲರ ಪ್ರತಿಸ್ಪರ್ಧಿಗಳಾದ ಅಕಾಲಿ ರಾಜಕಾರಣಿಗಳು ವಹಿಸಿಕೊಂಡಿದ್ದಾರೆಂದೂ ನಂಬಬಹುದಾಗಿದೆ.

ಈ ಗುಂಪಿನ ಉದ್ದೇಶವು ಸ್ಪಷ್ಟ. ಖಾಲಿಸ್ತಾನ ಸ್ಥಾಪನೆಯೇ ಅವರ ಗುರಿ. ಭಾರತದಿಂದ ಬೇರ್ಪಡುವುದೇ ಅದಕ್ಕೆ ದಾರಿ. ಅದಕ್ಕಾಗಿ ಮೊದಲ ಹೆಜ್ಜೆ ಸಿಕ್ಖರು ಸಾಂವಿಧಾನಿಕವಾಗಿ ಅಂಗೀಕರಿಸಿರುವ ಪ್ರತಿನಿಧಿಯಾದ ಬರ್ನಾಲಾ ಸರಕಾರದ ಪತನವೇ ಮೊದಲ ಹೆಜ್ಜೆ. ಈ ಗೊಂದಲದಲ್ಲಿ ಪಂಜಾಬಿನಲ್ಲಿ ಅರಾಜಕತೆಯ ನಿರ್ಮಾಣ. ಕೇಂದ್ರದ ಹಸ್ತಕ್ಷೇಪಕ್ಕೆ ದಾರಿ ಮಾಡುವ ಈ ಪ್ರಕ್ರಿಯೆಯ ಮೂಲಕ ಪ್ರತ್ಯೇಕ ಖಾಲಿಸ್ತಾನದ ಕೊರೆದು ನಿರ್ಮಿಸುವುದಕ್ಕೆ ಅಂತರ್ಯುದ್ಧ. ಇದು ಈ ವ್ಯೂಹದ ಮುಂದಿನ ಮಜಲುಗಳೆಂಬುದು ನಿಸ್ಸಂದೇಹ.

ಧರ್ಮವನ್ನು ರಾಜಕೀಯಕ್ಕೆ ಬೆರೆಸಿದರೆ ಆಗುವ ಅನಾಹುತಕ್ಕೆ ಪಂಜಾಬು ಸಾಕ್ಷಿ. ಪಂಜಾಬಿನ ಜನರ ಆಶೋತ್ತರಗಳ ಈಡೇರಿಕೆಗೆ ಧರ್ಮನಿಷ್ಠ ಒಳಹಾದಿಯನ್ನು ಹುಡುಕಲು ಹೊರಟದ್ದೆ ಈ ಆಂದೋಲನ ದಾರಿ ತಪ್ಪಲು ಕಾರಣವೆನಿಸಿತು. ಸರಕಾರದ ನೀತಿ–ನಿರ್ಧಾರಗಳನ್ನು ಧಾರ್ಮಿಕ ನಾಯಕರು ನಿರ್ದೇಶಿಸುವ ಮಧ್ಯಯುಗೀನ ವ್ಯವಸ್ಥೆ ಇದು. ಪಂಜಾಬಿಗೆ ಬೇಕಾಗಿರುವುದು ರಾಜಕೀಯ ಪರಿಹಾರ. ಅದನ್ನು ಮಿಲಿಟರಿ ಮೂಲಕವೂ ಸಾಧಿಸುವುದು ಅಸಾಧ್ಯ. ಧಾರ್ಮಿಕ ಮುಖಂಡರ ಹುಕುಂ ನಾಮೆಗಳು ಹೇಳುವ ಪರಿಹಾರವೂ ಸಿಕ್ಖರ ಆಶೋತ್ತರ ಪೂರೈಸಲಾರವು.

ಸಿಕ್ಖರ ಸೌಮ್ಯವಾದಿಗಳನ್ನೂ ವಿವೇಕಿಗಳನ್ನು ಪ್ರತಿನಿಧಿಸುವ ಆಳುವ ಆಕಾಲಿದಳ ಹಾಗೂ ಭಯೋತ್ಪಾದಕರ ನಡುವಿನ ಈ ಹೋರಾಟದಲ್ಲಿ ಪಂಜಾಬಿನ ನೈಜ ಸಮಸ್ಯೆಗಳಿಗೆ ಪರಿಹಾರ ಸಿಗದೆ ಹೋಗಬಹುದು. ಪಂಜಾಬು ಸಮಸ್ಯೆಯ ಹುಟ್ಟಿಗೆ ಕಾರಣವಾಗಿರುವ ಅಧಿಕಾರ ಕೇಂದ್ರೀಕರಣದ ಸಮಸ್ಯೆಯು ನಗಣ್ಯವಾಗಬಹುದು. ಹಾಗಾದರೆ ಅದರಿಂದ ಈ ದೇಶದ ಎಲ್ಲರಿಗೂ ನಷ್ಟವುಂಟು. ಯಾಕೆಂದರೆ ಇಂದು ಪಂಜಾಬು ಸಮಸ್ಯೆ ಸ್ವಾತಂತ್ರ್ಯಾನಂತರದ ಅತಿದೊಡ್ಡ ರಾಷ್ಟ್ರೀಯ ಬಿಕ್ಕಟ್ಟಾಗಿ ಬೆಳೆದು ನಿಂತಿದೆ. ಅದನ್ನು ಪರಿಹರಿಸುವುದಕ್ಕೆ ತೀವ್ರವಾದಿಗಳಿಗೆ ಸರಿಗಟ್ಟುವ ಹೆಜ್ಜೆಗಳನ್ನೇ ಸರಕಾರ ಇರಿಸಬಹುದಾಗಿದೆ. ಪರಿಣಾಮವಾಗಿ ಸಮಸ್ಯೆಯ ಮೂಲವು ಮಸುಕಾಗುವುದು ಸಾಧ್ಯ.

ಆದರೆ ಹಾಗಾಗಬಾರದು. ದೇಶದ ನಾಯಕರು ಇಂದು ಬಲು ಚಾಕಚಕ್ಯತೆಯಿಂದ ಈ ಬಿಕ್ಕಟ್ಟನ್ನು ನಿರ್ವಹಿಸಬೇಕಾಗಿದೆ. ಮಿಲಿಟರಿ ಪರಿಹಾರ ಈ ಸಮಸ್ಯೆಗೆ ಇಲ್ಲವೆಂಬುದನ್ನು ಒಪ್ಪಿಕೊಂಡರೆ ಪಂಜಾಬಿನ ಸದ್ಯದ ರಾಜಕೀಯ ವ್ಯವಸ್ಥೆಯಲ್ಲಿ ಹಸ್ತಕ್ಷೇಪಿಸದೆ ಇರುವ ವಿವೇಕ ಕೇಂದ್ರಕ್ಕೆ ಉಂಟಾದೀತು. ಈಗ ಕೇಂದ್ರವು ಮಾಡಬೇಕಾದ್ದು ಸಿಕ್ಖರ ಮನಸ್ಸಿನಲ್ಲಿ ಆಳುವ ಅಕಾಲಿದಳದ ಬಗ್ಗೆ ಮತ್ತೆ ವಿಶ್ವಾಸವನ್ನು ಮೂಡಿಸುವಂತಹದ್ದು, ಅಂತಹ ನೈತಿಕ ಬಲವನ್ನು ಅದಕ್ಕೆ ನೀಡುವಂತಹದ್ದು. ಪಂಜಾಬಿನ ಸಮಸ್ಯೆಯ ನಿವಾರಣೆಗಾಗಿ ಮಹತ್ವದ ಹೆಜ್ಜೆಗಳನ್ನು ಇಟ್ಟರೆ ಮಾತ್ರವೇ ಪಂಜಾಬಿನವರ ಕಣ್ಣಿನಲ್ಲಿ ಆಳುವ ಅಕಾಲಿ ದಳದ ವಿಶ್ವಾಸಾರ್ಹತೆ ಹೆಚ್ಚೀತು. ಪಂಜಾಬಿನ ಕ್ಷೋಭೆಯ ಶಮನಕ್ಕೆ ಇರುವ ಒಂದೇ ಒಂದು ಉಪಕರಣ ಬರ್ನಾಲಾ ಅವರ ನಾಯಕತ್ವದ [illegible] ನಾಯಕತ್ವದ ಅಕಾಲಿ ಪಕ್ಷ ಎಂಬುದ[illegible] ಕಾರವೂ ಈ ದೇಶದ ಪ್ರಜೆಗಳೂ ವ[illegible]

ಮುಂಗಾರು
ಮಂಗಳವಾರ ಫೆಬ್ರವರಿ 24, 1987

ಚಿಂತನೆಗೆ ಚಾಲನೆ

ಸಂಸತ್ತಿನ ವಿರೋಧ ಪಕ್ಷಗಳು ಇದೀಗ ಪ್ರಾರಂಭವಾಗಿರುವ ಮುಂಗಡ ಪತ್ರ ಅಧಿವೇಶನದಲ್ಲಿ ಸದನದೊಳಗೆ ಪರಸ್ಪರ ಸಹಕಾರದಿಂದ ಕೆಲಸ ಮಾಡಲು ತೀರ್ಮಾನಿಸಿದ ವರದಿ ಬಂದಿದೆ. ಅಧಿವೇಶನದ ಪೂರ್ವಭಾವಿಯಾಗಿ ಸಭೆ ನಡೆಸಿರುವ ವಿರೋಧ ಪಕ್ಷಗಳ ನಾಯಕರು ಸದನದಲ್ಲಿ ಎತ್ತಬೇಕಾಗಿರುವ ವಿಚಾರಗಳನ್ನು ಪಟ್ಟಿಮಾಡಿವೆ. ಪಂಜಾಬು ಒಡಂಬಡಿಕೆಯನ್ನು ಜಾರಿಗೆ ತರದೆ ಇರುವ ಹಿನ್ನೆಲೆಯಲ್ಲಿ ನಡೆದಿರುವ ಪಂಜಾಬು ವಿದ್ಯಮಾನಗಳು, ಗೂರ್ಖಾಲ್ಯಾಂಡ್ ಚಳವಳಿ, ರಾಮ ಜನ್ಮಭೂಮಿ–ಬಾಬರಿ ಮಸೀದಿ ವಿವಾದ ಮುಂತಾದವುಗಳು ವಿರೋಧ ಪಕ್ಷಗಳ ಪಟ್ಟಿಯಲ್ಲಿ ಸೇರಿವೆ.

ವಿರೋಧ ಪಕ್ಷಗಳು ಸಣ್ಣಪುಟ್ಟ ಗುಂಪುಗಳಾಗಿ ಹರಿಹಂಚಾಗಿ ಹೋಗಿರುವ ಭಾರತದ ಇಂದಿನ ಪರಿಸ್ಥಿತಿಯಲ್ಲಿ ಕನಿಷ್ಠ ಸಂಸತ್ತಿನ ಒಳಗಾದರೂ ಸಮನ್ವಯದಿಂದಲೂ ಪರಸ್ಪರ ಸಹಕಾರದಿಂದಲೂ ಕೆಲಸ ಮಾಡಬೇಕಾದ ಅಗತ್ಯ ಬಹಳವಿದೆ. ವಿರೋಧ ಪಕ್ಷಗಳ ನೀತಿ ನಿಲುವುಗಳನ್ನು ಬೆಂಬಲಿಸುವ ಮತದಾರರಿಗೆ ಸಂಸತ್ತಿನಲ್ಲಿ ಪ್ರಮಾಣ ಬದ್ಧವಾದ ಪ್ರಾತಿನಿಧ್ಯ ಸಿಗದೆ ಹೋದ ಇಂದಿನ ಪರಿಸ್ಥಿತಿಯಲ್ಲಿ ಇರುವ ಪ್ರತಿಪಕ್ಷ ಸದಸ್ಯರಾದರೂ ಅಧ್ಯಯನ ಶೀಲರಾಗಿ ನಾಡನ್ನು ಬಾಧಿಸುವ ಸಮಸ್ಯೆಗಳನ್ನು ಅರಿತುಕೊಂಡು ಸಮನ್ವಯದಿಂದ ಕಾರ್ಯಪ್ರವೃತ್ತರಾಗುತ್ತ ಸಂಸತ್ತಿನಲ್ಲಿ ವಿಷಯ ಮಂಡನೆ ಮಾಡಬೇಕಾದ ಅಗತ್ಯವುಂಟು.

ಈ ನಿಟ್ಟಿನಲ್ಲಿ ವಿರೋಧ ಪಕ್ಷಗಳು ಭಾನುವಾರ ಮಾಡಿರುವ ಸಹಕಾರದ ನಿರ್ಧಾರ ಸ್ವಾಗತಾರ್ಹ. ಆದರೆ ಇಂತಹ ಸಹಕಾರದ ಮಾತು ಪ್ರತಿ ವರ್ಷವೂ ಕೇಳಿ ಬರುವಂತಹದು. ಅಧಿವೇಶನದಲ್ಲಿ ಕೆಲವು ವಿಚಾರ ಚರ್ಚೆಗೆ ಬರುತ್ತವೆ. ಸದನದಲ್ಲಿ ಗುಲ್ಲೆದ್ದು, ಸರಕಾರವು ನೌಕರಶಾಹಿಯಿಂದ ಬಂದಂತಹ ಅಂಕಿ–ಅಂಶಗಳನ್ನು ಮಂಡಿಸುತ್ತದೆ. ಕೆಲವೊಮ್ಮೆ ಸಭಾತ್ಯಾಗದಂತಹ ಚಳವಳಿಯ ಸಂಸದೀಯ ಮಾರ್ಗಗಳನ್ನು ವಿರೋಧ ಪಕ್ಷ ಆರಿಸಿಕೊಳ್ಳುತ್ತದೆ. ಅಧಿವೇಶನ ಮುಗಿದೊಡನೆ ಎಲ್ಲವೂ ಮರೆತು ಹೋಗುತ್ತದೆ. ಯಾವುದೇ ವಿಚಾರದಲ್ಲಿ ನೌಕರಶಾಹಿ ಹಾಕಿಕೊಟ್ಟ ಮಾರ್ಗದಲ್ಲಿ ಸರಕಾರ ಸಾಗುತ್ತದೆ.

ರಾಜಕೀಯ ಪಕ್ಷಗಳು ಸಂಸತ್ತಿನಲ್ಲಿ ನಡೆಸುವ ಚರ್ಚೆಯ ಮೂಲಕ ರಾಷ್ಟ್ರೀಯ ಮಹತ್ವದ ವಿಚಾರಗಳಲ್ಲಿ ಜನಾಭಿಪ್ರಾಯವನ್ನು ಮೂಡಿಸುವಂತೆ [illegible] ಮಹತ್ವದ ಸಮಸ್ಯೆಗಳ ಬಗ್ಗೆ ನಡೆಯುವ ಸಮೂಹದ ಚಿಂತನೆಗೆ ರಾಷ್ಟ್ರೀಯ ವೇದಿಕೆಯಾದ ಸಂಸತ್ತಿನಲ್ಲಿಯೇ ಚಾಲನೆ ದೊರೆಯಬೇಕು. ಮಾಮೂಲಿಯಾದ ಪ್ರಶ್ನೆಗಳ ವಿಚಾರದಲ್ಲಿ ಕೂಡ ಈ ವಿಧಾನವೇ ಸೂಕ್ತ. ಇಂದಿನ ಪರಿಸ್ಥಿತಿಯಂತೂ ಹಾಗಿಲ್ಲ. ಇದು ಈ ರಾಷ್ಟ್ರದ ಪ್ರಜೆಗಳಿಗೆ ಆತಂಕವನ್ನೊಡ್ಡಿದ ದಿನಗಳಾಗಿವೆ. ಸ್ವಾತಂತ್ರ್ಯ ನಂತರದ ರಾಷ್ಟ್ರದ ಬದುಕಿನಲ್ಲೆ ಅತ್ಯಂತ ನಿರ್ಣಾಯಕ ಘಟ್ಟವನ್ನು ನಾವು ತಲುಪಿದ್ದೇವೆ. ಕಳೆದ ನಾಲ್ಕು ದಶಕಗಳಲ್ಲಿ ನಮ್ಮ ರಾಜಕೀಯ ಮುಖಂಡರು ನಡೆಸಿದ ಆಳ್ವಿಕೆಯಲ್ಲಿ ಸೇರಿಕೊಂಡ ವಿಕಾರಗಳ ಪರಿಣಾಮವಾಗಿ ಕೆಲವೊಂದು ದೊಡ್ಡ ಸಮಸ್ಯೆಗಳು ಹುಟ್ಟಿಕೊಂಡಿವೆ.

ಪಂಜಾಬಿನ ಸಮಸ್ಯೆ ಅವುಗಳಲ್ಲೊಂದು. ಸಂಸತ್ತಿನಲ್ಲಿ ಈ ಸಮಸ್ಯೆಯ ಬಗ್ಗೆ ಚರ್ಚೆ ಹಿಂದೆಯೂ ನಡೆದಿದೆ. ಈಗಲೂ ನಡೆಯಲಿದೆ. ಈ ಎಲ್ಲ ಚಿಂತನ–ಮಂಥನಗಳಲ್ಲಿ ಕಂಡುಬಂದಿರುವ ಮುಖ್ಯ ವಿಚಾರ ಪಂಜಾಬಿನ ಕ್ಷೋಭೆಯ ಬಗ್ಗೆ ನಮ್ಮ ರಾಜಕಾರಣಿಗಳಿಗಿರುವ, ಭಯ, ಆತಂಕ ಮತ್ತು ಕೋಪ. ಪಂಜಾಬಿನ ಭಯೋತ್ಪಾದಕತೆಯನ್ನು ಸರಕಾರ ಕಠೋರ ಕೈಗಳಿಂದ ನಿಗ್ರಹಿಸಬೇಕೆಂಬ ಅಭಿಪ್ರಾಯ ಪ್ರತಿಪಾದಿ ಪ್ರತಿಯೊಬ್ಬನಿಂದಲೂ ಹೊರ ಹೊಮ್ಮಿದೆ. ಎಲ್ಲರ ಆಲೋಚನೆಯೂ ಅದೇ ದಿಕ್ಕಿನಲ್ಲಿ. ಆಳುವ ಕಾಂಗ್ರೆಸ್ (ಐ) ಪಕ್ಷದ ಸಂಸತ್ ಸದಸ್ಯರ ಸಭೆಯಲ್ಲಿಯೂ ಅದೇ ಒತ್ತಾಯ. ಭಯೋತ್ಪಾದಕತೆಯನ್ನು ನಿಗ್ರಹಿಸಲು ಸಂವಿಧಾನವನ್ನು ತಿದ್ದಬೇಕಾದರೆ ಅದನ್ನೂ ಮಾಡುತ್ತೇವೆ ಎಂಬ ಭರವಸೆ ಈ ಸಭೆಯಲ್ಲಿ ಪ್ರಧಾನಿ ರಾಜೀವ ಗಾಂಧಿಯವರಿಂದ ಬಂದಿದೆ.

ನಮ್ಮ ಸಂಸತ್ ಸದಸ್ಯರು, ಮುಖ್ಯವಾಗಿ ವಿರೋಧ ಪಕ್ಷಗಳ ಮಂದಿ ಪಂಜಾಬು ಹಾಗೂ ಅದೇ ದಿಕ್ಕಿನಲ್ಲಿ ಸಾಗುವ ಸೂಚನೆಗಳಿರುವ ಇತರ ಸಮಸ್ಯೆಗಳ ಹುಟ್ಟಿಗೆ ಕಾರಣವೇನೆಂಬ ಬಗ್ಗೆ ಅಧ್ಯಯನ ನಡೆಸಬೇಕು, ಮೂಲ ಅರಿಯದೆ ಪರಿಹಾರ ಗೋಚರವಾಗಲಾರದು. ಸಂವಿಧಾನ ತಿದ್ದಿದೊಡನೆ ಭಯೋತ್ಪಾದಕತೆ ನಿವಾರಣೆಯಾಗದು. ಪಂಜಾಬಿನ ಕ್ಷೋಭೆಯ ಹುಟ್ಟು ಕೇಂದ್ರ ಸರಕಾರವು ರಾಜ್ಯ ಸರಕಾರಗಳನ್ನು ನಡೆಸಿಕೊಂಡ ವಿಧಾನದಲ್ಲಿದೆ; ಆಡಳಿತೆಯ ವ್ಯವಸ್ಥೆಯಲ್ಲಿದೆ. ಅಧಿಕಾರಗಳ ಹಂಚಿಕೆಯ ವ್ಯವಸ್ಥೆಯಲ್ಲಿದೆ. ಹಣಕಾಸನ್ನು ಪಾಲು ಮಾಡಿಕೊಳ್ಳುವ ಕ್ರಮದಲ್ಲಿದೆ. ಯಾವ ವಿಚಾರವನ್ನು ಯಾರು ತೀರ್ಮಾನಿಸಬೇಕೆಂಬ ಏರ್ಪಾಡಿನಲ್ಲಿದೆ.

ಈ ಎಲ್ಲಾ ವಿಚಾರಗಳ ಬಗ್ಗೆ ಪರಿಶೀಲನೆ, ಚರ್ಚೆ, ಮಂಥನ ಆಗಬೇಕು. ಪಂಜಾಬಿನ ಸಮಸ್ಯೆಗೆ ಅಧಿಕಾರ ವಿಕೇಂದ್ರೀಕರಣವೇ ಪರಿಹಾರ ಎಂಬುದರಲ್ಲಿ ಎರಡು ಮಾತಿಲ್ಲ. ಈ ಅಧಿಕಾರ ವಿಕೇಂದ್ರೀಕರಣ [illegible] ಅದಕ್ಕೆ ವಿಧಾನ [illegible] ಭಯೋತ್ಪಾದಕತೆಯ ನಿಗ್ರಹಕ್ಕೆ ಹೆಚ್ಚು ಅಧಿಕಾರವನ್ನು [illegible] ಕೊಡುವುದಕ್ಕಾಗಿ ಈ ದೇಶದ ಸಂವಿಧಾನದ ತಿದ್ದುಪಡಿ ಅಲ್ಲ–ರಾಜಕೀಯ ಅಧಿಕಾರದ ನ್ಯಾಯ ಸಮ್ಮತ ವಿಕೇಂದ್ರೀಕರಣಕ್ಕಾಗಿ ಸಂವಿಧಾನವೆಂಬ ಚೌಕಟ್ಟನ್ನು ಬದಲಾಯಿಸಬೇಕು. ಇಂಥ ಒಂದು ವಿಚಾರ ವಿನಿಮಯಕ್ಕೆ ವಿರೋಧ ಪಕ್ಷಗಳು ಚಾಲನೆ ಕೊಟ್ಟರೆ ಅದರಿಂದ ದೇಶಕ್ಕೆ ಏನಾದರೂ [illegible]

ಮುಂಗಾರು

ಮಂಗಳವಾರ ಮಾರ್ಚ್ 3, 1987

ಬೆಳೆಯುತ್ತಿರುವ ಅನುತ್ಪಾದಕ ವೆಚ್ಚ

ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಮಂಡಿಸಿದ ಕೇಂದ್ರ ಸರಕಾರದ 1987–88ರ ಸಾಲಿನ ಆಯವ್ಯಯ ಮುಂಗಡ ಪತ್ರ ಕಳೆದ ಮೂರು ವರ್ಷಗಳಿಂದ ಅವರ ಸರಕಾರ ನಡೆಸಿಕೊಂಡು ಬಂದಿರುವ ಆರ್ಥಿಕ ನೀತಿಯ ಮುಂದುವರಿಕೆಯೇ ಆಗಿದೆ.

ಈ ಬಾರಿ ಈ ನೀತಿಯನ್ನು ಕೊಂಚ ಮಟ್ಟಿಗೆ ಸುಧಾರಿಸಲಾದದ್ದು ಕಂಡು ಬರುತ್ತವೆ. ಕಳೆದೆರಡು ವರ್ಷಗಳಲ್ಲಿ ಖಾಸಗಿ ಕೈಗಾರಿಕಾ ರಂಗಕ್ಕೆ ಅನೇಕ ಸೌಲಭ್ಯಗಳನ್ನೂ ವಿನಾಯಿತಿಗಳನ್ನೂ ನೀಡುವ ಮೂಲಕ ದೇಶದ ಕೈಗಾರಿಕೆ ಹಾಗೂ ಹಣಕಾಸಿನ ಬೆಳವಣಿಗೆಯನ್ನು ತಂದು ಕೊಡುವ ನೀತಿಯನ್ನು ಅವರ ಸರಕಾರ ಕೈಗೊಂಡಿತ್ತು. ಈ ಬಾರಿ ಆಧ ೀರಣೆ ಹಾಗೆಯೇ ಮುಂದುವರಿದದ್ದು ಕಂಡುಬರುತ್ತದೆ. ಇಲೆಕ್ಟ್ರಾನಿಕ್ಸ್‌ನಂತಹ ಕೆಲವು ಸೀಮಿತ ವಿಚಾರಗಳನ್ನು ಬಿಟ್ಟರೆ ಬೇರೆ ತೆರಿಗೆ ವಿನಾಯಿತಿಗಳನ್ನು ಯಾವುದನ್ನೂ ಈ ಬಾರಿ ನೀಡಲಾಗಿಲ್ಲ. ಬದಲಾಗಿ ಕಂಪೆನಿಗಳ ಒಟ್ಟು ಲಾಭದ ಶೇಕಡಾ 30ರಷ್ಟು ವರಮಾನ ತೆರಿಗೆ ಸಾರ್ವತ್ರಿಕವಾಗಿ ಸಂಗ್ರಹಿಸುವ ಹೊಸ ನಿಯಮದಿಂದಾಗಿ ವರಮಾನದ ನೆಲೆಯನ್ನೂ ಮೊತ್ತವನ್ನೂ ಹೆಚ್ಚಿಸುವ ಹೆಜ್ಜೆ ಇರಿಸಲಾಗಿದೆ.

ಪ್ರಧಾನ ಮಂತ್ರಿಯವರ ಮುಂಗಡ ಪತ್ರದಲ್ಲಿ ಎದ್ದು ಕಾಣಿಸುವ ವಿಚಾರ ಅವರು ಹೊಸ ತೆರಿಗೆ ಹೇರಿಕೆಯಲ್ಲಿ ತುಂಬಾ ಎಚ್ಚರಿಕೆಯನ್ನು ವಹಿಸಿದ್ದು. 514 ಕೋಟಿ ರೂಪಾಯಿಗಳ ಹೊಸ ತೆರಿಗೆಯಲ್ಲಿ ಬಡವರನ್ನಾಗಲಿ ಕೆಳ ಮಧ್ಯಮ ವರ್ಗದವರನ್ನಾಗಲಿ ಬಾಧಿಸುವ ವಿಷಯಗಳು ಬಲು ಕಡಿಮೆ. ಬೆಲೆಬಾಳುವ ಬಟ್ಟೆ, ಕೆಲವು ಯಂತ್ರ ಸಾಮಗ್ರಿಗಳು, ಲಘುಪಾನೀಯ, ಸಿಗರೇಟು ಇವುಗಳ ಮೇಲೆ ಹೊರೆ ಬೀಳುತ್ತದೆ. ವಿದೇಶಿ ವಿನಿಮಯ ನೀಡಿಕೆಯ ಮೇಲಿನ ಶುಲ್ಕ ಏರಿಸಲಾಗಿದ್ದು ವಿದೇಶ ಯಾತ್ರೆಯು ತುಟ್ಟಿಯಾಗಲಿದೆ. ಪಂಚತಾರಾ ಹೊಟೇಲುಗಳ ಮೇಲಿನ ತೆರಿಗೆ ಏರಿಸಿರುವುದು ಮುಖ್ಯವಾಗಿ ಕಂಪೆನಿಗಳ ಹಾಗೂ ಸರಕಾರದ ಖರ್ಚುವೆಚ್ಚಗಳನ್ನು ಮಾತ್ರವೇ ಏರಿಸುವಂತಹುದು.

ಬಡವರ ಬದುಕನ್ನು ಭಾರವಾಗಿಸುವ ತೆರಿಗೆ ಪ್ರಸ್ತಾಪಗಳು ಈ ಮುಂಗಡ ಪತ್ರದಲ್ಲಿ ಇಲ್ಲದೆ ಇರುವುದು ಸ್ವಾಗತಾರ್ಹ ವಿಚಾರ. ಸರಕಾರದ ವರಮಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಹೆಚ್ಚು ತೆರಿಗೆ ಹೇರುವ ನೀತಿಯನ್ನು ಕೈಬಿಟ್ಟು ಆರ್ಥಿಕತೆಯ ಬೆಳವಣಿಗೆಗೆ ಚಾಲನೆನೀಡುವ ಮೂಲಕ ವರಮಾನ ದತಳಹದಿಯನ್ನು ವಿಸ್ತಾರಗೊಳಿಸುವ ಆರೋಗ್ಯಕರ ನೀತಿ ಕಾಣಿಸುತ್ತಿದೆ. ಜತೆಗೆ ಆಡಳಿತೆಯ ಸಾಮರ್ಥ್ಯ ಹೆಚ್ಚಿಸುವುದರಿಂದ ಅನುತ್ಪಾದಕ ವೆಚ್ಚಗಳನ್ನು ಕುಗ್ಗಿಸಿ ತೆರಿಗೆ ಸಂಗ್ರಹವನ್ನು ಹೆಚ್ಚಿಸುವ ಧೋರಣೆಯೂ ಕಂಡು ಬರುತ್ತದೆ.

ದೇಶದಲ್ಲಿ ಗೃಹ ನಿರ್ಮಾಣ ಚಟುವಟಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುವ ನೀತಿಯನ್ನು ಅನುಸರಿಸಲಾಗಿದೆ. 100 ಕೋಟಿ ರೂಪಾಯಿ ಮೂಲ ಬಂಡವಾಳದೊಡನೆ ಗೃಹ ನಿರ್ಮಾಣ ಅಪೆಕ್ಸ್ ಬ್ಯಾಂಕ್ ಒಂದನ್ನು ಸ್ಥಾಪಿಸುವ ನಿರ್ಧಾರ ಪ್ರಕಟವಾಗಿದೆ. ಜತೆಗೆ ಗೃಹ ನಿರ್ಮಾಣ ಸಾಲದ ಮರುಪಾವತಿ ಮೊತ್ತಕ್ಕೆ [illegible]ಮಾನ ತೆರಿಗೆ ವಿನಾಯಿತಿ ಘೋಷಿಸಲಾಗಿದೆ. ಶಿಕ್ಷಣಕ್ಕೆ ಈ ಬಾರಿ ಹಣ ನೀಡಿಕೆಯನ್ನು 800 ಕೋಟಿ ರೂಪಾಯಿಗಳಷ್ಟು ಹೆಚ್ಚಿಸಲಾಗಿದೆ. ಇವೆರಡು ವಿಚಾರಗಳು ಪ್ರಗತಿಯ ದೃಷ್ಟಿಯಿಂದಲೂ ಸಮಾಜ ಸ್ವಾಸ್ಥ್ಯದ ದೃಷ್ಟಿನಿಂದಲೂ ತುಂಬಾ ಅಗತ್ಯವೂ ಸ್ವಾಗತಾರ್ಹವೂ ಆದ ಕ್ರಮಗಳು.

ಆದರೆ ಮುಂಗಡ ಪತ್ರದಲ್ಲಿನ ಇನ್ನು ಕೆಲವು ವಿಚಾರಗಳು ಆರ್ಥಿಕತೆಯ ಬೆಳವಣಿಗೆಯ ಮೇಲೆ ಪ್ರಶ್ನಾರ್ಥಕ ಚಿಹ್ನೆಯನ್ನು ಕೂರಿಸುವಂತಹುದು. [illegible] ದಲ್ಲಿ ಮೊದಲನೆಯದು ಶೇಕಡಾ 20ರಷ್ಟು ಏರಿ 12,512 ಕೋಟಿ ತಲುಪಿದ ರಕ್ಷಣಾ ವೆಚ್ಚ. ಎರಡನೆ [illegible] 10,650 ಕೋಟಿ ಮುಟ್ಟಿದ ಸಾಲದ ಬಡ್ಡಿ ಪಾವತಿ, ಹಾಗೂ ಮೂರನೆಯದು 5688 ಕೋಟಿ ಆಗುವುದು ಎಂದು ಅಂದಾಜಿಸಲಾಗಿರುವ ಕೊರತೆ ಹಣಕಾಸು.

ರಕ್ಷಣೆಗೆ ಮಾಡುವ ವೆಚ್ಚವು ಸರಕಾರದ ವರಮಾನದ ಕಾಲಂಶದಷ್ಟಾಗುತ್ತದೆ. ಭಾರತದಂತಹ ಬಡ ದೇಶಕ್ಕೆ ಇದು ಅತ್ಯಂತ ದೊಡ್ಡ ಹೊರೆ. ರಕ್ಷಣೆಯ ಯಾವ ಬಾಬತ್ತಿಗಾಗಿ ಈ ವೆಚ್ಚ ಎಂದು ಯಾರೂ ಕೇಳದೆ ಇರುವಂತಹ ವಿದ್ಯಮಾನ ಇರುವುದರಿಂದ, ರಕ್ಷಣೆಗೆ ಕೇಳಿದಷ್ಟು ಹಣ ತೆಗೆದಿರಿಸಬೇಕು ಎಂಬ ಮನೋಭಾವ ಇರುವುದರಿಂದ ಅದಕ್ಕಾಗಿ ಇಷ್ಟು ದೊಡ್ಡ ಮೊತ್ತವನ್ನು ಕೊಟ್ಟು ಜನಸಮುದಾಯವು ಮೌನವಾಗಿ ನರಳಬೇಕಾಗಿರುವ ಪರಿಸ್ಥಿತಿ ಉಂಟಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಒಂದು ದೇಶಕ್ಕೆ ಕಾಲಂಶ ರಕ್ಷಣಾ ವೆಚ್ಚವು ಖಂಡಿತಾ ದುಬಾರಿ. ಈ ಬಗ್ಗೆ ನಮ್ಮ ಆರ್ಥಿಕ ತಜ್ಞರು ವಿಚಾರ ಮಾಡಬೇಕಾದ ಕಾಲ, ವಿಚಾರವಂತರು ಪ್ರಶ್ನೆಗಳನ್ನೆತ್ತಬೇಕಾದ ಸಂದರ್ಭ ಉಂಟಾಗಿದೆ. ರಕ್ಷಣೆಗೆ ಶೇಕಡಾ 25ರಷ್ಟು ಹಣ ಬೇಕಾಗಿ ಬಂದಿರುವ ಇಂದಿನ ಪರಿಸ್ಥಿತಿಯು ಸರಕಾರವು ಅನುಸರಿಸುತ್ತಿರುವ ವಿದೇಶ ನೀತಿಯ ಅಸಮರ್ಪಕತೆಯನ್ನು, ಅದರಲ್ಲಿರುವ ಕೊರತೆಯನ್ನು ತೋರಿಸುತ್ತದೆ.

ಎರಡನೆಯದ್ದು 10,650 ಕೋಟಿಯಷ್ಟಾಗಿರುವ ಬಡ್ಡಿ ಪಾವತಿ. ಈ ಬಡ್ಡಿಯು ಪಾವತಿಯಾಗುವುದು ವಿದೇಶಿ ಹಾಗೂ ದೇಶದೊಳಗಣ ಮಾರುಕಟ್ಟೆ ಸಾಲಗಳಿಗೆ ಹಾಗೂ ಉಳಿತಾಯ ನಿಧಿಗಳಿಗೆ ಅನ್ವಯಿಸುವಂತಹದು. ಇದರಲ್ಲಿ ವಿದೇಶಿ ಹಾಗೂ ದೇಶೀಯ ಮಾರುಕಟ್ಟೆ ಸಾಲಗಳೇ ಮುಖ್ಯವಾದದ್ದು. 1981–82ರಲ್ಲಿ 4000 ಕೋಟಿ ರೂಪಾಯಿಗಳಷ್ಟಿದ್ದು ಒಟ್ಟು ವರಮಾನದ ಶೇಕಡಾ 20.7ರಷ್ಟಿದ್ದ ಬಡ್ಡಿ ಪಾವತಿಯು ಇಂದು ಒಟ್ಟು ವರಮಾನದ ಶೇಕಡಾ 23.7ಕ್ಕೇರಿರುವುದು ನಮ್ಮ ಆರ್ಥಿಕತೆ ಆರೋಗ್ಯವನ್ನು ಗಳಿಸಿಕೊಳ್ಳುವ ಬದಲು ರೋಗಗ್ರಸ್ತವಾಗುತ್ತ ನಡೆದಿದೆಯೆಂಬುದನ್ನು ಸೂಚಿಸುತ್ತದೆ. ಪಡೆದುಕೊಂಡ ಸಾಲವು ವಿನಿಯೋಗವಾಗಿ ಫಲವನ್ನು ನೀಡಬೇಕಾದ್ದು ಆರ್ಥಿಕತೆಯ ಸಹಜ ಪ್ರಕ್ರಿಯೆ. ಅದು ಭಾರತದಲ್ಲಿ ನಡೆದಿಲ್ಲ. ಪಡೆದ ಸಾಲ ಅನುತ್ಪಾದಕ ಬಾಬತ್ತುಗಳಿಗೆ ವೆಚ್ಚವಾಗಿ ವ್ಯರ್ಥವಾದುದೇ ಹೆಚ್ಚೆಂಬುದನ್ನು ಏರುತ್ತಿರುವ ಬಡ್ಡಿಯ ಮೊತ್ತ ಸೂಚಿಸುತ್ತದೆ.

ಮೂರನೆಯದ್ದು ಕೊರತೆ ಮೊತ್ತ. ಪ್ರಸಕ್ತ ಸಾಲಿಗೆ ಅಂದಾಜಿಸಲಾಗಿದ್ದ 3650 ಕೋಟಿ ರೂಪಾಯಿಯ ಮೊತ್ತ ಅಂತಿಮವಾಗಿ 8285 ಕೋಟಿ ರೂಪಾಯಿ ಆಗಿ ಬೆಳೆದಿದೆ. 1465 ಕೋಟಿ ರೂ. ರಕ್ಷಣಾ ವೆಚ್ಚ, 800 ಕೋಟಿ ಬಡ್ಡಿ ಪಾವತಿ ಹಾಗೂ ನಾಲ್ಕನೇ ವೇತನ ಆಯೋಗದನ್ವಯ ತೆರಬೇಕಾದ ಮೊತ್ತವನ್ನು ಹೊರತುಪಡಿಸಿದರೆ ಕೊರತೆಯ ಮೊತ್ತವನ್ನು ಇಷ್ಟರ ಮಟ್ಟಿಗೆ ಏರಿಸಿದ್ದು ಯಾವ ಖರ್ಚು ಎಂಬುದಕ್ಕೆ ಸರಕಾರದಲ್ಲಿ ಯಾವ ವಿವರಣೆಯೂ ಇಲ್ಲವಾಗಿದೆ. 87–88ನೇ ಸಾಲಿಗೆ ನಮೂದಿಸಲಾಗಿರುವ 5688 ಕೋಟಿ ರೂಪಾಯಿಗಳ ಕೊರತೆಯು ಹಣದುಬ್ಬರವನ್ನು ಏರಿಸುವುದಿಲ್ಲ ಎಂದು ಸರಕಾರದ ಪರವಾಗಿ ಸಮರ್ಥನೆ ನೀಡಲಾಗುತ್ತದೆ. ಆದರೆ ಈ ಸಮರ್ಥನೆ ವಿಶ್ವಾಸಕ್ಕೆ ಅರ್ಹವೆನಿಸುವುದಿಲ್ಲ. ಸರಕಾರ ತನ್ನ ಅನುತ್ಪಾದಕ ವೆಚ್ಚಗಳಿಗೆ ಕಡಿವಾಣ ಹಾಕುವ ವಿಚಾರದಲ್ಲಿ ನಮಗೆ ಸಂದೇಹವಿದೆ. ಬಹಳ ವರ್ಷಗಳಿಂದ ಇದನ್ನು ಸರಕಾರ ಹೇಳಿಕೊಂಡು ಬರುತ್ತಿದೆಯಾದರೂ ಕಾರ್ಯಾಚರಣೆಗೆ ತರಲು ಸಾಧ್ಯವಾಗಿಲ್ಲ.

ಈ ಮುಂಗಡ ಪತ್ರದಲ್ಲಿ ಅಭಿವೃದ್ಧಿ ಬಾಬತ್ತುಗಳಿಗಾಗಿ ವೆಚ್ಚವು ಕೇವಲ [illegible]

ಮುಂಗಾರು

ಬುಧವಾರ, ಮಾರ್ಚ್ 4, 1987

ಆಡಳಿತವೇ ಎಡವಿತು

ಕಳೆದ ವರ್ಷ ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿ ರೇಣುಕಾಂಬಾ ಜಾತ್ರೆಯ ವೇಳೆ ಬೆತ್ತಲೆ ಸೇವೆ ಸಂಬಂಧವಾಗಿ ನಡೆದ ಗಲಭೆಯ ಕುರಿತು ತನಿಖೆ ನಡೆಸಿದ ಚನ್ನವೀರಪ್ಪ ಆಯೋಗವು ವರದಿ ಸಲ್ಲಿಸಿದೆ.

ಆಯೋಗವು ಮೂರು ವಿಚಾರಗಳನ್ನು ಸರಕಾರದ ಹಾಗೂ ಸಾರ್ವಜನಿಕರ ಮುಂದಿರಿಸಿದೆ. ಒಂದನೆಯದ್ದು–ಗಲಭೆಯು ಬೆಳೆಯುವುದಕ್ಕೆ ಜಿಲ್ಲೆಯ ಆಡಳಿತ ಮುಖ್ಯಸ್ಥರಾದ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸಧಿಕಾರಿಗಳ ಉಪೇಕ್ಷೆ ಹಾಗೂ ಬೇಜವಾಬ್ದಾರಿತನ ಕಾರಣ ಎಂಬುದು. ಎರಡನೆಯದ್ದು ಬೆತ್ತಲೆ ಸೇವೆಯನ್ನು ತಡೆಯಬೇಕೆಂಬ ಚಳವಳಿ ನಡೆಸಿದ ಸಮಾಜ ಸುಧಾರಕ ಸಂಸ್ಥೆಗಳು ಬೆತ್ತಲೆ ಸೇವೆಗೆಳಸಿದವರನ್ನು ಬಲವಂತವಾಗಿ ತಡೆದದ್ದು ಹಿಂಸೆಗೆ ಕಾರಣವಾಯಿತು ಎಂಬುದು ಹಾಗೂ ಮೂರನೆಯದು ಗುಂಪಿನಲ್ಲಿ ಸೇರಿಕೊಂಡ ದುಷ್ಕರ್ಮಿಗಳು ಗಲಭೆಯನ್ನು ಉಲ್ಬಣಗೊಳಿಸಿದರು ಎಂಬುದು.

ಸಾರ್ವಜನಿಕರಿಗೆ ಗೊತ್ತಿರದೇ ಇರುವ ಯಾವ ಹೊಸ ವಿಚಾರವನ್ನೂ ಚನ್ನವೀರಪ್ಪ ಆಯೋಗವು ಹೇಳಿದಂತಾಗಿಲ್ಲ. ಸಾರ್ವಜನಿಕರಿಗೆ ಈ ಮೊದಲೇ ತಿಳಿದ ವಿಚಾರಗಳಿಗೆ ಅಧಿಕೃತಮುದ್ರೆಯನ್ನಷ್ಟೆ ಅದು ಒತ್ತಿದಂತಾಗಿದೆ. ಜಿಲ್ಲೆಯ ಆಡಳಿತಾಧಿಕಾರಿಗಳ ಹಾಗೂ ಪೊಲೀಸಧಿಕಾರಿಗಳ ಉಪೇಕ್ಷೆ, ಉಡಾಫೆ ಹಾಗೂ ಬೇಜವಾಬ್ದಾರಿ ತನಗಳಿಂದಾಗಿ ಚಂದ್ರಗುತ್ತಿ ಜಾತ್ರೆಯಲ್ಲಿ ಗಲಭೆಯು ವ್ಯಾಪಕವಾಗಿ ಬೆಳೆದು ಅನೇಕ ಭಕ್ತರನ್ನೂ, ಪೊಲೀಸರನ್ನೂ ಪತ್ರಕರ್ತರನ್ನೂ ಸಮಾಜ ಸೇವಾ ಕಾರ್ಯಕರ್ತರನ್ನೂ ಬೆತ್ತಲೆಗೊಳಿಸಿ ಚಿತ್ರಹಿಂಸೆಗೊಳಪಡಿಸಲಾಯಿತೆಂಬುದು ಈಗಾಗಲೇ ಎಲ್ಲರಿಗೂ ತಿಳಿದಿರುವ ವಿಚಾರ. ಅದನ್ನೇ ಆಯೋಗವು ವೈವಿಧ್ಯಮಯವಾಗಿ ಸಾಕ್ಷ್ಯಾಧಾರ ಸಹಿತ ರಾಜ್ಯದ ಜನರ ಮುಂದೆ ಮಂಡಿಸಿದೆ. ಜಿಲ್ಲೆಯ ಉಸ್ತುವಾರಿ ವಹಿಸಿದ್ದ ಜಿಲ್ಲಾಧಿಕಾರಿಯೂ ಜಾತ್ರೆಯ ಸ್ಥಳಕ್ಕೆ ಭೇಟಿಕೊಟ್ಟರೂ, ಬೆತ್ತಲೆ ಸೇವೆಯವಿರುದ್ಧ ಚಳವಳಿ ನಡೆಯುತ್ತಿದೆ ಎಂಬ ಅರಿವಿದ್ದರೂ ಲಕ್ಷಾಂತರ ಜನರು ನೆರೆಯುವ ಸೂಚನೆಗಳಿದ್ದರೂ ಬಂದೋಬಸ್ತಿಗೆ ನೇಮಿಸಲಾದ ಪೊಲೀಸರ ಸಂಖ್ಯೆ ಎಷ್ಟೆಂಬುದನ್ನು ತಿಳಿಯುವ ಗೋಜಿಗೆ ಹೋಗಿಲ್ಲ. ಲಕ್ಷಾಂತರ ಜನರು ನೆರೆದ ಬೆತ್ತಲೆ ಸೇವೆಯಂತಹ ವಿವಾದಾತ್ಮಕವಾದ ಅನಾಗರಿಕ ಘಟನೆಯೊಂದು ನಡೆಯುವ ತಾಣದಲ್ಲಿ ಉಪಸ್ಥಿತರಿದ್ದು ಶಾಂತಿಪಾಲನೆ ನೋಡಿಕೊಳ್ಳಬೇಕಾಗಿದ್ದ ಪೊಲೀಸಧಿಕಾರಿ ತನ್ನ ಕರ್ತವ್ಯವನ್ನು ಮಾಡದೆ ಭದ್ರಾವತಿಯಲ್ಲೆಲ್ಲೋ ನಡೆದ ಮದುವೆ ಮನೆಯಲ್ಲಿ ಊತಣ ಉಣ್ಣಲು ಹೋದರು ಎಂಬ ದಿಗ್ಭ್ರಮೆಗೊಳಿಸುವಂತಹ ವಿವರಗಳನ್ನು ಆಯೋಗವು ಬಹಿರಂಗ ಪಡಿಸಿದೆ. ಚಂದ್ರಗುತ್ತಿಯಲ್ಲಿ ಜಾತ್ರೆ ಸಂದರ್ಭದಲ್ಲಿ ಬಂದೋಬಸ್ತಿಗೆ ನಿಯುಕ್ತರಾದ ಪೊಲೀಸರ ಸಂಖ್ಯೆ ಏನೇನೂ ಸಾಲದೆಂಬ ಸತ್ಯವನ್ನು ಆಯೋಗ ಹೊರಗೆಡಹಿದೆ. ಸ್ಥಳದಲ್ಲಿದ್ದ ಪೊಲೀಸರು ಗಲಭೆ ಉಲ್ಬಣಗೊಂಡಾಗ ತಾವು ಏನು ಮಾಡಬೇಕೆಂದು ತೋಚದೆ ಮೌನವಾಗಿ ಬಂದದ್ದನ್ನೆಲ್ಲ ಅವಮಾನದಿಂದ ಅನುಭವಿಸಿದರೆಂಬುದನ್ನು ಸಮರ್ಥಿಸಿದ ಆಯೋಗ ಪೊಲೀಸ್ ಸಿಬ್ಬಂದಿಗಳಿಗೆ ಬೇರೆ ದಾರಿ ಇರಲಿಲ್ಲವೆಂಬುದನ್ನು ಸಮರ್ಥಿಸಿದೆ.

ಬೆತ್ತಲೆ ಸೇವೆ ಅಮಾನವೀಯವೂ ಅನಾಗರಿಕವೂ ಆದ ಒಂದು ಸಂಪ್ರದಾಯವಾಗಿದ್ದು ಸಮಾಜವನ್ನು ಮತ್ತೆ ಕಂದಾಚಾರದ ಕೂಪಕ್ಕೆ ತಳ್ಳುವ ಹೀನಾಯ ಪದ್ಧತಿಯಾಗಿರುವುದನ್ನು ಮನಗಂಡ ದಲಿತ ಸಂಘರ್ಷ ಸಮಿತಿಯಂತಹ ಸಂಘಟನೆಗಳು ಈ ವ್ಯವಹಾರವನ್ನು ತಡೆಯುವ ಕಾರ್ಯಕ್ಕೆ ಮುಂದಾದವು. ಬೆತ್ತಲೆ ಸೇವೆಯಲ್ಲಿ ಭಾಗವಹಿಸುವವರ ಪೈಕಿ ಹೆಚ್ಚಿನವರೂ ಕೆಳವರ್ಗದಿಂದ ಬಂದವರೆಂಬ ಸತ್ಯವನ್ನರಿತ ಈ ಸಂಘಟನೆಗಳು ನಡೆಸಿದ ಈ ಕಾರ್ಯಾಚರಣೆ ಸಾಮಾಜಿಕ ಕಳಕಳಿಯಿಂದ ಹುಟ್ಟಿಕೊಂಡದ್ದು. ಹೀನತೆಯ ರಾಡಿಯನ್ನೆಲ್ಲ ಮೈಗೆ ಮೆತ್ತಿಕೊಂಡ ಜನಸಮುದಾಯವೊಂದರ ಮೌಢ್ಯದ ಪೊರೆಯನ್ನು ಕಳಚುವ ಕಾರ್ಯಾಚರಣೆ ಅದು. ಅದನ್ನು ಈ ಹಿನ್ನೆಲೆಯಲ್ಲಿಯೇ ನೋಡಬೇಕು. ಈ ಪ್ರಕ್ರಿಯೆಯಲ್ಲಿ ಸಣ್ಣಪುಟ್ಟ ತಪ್ಪು ಹೆಜ್ಜೆಗಳನ್ನು ದಸಂಸದಂತಹ ಸಂಘಟನೆಗಳು ಇರಿಸಿರಬಹುದು.

ಆದರೆ ಚಂದ್ರಗುತ್ತಿಯಲ್ಲಿ ನಡೆದ ಪೈಶಾಚಿಕ ಘಟನೆಗಳ ತಾಂಡವಕ್ಕೆ ಬೆತ್ತಲೆ ಸೇವೆ ತಡೆಯಲು ಹೊರಟ ದಸಂಸವಾಗಲಿ ವಿಚಾರ ವೇದಿಕೆಯಾಗಲಿ ಕಾರಣವೆಂದು ಹಣೆಪಟ್ಟಿ ಹಚ್ಚುವುದು ಮಾತ್ರ ಜನರ ಮೌಢ್ಯವನ್ನು ಮೋಜಿಗೆ ಬಳಸುವವರ ನೀತಿಯಾಗುತ್ತದೆ. ಸಮಾಜವನ್ನು ನೇರ್ಪುಗೊಳಿಸಬೇಕೆಂದು ಬಯಸುವವರ ಮೇಲೆ ಅಪಾದನೆ ಹೊರಿಸಿ ಬಲಿಪಶುಗಳನ್ನಾಗಿ ಮಾಡಿ ಸುಧಾರಣೆಯ ಪ್ರಕ್ರಿಯೆಯನ್ನು ನಿಲ್ಲಿಸಿಬಿಡುವ ತಂತ್ರವಾಗುತ್ತದೆ.

ದುಷ್ಕರ್ಮಿಗಳು ಹಿಂಸೆಯನ್ನು ಹೆಚ್ಚಿಸಿದರು, ಗಲಭೆಯನ್ನು ಬೆಳೆಸಿದರು ಎಂದು ಆಯೋಗವು ಹೇಳುತ್ತದೆ. ವರದಾ ನದಿಯಿಂದ ರೇಣುಕಾಂಬಾ ದೇವಾಲಯದವರೆಗಿನ ನಾಲ್ಕು ಕಿ. ಮೀ. ದಾರಿಯುದ್ದಕ್ಕೂ ಹಿಂಸೆ ನಡೆಯಲು ಇದೇ ಕಾರಣವೆಂಬ ಸತ್ಯ ವರದಿಯಲ್ಲಿ ಉಕ್ತವಾಗಿದೆ. ಈ ಶಕ್ತಿಗಳು ಹಾಗೂ ಸೂಕ್ತ ವ್ಯವಸ್ಥೆ ಮಾಡದ ಪೊಲೀಸ್ ಇಲಾಖೆ ಚಂದ್ರಗುತ್ತಿಯ ಕರ್ಮಕಾಂಡದ ಹೊಣೆಗಾರಿಕೆ ಹೊರಬೇಕು. ಈ ಶಕ್ತಿಗಳು ಯಾವುವು, ಅವುಗಳ ಹಿಂದಿರುವ ಜನಗಳು ಯಾರು ಎಂದು ಗುರುತಿಸುವ ಗೋಜಿಗೆ ಆಯೋಗ ಹೋಗಿಲ್ಲ. ಪೊಲೀಸ್ ಇಲಾಖೆಗೆ ವಿವರ ತಿಳಿದಿರಬಹುದು. ಆದರೆ ಅದನ್ನು ಬಹಿರಂಗ ಪಡಿಸುವ ಗೋಜಿಗೆ ಇಲಾಖೆಯೂ ಹೋಗಿಲ್ಲ. ಎಲ್ಲರೂ ಸೇರಿದ ಸಂಸದಂತಹ ಬಡಪಾಯಿ ಸಂಘಟನೆಯೊಂದರ ಮೇಲೆ ಗೂಬೆ ಕೂರಿಸಲು ಹೊರಟಂತಿದೆ.

ಈಗಲಾದರೂ ಸರಕಾರ ಕಣ್ಣು ತೆರೆದು ಜಾತ್ರೆಯನ್ನು ರದ್ದು ಪಡಿಸಿರುವುದು ಸ್ವಾಗತಾರ್ಹ

ಮುಂಗಾರು

ಭಾನುವಾರ, ಮಾರ್ಚ್ 8, 1987

ಕಂಪೆನಿಗೆ ಗುತ್ತಿಗೆ ಕೊಡಿ

ರಾಜ್ಯದ ಸರಕಾರಿ ಕ್ಷೇತ್ರದ ಉದ್ಯಮ ಹಾಗೂ ವಾಣಿಜ್ಯ ಸಂಸ್ಥೆಗಳು ನಷ್ಟದಲ್ಲಿ ನಡೆಯುತ್ತಿವೆ ಎಂಬ ಕಾರಣಕ್ಕೆ ಈ ಸಂಸ್ಥೆಗಳಲ್ಲಿರುವ ಸರಕಾರದ ಪಾಲು ಬಂಡವಾಳವನ್ನು ಖಾಸಗಿಯವರಿಗೆ ಹಸ್ತಾಂತರಿಸುವ ಪ್ರಸ್ತಾಪ ಸರಕಾರದ ಮುಂದಿದೆ. ಈ ವಿಚಾರದಲ್ಲಿ ಸರಕಾರವು ತತ್ವಾದರ್ಶಗಳ ಬಾಲ ಹಿಡಿದು ಕೈಸುಟ್ಟುಕೊಳ್ಳುವುದು ಅಸಾಧ್ಯವೆಂಬ ಮಾತನ್ನು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಹೇಳಿದ್ದಾರೆ. ರಾಜ್ಯದ ಸಾರ್ವಜನಿಕ ಕ್ಷೇತ್ರದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಕಂಡು ಬಂದ ಕಳಪೆ ಕಾರ್ಯನಿರ್ವಹಣೆಯಿಂದಾಗಿ ಈ ರಂಗದ ಬಗೆಗಿನ ತನ್ನ ವಿಶ್ವಾಸ ಕುಸಿದು ಹೋಗಿದೆ ಎಂದು ಅವರು ಬಹಿರಂಗ ಪಡಿಸಿದ್ದಾರೆ.

ಸರಕಾರಿ ಕ್ಷೇತ್ರದ ಉದ್ಯಮ ಹಾಗೂ ವಾಣಿಜ್ಯ ಸಂಸ್ಥೆಗಳಲ್ಲಿ ರಾಜ್ಯ ಸರಕಾರ ಈ ತನಕ 450 ಕೋಟಿ ರೂಪಾಯಿ ಹಣ ಹೂಡಿದೆಯಾದರೂ ಪ್ರತಿ ವರ್ಷ ಬರುವ ಪ್ರತಿಫಲ ಬರೇ ಒಂದು ಕೋಟಿ ರೂಪಾಯಿ ಎಂದು ಮುಖ್ಯಮಂತ್ರಿಯವರು 87–88ನೇ ಸಾಲಿನ ಮುಂಗಡ ಪತ್ರದ ಬಗೆಗಿನ ಚರ್ಚೆಗೆ ವಿಧಾನ ಸಭೆಯಲ್ಲಿ ಉತ್ತರಿಸುತ್ತ ದುಃಖ ವ್ಯಕ್ತಪಡಿಸಿದ್ದಾರೆ. ಸರಕಾರಿ ರಂಗದ ಕುರಿತು ಸರಕಾರದ ಬದ್ಧತೆಯನ್ನು ಮರು ಪರಿಶೀಲಿಸಬೇಕಾದ ಅಗತ್ಯ ಈಗ ಬಂದಿದೆಯೆಂದು ಅವರು ಸಾರಿದ್ದಾರೆ.

ರಾಜ್ಯದ ಸರಕಾರಿ ಉದ್ಯಮಗಳ ಸಾಧನೆ ಹೀಗೆ ಕುಸಿದು ನಷ್ಟ ಉಂಟಾಗುವುದಕ್ಕೆ ವಿದ್ಯುತ್ ಅಭಾವವೂ ಒಂದು ಕಾರಣವೆಂದು ಹೆಗಡೆಯವರು ವಿಶ್ಲೇಷಣೆ ಮಾಡಿದ್ದಾರೆ. ಕೇಂದ್ರ ಸರಕಾರ ಅನುಸರಿಸುತ್ತಿರುವ ನೀತಿಯೇ ಪ್ರಧಾನ ಕಾರಣವೆಂದು ಆರೋಪಿಸಿದ್ದಾರೆ. ಮಾರುತಿ ಕಾರು ಕಂಪೆನಿಯಂತೆ ಸಾರ್ವಜನಿಕ ರಂಗದ ಸಂಸ್ಥೆಗಳೊಂದಿಗೆ ಸರಕಾರಿ ಕ್ಷೇತ್ರವು ಸ್ಪರ್ಧಿಸುವುದಿದ್ದರೆ ತನ್ನ ಆಕ್ಷೇಪವೇನೂ ಇಲ್ಲವೆಂದು ತನ್ನ ನಿಲುಮೆಗೆ ಸಮರ್ಥನೆಯ ಮುಲಾಮು ಹಚ್ಚುವ ಕೆಲಸವನ್ನೂ ಮಾಡಿದ್ದಾರೆ.

ಸಾರ್ವಜನಿಕ ಉದ್ಯಮ ಸಂಸ್ಥೆಗಳನ್ನು ಬೇರಾರೋ ಬಂದು ನಡೆಸುತ್ತ, ನಿಯಂತ್ರಿಸುತ್ತ ನಷ್ಟ ಉಂಟು ಮಾಡಿ ಸರಕಾರಕ್ಕೆ ಸಂಕಟ ತಂದು ಕೊಟ್ಟಿದ್ದಾರೆ ಎಂಬ ಅರ್ಥ ಬರುವಂತೆ ಹೆಗಡೆಯವರು ಮಾತನಾಡಿದ್ದಾರೆ. ಈ ಕಂಪೆನಿಗಳನ್ನು ನಡೆಸುವುದು ಸರಕಾರವೇ; ಬೇರಾರೂ ಅಲ್ಲ. ತಮಗೆ ಬೇಕಾದವರನ್ನು ಸರಕಾರದವರು ಈ ಸಂಸ್ಥೆಗಳಿಗೆ ನೇಮಿಸುತ್ತಾರೆ. ಆಡಳಿತಕ್ಕೆ ಸಂಬಂಧಪಟ್ಟ ಧೋರಣೆಗಳನ್ನು ತಾವೇ ತೀರ್ಮಾನಿಸುತ್ತಾರೆ. ಇವುಗಳ ಕಾರ್ಯಾಚರಣೆಯು ವಸ್ತುಶಃ ಸರಕಾರದ ನಿಯಂತ್ರಣದಲ್ಲೇ ಉಂಟು. ರಾಜ್ಯ ರಸ್ತೆ ಸಾರಿಗೆ ನಿಗಮವನ್ನೇ ತೆಗೆದುಕೊಳ್ಳೋಣ. ನಷ್ಟದ ವಿಚಾರ ಹಾಗಿರಲಿ. ದಿನ ಬೆಳಗಾದರೆ ಸಾರ್ವಜನಿಕರೊಂದಿಗೆ ವ್ಯವಹರಿಸಬೇಕಾದ ಈ ಸಂಸ್ಥೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಜನರೊಂದಿಗೆ ಸೌಜನ್ಯದಿಂದ ವರ್ತಿಸುವಂತೆ ನೋಡಿಕೊಳ್ಳುವುದು ಕೂಡ ಸರಕಾರಕ್ಕೆ ಸಾಧ್ಯವಾಗಿಲ್ಲ. ಹಾಗೆಂದ ಮೇಲೆ ಹಣಕಾಸಿನ ಆಡಳಿತವನ್ನು ನಿರ್ವಹಿಸುವುದು, ವಾಹನಗಳ ನಿರ್ವಹಣೆಯನ್ನು ಸಮರ್ಥವಾಗಿ ಮಾಡುವುದು, ಬಸ್ ನಿಲ್ದಾಣಗಳಂತಹ ಸೌಲಭ್ಯಗಳನ್ನು ರೂಪಿಸುವುದು, ಸೋರಿಕೆಯನ್ನು ತಡೆಯುವುದು ಇವೆಲ್ಲ ದೂರವೇ ಉಳಿಯಿತು.

ತೆರಿಗೆ ಹೆಚ್ಚಳದಂತಹ ವಿಚಾರಗಳಿರಬಹುದಾದರೂ ಸಾಮಾನ್ಯವಾಗಿ ವಾಣಿಜ್ಯ ಹಾಗೂ ಕೈಗಾರಿಕಾ ಸಂಸ್ಥೆಗಳು ಸೋಲುಣ್ಣುವುದು ಆಡಳಿತದ ಅಸಾಮರ್ಥ್ಯದಿಂದಾಗಿ ಎಂಬುದನ್ನು ನಮ್ಮ ಸರಕಾರದ ವರಿಷ್ಠರು ಮನನ ಮಾಡಿದರೆ ಸಾರ್ವಜನಿಕ ರಂಗದ ಸಂಸ್ಥೆಗಳು ಸೊರಗಿ ಸಾಯುವುದಕ್ಕೆ ಹೊರಟಿರುವುದು ಯಾಕೆಂದು ಅರ್ಥವಾದೀತು. ಈ ಸಂಸ್ಥೆಗಳು ಸೋಲುತ್ತಿರುವುದು ನಮ್ಮ ರಾಜಕೀಯ ಮುಂದಾಳುಗಳ ಅಸಾಮರ್ಥ್ಯದಿಂದಲೇ. ಅವರು ನೇಮಿಸಿದ ಅವರ ರಾಜಕೀಯ ಅನುಯಾಯಿಗಳು ಹಾಗೂ ಚೇಲಾಗಳು–ಚಮಚಾಗಳು ಈ ಸಂಸ್ಥೆಗಳನ್ನು ಕರೆಯುವ ದನದಂತೆ ಮಾಡಿಕೊಂಡು ಹಾಲು–ತುಪ್ಪ ಸವಿಯಲು ಉಪಯೋಗಿಸಿದ್ದು ಕಾರಣ.

ಸರಕಾರಿ ಸಂಸ್ಥೆಗಳನ್ನು ಮಾದರಿಯಾಗಿ ನಡೆಸಿಕೊಂಡು ಬರಬೇಕಾದ ಸರಕಾರಿ ಧುರೀಣರೇ ಅವುಗಳನ್ನು ತೆಗಳುತ್ತ ತಿರುಗುವುದು ಬಲು ವಿಚಿತ್ರವಾದ ವಿದ್ಯಮಾನ. ಧುರೀಣರು ಹೊಣೆ ಜಾರಿಸಿಕೊಳ್ಳುತ್ತಿದ್ದಾರೆಂಬ ತೀರ್ಮಾನಕ್ಕೆ ಇದರಿಂದ ನಾವು ಬರಬೇಕಾಗುತ್ತದೆ. ಸರಕಾರ ಕರ್ತವ್ಯಭ್ರಷ್ಟವಾಗಿದೆಯೆಂದೇ ಹೇಳಬೇಕಾಗುತ್ತದೆ. ಆಡಳಿತವು ಸಾಧ್ಯವಿಲ್ಲವೆಂದಾದರೆ ಸರಕಾರವನ್ನೂ ಖಾಸಗಿಯವರ ಕೈಗೆ ಕೊಡಬಹುದು. ಸರಕಾರವನ್ನು "ಲಾಭಕರ"ವಾಗಿ ನಡೆಸುವ ವಿದ್ಯೆ ಖಾಸಗಿಯವರಿಗೆ ಚೆನ್ನಾಗಿ ಗೊತ್ತು. ಹಿಂದೆ ಕಂಪೆನಿ ಸರಕಾರದವರೂ ಇಲ್ಲಿ ಅದನ್ನೇ ಮಾಡಿದ್ದು; ಹೆಗಡೆಯವರಿಂದಾಗದಿದ್ದರೆ ಸರಕಾರಿ ಕಂಪೆನಿಗಳನ್ನೂ ಸರಕಾರವನ್ನೂ ಕೂಡಿಯೇ ಯಾವುದಾದರೊಂದು ಕಂಪೆನಿಗೆ ಗುತ್ತಿಗೆ ಕೊಡಬಹುದು.

ಮುಂಗಾರು
ಗುರುವಾರ, ಮಾರ್ಚ್ 12, 1987

ಯಾಕೆ ನಿಮ್ಮ ಮೌನ

ಸ್ವಾತಂತ್ರ್ಯಾನಂತರದ ವರ್ಷಗಳಲ್ಲಿ ಭಾರತದ ಎಲ್ಲ ರಾಜ್ಯಗಳಲ್ಲಿ ಪೊಲೀಸ್‌ದಳ ಒಂದು ಜನ ವಿರೋಧಿ ವ್ಯವಸ್ಥೆಯಾಗಿ ಬೆಳೆಯುತ್ತಿದೆಯೆಂಬ ಆರೋಪಗಳು ಆಗಾಗ ಕೇಳಿ ಬಂದಿವೆ. ಇಂತಹ ಆರೋಪವನ್ನು ಸಮರ್ಥಿಸುವ ನೂರಾರು ಘಟನೆಗಳು ನಡೆದಿವೆ.

ಪೊಲೀಸರ ಬಂಧಿಗಳಾದ ಜನ ಸಾಮಾನ್ಯರಿಗೆ ರಕ್ಷಣೆ ಇಲ್ಲವೆಂಬ ಭಾವನೆ ಬೆಳೆಯುತ್ತಲೇ ಇದೆ. ಅಪರಾಧಗಳ ತನಿಖೆಗಾಗಿ ಪೊಲೀಸರ ವಶವಾದ ಬಡಪಾಯಿ ಜನರ ಪ್ರಾಣಹರಣವಾದ ಘಟನೆಗಳು ನೂರಾರು ಇವೆ. ಬಂಧಿಗಳಾದ ಜನರ ಕಣ್ಣು ಕೀಳುವ ಪಾಶವೀಕೃತ್ಯವೂ ಪೊಲೀಸರಿಂದಾಗಿದೆ. ಶ್ರೀಮಂತರ ವಿರುದ್ಧ ದೂರು ಕೊಡುವ "ಉದ್ಧಟತನ" ತೋರಿಸಿದ ಜನ ಸಾಮಾನ್ಯರು ಏಟು ತಿಂದು ಮೈ ಉಜ್ಜಿಕೊಂಡು ಮನೆಗೆ ಹಿಂತಿರುಗುವುದು ಸರ್ವೇ ಸಾಮಾನ್ಯವೆನ್ನಿಸಿದೆ.

ಈ ದೇಶದಲ್ಲಿ ಪೊಲೀಸರಿರುವುದು ಸಿರಿವಂತರ ರಕ್ಷಣೆಗೇ ಹೊರತು ಶ್ರಮಿಕರ ಅಥವಾ ಬಡ ಜನರ ಹಿತದ ಕಾವಲಿಗಲ್ಲವೆಂಬುದು ಒಂದು ವಾಸ್ತವ ಸ್ಥಿತಿಯಾಗಿದೆ. ಜನ ಸಾಮಾನ್ಯರ ಜೀವಕ್ಕೆ ಕಾಸಿನ ಬೆಲೆ ಇಲ್ಲದಂತಾಗಿರುವ ಒಟ್ಟು ಭಾರತೀಯ ಸನ್ನಿವೇಶವನ್ನು ಪೊಲೀಸ್‌ದಳ ಹೆಚ್ಚು ವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತಂದಿದೆಯೆನ್ನಬಹುದು.

ಇಂತಹ ಒಂದು ರಾಷ್ಟ್ರೀಯ ವಿದ್ಯಮಾನದಿಂದ "ಭಾರತ ಮಾತೆಯ ತನುಜಾತೆ" ಕರ್ನಾಟಕವೂ ಹೊರತಾಗಿಲ್ಲ. ಇಲ್ಲಿಯೂ ಪೊಲೀಸ್ ಠಾಣೆ ಸೇರಿದ ಹಲವಾರು ಬಡಪಾಯಿಗಳ ಬಲಿ ಆಗಿದೆ. ಈಗಲೂ ಆಗುತ್ತಿದೆ. ಹೆಣ್ಣು ಮಕ್ಕಳ ಮಾನಹರಣವಾಗಿದೆ. ಅಪರಾಧವನ್ನು ತಡೆಗಟ್ಟಲಿಕ್ಕಾಗಿಯೇ ಇರುವ ಪೊಲೀಸ್‌ದಳದಿಂದ ಆಗುತ್ತಲೇ ಇರುವ ಅಪರಾಧಗಳನ್ನು ತಡೆಗಟ್ಟಲು ಇದುವರೆಗೆ ಯಾರಿಂದಲೂ ಆಗಿಲ್ಲ. ಅಪರಾಧಗಳ ತನಿಖೆಯಲ್ಲಿ ಪೊಲೀಸರು ತೋರಿಸುತ್ತಿರುವ ಮರ್ಜಿಯಿಂದ ಇದು ಸ್ಪಷ್ಟವಾಗುತ್ತದೆ.

ಕರ್ನಾಟಕ ಪೊಲೀಸ್ ದಳದ ಒಂದು ತುಕಡಿಯಾದ ದಕ್ಷಿಣಕನ್ನಡದ ಪೊಲೀಸರು ತಾವು "ಬೇರೆಯವರಿಗಿಂತ ಉತ್ತಮರು", ಎನ್ನುವ ಪ್ರತಿಷ್ಠೆಯನ್ನು ಕೆಲವು ವರ್ಷಗಳಿಂದ ಮೆರೆಸಿಕೊಂಡು ಬಂದಿದ್ದಾರೆ. ಎರಡು ವರ್ಷಗಳ ಹಿಂದೆ ಕೆಲವರು ಕಿಡಿಗೇಡಿ ಹುಡುಗರು ಸಬ್‌ಇನ್ಸ್‌ಪೆಕ್ಟರ್ ಹಾಸಟ್ಟಿಯವರ ಕೊಲೆಮಾಡಿದಾಗ್ಲ ಸಮಗ್ರ ಪೊಲೀಸ್‌ಪಡೆ ಜಿಲ್ಲೆಯ ಜನರ ಸವಿಷಪದ ಬಾಧುವಾಯಿತು. ಇನಾದ ಸ್ವಲ್ಪ ಸಮಯದಲ್ಲೇ ಜಿಲ್ಲೆಯನ್ನು ನಡುಗಿಸಿದ ಸುರೇಂದ್ರ ಬೋಸ್ ಜಾದ್ರನ್ ತಂಡದ ದಾವಳಿ ಇಲ್ಲಿನ ಪೊಲೀಸರಿಗೆ ಜನಪರ ನಿಲುವಿನ ಖ್ಯಾತಿ ತಂದಿತು.

ಇವರ ಜೆಸ್ಸಲ್ಲೇ ಜಿಲ್ಲೆಯ ಪೊಲೀಸ್ ದಳಕ್ಕೆ ಈಗ ಕೆಲವು ಸವಾಲುಗಳು ಎದುರಾಗಿವೆ. ಒಬ್ಬಳು ವಿದ್ಯಾರ್ಥಿನಿ ಕಣ್ಮರೆಯಾಗಿ ತಿಂಗಳಾದ ಮೇಲೆ ಆಕೆಯ ಶವ ನದಿಯೊಂದರಲ್ಲಿ ಗೋಚರಿಸುತ್ತದೆ. ಇನ್ನೊಬ್ಬ ಪ್ರತಿಭಾವಂತ ವಿದ್ಯಾರ್ಥಿ ನಿಗೂಢವಾದ ರೀತಿಯಲ್ಲಿ ಸಾವನ್ನಪ್ಪುತ್ತಾನೆ. ಮತ್ತೊಬ್ಬಳು ಹುಡುಗಿಯನ್ನು ಯಾರೋ ಒಬ್ಬರು ಮದುವೆಯಾಗುವುದಾಗಿ ಹೇಳಿ ಮನೆಯಿಂದ ಕರಕೊಂಡು ಹೋಗುತ್ತಾರೆ–ಆಮೇಲೆ ಕನ್ಯೆ ಕಾಣೆಯಾಗಿರುವಳೆಂಬ ದೂರು ಬರುತ್ತದೆ. ಇವೆಲ್ಲಾ ಅಮಾನುಷವಾದ ಅಪರಾಧಗಳು. ಇವಕ್ಕಿಂತ ಕಡಿಮೆ ಎನ್ನಬಹುದಾದ ಅಪರಾಧಗಳ ಸಂಖ್ಯೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುತ್ತಲೇ ಇವೆ. ಬಲಿಷ್ಠರು ಯಾವ ಅಪರಾಧವನ್ನು ಮಾಡಿದರೂ ಪಾರಾಗಬಹುದೆಂಬ ವಾತಾವರಣ ಈಗೀಗ ಬಹಳ ದಟ್ಟವಾಗಿದೆ. ಬಡಪಾಯಿಗಳಿಗಾದ ಅನ್ಯಾಯ ಪೊಲೀಸ್ ದಳದ ಕಣ್ಣಿಗೆ ಕಾಣಿಸದಷ್ಟು ದಟ್ಟವಾಗಿ ಬಲಿಷ್ಠರ ಪ್ರಭಾವ ಹರಡಿದೆ.

ಉಜಿರೆ ಮತ್ತು ಅಳಿಕೆಯಲ್ಲಾದ ನಿಗೂಢ ಸಾವುಗಳು ಮತ್ತು ಸುಳ್ಯದಲ್ಲಿ ಕನ್ಯೆಯೊಬ್ಬಳು ಕಾಣೆಯಾಗಿರುವ ಪ್ರಕರಣಗಳಲ್ಲಿ ದಕ್ಷಿಣ ಕನ್ನಡದ ಪೊಲೀಸರು ಪ್ರದರ್ಶಿಸುತ್ತಿರುವ ನಿಷ್ಕ್ರಿಯ ಉದಾಸೀನ ನಿಜಕ್ಕೂ ಆತಂಕಕಾರಿಯಾಗಿದೆ. ಈ ನಿಗೂಢ ಸಾವುಗಳು ಜಿಲ್ಲೆಯ ಜನರ ಮನಸ್ಸನ್ನು ಕಲಕಿವೆ. ಸಾರ್ವಜನಿಕರ ಕಳಕಳಿ ಹಲವಾರು ರೀತಿಯಲ್ಲಿ ಪ್ರಕಟವಾಗಿದೆ. ದಿನಗಳು ಉರುಳುತ್ತಲೇ ಇವೆ. ಆದರೆ ಜಿಲ್ಲೆಯ ಪೊಲೀಸರು ಈಗಲೂ ಆಸಡ್ಡೆಯ ಮಂಪರಿನಲ್ಲಿ ಪವಡಿಸಿದ್ದಾರೆ.

ಸಣ್ಣ–ಪುಟ್ಟ ಅಪರಾಧಗಳನ್ನು ಮಾಡಿದ ಬಡಪಾಯಿಗಳನ್ನು ಹಿಡಿದು ಕೈಕೋಳ ತೊಡಿಸಿ ಮೆರವಣಿಗೆ ಮಾಡುವುದರಲ್ಲಿ ಮಹಾಶೂರರಾಗಿ ಮೆರೆದಾಡುವ ಜಿಲ್ಲೆಯ ಪೊಲೀಸರು ನಿಗೂಢ ಸಾವುಗಳ ಸುದ್ದಿಯ ಸುಳಿಯಲ್ಲಿ ನಿದ್ರಿಸುತ್ತಿರುವುದೇಕೆ? ನಾಮಮಾತ್ರಿಯಾದ ತನಿಖೆಯ ನಾಟಕವನ್ನಾಡಲೂ ನಾಚುತ್ತಿರುವುದೇಕೆ? ನಿಮಗೆ ಈ ನಿಗೂಢ ಸಾವನ್ನಪ್ಪಿದ ಹುಡುಗ–ಹುಡುಗಿಯ ಭೂತಗಳ ಬೆದರಿಕೆ ಇದೆಯೇ…? ಯಾಕೆ ನಿಮ್ಮ ಮೌನ?–ಎಂದೀಗ ಕೇಳಲೇಬೇಕಾಗಿದೆ.

ಮಂಗಳೂರಿನಲ್ಲಿ ಡಿ. ಐ. ಜಿ. ಆಗಿರುವ ರೇವಣ್ಣ ಸಿದ್ದಯ್ಯನವರು ಗಳಿಸಿದ "ದಕ್ಷತೆ"ಯ ಹೆಸರು ಹಾಗೂ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಗೆ ಇತ್ತೀಚೆ ಬಂದಿರುವ "ಕರ್ತವ್ಯ ನಿಷ್ಠೆ"ಯ ಪ್ರತಿಷ್ಠೆಗೆ ನಿಜವಾದ ಸವಾಲು ಈ ಪ್ರಕರಣಗಳಲ್ಲಿದೆ. ಈ ಸಂದೇಶವನ್ನು ಅವರು ಸೂಕ್ಷ್ಮವಾಗಿ ಗ್ರಹಿಸಿ ಇನ್ನಾದರೂ ತಮ್ಮ ಹೆಸರು ಉಳಿಸಿಕೊಳ್ಳುವ ಹೆಜ್ಜೆ ಇಡುವರೆಂದು ನಾವು ನಿರೀಕ್ಷಿಸುತ್ತೇವೆ.

ಮುಂಗಾರು
ಭಾನುವಾರ, ಮಾರ್ಚ್ 15, 1987

ಸತ್ಸಂಪ್ರದಾಯ ಬೆಳೆಸಿ

ರಾಷ್ಟ್ರಪತಿ ಜೈಲ್‌ಸಿಂಗ್ ಹಾಗೂ ಪ್ರಧಾನ ಮಂತ್ರಿ ರಾಜೀವ ಗಾಂಧಿ ಅವರ ನಡುವೆ ವಿರಸ ಇರುವ ವಿಚಾರವೇನೂ ಈಗ ರಹಸ್ಯವಲ್ಲ; ಬಹಿರಂಗ ಸತ್ಯ. ಈ ವಿಚಾರವನ್ನು ವಿರೋಧ ಪಕ್ಷದ ಸದಸ್ಯರು ಸಂಸತ್ತಿನಲ್ಲಿ ಎತ್ತಿದ್ದಾರೆ. ಈ ವಿಚಾರದಲ್ಲಿ ದೊಡ್ಡ ಹಗರಣವೇ ನಡೆದಿದೆ. ರಾಷ್ಟ್ರಾಧ್ಯಕ್ಷರಿಗೆ ಸಂಬಂಧ ಪಟ್ಟಂತಹ ಯಾವ ಪ್ರಸ್ತಾಪಕ್ಕೂ ಸದನದೊಳಗೆ ತಾನು ಅವಕಾಶ ಕೊಡಲಾರೆನೆಂದು ಲೋಕಸಭೆಯ ಸ್ಪೀಕರ್ ಬಲರಾಮ ಜಾಖಡ್ ಅವರು ತೀರ್ಪುಕೊಟ್ಟಿದ್ದಾರೆ.

ಇಷ್ಟೆಲ್ಲ ಹಗರಣವನ್ನು ಎಬ್ಬಿಸಿರುವುದು ರಾಷ್ಟ್ರಪತಿ ಜೈಲ್‌ಸಿಂಗ್ ಅವರು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರಿಗೆ ಬರೆದ ಒಂದು ಪತ್ರ. ಇದು ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಒಂದೆರಡು ಮಹತ್ವದ ನಿಯಮಗಳನ್ನು ಪ್ರಸ್ತಾಪಿಸುತ್ತದೆ. ರಾಜೀವ ಗಾಂಧಿಯವರು ಒಂದು ವಾರದ ಹಿಂದೆ ಸಂಸತ್ತಿನಲ್ಲಿ ನೀಡಿದ ಹೇಳಿಕೆಗೆ ಸಂಬಂಧಪಟ್ಟ ಹಾಗೆ ಜೈಲ್‌ಸಿಂಗರು ಕೆಲವು ಆಕ್ಷೇಪಗಳನ್ನು ಈ ಪತ್ರದಲ್ಲಿ ಎತ್ತಿದ್ದಾರೆ. ರಾಜೀವ ಗಾಂಧಿ ಹೇಳಿಕೆಯು ಪ್ರಧಾನಿ-ರಾಷ್ಟ್ರಪತಿ ನಡುವಣ ಬಾಂಧವ್ಯಕ್ಕೆ ಸಂಬಂಧಪಟ್ಟುದಾಗಿತ್ತು. ರಾಜ್ಯಾಡಳಿತದ ಮಹತ್ವದ ವಿಚಾರಗಳನ್ನು ಸರಕಾರವು ರಾಷ್ಟ್ರಪತಿಯ ಗಮನಕ್ಕೆ ತರುವುದಿಲ್ಲವೆಂಬ ಹಾಗೂ ಅವರೊಡನೆ ಪ್ರಧಾನಮಂತ್ರಿ ಚರ್ಚಿಸುವುದಿಲ್ಲವೆಂಬ ಆರೋಪವನ್ನು ರಾಜೀವಗಾಂಧಿಯವರು ಸಂಸತ್ತಿನಲ್ಲಿ ತಳ್ಳಿ ಹಾಕಿದ್ದರು.

ರಾಜೀವಗಾಂಧಿಯವರು ಹೀಗೆ ತಳ್ಳಿ ಹಾಕಿದ್ದೇ ಜೈಲ್‌ಸಿಂಗರ ಆಕ್ಷೇಪಕ್ಕೆ ಕಾರಣ. ರಾಷ್ಟ್ರೀಯ ಮಹತ್ವದ ವಿಚಾರಗಳನ್ನೆಲ್ಲ ರಾಷ್ಟ್ರಾಧ್ಯಕ್ಷರ ಗಮನಕ್ಕೆ ತರಲಾಗುತ್ತಿದೆಯೆಂದು ರಾಜೀವಗಾಂಧಿ ಹೇಳಿದ್ದರು. ಸಮರ್ಪಕವಾದ ಸಂಬಂಧ-ಸಂಪರ್ಕಗಳು ತಮ್ಮೊಳಗೆ ಉಂಟು ಎಂದು ಅವರು ಪ್ರತಿಪಾದಿಸಿದ್ದರು.

ಇದನ್ನೇ ಜೈಲ್‌ಸಿಂಗರು ತಮ್ಮ ಪತ್ರದಲ್ಲಿ ಅಲ್ಲಗಳೆದಿರುವುದು. ತಮ್ಮೊಳಗೆ ರಾಜ್ಯಾಡಳಿತೆಯ ವಿಚಾರದ ಸೂಕ್ತ-ಸಮಾಲೋಚನೆ ನಡೆಯುತ್ತಾ ಇಲ್ಲವೆಂಬುದನ್ನು ರಾಷ್ಟ್ರಪತಿ ಹೇಳಿದ್ದಾರೆ. ರಾಜೀವಗಾಂಧಿಯವರು ಸಂಸತ್ತಿನಲ್ಲಿ ಹೇಳಿರುವುದು ವಾಸ್ತವಾಂಶವಲ್ಲವೆಂದೇ ಜೈಲ್‌ಸಿಂಗರು ಖಚಿತವಾಗಿ ಹೇಳಿದ್ದಾರೆ. ಪ್ರಧಾನಿಯಾಗಲಿ ರಾಷ್ಟ್ರಪತಿಯಾಗಲಿ ವಿದೇಶಯಾತ್ರೆಮಾಡುವ ಮೊದಲು ಮತ್ತು ನಂತರ ಪ್ರಧಾನಮಂತ್ರಿ ರಾಷ್ಟ್ರಪತಿ ಜತೆ ಚರ್ಚಿಸುವ ಸಂಪ್ರದಾಯವನ್ನು ಮುರಿದಿರುವುದನ್ನು ಅವರು ಉಲ್ಲೇಖಿಸಿದ್ದಾರೆ. ಮಾಸ್ಕೋ ಭೇಟಿಯಿಂದ ಬಂದ ಮೇಲೆ, ಸಾರ್ಕ್ ಸಮ್ಮೇಳನ ಮುಕ್ತಾಯವಾದ ಮೇಲೆ, ಜೈಲ್‌ಸಿಂಗರು ವಿದೇಶ ಪ್ರವಾಸ ಮಾಡಿ ಬಂದ ಮೇಲೆ, ಜಮ್ಮು-ಕಾಶ್ಮೀರಕ್ಕೆ ಹೋಗಿ ಬಂದ ಮೇಲೆ ಪ್ರಧಾನಮಂತ್ರಿ ಭೇಟಿಯಾಗಿಲ್ಲ ಎಂಬುದನ್ನು ನಮೂದಿಸಲಾಗಿದೆ. ಪಂಜಾಬು, ಅಸ್ಸಾಂ ಹಾಗೂ ಮಿಜೋರಾಂ ಒಡಂಬಡಿಕೆಗಳ ಕುರಿತಾಗಿ ರಾಷ್ಟ್ರಪತಿಗೆ ತಿಳಿಸಲಿಲ್ಲವೆಂಬ ವಿಚಾರ ಪತ್ರದಲ್ಲಿದೆ. ಕೆಲವು ನ್ಯಾಯಾಂಗ ಆಯೋಗಗಳ ವರದಿಗಳನ್ನು ರಾಷ್ಟ್ರಪತಿ ಕೇಳಿದರೂ ಒದಗಿಸಲಿಲ್ಲವೆಂಬ ದೂರಿದೆ. ಸಂಸತ್ತಿನಲ್ಲಿ ಒಂದೆ ರಾಷ್ಟ್ರಾಧ್ಯಕ್ಷರನ್ನು ನಿಂದಿಸಿದವರನ್ನೇ ಸಚಿವ ಸ್ಥಾನದಲ್ಲಿ ಕುಳ್ಳಿರಿಸಲಾಯಿತೆಂದು ಪ್ರಧಾನಿಯನ್ನು ಛೇಡಿಸುವ ಮಾತು ಕೂಡ ಜೈಲ್‌ಸಿಂಗರ ಪತ್ರದಲ್ಲಿದೆ.

ಎಲ್ಲಕ್ಕಿಂತ ಮಿಗಿಲಾಗಿ ಈ ವಿಚಾರಗಳನ್ನು ಪ್ರಧಾನ ಮಂತ್ರಿಯು ಸಂಸತ್ತಿನ ಅವಗಾಹನೆಗೆ ತರಬೇಕು ಎಂಬ ಬಯಕೆಯು ರಾಷ್ಟ್ರಪತಿಗಳ ಪತ್ರದಲ್ಲಿದೆ.

ಈ ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿದರೆ ಸರಕಾರದ ಮುಖ್ಯಸ್ಥರಾದ ಪ್ರಧಾನ ಮಂತ್ರಿಗೂ ರಾಷ್ಟ್ರ ಪ್ರಮುಖರಾದ ರಾಷ್ಟ್ರಾಧ್ಯಕ್ಷರಿಗೂ ವೈಯಕ್ತಿಕ ವಿರಸ ತುಂಬಾ ಇರುವುದು ಖಚಿತವಾಗುತ್ತದೆ. ಮುಂದಿನ ದಿನಗಳಲ್ಲಿ ಈ ಹಗರಣ ಬಲು ದೊಡ್ಡದಾಗಿ ಬೆಳೆಯುವ ಸೂಚನೆಗಳಿವೆ. ಸಂಸತ್ತಿನಲ್ಲಿ ಕೋಲಾಹಲ ನಡೆಯುವ ಸಾಧ್ಯತೆ ನಿಚ್ಚಳವಾಗಿದೆ.

ಅದೇನಿದ್ದರೂ ಆಡಳಿತೆಗೆ ಸಂಬಂಧ ಪಟ್ಟ ಮಹತ್ವದ ವಿಚಾರಗಳಲ್ಲಿ ರಾಜ್ಯಾಂಗದ ವಿಧಿಗಳನ್ನೂ ಸಂಪ್ರದಾಯಗಳನ್ನೂ ಸೂಕ್ತವಾಗಿ, ತತ್ವಶಃ ಪಾಲಿಸುತ್ತ ಬಂದರೆ ಸಮಸ್ಯೆಗಳು ಉಂಟಾಗುವುದನ್ನು ತಪ್ಪಿಸಲು ಸಾಧ್ಯ. ನಮ್ಮ ಸಂವಿಧಾನವು ರಾಷ್ಟ್ರಾಧ್ಯಕ್ಷರನ್ನು ಬ್ರಿಟನಿನ ದೊರೆಯಂತೆ ನಾಮ್‌ಕೇ ವಾಸ್ತೆ ರಾಷ್ಟ್ರ ಪ್ರಮುಖರನ್ನಾಗಿ ಮಾಡಿಲ್ಲ. ಅಮೆರಿಕದ ಅಧ್ಯಕ್ಷರಂತೆ ಅಪಾರವಾದ ಅಧಿಕಾರವನ್ನೂ ಕೊಟ್ಟಿಲ್ಲ. ಇವುಗಳೆರಡರ ನಡುವಿನ ಗೌರವಾನ್ವಿತ ಸ್ಥಾನಮಾನ ಅವರಿಗಿದೆ. ಈ ಹಿಂದೆ ನಮ್ಮಲ್ಲಿ ಕೆಲವರು ವಿದ್ವಾಂಸರೂ ತತ್ವವೇತ್ತರೂ ಅಧ್ಯಕ್ಷರಾಗಿದ್ದರೆ, ನುರಿತ ರಾಜಕಾರಣಿಗಳೂ ಜನ ಜೀವನದ ಆಗು ಹೋಗುಗಳಲ್ಲಿ ಅನುಭವ ಪಡೆದ ಮುತ್ಸದ್ದಿಗಳೂ ಆ ಹುದ್ದೆಯನ್ನು ಹೊಂದಿದ್ದಿದೆ. ಜೈಲ್ ಸಿಂಗರು ಇವರಲ್ಲಿ ಎರಡನೆ ವರ್ಗಕ್ಕೆ ಸೇರಿದವರು. ಜನರ ನಡುವಿನಿಂದ ಬೆಳೆದು ಬಂದ ಜನಪರ ರಾಜಕಾರಣಿ ಅವರು. ನಾಡಿನ ಆಗು ಹೋಗುಗಳಲ್ಲಿ ಅಪಾರವಾದ ಆಸಕ್ತಿಯನ್ನು ಹೊಂದಿರುವವರು.

ಅಂತಹವರ ಜತೆ ರಾಜ್ಯಾಡಳಿತದ ಮಹತ್ವದ ವಿಚಾರಗಳ ಬಗ್ಗೆ ಚರ್ಚೆ-ಸಮಾಲೋಚನೆ ನಡೆಸುವುದರಲ್ಲಿ ತಪ್ಪೇನೂ ಇಲ್ಲ. ವಿದೇಶ ನೀತಿಗೆ ಸಂಬಂಧಪಟ್ಟದ್ದಾಗಲಿ, ದೇಶದ ರಕ್ಷಣೆಗೊ, ಆರ್ಥಿಕತೆಗೊ ಸಂಬಂಧಪಟ್ಟ ಜಟಿಲ ವಿಚಾರಗಳನ್ನಾಗಲಿ ರಾಷ್ಟ್ರಪತಿಯ ಮುಂದಿಡುವುದರಿಂದ ಸಮಸ್ಯೆ ಪರಿಹಾರದ ಸುಲಭದ ದಾರಿ ಗೋಚರವಾಗುವ ಸಾಧ್ಯತೆಗಳನ್ನು ನಿರಾಕರಿಸಲಾಗುವುದಿಲ್ಲ, ಅದನ್ನು ಸಂವಿಧಾನವೂ ಬಯಸುತ್ತದೆ. ಪ್ರಧಾನ ಮಂತ್ರಿ ಚುನಾಯಿತ ಸರಕಾರದ ಮುಖ್ಯಸ್ಥನಾದರೂ, ಅವರ ಅಧಿಕಾರಗಳಿಗೆ ಸದುದ್ದೇಶದ ಮಿತಿಗಳನ್ನು ಹಾಕುವುದೇ ಈ ನಿಯಮಗಳ ಉದ್ದೇಶವಾಗಿದೆ. ಮಿತಿಗಳೇ ಇಲ್ಲದ ಅಧಿಕಾರಗಳಿರುವ ಪ್ರಧಾನ ಮಂತ್ರಿ ಸರ್ವಾಧಿಕಾರಿಯಾಗಿ ಬೆಳೆಯಬಹುದು. ಕಡಿವಾಣ ಹಾಕಲು ಸಂಸತ್ತು ಇದ್ದರೂ ಅದೂ ಕೂಡ ಪಕ್ಷವೊಂದರ ನಿಯಂತ್ರಣದಲ್ಲಿರುತ್ತದೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಜೈಲ್ ಸಿಂಗರು ಎತ್ತಿರುವ ಪ್ರಶ್ನೆಗಳೆಲ್ಲವೂ ಅತ್ಯಂತ ಪ್ರಸ್ತುತವಾದವುಗಳು. ನಮ್ಮ ಪ್ರಧಾನ ಮಂತ್ರಿ ಆಡಳಿತೆಯ ರೀತಿ-ರಿವಾಜುಗಳಲ್ಲಿ ಸತ್ಸಂಪ್ರದಾಯಗಳನ್ನು ಪಾಲಿಸುವುದರಲ್ಲಿ ಹಾಗೂ ನಿರ್ಮಿಸುವುದರಲ್ಲಿ ಸೋಲುತ್ತಿರುವುದನ್ನು ಈ ಪ್ರಕರಣ ತೋರಿಸುತ್ತದೆ. ಹೀಗಾಗಿರುವುದಕ್ಕೆ ಅವರ 'ಅಹಂ' ಕಾರಣವಿರಬಹುದೆಂಬುದನ್ನು ರಾಷ್ಟ್ರಾಧ್ಯಕ್ಷರು ನಮೂದಿಸಿರುವ ಪ್ರಕರಣಗಳು ಸ್ಪಷ್ಟಪಡಿಸುತ್ತವೆ. ಜನತಂತ್ರವು ವ್ಯಕ್ತಿಯೋರ್ವನಿಂದ ಬೆಳೆಯುವುದಿಲ್ಲ. ವ್ಯಕ್ತಿಗಳ ಕೂಟದಿಂದಲೂ ಸತ್ಸಂಪ್ರದಾಯಗಳಿಂದಲೂ ಬೆಳೆಯುತ್ತದೆ. ಇದನ್ನು ನಮ್ಮ ಪ್ರಧಾನ ಮಂತ್ರಿಗಳೂ ಅವರ ಪಕ್ಷದ ಇತರ ನಾಯಕರೂ ಮನನ ಮಾಡಿದರೆ ದೇಶಕ್ಕೆ ಹಿತವಾದೀತು.

ಮುಂಗಾರು
ಬುಧವಾರ, ಮಾರ್ಚ್ 18, 1987

ಭಾರತದ ಹೊಣೆಗಾರಿಕೆ

ಶ್ರೀಲಂಕೆಯ ಕ್ಷೋಭೆಯು ಭಾರತ–ಶ್ರೀಲಂಕಾಗಳ ಸಂಬಂಧದಲ್ಲಿ ಹೊಸತಾದ ಗಂಭೀರ ಆಯಾಮವೊಂದನ್ನು ಉಂಟುಮಾಡಿದೆ. ತಮಿಳರೇ ಹೆಚ್ಚಾಗಿರುವ ಜಾಫ್ನಾ ಪ್ರಾಂತಕ್ಕೆ ಆಹಾರ ಹಾಗೂ ಇಂಧನಗಳನ್ನು ಪೂರೈಕೆ ಮಾಡದೇ ಇರುವ ಶ್ರೀಲಂಕಾ ಸರಕಾರದ ನಿರ್ಧಾರದಿಂದಾಗಿ ಈ ಪ್ರಸಂಗವು ಬಂದಿದೆ. ಜಾಫ್ನಾಕ್ಕೆ ತೈಲ ಹಾಗೂ ಆಹಾರ ದಿಗ್ಬಂಧನ ಹೇರುವ ಶ್ರೀಲಂಕಾ ಸರಕಾರದ ನಿರ್ಧಾರವು ಈ ವರ್ಷದ ಜನವರಿ ಎರಡನೇ ದಿನಾಂಕದಂದು ಜಾರಿಗೆ ಬಂತು. ಜಾಫ್ನಾ ಹಾಗೂ ಇನ್ನಿತರ ತಮಿಳು ಪ್ರಾಬಲ್ಯದ ಪ್ರಾಂತಗಳ ನಾಗರಿಕ ಆಡಳಿತವನ್ನು ವಶಕ್ಕೆ ತೆಗೆದುಕೊಳ್ಳುವ ತಮಿಳು ಟೈಗರ್ಸ್‌ನವರ ಘೋಷಣೆಯ ಮರುದಿನವೇ ಇಂತಹ ಪ್ರತೀಕಾರ ಕ್ರಮವನ್ನು ಶ್ರೀಲಂಕಾ ಸರಕಾರ ತೆಗೆದುಕೊಂಡಿತ್ತು.

ಒಂದು ಸರಕಾರವು ತನ್ನ ಪ್ರಜೆಗಳ ಮೇಲೆಯೇ ಇಂತಹ ಪ್ರತೀಕಾರದ, ದಮನಕಾರಿ ಕ್ರಮವನ್ನು, ದೌರ್ಜನ್ಯವನ್ನು ನಡೆಸುತ್ತಿರುವುದನ್ನು ನೆರೆ ದೇಶವಾದ ಭಾರತವು ಎರಡು ತಿಂಗಳುಗಳಿಗೂ ಹೆಚ್ಚು ಕಾಲ ಆತಂಕದಿಂದ ನೋಡುತ್ತ ಬಂದಿದೆ. ಪ್ರಚೋದನೆ ಏನೇ ಇರಲಿ ಇಂತಹ ಕ್ರಮವನ್ನು ಮಾತ್ರ ಯಾವ ಸರಕಾರವೂ ಮಾಡಬಾರದು. ಒಂದು ಜನಸಮುದಾಯದ ಉಸಿರನ್ನೊತ್ತಿ ಹಿಡಿದು, ಗಂಟಲು ಬಿಗಿದು ಸಾಯಿಸುವುದು ತೀರಾ ಅಮಾನವೀಯವಾದ ಕೃತ್ಯವಾಗಿದೆ; ಕರುಣೆಯ ಲವಲೇಶವೂ ಇಲ್ಲದಂತಹ ರಕ್ಕಸ ಕುಲ ಮಾತ್ರವೇ ಮಾಡುವಂತಹ ದೌರ್ಜನ್ಯವಾಗಿದೆ.

ಕೊನೆಗೂ ಭಾರತವು ಹಸ್ತಕ್ಷೇಪ ನಡೆಸಬೇಕಾದಂತಹ ಕಾಲ ಘಟ್ಟ ಬಂದಿದೆ. ಇಂಧನ ಹಾಗೂ ಆಹಾರ ಪೂರೈಕೆ ನಿಲ್ಲಿಸಿದ ಪರಿಣಾಮವಾಗಿ ಶ್ರೀಲಂಕೆಯ ಉತ್ತರದ ಪ್ರಾಂತಗಳಲ್ಲಿ ಹಾಹಾಕಾರ ಎದ್ದಿದೆ. ಸಾರಿಗೆ ಸ್ಥಗಿತವಾಗಿದೆ. ಜನಜೀವನ ನಿಶ್ಚಲವಾಗಿದೆ. ಜನ ಆಹಾರವಿಲ್ಲದೆ ಪರದಾಡ ತೊಡಗಿದ್ದಾರೆ. ಜನರಿಗೂ ತಮಿಳು ಹೋರಾಟಗಾರರಿಗೂ ಯಾವ ಸರಕು–ಸರಂಜಾಮು ಪೂರೈಕೆಯೂ ಆಗದಂತೆ ನೋಡಿಕೊಂಡು ಈ ಜನಾಂಗವನ್ನು ಮಣಿಸಿ ಶರಣಾಗಿಸಿಕೊಳ್ಳುವುದೇ ಶ್ರೀಲಂಕಾ ಸರಕಾರದ ಈ ಕಾರ್ಯಾಚರಣೆಯ ಉದ್ದೇಶವಾಗಿತ್ತು. ಅಂತರ್ಯುದ್ಧ ಪರಿಸ್ಥಿತಿಗಿಂತಲೂ ಒಂದು ಹೆಜ್ಜೆ ಮುಂದಿನ ಹಂತ ಇದಾಗಿದೆ. ಜಾಫ್ನಾ ಮತ್ತಿತರ ಉತ್ತರದ ಪ್ರಾಂತಗಳು ತನಗೆ ಸೇರಿದ್ದೇ ಅಲ್ಲ, ಅವು ಪರಕೀಯ ಪ್ರಾಂತಗಳು ಎಂದು ಶ್ರೀಲಂಕೆ ಸರಕಾರ ತಾತ್ವಿಕವಾಗಿ ಸಾರಿದಂತಾಗಿದೆ. ಶತ್ರು ರಾಜ್ಯವೊಂದನ್ನು ನಡೆಸಿಕೊಳ್ಳುವ ರೀತಿಯಲ್ಲಿ ಜಾಫ್ನಾವನ್ನು ಶ್ರೀಲಂಕಾ ಸರಕಾರ ನಡೆಸಿಕೊಂಡಿದೆ.

ಶ್ರೀಲಂಕಾ ಕ್ಷೋಭೆಯಲ್ಲಿ ಭಾರತದ ಪಾತ್ರ ಕೇವಲ ನೆರೆ ದೇಶದ್ದಲ್ಲ. ಅದಕ್ಕಿಂತಲೂ ದೊಡ್ಡ ಹೊಣೆಗಾರಿಕೆ ಅದಕ್ಕುಂಟು. ಇಂದು ನಡೆದಿರುವ ಈ ದೊಡ್ಡ ವಿವಾದವು ಭಾರತೀಯ ಮೂಲದವರಿಗೆ ಸಂಬಂಧಪಟ್ಟಂತೆ ಉಂಟಾಗಿರುವಂತಹದ್ದು. ತಮಿಳರ ಸ್ಥಾನಮಾನಗಳಿಗೆ, ಶ್ರೀಲಂಕೆಯಲ್ಲಿ ಅವರಿಗೆ ಸಲ್ಲಬೇಕಾದ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ ಭಾರತ–ಶ್ರೀಲಂಕೆಗಳ ನಡುವೆ ಬಹುಕಾಲದಿಂದ ಸಂವಾದ ನಡೆದುಬಂದಿದೆ. ಅನೇಕ ತಮಿಳರಿಗೆ ಶ್ರೀಲಂಕೆ ಪೌರತ್ವವನ್ನು ನೀಡುವ ಹಾಗೂ ಅನೇಕರನ್ನು ಭಾರತ ಹಿಂದೆ ಕರೆಸಿಕೊಳ್ಳುವ ಒಪ್ಪಂದವೂ ಆಗಿದೆ. ಅನೇಕ ಲಕ್ಷ ಮಂದಿ ಭಾರತಕ್ಕೆ ಮರಳಿದ್ದಾರೆ. ದಕ್ಷಿಣ ಭಾರತದ ರಬ್ಬರು, ಚಹ ಮತ್ತಿತರ ತೋಟಗಳಲ್ಲಿ ಅವರಿಗೆ ಉದ್ಯೋಗ ಒದಗಿಸಲಾಗಿದೆ. ಕೇವಲ ನೆರೆಹೊರೆಯ ಸಂಬಂಧಕ್ಕಿಂತಲೂ ಹೆಚ್ಚಿನದಾದ ಸಂಬಂಧ ಶ್ರೀಲಂಕೆಯ ಜತೆ ಹೀಗೆ ಭಾರತಕ್ಕಿರುವುದರಿಂದ ಸದ್ಯದ ಕ್ಷೋಭೆಗೆ ಸಂಬಂಧಪಟ್ಟಂತೆ ಹೆಚ್ಚಿನ ಹೊಣೆಗಾರಿಕೆಯೂ ಭಾರತಕ್ಕಿದೆ.

ಈ ಹಿನ್ನೆಲೆಯಲ್ಲಿ ಶ್ರೀಲಂಕೆ ಸರಕಾರ ತಮಿಳು ಜನಾಂಗದ ಉಸಿರನ್ನು ಒತ್ತಿ ಹಿಡಿದು ಸಾಯಿಸುವಂತಹ ಸಂದರ್ಭದಲ್ಲಿ ಹಸ್ತಕ್ಷೇಪ ನಡೆಸಲೇ ಬೇಕಾದ ಅನಿವಾರ್ಯ ಪ್ರಾರಬ್ಧ ಭಾರತಕ್ಕೆ ಬಂದಿದೆ. ಅದು ಎರಡು ತಿಂಗಳು ಕಾದದ್ದೇ ಸಾಕಷ್ಟಾಯಿತು. ಇದೀಗ ತಮಿಳು ಸಮುದಾಯಗಳಿಗೆ ಮಾನವೀಯ ನೆಲೆಯಲ್ಲಿ ಆಹಾರ, ಔಷಧಿ ಹಾಗೂ ಇಂಧನವನ್ನು ಒದಗಿಸುವ ತನ್ನ ನಿರ್ಧಾರವನ್ನು ಭಾರತ ಸರಕಾರ ಶ್ರೀಲಂಕೆಗೆ ತಿಳಿಸಿದೆ. ಹೀಗೆ ಮಾಡುವುದಕ್ಕೆ ಪಾಕ್ ಜಲಸಂಧಿಯ ಶ್ರೀಲಂಕಾ ನೌಕಾಸೇನೆಯ ದಿಗ್ಬಂಧನವನ್ನು ಮುರಿದು ಭಾರತ ಒಳ ನುಗ್ಗಬೇಕಾದೀತು – ಇದು ಮಿಲಿಟರಿ ಹಸ್ತಕ್ಷೇಪವೆನಿಸುವುದು ಎಂದು ಶ್ರೀಲಂಕಾ ಸರಕಾರದ ವರ್ತುಲಗಳು ಅಭಿಪ್ರಾಯಪಟ್ಟಿವೆ. ಅಂದರೆ ತೀರಾ ಗಂಭೀರ ರೂಪದ ರಾಜಕೀಯ ಹಾಗೂ ಸೈನಿಕ ಬಿಕ್ಕಟ್ಟು ಈ ಉಪಖಂಡದ ದಕ್ಷಿಣ ತುದಿಯಲ್ಲಿ ಉಂಟಾಗುವ ಸಾಧ್ಯತೆಗಳು ನಿಚ್ಚಳವಾಗಿವೆ.

ಆದರೆ ಪರಿಸ್ಥಿತಿ ಆ ಹಂತಕ್ಕೆ ಮುಟ್ಟುವ ಲಕ್ಷಣಗಳಿಲ್ಲ. ಶ್ರೀಲಂಕಾ ಸರಕಾರ ಬುದ್ಧಿ ತಿಳಿದು ತೈಲ–ಆಹಾರ ದಿಗ್ಬಂಧನವನ್ನು ತೆಗೆಯುವ ಸೂಚನೆಗಳಿವೆ. ಪರಿಸ್ಥಿತಿ ಬಿಗಡಾಯಿಸದೆ ಇರಬೇಕಾದರೆ ಅದು ವಿವೇಕ ತಿಳಿದು ವ್ಯವಹರಿಸಲೇ ಬೇಕಾಗುತ್ತದೆ. ವಾಸ್ತವಿಕತೆಯನ್ನು ಅರಿತು ತಮಿಳರೊಡನೆ ಒಡಂಬಡಿಕೆಗೆ ಬರುವುದು, ಅವರ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಪೂರೈಸುವುದು, ಆಡಳಿತ ಸ್ವಾಯತ್ತೆಯನ್ನು ಕೊಡಮಾಡುವುದು ಇಂತಹ ವಿವೇಕಯುತವಾದ ಪರಿಹಾರದ ಮುಂದಿನ ಹಂತವಾಗಿದೆ. ಅಂತಹ ಕ್ರಮದಿಂದ ಮಾತ್ರವೇ ಈ ಕ್ಷೋಭೆಗೆ ಪರಿಹಾರ, ಮಿಲಿಟರಿ ಕಾರ್ಯಾಚರಣೆಯಿಂದಲೂ ಅಲ್ಲ; ದಿಗ್ಬಂಧನದಿಂದಲೂ ಅಲ್ಲ. ಭಾರತವೂ ತನ್ನ ಹೆಜ್ಜೆಗಳನ್ನು ಈ ದಾರಿಯಲ್ಲೇ ಇರಿಸಬೇಕಾಗಿದೆ. ಅಗತ್ಯವುಳ್ಳ ಒತ್ತಡಗಳನ್ನು ಶ್ರೀಲಂಕೆಯ ಮೇಲೆ ಹೇರುವುದು ಅನಿವಾರ್ಯ. ಅದು ಯಾವುದೇ ದುರುದ್ದೇಶಕ್ಕಲ್ಲ. ಸಾಮ್ರಾಜ್ಯ ವಿಸ್ತರಣೆಗಾಗಿ ಅಲ್ಲ; ಜನಸಮೂಹವೊಂದರ ಆಶೋತ್ತರಗಳ ಪೂರೈಕೆಗಾಗಿ. ಈಗ ಭಾರತ ಇರಿಸಿರುವುದು ಇದೇ ದಾರಿಯಲ್ಲಿ ಒಂದು ಸೂಕ್ತವಾದ ಹೆಜ್ಜೆ.

ಆದರೆ ಈ ಕಾರ್ಯದಲ್ಲಿ ಭಾರತ ಸರಕಾರ ತುಂಬ ಎಚ್ಚರದಿಂದಲೂ ಮುತ್ಸದ್ದಿತನದಿಂದಲೂ ವ್ಯವಹರಿಸಬೇಕಾದ ಅಗತ್ಯವುಂಟು.

ಮುಂಗಾರು

ಮಂಗಳವಾರ ಮಾರ್ಚ್ 24, 1987

ದಯಪಾಲಿಸುವ ದೊರೆತನ

ಸಂಪನ್ಮೂಲದ ವರ್ಗಾವಣೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಈ ಬಗ್ಗೆ ಅಧ್ಯಯನ ನಡೆಸಿರುವ ಭಾರತೀಯ ಸಾಮಾಜಿಕ-ಆರ್ಥಿಕ ಅಧ್ಯಯನ ಸಂಸ್ಥೆಯು ತೀರ್ಮಾನಕ್ಕೆ ಬಂದಿದೆ. ಕಳೆದ 35 ವರ್ಷಗಳ ಸಂಪನ್ಮೂಲದ ವರ್ಗಾವಣೆಯನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು ಈ ಮೊತ್ತ ಈ ಅವಧಿಯಲ್ಲಿ 37 ಪಟ್ಟು ಜಾಸ್ತಿಯಾಗಿರುವುದು ಕಂಡು ಬಂದರೂ ತಲಾವಾರು ಲೆಕ್ಕದಲ್ಲಿ ರಾಜ್ಯಕ್ಕೆ ಅನ್ಯಾಯವಾಗಿರುವುದನ್ನು ತೋರಿಸಿಕೊಟ್ಟಿದೆ.

ಕೇಂದ್ರದಿಂದ ಸಂಪನ್ಮೂಲ ವರ್ಗಾವಣೆಯ ರಾಷ್ಟ್ರೀಯ ತಲಾವಾರು ಸರಾಸರಿ ವಾರ್ಷಿಕ 1520 ರೂಪಾಯಿಗಳಾಗಿದ್ದರೆ ಕರ್ನಾಟಕಕ್ಕೆ ಸಿಕ್ಕಿದ್ದು ಕೇವಲ 805 ರೂಪಾಯಿ ಮಾತ್ರ. ಭೂ ವಿಸ್ತಾರದಲ್ಲಿ ಏಳನೆಯದೂ ಜನಸಂಖ್ಯೆಯಲ್ಲಿ ಎಂಟನೆಯದೂ ಆಗಿರುವ ಈ ರಾಜ್ಯ ಸಂಪನ್ಮೂಲ ವರ್ಗಾವಣೆಯಲ್ಲಿ ಮಾತ್ರ 15ನೇ ಸ್ಥಾನಕ್ಕೆ ಇಳಿದಿದೆ. ಸಣ್ಣ ಉಳಿತಾಯ ಸಾಲ ಮಂಜೂರಾತಿ ರಾಷ್ಟ್ರೀಯ ಸರಾಸರಿ ತಲಾ 96 ರೂಪಾಯಿ ಆಗಿದ್ದರೆ ಕರ್ನಾಟಕಕ್ಕೆ ದೊರೆತದ್ದು 78 ರೂಪಾಯಿ ಮಾತ್ರ. ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ನೀಡಲಾಗುವ ಕೇಂದ್ರೀಯ ಪರಿಹಾರವು ರಾಷ್ಟ್ರೀಯ ಸರಾಸರಿ ರೂ.28 ಆಗಿದ್ದರೆ ಕರ್ನಾಟಕದ್ದು ರೂ.25 ಮಾತ್ರವೆಂದು ಅಧ್ಯಯನ ಹೇಳುತ್ತದೆ.

ಇಂತಹ ಪಕ್ಷಪಾತವನ್ನು ನಿವಾರಿಸಲು ಸಂಪನ್ಮೂಲ ವರ್ಗಾವಣೆಯ ಮಾನದಂಡವನ್ನು ನಿಖರವಾಗಿ ನಿರ್ಧರಿಸಲು ಸರಕಾರೇತರ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದೂ ವರ್ಗಾವಣೆಯ ಮೇಲ್ವಿಚಾರಣೆಗೆ ಸಲಹಾ ಸಮಿತಿಯೊಂದನ್ನು ನೇಮಿಸಬೇಕೆಂದೂ ಅಧ್ಯಯನ ಸಂಸ್ಥೆಯು ಅಭಿಪ್ರಾಯ ಪಟ್ಟಿದೆ.

ಸಂಪನ್ಮೂಲ ವರ್ಗಾವಣೆಯಲ್ಲಿ ಪಕ್ಷಪಾತ ಉಂಟಾಗಿರುವುದಕ್ಕೆ ಸ್ಪಷ್ಟ ಮಾನದಂಡದ ಅಭಾವ, ರಾಜಕೀಯ ಪರಿಗಣನೆಗಳು ಆದಷ್ಟು ಹೆಚ್ಚು ನಿಯಂತ್ರಣ ಹೊಂದಬಯಸುವ ಕೇಂದ್ರ ಸರಕಾರದ ಧೋರಣೆ ಹಾಗೂ ಕರ್ನಾಟಕದಲ್ಲಿ "ರಾಜಕೀಯ ಇಚ್ಛಾಶಕ್ತಿ"ಯ ಅಭಾವ ಕಾರಣವೆಂಬ ತೀರ್ಮಾನಕ್ಕೆ ಅಧ್ಯಯನ ಸಂಸ್ಥೆಯು ಬಂದಿದೆ. ಈ ವಿಚಾರಗಳು ಬಹುಮಟ್ಟಿಗೆ ಸರಿ ಎಂದು ನಮಗನಿಸುತ್ತದೆ. ಯಾವುದೇ ಒಂದು ಕಾರಣಕ್ಕಿಂತ ಇವೆಲ್ಲ ಕಾರಣಗಳು ತಂತಮ್ಮ ಪಾಲು ಸಲ್ಲಿಸಿದ ಪರಿಣಾಮವಾಗಿ ಈ ಪಕ್ಷಪಾತವು ಉಂಟಾಗಿದೆ ಎಂದು ತಿಳಿಯಬೇಕಾಗುತ್ತದೆ. ಅಧ್ಯಯನವು ಕರ್ನಾಟಕವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಈ ವಿಷಯಗಳನ್ನು ಬಹಿರಂಗಕ್ಕೆ ತಂದಿದ್ದರೂ ಹೀಗೆ ಕೇಂದ್ರ ಸರಕಾರದ ಜತೆ ಸದಾಕಾಲವು ನೇರ ನಿಕಟ ಸಂಪರ್ಕವಿಟ್ಟುಕೊಂಡು ಒಪ್ಪೈಸಲಾಗದ ಇತರ ಅನೇಕ ರಾಜ್ಯಗಳು ಕೂಡ ಸಂಪನ್ಮೂಲ ವರ್ಗಾವಣೆಯಲ್ಲಿ ಮಲತಾಯಿ ಧೋರಣೆಗೆ ಒಳಗಾದ ನಿದರ್ಶನಗಳು ಖಂಡಿತವಾಗಿ ಸಿಗಬಹುದು. ತೆರಿಗೆ ಸಂಪನ್ಮೂಲ ವರ್ಗಾವಣೆ ಮಾತ್ರವೇ ಅಲ್ಲದೆ ಕೇಂದ್ರ ಸರಕಾರದ ಇಲಾಖೆಗಳು ಹಾಗೂ ಕೇಂದ್ರ ವಿಭಾಗದ ಸಾರ್ವಜನಿಕ ಕ್ಷೇತ್ರದ ಉದ್ಯಮ ಸಂಸ್ಥೆಗಳ ಯೋಜನೆಗಳನ್ನು ರಚಿಸುವ ವಿಚಾರದಲ್ಲಿ ಕೂಡ ಕರ್ನಾಟಕ ಸಹಿತ ಕೆಲವಾರು ರಾಜ್ಯಗಳಿಗೆ ಅಪಾರ ಅನ್ಯಾಯ ನಡೆದದ್ದಿದೆ.

ಇದಕ್ಕೆಲ್ಲಾ ರಾಜಕೀಯ ಪರಿಗಣನೆ ಒಂದೇ ಕಾರಣವೆಂದು ಹೇಳುವುದಕ್ಕಾಗುವುದಿಲ್ಲ. ಈ ದೇಶದಲ್ಲಿ ಬಹುಕಾಲ ಕೇಂದ್ರದಲ್ಲಿಯೂ ರಾಜ್ಯಗಳಲ್ಲಿಯೂ ಒಂದೇ ಪಕ್ಷದ ಸರಕಾರಗಳೇ ಇದ್ದುದು ಹೆಚ್ಚು. ಕರ್ನಾಟಕದ ವಿಚಾರದಲ್ಲಿಯೂ ಇದು ನಿಜವೇ. ಈ ರಾಜ್ಯದಲ್ಲಿ ಕಾಂಗ್ರೆಸ್ಸೇತರ ಸರಕಾರ ಅಧಿಕಾರದಲ್ಲಿ ತಳವೂರಿದ್ದುದು ಇತ್ತೀಚೆಗಿನ ವಿದ್ಯಮಾನ. ಮೊದಲು ಹಾಗಿರಲಿಲ್ಲ. ಬೇರೆ ಕೆಲವು ರಾಜ್ಯಗಳ (ಉದಾಹರಣೆಗೆ ಈಶಾನ್ಯ ಗಡಿಯಲ್ಲಿರುವವು) ವಿಷಯದಲ್ಲಿಯೂ ಇದು ನಿಜ. ಆದರೂ ಸಂಪನ್ಮೂಲ ವರ್ಗಾವಣೆಯಲ್ಲಿ ಪಕ್ಷಪಾತ ನಡೆದಿದೆ. ಇದರಿಂದಾಗಿ ಪ್ರಾದೇಶಿಕ ಅಸಮತೋಲನ ಬಹಳವಾಗಿ ಸಂಬಂಧಿಸಿದೆ.

ಕೇಂದ್ರದಲ್ಲಿ ಪ್ರಭಾವಶಾಲಿಗಳಾದ ರಾಜಕಾರಣಿಗಳು ತಂತಮ್ಮ ರಾಜ್ಯಗಳಿಗೆ ಹೆಚ್ಚು ಸಂಪನ್ಮೂಲ ವರ್ಗಾವಣೆಯಲ್ಲಿ ಮುತುವರ್ಜಿ ವಹಿಸಿದ್ದುಂಟು. ಅವರ ಆಶಯಗಳನ್ನು ಕೇಂದ್ರದ ನೌಕರಶಾಹಿಯು ಉತ್ಸಾಹದಿಂದಲೇ ಆಚರಿಸಿದ್ದುಂಟು. ಹಾಗೆ ನೋಡಿದರೆ ಕೇಂದ್ರದ ನೌಕರಶಾಹಿಯೇ ಈ ವಿಚಾರದಲ್ಲಿ ಮುಖ್ಯ ಅಪರಾಧಿಯೆನ್ನದೆ ವಿಧಿಯಿಲ್ಲ. ವಿಧಿ ನಿಯಮಗಳು ಏನೇ ಹೇಳಲಿ, ನೌಕರಶಾಹಿಯು ಅವುಗಳನ್ನೆಲ್ಲ ತನಗೆಬೇಕಾದಂತೆ ಬಗ್ಗಿಸಿಕೊಂಡು ವ್ಯವಹರಿಸುವ ಸಂದರ್ಭವೇ ಜಾಸ್ತಿ. ಸರಕಾರದ ಕಾರ್ಯದರ್ಶಿಗಳು, ಯೋಜನಾ ಆಯೋಗದವರು, ತಮಗಿಷ್ಟ ಬಂದ ರಾಜ್ಯಕ್ಕೆ ಇಷ್ಟ ಬಂದಷ್ಟು ಹಣ ಕೊಡುವ ಪ್ರವೃತ್ತಿಯ ಪರಿಣಾಮವೇ ಈಗ ಉಂಟಾಗಿರುವ ಪಕ್ಷಪಾತ.

ಮಾನದಂಡ ಬದಲಾವಣೆ ಮಾಡಿದರೆ, ಕಟ್ಟುನಿಟ್ಟಿನ ನಿಯಮ ಮಾಡಿದರೆ ಈ ಅನ್ಯಾಯ ಸರಿಯಾದೀತು ಎಂಬ ವಿಶ್ವಾಸ ಕೇವಲ ಭ್ರಮೆ. ಕಾನೂನು ಆಯೋಗವು ಕಾಲದಿಂದ ಕಾಲಕ್ಕೆ ರಾಜ್ಯಗಳಿಗೆ ಹಣ ಹಂಚಿಕೊಡುವ ಮಾನದಂಡವನ್ನು ನಿಷ್ಕರ್ಷೆ ಮಾಡಿದೆ. ಅದನ್ನು ಪಾಲಿಸಿದವರು ಕಡಿಮೆ. ಕೇಂದ್ರದಲ್ಲಿ ಹೆಚ್ಚು ವಶೀಲಿಯುಳ್ಳ ರಾಜ್ಯಗಳವರು ದೆಹಲಿಯಿಂದ ಹಣ ಬಾಚಿಕೊಂಡು ಬಂದಿದ್ದಾರೆ; ಉಳಿದವರಿಗೆ ಚಿಕ್ಕಾಸು ಸಂದಿದೆ.

ಈ ಅನ್ಯಾಯ, ಪಕ್ಷಪಾತ ಹೋಗಲಾಡಿಸಲು ಹೊಸ ಮಾನದಂಡ ಮಾಡುವುದೂ ಕಾವಲು ಸಮಿತಿ ಮಾಡುವುದೂ ಪರಿಹಾರ ಅಲ್ಲ. ಕೇಂದ್ರವು ತನ್ನ ಕೈಗಳಲ್ಲಿ ಕೇಂದ್ರೀಕರಿಸಿಕೊಂಡ ಅಧಿಕಾರಗಳನ್ನು ಬಿಟ್ಟುಕೊಡುವುದೇ ಪರಿಹಾರ, ಆರ್ಥಿಕ ಆಡಳಿತೆಯ ವ್ಯವಸ್ಥೆಯೇ ಬದಲಾಗಬೇಕು, ಕೇಂದ್ರದ ಉಸ್ತುವಾರಿಯ ಕ್ಷೇತ್ರ ಕಡಿಮೆಯಾಗಬೇಕು, ದೇಶದ ಆಗು ಹೋಗುಗಳ ಬಗೆಗಿನ ಅದರ ಉಸಾಬರಿ ಈಗ ಮಿತಿಗಿಂತ ಹೆಚ್ಚಾಗಿದೆಯೆಂದೇ ಈ ಎಲ್ಲಾ ಅನಾಹುತ ಉಂಟಾಗುತ್ತಿದೆ. ಕೇವಲ ರಾಜ್ಯದ ಪಟ್ಟಿಗೆ ಸೇರಿದ, ಕೇಂದ್ರಕ್ಕೆ ಸಂಬಂಧವೇ ಇಲ್ಲದ ವಿಚಾರಕ್ಕೂ ಕೇಂದ್ರದಲ್ಲಿ ಮಂತ್ರಿಯೂ ಹಲವಾರು ಸೆಕ್ರೆಟರಿಗಳೂ ಉಳ್ಳಂತಹ ಒಂದು ಇಲಾಖೆಯುಂಟು. ಇದೆಲ್ಲ ಅನಗತ್ಯವಾದ ಉಸಾಬರಿ. ರಾಜಕೀಯ ಹಾಗೂ ಆರ್ಥಿಕ ಅಧಿಕಾರಗಳನ್ನು ಕೇಂದ್ರೀಕರಿಸಿಕೊಳ್ಳುವ ಒಂದೇ ಉದ್ದೇಶದಿಂದ ಇದೆಲ್ಲ ಆಗಿದೆ. ಈ ಪ್ರಕ್ರಿಯೆಯಲ್ಲಿ ಸಂವಿಧಾನದ ವಿಧಿನಿಯಮಗಳೆಲ್ಲ ಅರ್ಥ ಕಳೆದುಕೊಂಡು ಜಡವಾಗಿವೆ. ಜನರ ಆಶಯವೇ ಒಂದು-ನಡೆಯುತ್ತಿರುವುದೇ ಇನ್ನೊಂದು.

ರಾಜ್ಯಗಳಿಗೆ ಪಕ್ಷಪಾತ, ಪ್ರಾದೇಶಿಕ ಅಸಮತೋಲ ಇವಾವುವಕ್ಕೂ ಅವಕಾಶ ಇಲ್ಲದಂತಾಗಬೇಕಿದ್ದರೆ, ಆರ್ಥಿಕ ಹಾಗೂ ದೈನಂದಿನ ಆಡಳಿತೆಯನ್ನು ಕೇಂದ್ರವು ರಾಜ್ಯಗಳಿಗೆ ಬಿಟ್ಟುಕೊಡಬೇಕು. ಇದನ್ನೇ ಆಡಳಿತೆಯ ವಿಕೇಂದ್ರೀಕರಣವೆನ್ನುವುದು. ರಕ್ಷಣೆ, ಸಂಪರ್ಕ, ನಾಣ್ಯಮುದ್ರಣ ಹಾಗೂ ವಿದೇಶ ವ್ಯವಹಾರಗಳನ್ನು ಮಾತ್ರ ನೋಡಿಕೊಂಡು ಉಳಿದುವೆಲ್ಲವನ್ನೂ ರಾಜ್ಯಗಳ ಉಸ್ತುವಾರಿಗೆ ಬಿಡುವುದರಿಂದ ಪಕ್ಷಪಾತವನ್ನೂ ಅನ್ಯಾಯವನ್ನೂ ಹೋಗಲಾಡಿಸುವುದು ಸಾಧ್ಯ. ಈಗಿನ ವ್ಯವಸ್ಥೆಯಲ್ಲಿ ಕೇಂದ್ರದವರು ದಯಪಾಲಿಸುವ ದೊರೆಗಳಾಗುತ್ತಾರೆ. ರಾಜ್ಯಗಳು ಕೈಯೊಡ್ಡಿ ಬೇಡುವ ಮುನಿಸಿಪಾಲಿಟಿಗಳಾಗುತ್ತವೆ. ವ್ಯವಸ್ಥೆಯನ್ನು ಹೀಗೇ ಇರಿಸಿಕೊಂಡು ನಿಯಮ ತಿದ್ದುವುದರಿಂದ ಯಾವ ಬದಲಾವಣೆಯೂ ಆಗದು.

ಮುಂಗಾರು

ಬುಧವಾರ, ಮಾರ್ಚ್ 25, 1987

ಎಡವಿದರೂ ಎದ್ದು ನಡೆಯ ಬೇಕು

ಭಾರತ ಮಂಗಳವಾರ ಉಡಾಯಿಸಿದ ಎರಡನೇ ಪೀಳಿಗೆಯ ಬಾಹ್ಯಾಕಾಶ ವಾಹಕ ಎಎಸ್ಸೆಲ್ವಿ ತನ್ನ ಎರಡನೆ ಹಂತದ ಮೋಟರಿನಲ್ಲಿ ಯಾವುದೋ ದೋಷವನ್ನು ಹೊಂದಿ ಬಂಗಾಳಕೊಲ್ಲಿಗೆ ಬಿದ್ದಿದೆ. ಭಾರತದ ಬಾಹ್ಯಾಕಾಶ ಕಾರ್ಯಕ್ರಮದಲ್ಲಿ ಇದೊಂದು ಹಿನ್ನಡೆಯಂತೂ ಹೌದು; ಆದರೆ ಪ್ರಧಾನಿ ರಾಜೀವ ಗಾಂಧಿಯವರು ವರ್ಣಿಸಿದಂತೆ ಈ ಹಿನ್ನಡೆಯು ಸಮಯಕ್ಕೆ ಸಂಬಂಧಿಸಿದ ವಿಚಾರವಷ್ಟೇ ಹೊರತು ವೈಜ್ಞಾನಿಕವಾದುದಲ್ಲ. ನಿಯಂತ್ರಣ ವ್ಯವಸ್ಥೆಯಲ್ಲಿ ಎಲ್ಲಿಯೋ ದೋಷ ಉಂಟಾಗಿರಬೇಕು. ಆದ್ದರಿಂದಲೇ ಈ ಅಪಘಾತ ನಡೆದಿದೆ.

ಸುಮಾರು ಮೂರು ನಿಮಿಷಗಳ ಕಾಲ ಗಗನದಲ್ಲಿ ಪ್ರಯಾಣಿಸಿದ ವಾಹನವು ಬಳಿಕ ವಿಫಲಗೊಂಡು ಸಮುದ್ರಕ್ಕೆ ಬಿದ್ದಿತು ಎಂದು ವಿಜ್ಞಾನಿಗಳು ಪ್ರಕಟಿಸಿದ್ದಾರೆ. ಎರಡನೆ ಹಂತದ ಮೋಟಾರು ಉರಿದರೂ ಆ ಹಂತವು ವಾಹನದಿಂದ ಕಳಚಿ ಕೊಳ್ಳುವ ಘಟ್ಟದಲ್ಲಿ ಕಳಚಿ ಕೊಳ್ಳುವ ವೇಳೆಯಲ್ಲಿ ಹೆಚ್ಚು ಕಡಿಮೆಯಾಗಿ ಈ ಅಪಘಾತ ನಡೆದಿರ ಬೇಕೆಂದು ಅವರು ಅಂದಾಜಿಸಿದ್ದಾರೆ. ವಾಸ್ತವಿಕವಾಗಿ ನಡೆದುದೇನು. ಎಲ್ಲಿ ದೋಷ, ಯಾರ ಪ್ರಮಾದ ಎಂಬುದನ್ನು ಪರಿಶೀಲನೆಯಿಂದಷ್ಟೆ ತಿಳಿಯ ಬಹುದಾಗಿದೆ. ಈ ದೋಷ ಮುಂದಿನ ವಾಹನದ ಉಡಾವಣೆಯ ವೇಳೆ ಉಂಟಾಗದಂತೆ ಎಚ್ಚರವಹಿಸುವುದಕ್ಕೂ ಅಗತ್ಯ.

ಉಡಾವಣಾ ವಾಹನದ ಪ್ರಯಾಣದ ನಿಯಂತ್ರಣವು ಒಂದು ಅತ್ಯಂತ ಮಹತ್ವದ ಹೆಜ್ಜೆ. ಭೂ ಕೇಂದ್ರದ ವಿಜ್ಞಾನಿಗಳು ಮೊದಲೇ ನಿರ್ಧರಿಸಿದ ದಾರಿಯಲ್ಲಿ, ಮೊದಲೇ ನಿರ್ಧರಿಸಿದ ವೇಗದಲ್ಲಿ ವಾಹನವು ಸಾಗುವಂತೆ ಏರ್ಪಡಿಸುವುದು. ದಾರಿ ತಪ್ಪಿದರೆ ದೂರ ನಿಯಂತ್ರಣ ವ್ಯವಸ್ಥೆ ಮೂಲಕ ನಿರ್ದೇಶಗಳನ್ನು ಕಳುಹಿಸಿ ಸರಿದಾರಿಗೆ ತರುವುದು. ಅದು ಸಾಧ್ಯವಾಗದೆ ಇದ್ದ ವೇಳೆ ವಾಹನವು ಹುಚ್ಚು ಬಟ್ಟೆ ಹಾರ ತೊಡಗಿದರೆ ಗುಂಡಿಯೊತ್ತಿ ಇಡಿಯ ವಾಹನವನ್ನು ಸ್ಫೋಟಿಸಿ ನಾಶಪಡಿಸುವುದು-ಇವೆಲ್ಲವೂ ಈ ನಿಯಂತ್ರಣ ವ್ಯವಸ್ಥೆಯಲ್ಲಿ ಸೇರಿವೆ.

ಉಡಾವಣಾ ವಾಹನದ ಇಂಧನ ಸೃಷ್ಟಿ, ವಾಹನದ ವಿನ್ಯಾಸ ತಯಾರಿ, ಅದರ ಉಡಾವಣೆಯ ನಿಯಂತ್ರಣ, ಉಪಗ್ರಹವನ್ನು ಕಕ್ಷೆಯಲ್ಲಿ ನಿಲ್ಲಿಸುವ ಕಾರ್ಯಾಚರಣೆಯ ನಿಯಂತ್ರಣ-ಈ ಎಲ್ಲಾ ಹಂತಗಳನ್ನು ಕರಗತ ಮಾಡಿ ಕೊಳ್ಳುವುದು ಎಎಸ್ಸೆಲ್ವಿ ಕಾರ್ಯಾಚರಣೆಯ ಉದ್ದೇಶವಾಗಿತ್ತು. ಉಪಗ್ರಹದ ನಿರ್ಮಾಣ ಒಂದು ದೊಡ್ಡ ಸಾಧನೆಯೇನೂ ಅಲ್ಲ. ಬೇರೆ ಕೆಲವು ಮೂರನೇ ಜಗತ್ತಿನ ದೇಶಗಳೂ ಯುರೋಪಿನ ಕೆಲವು ಸಣ್ಣಪುಟ್ಟ ದೇಶಗಳೂ ಉಪಗ್ರಹಗಳನ್ನು ನಿರ್ಮಿಸಿವೆ. ಆದರೆ ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಕೊಂಡೊಯ್ದು ಕಕ್ಷೆಯಲ್ಲಿ ನೆಲೆಗೊಳಿಸುವ ಉಡಾವಣಾ ತಂತ್ರಜ್ಞಾನದ ಗಳಿಕೆ ಅತ್ಯಂತ ಮಹತ್ವದ ವಿಚಾರ. ಇದೀಗ ಭಾರತದ ಸಹಿತ ಜಗತ್ತಿನಲ್ಲಿ ಆರು ದೇಶಗಳು ಮಾತ್ರ ಈ ಸಾಮರ್ಥ್ಯವನ್ನು ಪಡೆದಿವೆ. (ಇತರ ದೇಶಗಳು: ಅಮೆರಿಕ, ರಶ್ಯ, ಇಂಗ್ಲಂಡ್, ಫ್ರಾನ್ಸ್, ಜಪಾನ್ ಹಾಗೂ ಚೀನ) ಬಾಹ್ಯಾಕಾಶ ವಾಹನದ ಮೊದಲ ಪೀಳಿಗೆಯಾದ ಎಸ್ಸೆಲ್ವಿ–3 ವಾಹನದ ಮುಖಾಂತರ ಈ ದಶಕದ ಆದಿಯಲ್ಲಿ ಈ ಪ್ರತಿಷ್ಠಿತರ ಕೂಟಕ್ಕೆ ಭಾರತ ಸೇರಿತು.

ಉಡಾವಣಾ ವಾಹನದ ತಂತ್ರ ಜ್ಞಾನದ ಗಳಿಕೆ ವಿಜ್ಞಾನ ಹಾಗೂ ತಂತ್ರಜ್ಞಾನ ರಂಗಗಳಲ್ಲಿ ಮಹತ್ವದ ಉತ್ತೇಜನವನ್ನು ನೀಡುತ್ತದೆ. ಬಾಹ್ಯಾಕಾಶ ಸಂಶೋಧನೆಯಿಂದ ಬರುವ ವ್ಯಾಪಕ ತಂತ್ರಜ್ಞಾನವು ಕೈಗಾರಿಕೆ ಹಾಗೂ ಇತರ ಸಾಮಾಜಿಕ ಆರ್ಥಿಕ ರಂಗಗಳಲ್ಲಿ ಅನೇಕ ಅಭಿವೃದ್ಧಿಗೆ ಕಾರಣವಾಗುತ್ತದೆ. ಬೇರೆಯವರ ಹಂಗಿಲ್ಲದೆ ಸಂಪರ್ಕ ಕ್ಷೇತ್ರದಲ್ಲಿಯೂ ಖನಿಜ ನಿಕ್ಷೇಪ ಶೋಧದಲ್ಲಿಯೂ ದೇಶವು ದಾಪುಗಾಲಿಟ್ಟು ಸಾಗಬಹುದಾಗಿದೆ. ಉಪಗ್ರಹ ಉಡಾವಣೆ ಕಾರ್ಯದಲ್ಲಿ ಕರಗತವಾಗುವ ಇಲೆಕ್ಟ್ರಾನಿಕ್ ತಂತ್ರಜ್ಞಾನವು ಸಾಮಾಜಿಕ-ಆರ್ಥಿಕ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ತರಬಲ್ಲುದು.

ಉಪಗ್ರಹ ಉಡಾವಣಾ ವಾಹನದ ತಂತ್ರಜ್ಞಾನ ರಕ್ಷಣಾ ಮಹತ್ವವನ್ನು ಹೊಂದಿದೆಯೆಂಬುದನ್ನು ಮರೆಯುವಂತಿಲ್ಲ. ಪರಮಾಣು ಸಿಡಿತಲೆಯನ್ನು ಎಸೆಯುವ ಕ್ಷಿಪಣಿಯು ಇದೇ ಉಡಾವಣಾ ವಾಹನವಲ್ಲದೆ ಬೇರೆಯಲ್ಲ. ನಿಯಂತ್ರಣ ವ್ಯವಸ್ಥೆಯಲ್ಲಿ ನಾಜೂಕುತನ ಬಂದರೆ ಸಾಕು. ಎಎಸ್ಸೆಲ್ವಿಯ ಮುಂದಿನ ಪೀಳಿಗೆಯಾದ ಪೋಲಾರ್ ಎಸ್ಸೆಲ್ವಿಯು ಖಂಡಾಂತರ ಕ್ಷಿಪಣಿಗೆ ಸಮಾನವಾದ ವಾಹನವಾಗಿದೆ. ಜಪಾನ್ ಹೊರತು ಉಳಿದ ನಾಲ್ಕು ದೇಶಗಳು ಉಡಾವಣಾ ವಾಹನ ತಂತ್ರಜ್ಞಾನವನ್ನು ರಕ್ಷಣಾಕ್ಷೇತ್ರಕ್ಕೆ ಅಳವಡಿಸಿವೆ. ಕ್ಷಿಪಣಿಗಳನ್ನು ನಿರ್ಮಿಸಿ ಅವುಗಳಿಗೆ ಪರಮಾಣು ಬಾಂಬುಗಳನ್ನು ಸಿಕ್ಕಿಸಿ ಭೂಗರ್ಭ ನೆಲೆಗಳಲ್ಲಿ ಸಜ್ಜುಗೊಳಿಸಿವೆ.

ಅಂತೂ ಎಎಸ್ಸೆಲ್ವಿ ವಿಫಲವಾಯಿತು ಎಂಬ ಕಾರಣಕ್ಕೆ ಯಾರೂ ಎದೆಗೆಡಬೇಕಾಗಿಲ್ಲ. ವೈಜ್ಞಾನಿಕ ಸಂಶೋಧನೆಯಲ್ಲಿ ಇದೆಲ್ಲ ಅಗುತ್ತಿರುತ್ತದೆ. ಬಾಹ್ಯಾಕಾಶ ಸಂಶೋಧನೆಯಲ್ಲಿ ಮುಂಮುವರಿದ ದೇಶಗಳಿಗೆ ಇದಕ್ಕಿಂತಲೂ ದೊಡ್ಡ ಅಪಘಾತಗಳು ಬಂದದ್ದುಂಟು ಬಾಹ್ಯಾಕಾಶ ಯಾತ್ರಿಗಳು ಪ್ರಾಣ ಕಳೆದುಕೊಂಡದ್ದೂ ನಡೆದಿದೆ. ದೋಷ ಎಲ್ಲಿ ಎಂಬುದನ್ನು ಹುಡುಕಿ ಮುಂದೆ ಅದು ಆಗದಂತೆ ಎಚ್ಚರವಹಿಸಬೇಕು. ನಡೆಯಲು ಮನಸ್ಸನ್ನೇ ಮಾಡದವನು ಎಡವುದೂ ಇಲ್ಲ. ಎಡವಿದರೂ ಎದ್ದು ನಡೆಯಬೇಕು. ಅದೇ ಪ್ರಗತಿಯ ದಾರಿ.

ಮುಂಗಾರು

ಗುರುವಾರ, ಮಾರ್ಚ್ 26, 1987

ವ್ಯಕ್ತಿಯಲ್ಲ: ತತ್ವ ಮುಖ್ಯ

ಇದೀಗ ತಾನೇ ಮೂರು ರಾಜ್ಯಗಳಲ್ಲಿ ಜರುಗಿದ ವಿಧಾನಸಭಾ ಚುನಾವಣೆಗಳ ಫಲಿತಾಂಶವು ದೇಶದ ರಾಜಕಾರಣದ ದೃಷ್ಟಿಯಿಂದ ತುಂಬಾ ಮಹತ್ವದ್ದು. ಈ ಚುನಾವಣೆಯು ಕೇರಳದಲ್ಲಿ ಅತಿ ಮಹತ್ವವಾದ ರಾಜಕೀಯ ಸ್ಥಿತ್ಯಂತರವನ್ನು ತಂದಿದೆ. ಅತ್ತ ಪಶ್ಚಿಮ ಬಂಗಾಲದಲ್ಲಿ ಅಧಿಕಾರದಲ್ಲಿದ್ದ ವಾಮವಾದಿ ಸಂಯುಕ್ತ ರಂಗವನ್ನೇ ಮತದಾರರು ಮತ್ತೆ ಅಧಿಕಾರಕ್ಕೇರಿಸಿದ್ದಾರೆ. ಜಮ್ಮು - ಕಾಶ್ಮೀರದಲ್ಲಿ ನಿರೀಕ್ಷೆಯಂತೆಯೇ ಡಾ॥ ಫಾರೂಕ್ ಅಬ್ದುಲ್ಲಾರ ನ್ಯಾಶನಲ್ ಕಾನ್ಫರೆನ್ಸ್ ಹಾಗೂ ಕಾಂಗ್ರೆಸ್ (ಐ) ಪಕ್ಷಗಳ ಕೂಟವು ಜನ ಬೆಂಬಲ ಪಡೆದು ಅಧಿಕಾರಕ್ಕೇರಿದೆ.

ಕೇರಳದಲ್ಲಿ ವಾಮವಾದಿ ಪ್ರಜಾತಾಂತ್ರಿಕ ರಂಗವು ಮತ್ತೆ ಜನಮನವನ್ನು ಗೆದ್ದು ಅಧಿಕಾರಕ್ಕೆ ಬಂದದ್ದು ಕಾಂಗ್ರೆಸ್(ಐ)ನಾಯಕತ್ವದ ಸಂಯುಕ್ತ ಪ್ರಜಾತಾಂತ್ರಿಕ ರಂಗವುಕಳೆದ ಐದುವರ್ಷಗಳಿಗೂ ಅಧಿಕಕಾಲ ರಾಜ್ಯದ ಆಡಳಿತೆಯನ್ನು ನಿರ್ವಹಿಸಿದ ರೀತಿಯು ತಮಗೆ ಹಿಡಿಸಿಲ್ಲವೆಂದು ಮತದಾರರು ಖಚಿತವಾದ ತೀರ್ಪನ್ನು ಕೊಟ್ಟಂತಾಗಿದೆ. ಕಾಂಗ್ರೆ ನೇತೃತ್ವದ ರಂಗದ ಕಾರ್ಯ ನಿರ್ವಹಣೆಯ ವಿಶ್ಲೇಷಣೆಗೆ ಹೊರಡುವವರಿಗೆ ಮೊತ್ತ ಮೊದಲಿಗೆ ಕಾಣಿಸುವಂತಹದ್ದು ಈ ಕೂಟವು ಒಂದು "ಅನುಕೂಲಕ್ಕಾಗಿ ಮಾಡಿಕೊಂಡ ಮದುವೆ"ಯಾಗಿತ್ತು ಎನ್ನುವುದು. ಈ ಮದುವೆಯಂತೂ ಯಾರಿಗೂ ಸುಖಕರವಾಗಿರಲಿಲ್ಲ. ಆ ಕೂಟದ ನಾಯಕನಿಗೆ ಎಂದೂ ತಲೆನೋವು ತಪ್ಪಿರಲಿಲ್ಲ. ಸಂಯುಕ್ತ ರಂಗವನ್ನು ಒಂದಾಗಿ ಹಿಡಿದಿಟ್ಟುಕೊಳ್ಳುವುದು ಮಹಾಸಾಹಸವೇ ಆಗಿತ್ತು. ಒಂದಿಲ್ಲೊಂದು ಘಟಕ ಪಕ್ಷವು ಪ್ರತಿನಿತ್ಯವೂ "ಮಾಂಸ ಮೂಟೆ" ಬೇಡುತ್ತ ಕಾಟ ಕೊಡುತ್ತಿತ್ತು. ತಮ್ಮ ಸಮುದಾಯಕ್ಕೆ, ಮಂತ್ರಿಗಳ ಆಪ್ತೇಷ್ಟರಿಗೆ, ಸ್ವಜನರಿಗೆ ಹಿತ ಮಾಡುವ ಧೋರಣೆ ಅನುಸರಿಸುವಂತೆ ಈ ಘಟಕಗಳು ಸದಾ ಒತ್ತಡ ಹೇರುತ್ತಿದ್ದವು. ಕೆಲವು ಘಟಕಗಳು ಪ್ರತ್ಯೇಕ ಜಿಲ್ಲೆಗಳನ್ನು ಕೇಳಿ ಪಡೆದವು, ಇನ್ನು ಕೆಲವು ಸರಕಾರಿ ಮಂಡಳಿ, ನಿಗಮಗಳಲ್ಲಿ ಸ್ವಜನರಿಗೆ ಸ್ಥಾನಗಿಟ್ಟಿಸಿದವು. ಇನ್ನು ಕೆಲವು ಹಣದ ಮೂಟೆಕಟ್ಟುವ ವಿದ್ಯಾ ವ್ಯಾಪಾರದ ಮಳಿಗೆಗಳನ್ನು ತೆರೆಯಲು ಪರವಾನಿಗೆ ಕೇಳಿದವು. ರಾಜ್ಯದ ಆಡಳಿತವನ್ನು ಸಮರ್ಥವಾಗಿ ನಿರ್ವಹಿಸುತ್ತ ಜನಸಾಮಾನ್ಯರ ಬದುಕನ್ನು ಹಸನು ಮಾಡುವ ಬಗ್ಗೆ ಚಿಂತನೆ ನಡೆಸುವ ಬದಲು ಸ್ವಂತ ಸುಖದ ಚಿಂತೆಯೊಂದೇ ಈ ರಂಗದ ಸದಸ್ಯರ ಮನಸನ್ನು ಆವರಿಸಿತ್ತು.

ಅಧಿಕಾರದಲ್ಲಿರಬೇಕು ಎಂಬ ಒಂದೇ ಕಾರಣಕ್ಕಾಗಿ ಕೋಮುಶಕ್ತಿಗಳ ಜತೆ ಸ್ನೇಹಾಚಾರ ಮಾಡಿಕೊಂಡದ್ದು ಈ ರಂಗವನ್ನು ಕೇರಳದ ಮತದಾರರು ಕೈಬಿಡಲು ಇನ್ನೊಂದು ಮಹತ್ವದ ಕಾರಣವೆಂಬುದನ್ನು ಅಲ್ಲಗಳೆಯುವಂತಿಲ್ಲ. ದಕ್ಷಿಣ ಕೇರಳದ ಅನೇಕ ಜಿಲ್ಲೆಗಳಲ್ಲಿ, ಮುಖ್ಯವಾಗಿ ತಿರುವಾಂಕೂರು ಕೊಚ್ಚಿ ಪ್ರದೇಶದಲ್ಲಿ ಹಿಂದೂ ಮುನ್ನಣೆ ಎಂಬ ಹೊಸ ಶಕ್ತಿಯೊಂದು ಈ ಬಾರಿ ಉದಯಿಸಿದ್ದೇ ಆ ಪ್ರದೇಶದಲ್ಲಿ ಕರುಣಾಕರನ್ ನೇತೃತ್ವದ ಯುಡಿಎಫ್ ಸೋತುಹೋಗಲು ಪ್ರಧಾನ ಕಾರಣವೆಂಬುದು ಚುನಾವಣಾ ಫಲಿತಾಂಶದ ಅಂಕಿ-ಅಂಶ ಅಧ್ಯಯನ ಮಾಡಿದಾಗ ತಿಳಿಯುತ್ತದೆ. ದೊಡ್ಡ ಸಂಖ್ಯೆಯಲ್ಲಿ ಹಿಂದೂ ಮತಗಳನ್ನು ಈ ಮುನ್ನಣೆಯು ಬಗಲಿಗೆ ಹಾಕಿಕೊಂಡದ್ದು ಕಂಡುಬರುತ್ತದೆ. ಆಳುವ ರಂಗವು ಆಡುತ್ತ ಬಂದ ಕೋಮು ರಾಜಕೀಯವೇ ಈ ಹೊಸ ವಿದ್ಯಮಾನಕ್ಕೆ ಕಾರಣವಾಗಿದೆ.

ಆಡಳಿತೆಯಲ್ಲಿನ ಭ್ರಷ್ಟಾಚಾರವೂ ಜನರು ಕಾಂಗ್ರೆ ರಂಗದ ಬಗ್ಗೆ ರೋಸಿಹೋಗಲು ಇನ್ನೊಂದು ಕಾರಣ. ಹಿಂದೆ ಅಲ್ಪ ಪ್ರಮಾಣದಲ್ಲಿದ್ದ ಭ್ರಷ್ಟಾಚಾರವು ಕಳೆದ ಐದು ವರ್ಷಗಳಲ್ಲಿ ದೊಡ್ಡದಾಗಿ ಬೆಳೆದಿರುವುದನ್ನು ಅಲ್ಲಗಳೆಯುವಂತಿಲ್ಲ. ಈ ಹಿನ್ನೆಲೆಯಲ್ಲಿ ಆಡಳಿತ ಅಸಾಮರ್ಥ್ಯವು ಸೋಲಿಗೆ ಕಾರಣವಲ್ಲ; ಕೇವಲ ಒಳಜಗಳ ಎಂಬ ಕರುಣಾಕರನ್ ವಾದವನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಕೇರಳದ ಫಲಿತಾಂಶ ಕರುಣಾಕರನ್ ಕೂಟದ ಬಗೆಗಿನ ನಕಾರಾತ್ಮಕ ಮತವಾಗಿರುವಂತೆಯೇ ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವದ ತತ್ವನಿಷ್ಠ ರಾಜಕಾರಣದ ಬಗೆಗಿನ ಜನರ ಒಲವನ್ನೂ ತೋರಿಸುವುದೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಪಶ್ಚಿಮ ಬಂಗಾಳದಲ್ಲಿಯೂ ಅಷ್ಟೇ. ಜ್ಯೋತಿ ಬಸು ನೇತೃತ್ವದ ಆಡಳಿತೆಯಲ್ಲಿ ಜನ ತೃಪ್ತಿ ಹೊಂದಿದ್ದು, ಈ ಸರಕಾರದ ಸಾಮರ್ಥ್ಯದ ಮೇಲೆ ವಿಶ್ವಾಸ ವಿರಿಸಿರುವುದನ್ನದು ಸಾಬೀತುಪಡಿಸುತ್ತದೆ. ಕಾಂಗ್ರೆ ಪಕ್ಷದ ರಾಷ್ಟ್ರೀಯ ನಾಯಕ ರಾಜೀವ ಗಾಂಧಿಯವರು ಕೇರಳಕ್ಕಿಂತಲೂ ಪಶ್ಚಿಮ ಬಂಗಾಳಕ್ಕೇ ಹೆಚ್ಚು ಗಮನ ಹರಿಸಿದ್ದರ ಹಿನ್ನೆಲೆಯಲ್ಲಿ ಜನರ ಈ ತೀರ್ಪು ಇನ್ನಷ್ಟು ಮಹತ್ವದ್ದು.

ಕೇರಳ ಹಾಗೂ ಪಶ್ಚಿಮಬಂಗಾಳಗಳ ಜನರುಕೊಟ್ಟ ತೀರ್ಪು ಒಂದು ರಾಜಕಾರಣದ ಪಾಠವನ್ನು ಹೇಳುತ್ತದೆ. ರಾಜಕಾರಣವು ವ್ಯಕ್ತಿ ನಿಷ್ಠವಾಗಿರತಕ್ಕದ್ದಲ್ಲ. ತತ್ವ ನಿಷ್ಠವಾಗಿರಬೇಕು ಎಂಬುದೇ ಈ ನೀತಿ. ರಾಜಕೀಯ ಪಕ್ಷಗಳ ಕಾರ್ಯ ನಿರ್ವಹಣೆಯನ್ನು ಹಾಗೂ ಸಾಮರ್ಥ್ಯವನ್ನು ಘೋಷಣೆಗಳಿಂದಲೂ, ಪಕ್ಷದ ನಾಯಕರು ಯಾರು ಎಂಬುವದರಿಂದಲೂ ತೀರ್ಮಾನಿಸತಕ್ಕದ್ದಲ್ಲ. ಬದಲಾಗಿ ಪಕ್ಷವು ಪ್ರತಿಪಾದಿಸುವ ತತ್ವಗಳೇನು, ಆಡಳಿತೆಯಲ್ಲಿಯೂ ಅಭಿವೃದ್ಧಿಯಲ್ಲಿಯೂ ಅದು ಅನುಸರಿಸುವ ಧೋರಣೆಗಳೇನು, ಅನುಷ್ಠಾನಕ್ಕಿರುವ ಕಾರ್ಯಕ್ರಮಗಳೇನು ಎಂಬುದರ ನೆಲೆಯಲ್ಲಿ ತೀರ್ಮಾನಿಸಬೇಕು ಎಂದು ಅದನ್ನು ಪ. ಬಂಗಾಳ ಮತ್ತು ಕೇರಳದ ಮತದಾರರು ಮಾಡಿದ್ದಾರೆ. ಅಲ್ಲಿನ ಜನ ವ್ಯಕ್ತಿಗೆ ಮನ ಸೋತಿಲ್ಲ; ತತ್ವಗಳನ್ನು ಅರಿಸಿದ್ದಾರೆ. ಭರವಸೆಗಳ ಬೆನ್ನು ಹತ್ತಿಲ್ಲ; ಬದಲಾಗಿ ರಾಜಕೀಯಸ್ಥರ ಸಾಧನೆಗಳನ್ನು ಅಳೆದು, ತೂಗಿ ಆಯ್ಕೆ ಮಾಡಿದ್ದಾರೆ.

ಮುಂಗಾರು

ಶನಿವಾರ, ಮಾರ್ಚ್ 28, 1987

ಮನೆಗೊಂದು ಮಗು

ಕುಟುಂಬ ಯೋಜನೆಯ ವೇಗವನ್ನು ಹೆಚ್ಚಿಸಲು ಕುಟುಂಬಕ್ಕೊಂದೇ ಮಗು ಎಂಬ ಧ್ಯೇಯವನ್ನು ಅಂಗೀಕರಿಸುವ ಆಲೋಚನೆ ಸರಕಾರಕ್ಕಿಲ್ಲವೆಂದು ಕೇಂದ್ರ ಆರೋಗ್ಯ ಸಚಿವ ಪಿ. ವಿ. ನರಸಿಂಹರಾವ್ ಅವರು ಲೋಕ ಸಭೆಯಲ್ಲಿ ಹೇಳಿದ್ದಾರೆ.

ಮನೆಗೊಂದೇ ಮಗು ಸಾಕು ಎಂಬುದು ಅನುಸರಿತಕ್ಕ ಆದರ್ಶವಾಗಿದ್ದರೂ ಭಾರತದಂತಹ ಸಂಪ್ರದಾಯಗಳ ಮೂಟೆಯಲ್ಲಿ ಹೂತು ಹೋದ ಸಮಾಜದಲ್ಲಿ ಅದನ್ನು ಜನಪ್ರಿಯಗೊಳಿಸುವುದು ಬಲು ಕಷ್ಟಕರವಾದ ಕೆಲಸವೇ. ಇದನ್ನು ಅರಿತೇ ಸರಕಾರ ಅಂತಹ ಮಹತ್ವಾಕಾಂಕ್ಷೆಯನ್ನು ತಾಳದೆ ಈಗ ಅನುಸರಿಸುತ್ತಿರುವ "ನಾವಿಬ್ಬರು-ನಮಗಿಬ್ಬರು" ಸೂತ್ರವನ್ನೇ ಜಾರಿಗೆ ತರಲು ಕಾರ್ಯಕ್ರಮಗಳನ್ನು ಮುಂದುವರಿಸುವ ನಿರ್ಧಾರ ಮಾಡಿದೆ.

ಕುಟುಂಬ ಯೋಜನೆ ಸಾಧನೆಯಲ್ಲಿ ಭಾರತ ಸಾಕಷ್ಟು ಯಶಸ್ಸು ಕಂಡಿದೆ ಎಂಬುದು ನಿಜ. ಆದರೂ ಮಾಡಬೇಕಾದ ಕೆಲಸ ಬಹಳಷ್ಟಿದೆ. ಜನನ ಪ್ರಮಾಣವು ಗಮನಾರ್ಹವಾಗಿಯೇನೂ ಕುಗ್ಗಿಲ್ಲ. ನಮ್ಮ ಸರಕಾರ ಕುಟುಂಬ ಯೋಜನೆಯ ಯಶಸ್ವಿಗಾಗಿ ಸಂತಾನ ಶಕ್ತಿ ಹರಣ ಶಸ್ತ್ರಕ್ರಿಯೆಗಳ ಸಂಖ್ಯೆಯನ್ನಷ್ಟೇ ಹೆಚ್ಚಿಸುವತ್ತ ಗಮನವಿಟ್ಟು ಕೆಲಸ ಮಾಡುತ್ತಿದೆಯೇ ಹೊರತು ಜನ ಸಮುದಾಯದಲ್ಲಿ ಸಣ್ಣ ಕುಟುಂಬದಿಂದ ಬರುವ ಪ್ರಯೋಜನಗಳನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದಿಲ್ಲ.

ಈ ನಿಟ್ಟಿನಲ್ಲಿ ಪರಿಶೀಲಿಸಿದರೆ ಶಿಕ್ಷಣವು ಕುಟುಂಬಯೋಜನೆಯ ಪ್ರಕ್ರಿಯೆಗೆ ಬಹಳಷ್ಟು ಚಾಲನೆಕೊಡುವಂತಹ ವಿಷಯವೆಂಬುದು ನಿಚ್ಚಳವಾಗುತ್ತದೆ. ಜನಸಂಖ್ಯೆಯು ಯಾವುದೇ ಸಮುದಾಯದ ಸೊತ್ತು ಎಂಬ ಮಾತು ನಿಜ. ಜನಶಕ್ತಿಯು ಬಲು ಅಮೂಲ್ಯವಾದ ಸಂಪನ್ಮೂಲ. ಆದರೆ ಈ ಸಂಪನ್ಮೂಲಕ್ಕೆ ಸಾಮರ್ಥ್ಯವನ್ನು ತಂದುಕೊಡಬೇಕಿದ್ದರೆ ವಿದ್ಯಾಪ್ರಸಾರ ಆಗಬೇಕು. ವಿದ್ಯೆಯಿಲ್ಲದ ಮನುಷ್ಯನ್ನು ಯಾವುದೇ ಉದ್ಯೋಗದಲ್ಲಿ ಪರಿಣತಿಯನ್ನು ಪಡೆದುಕೊಳ್ಳುವುದು ಕಷ್ಟ. ಬಡತನವನ್ನು ನಿವಾರಿಸಿಕೊಂಡು ಬದುಕಿನ ಸಾಧ್ಯತೆಗಳನ್ನೆಲ್ಲ ಶೋಧಿಸಬೇಕೆಂಬ ಜೀವನೋತ್ಸಾಹವು ಉಂಟಾಗುವುದು ವಿದ್ಯೆಯಿಂದ. ಜನ ಸಂಪನ್ಮೂಲವನ್ನು ಅಭಿವೃದ್ಧಿಗೆ ಹೂಡುವುದಕ್ಕೆ ಸಮಾಜದಲ್ಲಿ ಶಿಕ್ಷಣ ಪ್ರಸಾರ ಕ್ಷಿಪ್ರ ಗತಿ ಬೇಕು.

ನಾರ್ಹವಾಗಿ ಇಳಿಯುವುದು ಎಲ್ಲಾ ಪ್ರವರ್ಧಮಾನ ದೇಶಗಳಲ್ಲಿ ಕಂಡು ಬಂದಿದೆ. ಪ್ರಾಥಮಿಕ ಶಾಲೆ ಪೂರೈಸಿದ ಮಹಿಳೆಯರಲ್ಲಿ ಈ ಪ್ರವೃತ್ತಿ ಕಾಣಿಸಲು ತೊಡಗುತ್ತದೆ. ಮಹಿಳೆಯ ಶಿಕ್ಷಣದ ಮಟ್ಟ ಹೆಚ್ಚಿದಂತೆ ಕುಟುಂಬ ಯೋಜನೆಯ ಕುರಿತಾದ ಅವರ ಒಲವು ಕೂಡ ಹೆಚ್ಚುತ್ತದೆ.

ಆದರೆ ಭಾರತ ಸರಕಾರ ಈ ವಿಚಾರಗಳಿಗೆ ಹೆಚ್ಚು ಮಹತ್ವ ಕೊಟ್ಟಂತೆ ಕಾಣಿಸುತ್ತಿಲ್ಲ. ಶಿಕ್ಷಣವೂ ಒಳಗೊಂಡಂತೆ ಸಾಮಾಜಿಕ ಸೇವೆಗೆ 1956ರಲ್ಲಿ ಶೇ.21 ಹಣ ಸಂದಿದ್ದರೆ 1984ರ ವೇಳೆಗೆ ಅದು ಶೇ. 14ಕ್ಕೆ ಇಳಿಯಿತು. ಸಾಮಾಜಿಕ ಸೇವೆಯಲ್ಲಿ ಅಂತರ್ಗತವಾದ ಶಿಕ್ಷಣಕ್ಕೆ ಶೇ.37 ಇದ್ದುದು ಶೇ. 18ಕ್ಕಿಳಿಯಿತು. 1970-1980ರ ಅವಧಿಯಲ್ಲಿ 15 ಹಾಗೂ ಅದಕ್ಕೆ ಮೇಲಿನ ವಯಸ್ಸಿನ ಅನಕ್ಷರಸ್ಥರ ಸಂಖ್ಯೆ ಭಾರತದಲ್ಲಿ 20.81 ಕೋಟಿಯಿಂದ 24.31 ಕೋಟಿಗೇರಿತು. ಇಂಡೋನೇಶ್ಯಾ ಹಾಗೂ ಬ್ರೆಜಿಲ್‌ನಂತಹ ದೇಶಗಳಲ್ಲಿ ಈ ಸಂಖ್ಯೆ ಕಡಿಮೆಯಾಗುತ್ತಲೇ ಬಂದಿದೆ. ವಿದ್ಯಾ ಪ್ರಸಾರಕ್ಕೆ ಭಾರತ ಸರಕಾರದ ಆದ್ಯತೆ ಕಡಿಮೆಯಾಗುತ್ತಿರುವುದನ್ನು ಇದು ತೋರಿಸುತ್ತದೆ.

ಕುಟುಂಬ ಯೋಜನೆ ಫಲಪ್ರದವಾಗಬೇಕಿದ್ದರೆ ಸಮಾಜದ ಆರೋಗ್ಯದ ಕಡೆಗೂ ಹೆಚ್ಚು ಗಮನ ಹರಿಸಬೇಕು. ತಾಯಿ ಹಾಗೂ ಮಗುವಿನ ಆರೋಗ್ಯ ಪಾಲನೆ ಈ ನಿಟ್ಟಿನಲ್ಲಿ ಅತ್ಯಂತ ಮಹತ್ವದ್ದು. ಶಿಶು ಮರಣ ಸಂಖ್ಯೆ ಇಲ್ಲವೇ ಇಲ್ಲವೆಂಬಷ್ಟರ ಮಟ್ಟಿಗೆ ಇಳಿಯಬೇಕು. ಮಗುವೊಂದು ಸತ್ತರೆ ಅದು ಆ ಪ್ರದೇಶದಲ್ಲಿ ಮಾನಸಿಕವಾಗಿ ಕುಟುಂಬ ಯೋಜನೆಗೆ ಬೀಳುವ ದೊಡ್ಡ ಏಟಾಗುತ್ತದೆ. ಇಂದು ಮಹಿಳೆಯರಿಗೆ ಸಂತಾನ ಶಕ್ತಿ ಹರಣ ಶಸ್ತ್ರಕ್ರಿಯೆ ಮಾಡಿಸಲು ಟೊಂಕ ಕಟ್ಟಿ ನಿಲ್ಲುವ ಆರೋಗ್ಯ ಇಲಾಖೆ ಸಿಬ್ಬಂದಿಗಳು ಶಸ್ತ್ರಕ್ರಿಯೆ ಮಾಡಿಸಿಕೊಂಡ ತಾಯಿಯ ಮಗು ರೋಗಗ್ರಸ್ತವಾಗದೆ ಬದುಕಿ ಬಾಳುವ ಬಗ್ಗೆ ಅಷ್ಟಾಗಿ ಮುತುವರ್ಜಿ ವಹಿಸುವುದಿಲ್ಲ. ತಾಯಿ ಬಡವಳೂ ನಿರಕ್ಷರಿಯೂ ಆಗಿದ್ದರೆ ಆ ಮಗುವಿಗೆ ರೋಗನಿರೋಧಕ ಚುಚ್ಚು ಮದ್ದು ನೀಡಿಕೆ ಕಾಲಕಾಲಕ್ಕೆ ಸರಿಯಾಗಿ ಆಗುವುದೇ ಇಲ್ಲ.

ಸಣ್ಣ ಕುಟುಂಬದ ತತ್ವವನ್ನು ಪ್ರಚಾರ ಮಾಡುವುದಕ್ಕೆ ಸರಿದೊರೆಯಾಗಿ ವಿದ್ಯೆ ಹಾಗೂ ಆರೋಗ್ಯ

ಮುಂಗಾರು

ಭಾನುವಾರ, ಮಾರ್ಚ್ 29, 1987

ಬಿರಿಯುವ ನಗರಗಳು

ಬೆಂಗಳೂರಿನ ಜನಸಾಂದ್ರತೆಯನ್ನು ಕಡಿಮೆ ಮಾಡುವ ಕಾರ್ಯಕ್ರಮಗಳ ಬಗ್ಗೆ ಮುಖ್ಯಮಂತ್ರಿ ರಾಮಕೃಷ್ಣಹೆಗಡೆಯವರು ಮಾತನಾಡಿದ್ದಾರೆ. ಈ ಕುರಿತಾಗಿ ಬೆಂಗಳೂರಿನಲ್ಲಿ ಒಂದು ವಿಚಾರಗೋಷ್ಠಿಯೇ ನಡೆದಿದೆ. ನಗರಗಳ ಬೆಳವಣಿಗೆಯಲ್ಲಿ ಸೂತ್ರ ಬದ್ಧತೆಯನ್ನು ತರುವ ಶಾಸ್ತ್ರವನ್ನು ಅಧ್ಯಯನ ಮಾಡಿದ ತಜ್ಞರು ಈ ಗೋಷ್ಠಿಯಲ್ಲಿ ಭಾಗವಹಿಸಿ ಬೆಂಗಳೂರಿಗೆ ಪರ್ಯಾಯವಾದ ಕೇಂದ್ರಗಳನ್ನು ಕಟ್ಟಿ ಬೆಳಸಬೇಕೆಂದು ಸಲಹೆ ನೀಡಿದ್ದಾರೆ.

ಬೆಂಗಳೂರಿನ ಮಹತ್ವವನ್ನು ಕುಗ್ಗಿಸಿ ಜನಸಂದಣಿಯು ಬೇರೆ ಕೇಂದ್ರಗಳಿಗೆ ಹಂಚಿ ಹೋಗುವಂತೆ ಹಾಗೂ ಆ ಮೂಲಕ ಬೆಂಗಳೂರಿನ ನಾಗರಿಕ ಸೌಲಭ್ಯಗಳ ಮೇಲಿರುವ ಒತ್ತಡವನ್ನು ಕಡಿಮೆ ಮಾಡುವುದಕ್ಕೆ ಸರಕಾರ ಹಾಕಿಕೊಂಡಿರುವ ಕೆಲವಾರು ಕಾರ್ಯಕ್ರಮಗಳನ್ನು ಮುಖ್ಯಮಂತ್ರಿಗಳು ಪಟ್ಟಿಮಾಡಿದ್ದಾರೆ. ಸರಕಾರದ ಕೆಲವು ಇಲಾಖೆಗಳನ್ನು ಬೆಂಗಳೂರಿನಿಂದ ಕಿತ್ತು ಬೇರೆ ನಗರಗಳಲ್ಲಿ ನೆಲೆಗೊಳಿಸುವುದು, ಹೊಸ ಇಲಾಖೆಗಳನ್ನು ಬೆಂಗಳೂರಲ್ಲಿ ತೆರೆಯದೆ ಇರುವುದು, ಬೆಂಗಳೂರಿನಿಂದ ದೂರ ಉಪನಗರಗಳನ್ನು ಬೆಳೆಸುವುದು ಈ ಕಾರ್ಯಕ್ರಮಗಳಲ್ಲಿ ಸೇರಿವೆಯೆಂದು ಅವರು ಸೂಚಿಸಿದ್ದಾರೆ.

ಈ ಸಮಸ್ಯೆ ಇಷ್ಟೊಂದು ಬೆಳೆಯಲು ಎಲ್ಲಕ್ಕಿಂತಲೂ ಮುಖ್ಯವಾದ ಕಾರಣ ಕೈಗಾರಿಕೆಗಳ ಕೇಂದ್ರೀಕರಣ. ಬೆಂಗಳೂರು ಹಾಗೂ ಅದರ ಸುತ್ತ ಮುತ್ತ ಲಕ್ಷಾಂತರ ಕೈಗಾರಿಕಾ ಘಟಕಗಳು ಹುಟ್ಟಿ ಬೆಳೆದಿವೆ. ಹೀಗೆ ಕೈಗಾರಿಕೆಗಳು ಬೆಳೆಯುವ ಹಾಗೂ ಅದರಿಂದಾಗಿ ಜನಸಂಖ್ಯೆಯೂ ಬೆಳೆಯುವ ವಿದ್ಯಮಾನವು ಒಂದು ವಿಷವರ್ತುಲವೇ ಆಗಿದೆ. ಜನಸಂದಣಿ ಇರುವಲ್ಲಿಗೇ ಕೈಗಾರಿಕೆಗಳು ಬರುತ್ತವೆ. ಗ್ರಾಹಕ ಸಾಮಗ್ರಿಗಳನ್ನು ಉತ್ಪಾದಿಸುವವರಿಗೆ, ಕೈಗಾರಿಕೆಗಳ ಸ್ಥಾಪನೆ ಹಾಗೂ ಬೆಳವಣಿಗೆಗೆ ಅಗತ್ಯವಿರುವ ಉಪಕರಣಗಳನ್ನು ತಯಾರಿಸುವವರಿಗೆ ಬೆಂಗಳೂರಿನಂತಹ ನಗರಗಳೇ ಅತ್ಯಂತ ಸೂಕ್ತವಾದ ಸ್ಥಾನಗಳು. ದಿನ ಬಳಕೆಯ ಗ್ರಾಹಕ ಸಾಮಗ್ರಿಗಳಿಗೆ ನಲುವತ್ತು ಲಕ್ಷ ಜನಸಂಖ್ಯೆಯುಳ್ಳ ಬೆಂಗಳೂರಿನಂತಹ ಮಹಾನಗರದಲ್ಲಿ ವಿಪುಲವಾದ ಸಿದ್ಧ ಮಾರುಕಟ್ಟೆಯಿದೆ. ಕೈಗಾರಿಕೆ ಹಾಗೂ ವಾಣಿಜ್ಯ ಸಂಸ್ಥೆಗಳು ಲಕ್ಷ–ಲಕ್ಷ ಸಂಖ್ಯೆಯಲ್ಲಿರುವುದು ಈ ಸಾಮಗ್ರಿಗಳ ಉತ್ಪಾದಕರಿಗೆ ಸ್ವರ್ಗವೇ ಮನೆ ಬಾಗಿಲಿಗೆ ಬಂದಂತಾಗಿದೆ. ಎಲ್ಲಾ ನಗರಗಳ ವಿಚಾರಗಳಲ್ಲಿಯೂ ಇದು ನಿಜ.

ಕೈಗಾರಿಕೆಗಳ ಸ್ಥಾಪಕರಿಗೆ ಮಾರುಕಟ್ಟೆ ಮಾತ್ರವೇ ಅಲ್ಲದೆ ಉತ್ಪಾದನೆಯ ಇತರೆಲ್ಲಾ ಪರಿಕರಗಳೂ ನಗರಗಳಲ್ಲಿ ಸಲೀಸಾಗಿ ದೊರೆಯುತ್ತವೆ. ಪರಿಣತ ಕಾರ್ಮಿಕರಿಗೆ ನಗರಗಳಲ್ಲಿ ಬರವಿಲ್ಲ. ವಿದ್ಯುತ್ ಪೂರೈಕೆಯಲ್ಲಿ ಕಣ್ಣು ಮುಚ್ಚಾಲೆಯಿಲ್ಲ; ಕಚ್ಚಾ ಮಾಲಿಗೆ ಕಷ್ಟವಿಲ್ಲ. ಇಂಥ ಸೌಲಭ್ಯಗಳು ಬೇರೆಡೆ ಸಿಗುವುದು ಕಷ್ಟ.

ಅವುಗಳನ್ನೆಲ್ಲ ಒದಗಿಸುವ ಅಥವ ಅವುಗಳು ದೊರೆಯುವಂತಹ ವಾತಾವರಣ ಏರ್ಪಡಿಸುವ ವ್ಯವಸ್ಥೆಯನ್ನು ಸರಕಾರ ಮಾಡಬೇಕು. ಆದರೆ ವಾಸ್ತವದಲ್ಲಿ ಹಾಗಿಲ್ಲ. ಬೆಂಗಳೂರಿನಿಂದ ಹೊರಗೆ ಸರಕಾರ ತೆರೆದಿರುವ ಕೈಗಾರಿಕಾ ಎಸ್ಟೇಟುಗಳು ಬಿಕೋ ಎನ್ನುತ್ತಿವೆ. ಅಲ್ಲಿ ತೊಡಗಿದ ಕೈಗಾರಿಕಾ ಘಟಕಗಳು ಮೂರೇ ತಿಂಗಳಿಗೆ ರೋಗಗ್ರಸ್ತವಾಗಿ ಮುಚ್ಚಿಹೋಗುತ್ತಿವೆ. ಮೂಲ ಸೌಲಭ್ಯಗಳಿಲ್ಲ; ಮಾರುಕಟ್ಟೆಯಿಲ್ಲ; ಪರಿಣತ ಕಾರ್ಮಿಕರಿಲ್ಲ; ಇದನ್ನೆಲ್ಲ ಸರಿಹೊಂದಿಸಿಕೊಳ್ಳುವುದಕ್ಕೆ ಹಣಕಾಸು ಇಲ್ಲ–ಇವೆಲ್ಲವೂ ಈ ಘಟಕಗಳ ಸಮಸ್ಯೆಗಳು. ಸರಕಾರವು ಕೈಗಾರಿಕಾ ಎಸ್ಟೇಟುಗಳನ್ನು ಪಟ್ಟಣಗಳಿಂದ ಬಲು ದೂರ ಬೆಂಗಾಡುಗಳಲ್ಲಿ ಸ್ಥಾಪಿಸಿದ ನಿದರ್ಶನಗಳು ಸಾಕಷ್ಟಿದೆ.

ಬೇರೆ ಕೇಂದ್ರಗಳನ್ನು ಕಟ್ಟಿ ಬೆಳೆಸುವ ಕಾರ್ಯಕ್ರಮದಲ್ಲಿ ಈ ಅಂಶಗಳನ್ನೆಲ್ಲ ಸರಕಾರ ಗಮನಿಸಬೇಕು. ಸೌಲಭ್ಯಗಳನ್ನೊದಗಿಸದೆ ಕೇವಲ ಬಾಯುಪಚಾರ ಮಾಡಿದರೆ ಯಾರೂ ನಗರ ಬಿಟ್ಟು ಹೊರ ಬರಲಾರರು.

ಆಡಳಿತಕ್ಕೆ ಸಂಬಂಧಪಟ್ಟಂತೆ ಇಲಾಖೆಗೆ ಇಲಾಖೆಯನ್ನೇ ಎತ್ತಿ ಹೊರಕ್ಕೆ ಸಾಗಿಸುವುದು ಸಾಧುವಾದ ಪರಿಹಾರವೆನಿಸಲಾರದು. ಆಡಳಿತ ಹಾಗೂ ರಾಜಕೀಯ ಅಧಿಕಾರದ ವಿಕೇಂದ್ರೀಕರಣ ಮಾತ್ರವೇ ಇದಕ್ಕೆ ಮದ್ದು. ಯಾವುದೋ ಒಂದು ಇಲಾಖೆಯ ಕಚೇರಿಯೊಂದನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೋ ಇನ್ನೆಲ್ಲಿಗೋ ವರ್ಗಾಯಿಸುವುದರಿಂದ ಸಮಸ್ಯೆ ಹೆಚ್ಚುವುದೇ ಹೊರತು ಕಮ್ಮಿಯಾಗಲಾರದು. ಎಲ್ಲ ಇಲಾಖೆಗಳ ಹೆಚ್ಚಿನೆಲ್ಲಾ ವಿಚಾರಗಳು ಸ್ಥಳೀಯ ಮಟ್ಟದಲ್ಲಿ ಅಂದರೆ ಕನಿಷ್ಠ ಜಿಲ್ಲಾ ಮಟ್ಟದಲ್ಲಾದರೂ ತೀರ್ಮಾನವಾಗುವಂತಹ ವ್ಯವಸ್ಥೆ ಮಾಡಬೇಕು. ಬಲು ಅಪರೂಪಕ್ಕೆ, ಅತ್ಯಂತ ಗಹನವಾದ ಶಾಸನಾತ್ಮಕ ಜಿಜ್ಞಾಸೆಯಿರುವ ವಿಷಯಗಳು ಮಾತ್ರವೇ ಬೆಂಗಳೂರಿಗೆ ತೀರ್ಮಾನಕ್ಕಾಗಿ ಬರಬೇಕು. ಅಂತಹ ರಾಜಕೀಯ ಹಾಗೂ ಆಡಳಿತಾಧಿಕಾರದ ವಿಕೇಂದ್ರೀಕರಣದಿಂದ ಮಾತ್ರವೇ ಬೆಂಗಳೂರಿನ ಮಹತ್ವವು ಕುಗ್ಗುತ್ತದೆ. ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ವಿಧೇಯಕದ ಮೂಲಕ ಈ ಪ್ರಕ್ರಿಯೆ ಈಗಾಗಲೇ ತೊಡಗಿದೆ; ಅದನ್ನು ಅರ್ಥಪೂರ್ಣವಾಗಿ ಮಾಡಬೇಕು.

ಯಾವುದಕ್ಕೂ ರಾಜಕೀಯ ಇಚ್ಛಾಶಕ್ತಿ ಬೇಕು. ಅದಿಲ್ಲವಾದರೆ ಎಲ್ಲವೂ ಗಾಳಿಯಲ್ಲಿ ಹಾರಿಹೋಗುತ್ತವೆ. ನಗರಗಳನ್ನು ಬೆಳೆಯಲು ಬಿಡಬಾರದೆಂಬ ಘೋಷಣೆಗಳು ಬಹುಕಾಲದಿಂದ ಮೊಳಗುತ್ತಿದ್ದರೂ ನಗರಗಳು ಹೊಟ್ಟೆ ಬಿರಿವಂತೆ ಬೆಳೆಯುತ್ತಲೇ ಇವೆ; ಹಳ್ಳಿಗಳು ಬಡವಾಗುತ್ತಲೇ ಇವೆ.

ಮುಂಗಾರು

ಮಂಗಳವಾರ ಏಪ್ರಿಲ್ 7, 1987

ಆಗಲೇಬೇಕಾದ ಸಂಘರ್ಷ

ತಮಿಳುನಾಡು ವಿಧಾನ ಸಭೆಯು ರಾಜ್ಯಾಂಗ ದತ್ತವಾದ ತನ್ನ ಪರಮಾಧಿಕಾರವನ್ನು ಬಳಸಿ "ಆನಂದ ವಿಕಟನ್" ವಾರಪತ್ರಿಕೆಯ ಸಂಪಾದಕ ಎಸ್. ಬಾಲ ಸುಬ್ರಮಣ್ಯಂ ಅವರಿಗೆ ಮೂರು ತಿಂಗಳ ಜೈಲು ವಾಸದ ಶಿಕ್ಷೆಯನ್ನು ವಿಧಿಸಿದ ಬಿಸಿ ಸುದ್ದಿ ಈಗ ಬಂದಿದೆ. ಇದು ಮಹತ್ವದ ಸುದ್ದಿಯಾಗಿರುವಂತೆ ಆತಂಕಕಾರಿಯೂ ಆಗಿದೆ.

ಭಾರತವು ಗಣರಾಜ್ಯವಾದ ಮೇಲೆ ದೇಶದ ಶಾಸಕಾಂಗವೊಂದು ಪತ್ರಿಕಾ ಸಂಪಾದಕರೊಬ್ಬರಿಗೆ ಮೂರು ತಿಂಗಳ ಜೈಲುವಾಸದ ಶಿಕ್ಷೆ ವಿಧಿಸಿದ್ದು ಇದೇ ಮೊದಲು. ಆದ್ದರಿಂದ ಈ ಸುದ್ದಿಗೆ ಹೆಚ್ಚಿನ ಮಹತ್ವ ಬಂದಿದೆ. ಜನತಂತ್ರ ರಾಜ್ಯ ವ್ಯವಸ್ಥೆಯು ಅರ್ಥವತ್ತಾಗಿ ಕಾರ್ಯ ನಿರ್ವಹಿಸುವಂತೆ ಮಾಡುವುದರಲ್ಲಿ ವಿಚಾರವಾಹಕವೂ ಸಮೂಹಹಿತದ ಕಾವಲುಗಾರನೂ ಆಗಿರಬೇಕಾದ ಪತ್ರಿಕೆಯ ಸಂಪಾದಕನ ಮೇಲೆ ನಡೆದ "ಕಾನೂನಿನ ಹಲ್ಲೆ" ಇದೆಂಬುದರಿಂದಾಗಿ, ಈ ಸುದ್ದಿ ಆತಂಕಕಾರಿಯಾಗುತ್ತದೆ.

ಶಾಸಕಾಂಗ – ನ್ಯಾಯಾಂಗ – ಆಡಳಿತ ರಂಗ – ಪತ್ರಿಕಾರಂಗ – ಎಂಬ ನಾಲ್ಕು ಕಂಬಗಳ ಮೇಲೆ ನಿಂತು ನಡೆಯಬೇಕಾದ ಜನತಂತ್ರ ರಾಜ್ಯ ವ್ಯವಸ್ಥೆಯಲ್ಲಿ ಕ್ರಿಯಾತ್ಮಕವಾದ ಈ ಕಂಬಗಳ ನಡುವೆ ಕಿರು ಕಾಳಗಗಳು ನಡೆವುದು ಹೊಸತೇನೂ ಅಲ್ಲ. ನಾಲ್ಕರಲ್ಲಿ ಒಂದು ಕಂಬವೆಲ್ಲಿಯಾದರೂ ಅಡ್ಡದಾರಿ ಹಿಡಿದಾಗ ಉಳಿದ ಕಂಬಗಳು ಗಲಿಬಿಲಿಗೊಳ್ಳುವುದು ಸಹಜ. ಅಡ್ಡದಾರಿ ಹಿಡಿದ ಕಂಬವನ್ನು ಸರಿದಾರಿಗೆ ತರಲು ನಡೆಸುವ ಯತ್ನಗಳು ಸಂಘರ್ಷದ ರೂಪು ತಾಳುವುದೂ ಇದೆ. ಜನತಂತ್ರ ರಾಜ್ಯ ವ್ಯವಸ್ಥೆಯನ್ನು ಅಂಗೀಕರಿಸಿದ ಅನೇಕ ಪಾಶ್ಚಿಮಾತ್ಯ ದೇಶಗಳಲ್ಲಿ ಇಂತಹ ಸಂಘರ್ಷಗಳು ಆಗಾಗ ನಡೆದಿವೆ. ಜನತಂತ್ರ ರಾಜ್ಯ ವ್ಯವಸ್ಥೆಗೆ ಸಂಪ್ರದಾಯದ ಚೌಕಟ್ಟು ನಿರ್ಮಿಸಿ ಅದಕ್ಕೆ ಸದಾಚಾರಗಳ ತಿರುಳು ತುಂಬಿದ ಜಗತ್ತಿನ ಅತ್ಯಂತ ಹಳೆಯ ಜನತಂತ್ರರಾಜ್ಯವೆನ್ನಿಸಿರುವ ಬ್ರಿಟನ್ ಹದಿನೆಂಟನೆಯ ಶತಮಾನದಲ್ಲಿ ಜನತಂತ್ರ ವ್ಯವಸ್ಥೆಯ ಕಂಬಗಳ ಕಾಳಗದ ಕಣವಾದದ್ದುಂಟು. ಪ್ರಧಾನವಾಗಿ ಪತ್ರಿಕೆಗಳು ಮತ್ತು ಆಡಳಿತ ಯಂತ್ರದ ನಡುವೆ ನಡೆದ ಈ ಸಂಘರ್ಷದಲ್ಲಿ ಪತ್ರಿಕಾ ಮಾಧ್ಯಮದ ಕೈಮೇಲಾಗಿ ಆಡಳಿತ ಯಂತ್ರ ಮಣಿಯಬೇಕಾಯಿತು.

ಇನ್ನೊಂದು ಗಣರಾಜ್ಯವಾದ ಅಮೆರಿಕದಲ್ಲಿಯೂ ಕೂಡಾ ಹತ್ತೊಂಭತ್ತನೆಯ ಶತಮಾನದಲ್ಲಿ ನಡೆದ ಅಂತರ್ಯುದ್ಧ ಪತ್ರಿಕಾ ಮಾಧ್ಯಮವನ್ನು ಸಂಕಟಕ್ಕೆ ಸಿಕ್ಕಿಸಿತ್ತು. ಇಂತಹ ಸಂಕಟಗಳ ಸುಳಿಯಲ್ಲೂ ಪತ್ರಿಕಾ ಮಾಧ್ಯಮ ಜನಹಿತದ ನೆಲೆಯನ್ನು ಕಳೆದುಕೊಳ್ಳದೆ ಜನತಂತ್ರ ರಾಜ್ಯ ವ್ಯವಸ್ಥೆಯ ಕಂದೀಲು ಆಗಿ ಬೆಳಗುತ್ತಲೇ ಬಂದಿದೆ. ಜನತಂತ್ರ ರಾಜ್ಯ ವ್ಯವಸ್ಥೆಯ ಏಳುಬೀಳುಗಳಲ್ಲಿ ಅಥವಾ ಮುನ್ನಡೆಯಲ್ಲಿ ಪತ್ರಿಕಾ ಮಾಧ್ಯಮಕ್ಕಿರುವ ಕಾವಲುಗಾರನ ಪಾತ್ರವನ್ನು ಎಲ್ಲ ಪ್ರಜಾಪ್ರಭುತ್ವವಾದಿರಾಷ್ಟ್ರಗಳೂ ಮನ್ನಿಸಿವೆ–ಗೌರವಿಸಿವೆ.

ಪತ್ರಿಕಾ ಮಾಧ್ಯಮದ ಸ್ವಾತಂತ್ರ್ಯವೆಂಬುದು ಜನತಂತ್ರದ ಉಳಿವು ಮತ್ತು ಬೆಳವಣಿಗೆಗೆ ಒಂದು ಅತ್ಯಾವಶ್ಯಕವಾದ ಪೋಷಕ ಪದಾರ್ಥವೆಂಬುದನ್ನು ವಿಚಾರವಂತ ಜನರೆಲ್ಲ ಒಪ್ಪುತ್ತಾರೆ. ಗಣರಾಜ್ಯ ಭಾರತದ ರಾಜ್ಯಾಂಗದಲ್ಲಿಯೂ ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಯ [illegible] ಉಲ್ಲೇಖವಿದೆ. ಆದರೆ ಈ ಸ್ವಾತಂತ್ರ್ಯ [illegible] ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸಬೇಕೆಂಬ ವಿಧಿಯೂ ಇದೆ. ಆದರೆ ದುರ್ದೈವದಿಂದ ಈ ದೇಶದಲ್ಲಿ ಇದುವರೆಗೆ ಜನಹಿತದ ಕಾವಲುಗಾರ ಎನ್ನಿಸುವ ಪತ್ರಿಕಾ ಮಾಧ್ಯಮದ ಬೆಳವಣಿಗೆಯೂ ಆಗಿಲ್ಲ. ಪತ್ರಿಕಾ ಸ್ವಾತಂತ್ರ್ಯದ ನಿರ್ವಹಣೆಗೆ ಪೂರಕವಾದ ವಿಧಿ ನಿಯಮಗಳೂ ರೂಪುಗೊಂಡಿಲ್ಲ. ಹೀಗಾಗಿ ಪತ್ರಿಕಾ ಮಾಧ್ಯಮ ಜನತಂತ್ರ ವ್ಯವಸ್ಥೆಯ ರಾಜಕೀಯ ಪ್ರಭುಗಳ ಮರ್ಜಿಗೆ ಮಣೆ ಹಾಕುವ ಪರಿಚಾರಕನಾಗಿಯೇ ಉಳಿದುಕೊಂಡು ಬಂದಿದೆ.

ಪತ್ರಿಕೆಗಳು ಮತ್ತು ರಾಜಕೀಯ ಪ್ರಭುಗಳ ನಡುವಿನ ಈ ನೆಂಟಸ್ತಿಕೆಯಲ್ಲಿ ಬಿರುಕು ಬಂದಾಗಲೆಲ್ಲ ಪತ್ರಿಕಾ ಸ್ವಾತಂತ್ರ್ಯದ ಮೇಲೆ ನೇರವಾದ ಹಲ್ಲೆ ನಡೆದಿದೆ. ಪತ್ರಿಕೆಗಳನ್ನು ತಮ್ಮ ಪ್ರಚಾರ ಮಾಧ್ಯಮಗಳಾಗಿ ಉಳಿಸಿಕೊಂಡು ಹೋಗುವುದರಲ್ಲಿ ರಾಜಕೀಯ ಪ್ರಭುಗಳು ವಿಶೇಷ ಕಾಳಜಿ ವಹಿಸುತ್ತಾರೆ. ಬಂಡವಾಳದ ಬೆಳವಣಿಗೆಯನ್ನೇ ಮೂಲ ಉದ್ದೇಶವಾಗಿ ಹೊಂದಿರುವ ಪತ್ರಿಕೆಗಳಿಗೆ ಈ ದೇಶದ ರಾಜಕೀಯ ಪ್ರಭುಗಳು ಒಲವಿನ ಮೇವು ಹಾಕಿ ಸಾಕಿಕೊಂಡು ಬಂದಿದ್ದಾರೆ. ಹೀಗೆ ರಾಜಕೀಯ ಪ್ರಭುಗಳು ಸಾಕಿದ ಪತ್ರಿಕೆಗಳೆಂಬ 'ಬಸವಣ್ಣ'ಗಳು ಒಮ್ಮೊಮ್ಮೆ ತಮ್ಮ ಯಜಮಾನನ ಮೇಲೆ ಹಾಯುವುದೂ ಉಂಟು. ಆಗ ರಾಜಕೀಯ ಪ್ರಭುಗಳಿಗೆ ತಡೆಯಲಾರದ ಕೋಪ ಬರುತ್ತದೆ. ಅವರು ಹಾಯಲು ಬಂದ ಬಸವಣ್ಣನಿಗೆ ಮೂಗುದಾರ ಹಾಕಿ ಕಂಬಕ್ಕೆ ಕಟ್ಟುತ್ತಾರೆ.

ತಮಿಳುನಾಡಿನ ವಿಧಾನ ಸಭೆಯು ರಾಜಕೀಯ ಪ್ರಭುಗಳು ಈಗ ಮಾಡಲು ಹೊರಟಿರುವುದು ಇದೇ ಕೆಲಸವನ್ನು. ನಾಲ್ಕು ದಶಕಗಳಿಂದ ಹೇಳಿದ್ದಕ್ಕೆಲ್ಲ ತಲೆ ಆಡಿಸಿಕೊಂಡು ಬಂದಿದ್ದ "ಆನಂದ ವಿಕಟನ್" ಎನ್ನುವ ಈ ಪತ್ರಿಕಾ ಬಸವಣ್ಣ ಒಮ್ಮಿಂದೊಮ್ಮೆಗೇ ಈಗ ಹಾಯಲು ಹೊರಟಿರುವುದು ರಾಜಕೀಯ ಪ್ರಭುಗಳಿಗೆ ಅಸಹನೀಯವಾಗಿದೆ.

ಆದರೆ ಈ ಪ್ರಕರಣದಲ್ಲಿ "ಆನಂದ ವಿಕಟನ್" ಪತ್ರಿಕೆಯ ಸಂಪಾದಕ ಎಸ್. ಬಾಲಸುಬ್ರಮಣ್ಯಂ ಅವರಲ್ಲಿ ತಮ್ಮ ಪತ್ರಿಕೆಯನ್ನು ಜನಪರ ಮಾಧ್ಯಮವಾಗಿ ಪರಿವರ್ತಿಸುವ ಆಸೆ ಪ್ರಕಟವಾಗಿರುವುದನ್ನು ನಾವು ಗಮನಿಸಬಹುದು. ಅವರ ಈ ಆಸೆ ವ್ಯಂಗ್ಯ ಚಿತ್ರದ ರೂಪದಲ್ಲಿ ಪ್ರಕಟವಾಗಿದೆ. ಶಾಸಕಾಂಗದ ರಾಜಕೀಯ ಪ್ರಭುಗಳನ್ನು ಕಿಸೆಗಳ್ಳರಾಗಿ ಚಿತ್ರಿಸಿದ್ದಾರೆ. ನಮ್ಮ ಅಭಿಪ್ರಾಯದಲ್ಲಿ ಈ ವ್ಯಂಗ್ಯ ಚಿತ್ರ ಭಾರತದ ಶಾಸಕಾಂಗಗಳ ನಿಜರೂಪದ ಬಹಳ ಸೌಮ್ಯ ವಿಶ್ಲೇಷಣೆ ಮಾಡಿದೆ. ನಿಜಕ್ಕೂ ಇಂದು ನಮ್ಮ ದೇಶದ ಶಾಸಕಾಂಗಗಳ ರಾಜಕೀಯ ಪ್ರಭುಗಳು ಹಗಲು ದರೋಡೆಕೋರರೂ - ಜನಹಿತದ ಕೊಲೆಗಡುಕರೂ ಆಗಿದ್ದಾರೆ. ಈ ಸತ್ಯಾಂಶಗಳನ್ನು ಜನಮನಕ್ಕೆ ಮುಟ್ಟಿಸದಿದ್ದರೆ ಈ ದೇಶದಲ್ಲಿ ಜನತಂತ್ರಕ್ಕೆ ಉಳಿಗಾಲವಿಲ್ಲ. ಇವನ್ನೀಗ ಅರ್ಥಮಾಡಿಕೊಳ್ಳಬೇಕಾದವರು ಮಹಾಜನತೆ. "ಆನಂದ ವಿಕಟನ್" ಅಂತಹ ಜನಪರವಾದ ನಿರ್ಭೀತ ಪತ್ರಿಕೆಗಳಿಗೆ ತಮ್ಮೊಲವಿನ ರಕ್ಷಣೆ ಕೊಡಬೇಕಾದವರೂ ಮಹಾಜನತೆ. ಸುಬ್ರಮಣ್ಯಂ ಅವರಿಗೆ ಈಗ ವಿಧಿಸಲಾದ ಜೈಲುವಾಸದ ಶಿಕ್ಷೆ ಈ ದೇಶದ ರಾಜಕೀಯ ಪ್ರಭುಗಳ ಮತ್ತು ಪತ್ರಿಕೆಗಳ ಮೌಲ್ಯಮಾಪನಕ್ಕೆ ದಾರಿ ಮಾಡೀತೆಂದು ನಾವು ನಿರೀಕ್ಷಿಸುತ್ತೇವೆ. ಜನಪರ ಪತ್ರಿಕೆಗಳನ್ನು ಹತ್ತಿಕ್ಕುವ ಕಾಯಕ ಮತ್ತೊಮ್ಮೆ ನಡೆಯಗೊಡದಂತೆ ಸಾರ್ವಜನಿಕ ಅಭಿಪ್ರಾಯ ರೂಪುಗೊಳ್ಳಲೆಂದು ಆಶಿಸುತ್ತೇವೆ.

ಮುಂಗಾರು
ಭಾನುವಾರ, ಏಪ್ರಿಲ್ 5, 1987

ನ್ಯಾಯಾಂಗ ತನಿಖೆಯ ಅಭಯ

ಫೇರ್ ಫ್ಯಾಕ್ಸ್ ಎಂಬ ನಿಗೂಢ ಹಗರಣವೊಂದು ಕೇಂದ್ರ ಸರಕಾರವನ್ನು ನಡುಗಿಸಿದೆ. ಪತ್ರಿಕೆಗಳಲ್ಲಿ ಈ ಹಗರಣದ ಬಗ್ಗೆ ದಿನದಿನವೂ ಹೊಸ ವಿಷಯಗಳು ಬಯಲಿಗೆ ಬರುತ್ತಿವೆ. ಸಂಸತ್ತಿನಲ್ಲಿ ಈ ವಿಚಾರದಲ್ಲಿ ದೊಡ್ಡ ಕೋಲಾಹಲವೇ ಆಗಿದೆ. ಇದೀಗ ಇಡಿಯ ಹಗರಣದ ಕುರಿತು ಸುಪ್ರೀಂ ಕೋರ್ಟಿನ ನ್ಯಾಯಾಧೀಶರೋರ್ವರಿಂದ ತನಿಖೆ ಏರ್ಪಡಿಸುವುದಾಗಿ ಪ್ರಧಾನ ಮಂತ್ರಿ ರಾಜೀವಗಾಂಧಿ ಯವರು ಲೋಕಸಭೆಯಲ್ಲಿ ಪ್ರಕಟಿಸಿದ್ದಾರೆ.

ಈ ಹಗರಣದ ಮೂಲ ದೇಶದ ದೊಡ್ಡ ಬಟ್ಟೆ ತಯಾರಿಕಾ ಸಂಸ್ಥೆಯಾದ ರಿಲಯನ್ಸ್ ಹಾಗೂ ಪತ್ರಿಕಾ ಸಂಸ್ಥೆಯಾದ ಎಕ್ಸ್‌ಪ್ರೆಸ್ ನಡುವಿನ ...ಗಳದಲ್ಲಿದೆ. ಕಳೆದ ವರ್ಷ ಈ ಪತ್ರಿಕಾ ಗುಂಪು ...ಲಯನ್ಸ್ ವಿರುದ್ಧ ಲೇಖನಗಳ ಸರಣಿಯನ್ನೇ ಪ್ರಕಟ ...ಸಿತು. ಈ ಹೋರಾಟದಲ್ಲಿ ಬಟ್ಟೆ ಕಂಪೆನಿಯ ಕುರಿ... ಹೆಚ್ಚಿನ ಮಾಹಿತಿಗಳನ್ನು, ಅದರ ವಿದೇಶಿ ಸಂಪ...ಳನ್ನು ಬಯಲಿಗೆಳೆಯಲು ವಿದೇಶಿ ಪತ್ತೇದಾರಿ ...ಯನ್ನು ಬಳಸಿಕೊಳ್ಳುವ ತೀರ್ಮಾನವನ್ನು ಎಕ್ಸ್... ಮಾಲೀಕ ರಾಮನಾಥ ಗೊಯೆಂಕಾ ಮಾಡಿ...ರು. ರಿಲಯನ್ಸ್ ಹಗರಣವನ್ನು ಹೊರಗೆಳೆವ ...ರ್ಯಾಚರಣೆಯಲ್ಲಿ ಎಕ್ಸ್‌ಪ್ರೆಸ್ ಏಕಾಂಗಿಯಾಗಿರ... ಭಾರತ ಸರಕಾರದ ಹಣಕಾಸು ಇಲಾಖೆಯೂ ...ನಿಯ ಪ್ರತಿಸ್ಪರ್ಧಿಯಾದ ಬಾಂಬೇ ಡೈಯಿಂಗ್ ...ನಿಯೂ ಇದರಲ್ಲಿ ಸೇರಿಕೊಂಡಿದ್ದವು.

... ಭಾರತೀಯ ಕಂಪೆನಿಗಳ ಹಾಗೂ ಗಣ್ಯರ ...ಶಿ ಸಂಪರ್ಕಗಳನ್ನೂ ಸೊತ್ತುಗಳನ್ನೂ ವಿದೇಶಿ ...ೇದಾರಿಕೆ ಮೂಲಕ ತಿಳಿದುಕೊಳ್ಳುವ ಕಾರ್ಯಾ...ಗೆ ಚಾಲನೆ ದೊರೆತದ್ದು ಇಲ್ಲಿಂದಲೇ. ಆದರೆ ...ಕಾಲ ಎಷ್ಟು ದೊಡ್ಡದು; ಇದರಲ್ಲಿ ಯಾರೆಲ್ಲ ...ೊಂಡಿದ್ದಾರೆ. ಪತ್ತೇದಾರಿಕೆಗೆ ಅನುಮತಿ ...ದ್ದು ಯಾರು. ಪ್ರಧಾನಮಂತ್ರಿಯ ಮಟ್ಟದಲ್ಲಿ ... ಅನುಮತಿ ಇದ್ದೀತೇ? ಸಚಿವ ಸಂಪುಟದಲ್ಲಿ ...ಗಿದೆಯೇ. ಈಗ ಸರಕಾರದ ಬಳಿಯಿರುವ ...ಷ್ಟು ಎಂಬುದೆಲ್ಲಾ ನಿಗೂಢ ವಿಚಾರಗಳು. ...ಧಾನಿ–ರಾಷ್ಟ್ರಪತಿ ನಡುವಿನ ಪತ್ರ ಪ್ರಸಂಗ ...ಂದ್ರ ಸರಕಾರದ ತನಿಖಾ ಏಜನ್ಸಿಗಳು ...ರ ದೆಹಲಿ ನಿವಾಸದ ಮೇಲೆ ದಾಳಿ ... ಹಾಗೂ ರಿಲಯನ್ಸ್ ಲೇಖನಗಳ ಬರಹ ...ಎಸ್. ಗುರುಮೂರ್ತಿ ಅವರನ್ನು ಬಂಧಿ ...ಕ ನಿಗೂಢವಾದ ಫೇರ್‌ಫ್ಯಾಕ್ಸ್ ಕೊಳ್ಳುತ್ತಿರುವ ಬಗೆಯನ್ನು ದೇಶದ ಪ್ರಜಾವರ್ಗವು ಆತಂಕದಿಂದ ನೋಡುತ್ತಿದೆ. ಸಹಜವಾಗಿಯೇ ವಿಷಯವು ಸಂಸತ್ತಿನ ಮುಂದೆ ಬಂದಿದೆ.

ಮಂಗಳವಾರ ಲೋಕಸಭೆಯಲ್ಲಿ ಫೇರ್‌ಫ್ಯಾಕ್ಸ್ ಹಗರಣದ ಬಗ್ಗೆ ನಾಲ್ಕು ಗಂಟೆ ಕಾಲ ಚರ್ಚೆ ನಡೆಯಿತು. ಚರ್ಚೆಯ ವೇಳೆ ಹಣಕಾಸು ಖಾತೆಯ ರಾಜ್ಯ ಸಚಿವ ಬ್ರಹ್ಮದತ್ ಕೊಟ್ಟ ಉತ್ತರದಲ್ಲಿ ಮಾಹಿತಿ ಸಂಗ್ರಹಕ್ಕೆ ಫೇರ್‌ಫ್ಯಾಕ್ಸ್ ಸಂಸ್ಥೆಯನ್ನು ಸರಕಾರ ನಿಯುಕ್ತಿ ಮಾಡಿಲ್ಲವೆಂದು ಹೇಳಿದರು. ಆ ಸಂಸ್ಥೆ ಕೇವಲ "ಸುದ್ದಿ ತಿಳಿಸುವ" ಕೆಲಸ ಮಾತ್ರ ಮಾಡಿತ್ತೆಂದೂ ಅದಕ್ಕಾಗಿ ಹಣ ಪಾವತಿ ಮಾಡಿಲ್ಲವೆಂದೂ ಹೇಳಿದರು. ಅದೇ ವೇಳೆ ಅದೇ ಸಭೆಯಲ್ಲಿ ಉಪಸ್ಥಿತರಿದ್ದ ವಿ. ಪಿ. ಸಿಂಗ್ ಫೇರ್‌ಫ್ಯಾಕ್ಸ್ ನಿಯಮಿಸಿದ ಹೊಣೆಗಾರಿಕೆಯಲ್ಲಿ ತಾನೂ ಪಾಲುದಾರನೆಂದು ಹೇಳಿದರು.

ಸರಕಾರ ಹೀಗೆ ಸಂಸತ್ತಿನಲ್ಲಿ ವಿರೋಧಾಭಾಸದ ಹೇಳಿಕೆಗಳನ್ನು ನೀಡಿದೆ. ಅದು ಬಹಳಷ್ಟನ್ನು ಮುಚ್ಚಿ ಇರಿಸಿದೆ ಎಂಬುದೂ ಖಚಿತ. ಈ ಜಾಲದಲ್ಲಿ ಸರಕಾರದ ಬಲಿಷ್ಠ ವ್ಯಕ್ತಿಗಳು ಸಿಕ್ಕಿಹಾಕಿಕೊಂಡಿರುವುದನ್ನೂ ಇದು ಸೂಚಿಸುತ್ತದೆ. ರಾಜಕೀಯವಾಗಿಯೂ ಆರ್ಥಿಕವಾಗಿಯೂ ಗಣ್ಯರಾದವರನೇಕರು ಒಳಗೊಂಡಿರುವುದೂ ಸ್ಪಷ್ಟವೆ. ಸರಕಾರ ಈ ಪ್ರಕರಣದಲ್ಲಿ ಈವರೆಗಿನ ತನಕ ಹೀಗೆ ಸಂಕಷ್ಟದಲ್ಲಿ ಸಿಲುಕಿ ಒದ್ದಾಡುವ ವಿದ್ಯಮಾನ ಇದಾಗಿದೆ.

ಈ ಪರಿಸ್ಥಿತಿಯಲ್ಲಿ ದೇಶಕ್ಕೆ ರಾಜಕೀಯ ನಡೆವಳಿಕೆಯಲ್ಲಿ ಮೇಲ್ಪಂಕ್ತಿ ಹಾಕಬೇಕಾದ ನಾಯಕರು ಹಿಡಿಯಬೇಕಾದ ದಾರಿ ಯಾವುದು? ಪ್ರಕರಣವನ್ನು ನಿಗೂಢವಾಗಿಯೇ ಇರಿಸುವುದರಿಂದ ಆಳುವವರ ಮೇಲೆ ಜನರಿಗೆ ಸಂಶಯ ಹೆಚ್ಚುತ್ತದೆ; ವಿಷಯಾಂತರ ಮಾಡುವುದರಿಂದಲೂ ಅದೇ ಪರಿಣಾಮ ಉಂಟಾಗುತ್ತದೆ. ಪ್ರಧಾನಿ–ರಾಷ್ಟ್ರಪತಿ ಜಗಳದಲ್ಲಿ ಹಾಗೂ ಫೇರ್‌ಫ್ಯಾಕ್ಸ್ ಜಗಳದಲ್ಲಿ ಸರಕಾರಿ ಧುರೀಣರು ಸಂಸತ್ತಿನಲ್ಲಿ ನಡೆದುಕೊಂಡ ಬಗೆ ಮಾತ್ರ ಅನುಕರಣೀಯವಾದ ಆದರ್ಶವಲ್ಲ. ವಿಷಯದ ಸ್ವರೂಪವೇನೆಂದು ಜನರಿಗೆ ಖಚಿತವಾಗಿರುವಾಗ ಅದನ್ನು ಸರಕಾರ ಅಲ್ಲಗಳೆಯುತ್ತ ಹೋದರೆ ಸರಕಾರದ ವಿಶ್ವಾಸದ ನೆಲೆ ಕುಸಿಯುತ್ತದೆ. ರಾಷ್ಟ್ರಾಧ್ಯಕ್ಷರಿಗೂ ಪ್ರಧಾನಿಗೂ ಜಗಳ ಮಸೆಯುತ್ತಿರುವಾಗ ಅಂಥದ್ದೇನೂ ಇಲ್ಲವೆಂಬಂತೆ ಪ್ರಧಾನಿ ಸಂಸತ್ತಿನಲ್ಲಿ ಮಾತನಾಡಿದರು. ಫೇರ್‌ಫ್ಯಾಕ್ಸನ್ನು ನಿಯಂತ್ರಿಸಲಾಗಿದೆ ಎಂದು ವಿ. ಪಿ. ಸಿಂಗ್ ಸೂಚನೆ ಕೊಡುತ್ತಿ...

ವು ಬಹಿರಂಗಕ್ಕೆ ಬರಲು ಕಾರಣವಾಯಿತು. ...ಪ್ರೆಸ್ ಸಂಸ್ಥೆ ಕೇಂದ್ರ ಸರಕಾರದ ರಹಸ್ಯ ...ತಿಗಳನ್ನು ವಿದೇಶಿ ಸಂಸ್ಥೆಗಳಿಗೆ ನೀಡುತ್ತಿದೆ ...ು ಗುರುಮೂರ್ತಿ ಪ್ರಕರಣದಲ್ಲಿ ಸಿ.ಬಿ.ಐ. ...ಯಾಲಯದಲ್ಲಿ ದೂರಿತು. ವಿದೇಶಿ ಪತ್ತೇದಾರಿ ...ಸ್ಥೆಯ ನೆರವು ಪಡೆದದ್ದು ಎಕ್ಸ್‌ಪ್ರೆಸ್ ಅಲ್ಲ, ...ದಲಾಗಿ ಕೇಂದ್ರ ಸರಕಾರದ ಹಣಕಾಸು ಇಲಾಖೆ ...ನು ಗುರುಮೂರ್ತಿಯವರ ಪರವಾಗಿ ಪ್ರತಿವಾದ ...ಡಲಾಯಿತು.

ಇದಿಷ್ಟು ಈ ಹಗರಣದ ಹಿನ್ನೆಲೆ. ವಿದೇಶ ...ಲ್ಲಿನ (ಮುಖ್ಯವಾಗಿ ಸ್ವಿಸ್ ಬ್ಯಾಂಕುಗಳಲ್ಲಿ) ...ರತೀಯರ ಸೊತ್ತಿನ ಬಗ್ಗೆ ತನಿಖೆಗೆ ಆಜ್ಞಾಪಿ...ವ ಕಾರ್ಯದಲ್ಲಿ ತಾನೂ ಕೂಡ ಪಾಲುದಾರ ...ನೆಂದು ಈ ಕಾರ್ಯಾಚರಣೆ ವೇಳೆ ಹಣಕಾಸು ಸಚಿವರಾಗಿದ್ದ ವಿ.ಪಿ. ಸಿಂಗ್ ಲೋಕಸಭೆಯಲ್ಲಿ ಹೇಳಿದ್ದಾರೆ. ವಿ.ಪಿ. ಸಿಂಗ್ ಅವರ ಸ್ಥಾನಪಲ್ಲಟವು ಇತ್ತೀಚೆಗೆ ತಾನೇ ನಡೆದದ್ದು. ಭಾರತೀಯರ ಸೊತ್ತಿನ ಕುರಿತಾದ ತನಿಖೆ ಹಾಗೂ ಕಂಪೆನಿಗಳ ಮೇಲಿನ ದಾಳಿ ಸಿಂಗ್‌ರ ಸ್ಥಾನಚ್ಯುತಿಗೆ ಕಾರಣವಾಯಿತೆಂಬುದು ಈಗ ನಿಚ್ಚಳ. ವಿದೇಶಿ ಗೂಢಚಾರಿಕೆಗೆ ಸಂಬಂಧಿಸಿದ ದಾಖಲೆಗೆ ಸಹಿ ಮಾಡಿದರೆನ್ನಲಾದ ಅನುಷ್ಠಾನ ನಿರ್ದೇಶನಾಲಯದ ಮುಖ್ಯಾಧಿಕಾರಿ ಭುರೇಲಾಲರನ್ನು ಬೇರಾವುದೋ ಕೊಂಪೆಗೆ ವರ್ಗಾಯಿಸಲಾಗಿದೆ. ಇಡಿಯ ನಿರ್ದೇಶನಾಲಯವನ್ನು ಹಣಕಾಸು ಖಾತೆಯಿಂದ ಕಿತ್ತು ಬೇರೆಡೆಗೆ ಸ್ಥಳಾಂತರಿಸಲಾಗಿದೆ.

ನಡೆದಿರುವ ವಿದ್ಯಮಾನಗಳು ಅತ್ಯಂತ ಮಹತ್ವದ್ದು ಎಂಬುದನ್ನು ಈ ಘಟನೆಗಳು ತೋರಿಸುತ್ತವೆ. ದೊರೆತಷ್ಟು ಮಾಹಿತಿಗಳನ್ನು ಪತ್ರಿಕಾ ರಂಗವು ಜನರ ಗಮನಕ್ಕೆ ತಂದಿದೆ. ರಾಜಕೀಯವೂ ಹಣಕಾಸಿಗೆ ಸಂಬಂಧಿಸಿದ್ದೂ ನೈತಿಕವೂ, ಆಗಿರುವ ಈ ಹಗರಣವು ಬಿಚ್ಚಿದ್ದಂತೆಯೇ ಬ್ರಹ್ಮದತ್ ಅದನ್ನು ಅಲ್ಲಗಳೆದರು. ಜನ ಯಾವುದನ್ನು ನಂಬಬೇಕು.

ಸರಕಾರದ ಮೇಲೆ, ರಾಜಕೀಯ ನಾಯಕತ್ವದ ಮೇಲೆ ಜನರ ವಿಶ್ವಾಸವನ್ನು ಗಟ್ಟಿಮಾಡುವ ವಿಧಾನ ಇದಲ್ಲ. ಸರಕಾರವು ಅತ್ಯಧಿಕವಾದ ಮುಕ್ತ ನೆಲೆಯಲ್ಲಿ ನಡೆಯಬೇಕು. ಫೇರ್‌ಫ್ಯಾಕ್ಸ್ ಹಗರಣದಲ್ಲಿ ತನಿಖೆಗೆ ಆಜ್ಞಾಪಿಸಿದ್ದು ಯಾರು. ಸರಕಾರದ ಯಾವ ಮಟ್ಟದಲ್ಲಿ ಅದಕ್ಕೆ ಅನುಮತಿ ದೊರೆಯಿತು. ಭಾರತೀಯರ ಸೊತ್ತಿನ ಬಗ್ಗೆ ದೊರೆತ ಮಾಹಿತಿಗಳೇನು ಎಂಬುದನ್ನು ಸರಕಾರ ಸಂಸತ್ತಿನಲ್ಲಿ ಮಂಡಿಸಬೇಕಿತ್ತು. ಸಂಸತ್ತು ಇರುವುದೇ ಅದಕ್ಕೆ. ಸರಕಾರದ ಹಾಗೂ ದೇಶದ ಆಗುಹೋಗುಗಳನ್ನು ಚರ್ಚಿಸುವುದಕ್ಕೆ. ಇದರಿಂದ ಸರಕಾರಕ್ಕೆ ಯಾವ ಹಾನಿಯೂ ಆಗುತ್ತಿರಲಿಲ್ಲ. ತಪ್ಪುಮಾಡಿದ ವ್ಯಕ್ತಿಗಳು ಸರಕಾರದಲ್ಲಿದ್ದರೆ ಅವರಿಗೆ ಹಾನಿಯಾಗುತ್ತಿತ್ತು, ಅವರು 'ಮನೆಗೆ ಹೋಗುತ್ತಿದ್ದರು ಅಷ್ಟೆ. ಇದೀಗ ಸಂದೇಹಾಸ್ಪದ ಚಾರಿತ್ರ್ಯವುಳ್ಳ ವ್ಯಕ್ತಿಗಳನ್ನು ಸರಕಾರಿ ವರಿಷ್ಠರು ಹತ್ತಿರ ಮಾಡಿಕೊಂಡಿದ್ದಾರೆಂಬ ಆರೋಪವನ್ನು ತಪ್ಪಿಸುವುದಕ್ಕಾಗುವುದಿಲ್ಲ. ಈ ಮುಕ್ತವಾದ ದಾರಿಯನ್ನು ಸರಕಾರ ಅನುಸರಿಸದೆ ಇರುವುದು ಅದಕ್ಕೆ ತಾತ್ಕಾಲಿಕವಾಗಿಯಾದರೂ ಅಡಗಿಸಿಡಬೇಕಾದ ಅನೇಕ ರಹಸ್ಯಗಳಿವೆ ಎಂಬುದಕ್ಕೆ ಸಾಕ್ಷಿಯಾಗಿದೆ.

ನ್ಯಾಯಾಧೀಶರಿಂದ ತನಿಖೆ ಮಾಡಿಸುತ್ತೇವೆ ಎಂಬುದು ಬೀಸುವ ದೊಣ್ಣೆಯನ್ನು ತಪ್ಪಿಸಿಕೊಳ್ಳುವ ಒಂದು ಉಪಾಯ ಮಾತ್ರ. ಈ ದೇಶದಲ್ಲಿ ನ್ಯಾಯಾಂಗ ತನಿಖೆಗಳು ಸಾಗುವ ದಾರಿ ಹಾಗೂ ನೀಡುವ ಫಲಿತಾಂಶದ ಗತಿ ಎಲ್ಲರಿಗೂ ಗೊತ್ತು. ಇದು ಅಸ್ಥಿಪಂಜರಗಳನ್ನು ಅನವರತವಾಗಿ ಭದ್ರ ಕಪಾಟಿನೊಳಗಿರಿಸುವ ಒಂದು ಅನುಕೂಲದ ವಿಧಾನವೆನಿಸಿದೆ. ನಮ್ಮ ಕೇಂದ್ರ ಸರಕಾರವೂ ಅಷ್ಟೇ-ಫೇರ್‌ಫ್ಯಾಕ್ಸ್‌ನ ಭಯದಿಂದ ಪಾರಾಗುವುದಕ್ಕೆ ಒಂದೆರಡು ವರ್ಷಗಳಷ್ಟು ಕಾಲದ ಅಭಯವನ್ನು ಪಡೆದುಕೊಂಡಿದೆ.

ಮುಂಗಾರು

ಭಾನುವಾರ, ಏಪ್ರಿಲ್ 12, 1987

ಮಧ್ಯಮ ವರ್ಗದ ಆಶಾಕಿರಣ

ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಕೇಂದ್ರ ಸರ್ಕಾರವು ಹಮ್ಮಿಕೊಂಡಿರುವ ಸಾಲಮೇಳ ಕಾರ್ಯಕ್ರಮಗಳು ಈಗಾಗಲೆ ಸಾಕಷ್ಟು ಜನಪ್ರಿಯತೆ ಪಡೆದಿವೆ. ಈ ಕಾರ್ಯಕ್ರಮ ತನ್ನದೇ ಆದ ಗುಣದೋಷಗಳನ್ನು ಹೊಂದಿದ್ದರೂ ಇದರಿಂದ ಬಹಳಷ್ಟು ನಿರುದ್ಯೋಗಿಗಳಿಗೆ ಅನುಕೂಲವಾಗಿದೆ ಎನ್ನುವುದಂತು ಸ್ಪಷ್ಟ.

ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮತ್ತೊಂದು ಹೊಸ ಹೆಜ್ಜೆ ಇಡುವ ತಯಾರಿಯಲ್ಲಿದೆ. ನಗರದ ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ ಪ್ರಯೋಜನವಾಗುವಂತಹ ಹೊಸ ಸಾಲ ಯೋಜನೆಯೊಂದನ್ನು ಕೇಂದ್ರ ಸರ್ಕಾರ ಸಧ್ಯದಲ್ಲೇ ಕಾರ್ಯರೂಪಕ್ಕೆ ತರುವ ಸಾಧ್ಯತೆ ಇದೆ.

ಪ್ರಸಕ್ತ ಸಂಸತ್ ಅಧಿವೇಶನದ ನಂತರ ಈ ಹೊಸ ಸಾಲ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಮನಸ್ಸು ಕೇಂದ್ರ ಸರ್ಕಾರಕ್ಕಿದೆ ಎಂದು ಹಣಕಾಸು ಇಲಾಖೆಯ ರಾಜ್ಯ ಸಚಿವ ಜನಾರ್ದನ ಪೂಜಾರಿಯವರು ತಿಳಿಸಿದ್ದಾರೆ.

ಸರ್ಕಾರವು ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿ ತಾವು ಸಮಾಜವಾದ ತತ್ವವನ್ನು ಕಾರ್ಯರೂಪಕ್ಕಿಳಿಸುತ್ತಿದ್ದೇವೆಂದು ಎಷ್ಟೇ ಕೊಚ್ಚಿಕೊಂಡರೂ ಬಹುಪಾಲು ಬ್ಯಾಂಕುಗಳು ಇನ್ನೂ ಪರೋಕ್ಷವಾಗಿ ಉದ್ಯಮ ಪ್ರಭುಗಳ ಹಿಡಿತದಲ್ಲಿರುವುದನ್ನು ಅಲ್ಲಗಳೆಯುವಂತಿಲ್ಲ.

ಮಿಶ್ರ ಅರ್ಥವ್ಯವಸ್ಥೆ ಇರುವ ಈ ದೇಶದಲ್ಲಿ ಶೇಕಡಾ 80ರಷ್ಟು ಜನಸಮುದಾಯ ಗ್ರಾಮೀಣ ಪ್ರದೇಶದಲ್ಲಿದೆ. ಈ ಜನಸಮುದಾಯ ಹೆಚ್ಚಾಗಿ ಕೃಷಿ ಕ್ಷೇತ್ರವನ್ನೇ ಅವಲಂಬಿಸಿರುವುದೂ ಅಷ್ಟೇ ಸತ್ಯ. ಆದರೆ ದಿನೇ ದಿನೇ ಏರುತ್ತಿರುವ ಜನಸಂಖ್ಯಾ ಸಮಸ್ಯೆಯಿಂದಾಗಿ ಮತ್ತು ನಗರಗಳ ಬದುಕಿನ ಆಕರ್ಷಣೆಗಳಿಂದಾಗಿ ಬಹಳಷ್ಟು ಗ್ರಾಮೀಣ ಯುವಜನರು ನಗರಗಳತ್ತ ವಲಸೆ ಹೋಗುತ್ತಿದ್ದಾರೆ. ನೆಲೆಸುತ್ತಿದ್ದಾರೆ.

ಇನ್ನು ನಗರಗಳಲ್ಲಿಯೇ ಹುಟ್ಟಿ, ಬೆಳೆದ ವಿದ್ಯಾವಂತ ಯುವಜನರ ಸಂಖ್ಯೆ ಕೂಡಾ ಅಗಾಧವಾಗಿಯೇ ಇದೆ. ಈ ಯುವಜನ ಸಮುದಾಯದಲ್ಲಿ ಬಹುತೇಕ ಮಂದಿ ಬಡ ಮತ್ತು ಮಧ್ಯಮ ವರ್ಗದಿಂದ ಬಂದವರಾಗಿರುತ್ತಾರೆ.

ನಗರ ಪ್ರದೇಶಗಳಲ್ಲಿ ನೆಲೆಸಿರುವ ಬಹುತೇಕ ಮಂದಿ ಒಂದೋ ಸರ್ಕಾರಿ ನೌಕರರಾಗಿರುತ್ತಾರೆ ಇಲ್ಲವೇ ದೊಡ್ಡ ಕೈಗಾರಿಕೆಗಳ ಉದ್ಯೋಗಿಗಳಾಗಿರುತ್ತಾರೆ. ಸದಾ ಬದುಕಿನಲ್ಲಿ ಭದ್ರತೆಯನ್ನು ಬಯಸುವ ಮತ್ತು ಯಾವುದೇ ಸ್ಪರ್ಧಾತ್ಮಕ ಜವಾಬ್ದಾರಿ ತೆಗೆದುಕೊಳ್ಳಲು ಹಿಂದೇಟು ಹೊಡೆಯುತ್ತಾ ತನ್ನ ಪರಿಧಿಯೊಳಗೆ ಬಸವನ ಹುಳುವಿನಂತೆ ಬದುಕಲಿಚ್ಛಿಸುವ ನಗರದ ಮಧ್ಯಮ ವರ್ಗದ ಮನೋಧರ್ಮಕ್ಕೇ ಪೂರಕವಾಗಿ ನಗರಗಳ ಯುವಜನರ ಮನಸ್ಸು ಕೂಡಾ ರೂಪಿತಗೊಂಡಿರುತ್ತೆ.

ನಮ್ಮ ಶಿಕ್ಷಣ ವ್ಯವಸ್ಥೆ ಕೂಡಾ ನಗರಗಳಲ್ಲಿ ಯುವಜನರನ್ನು ಇದೇ ಹಾದಿಯಲ್ಲಿ ಕೊಂಡೊಯ್ಯುತ್ತಿದೆ ಎಂದರೆ ಅತಿಶಯೋಕ್ತಿ ಎನಿಸದು.

ಈ ಹಿನ್ನೆಲೆಯಲ್ಲಿ ನಗರದ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಸಹಾಯವಾಗುವಂತೆ ಬ್ಯಾಂಕ್ ಸಾಲ ನೀಡಿದರೆ ಅದೊಂದು ಬಹಳ ಒಳ್ಳೆಯ ಕಾರ್ಯಕ್ರಮವಾಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ನಗರಗಳಲ್ಲಿ ಇಡೀ ಆರ್ಥಿಕ ವ್ಯವಸ್ಥೆಯನ್ನೇ ತಮ್ಮ ಹಿಡಿತದಲ್ಲಿಟ್ಟುಕೊಂಡಿರುವ ದೊಡ್ಡ ದೊಡ್ಡ ಉದ್ಯಮ ಪ್ರಭುಗಳ ಏಕ ಸ್ವಾಮ್ಯವನ್ನು ಈ ಮೂಲಕ ಮುರಿಯಲೂ ಸಾಧ್ಯವಿದೆ ಎಂದರೆ ತಪ್ಪಾಗಲಾರದು.

ನಗರಗಳ ಹಿನ್ನೆಲೆಯುಳ್ಳ ವಿದ್ಯಾವಂತ ನಿರುದ್ಯೋಗಿಗಳು ತಮಗೆ ಸಿಗುವ ಸಾಲದ ನೆರವಿನಿಂದ ನಗರಗಳಲ್ಲಿ ಸಣ್ಣ ಮಟ್ಟದ ಕೈಗಾರಿಕೆ ಮತ್ತು ಗೃಹ ಕೈಗಾರಿಕೆಗಳನ್ನು ಆರಂಭಿಸಲು ಸಾಧ್ಯವಾಗುತ್ತದೆ.

ಈ ನಿಟ್ಟಿನಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸ್ವಉದ್ಯೋಗ ಯೋಜನೆ ಸಾಲದ ಗರಿಷ್ಠ ಮಿತಿಯನ್ನು 25,000 ರೂಗಳಿಂದ 35,000 ರೂಗಳಿಗೆ ಏರಿಸುವ ಪ್ರಸ್ತಾಪವನ್ನು ಕೂಡಾ ಸರ್ಕಾರ ಪರಿಶೀಲಿಸುತ್ತಿರುವುದು ನಿಜಕ್ಕೂ ಸ್ವಾಗತಾರ್ಹವಾದುದು.

ಇಂದು ನಮ್ಮ ದೇಶದಲ್ಲಿ ಅನುಸರಿಸಲಾಗುತ್ತಿರುವ ವೇತನ ವ್ಯವಸ್ಥೆ ಉದ್ಯೋಗದಲ್ಲಿ ಇಲ್ಲದವರನ್ನು ಬಲಿಕೊಟ್ಟು ಉದ್ಯೋಗದಲ್ಲಿರುವವರನ್ನು ಸಂರಕ್ಷಿಸುವಂತಿದೆ ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಡಾ|ಡಿ.ಎಂ. ನಂಜುಂಡಪ್ಪ ಹೇಳಿದ ಮಾತು ಇಲ್ಲಿ ಅರ್ಥಪೂರ್ಣವೆನಿಸುತ್ತದೆ.

ಪ್ರಸ್ತುತ ನಗರದ ಬಹುಪಾಲು ಜನಸಮುದಾಯ ಸರ್ಕಾರಿ ವೇತನಗಳಿಗೆ ಜೋತುಬಿದ್ದು ಬದುಕು ನಡೆಸುತ್ತಿರುವವರದಾಗಿದೆ. ಸರ್ಕಾರ ಕೂಡಾ ಈ ಜನಸಮುದಾಯಕ್ಕೇ ಎಲ್ಲಾ ತೆರನಾದ ಸೌಲಭ್ಯಗಳನ್ನು ಒದಗಿಸುತ್ತಾ ಸ್ವತಂತ್ರ ಜೀವನ ನಡೆಸುವವರನ್ನು ಅಲಕ್ಷಿಸುತ್ತಿರುವಂತೆ ತೋರುತ್ತದೆ.

ನಗರಗಳ ಬಡ ಮತ್ತು ಮಧ್ಯಮ ವರ್ಗದ ನಿರುದ್ಯೋಗಿ ಯುವ ಜನರಿಗೆ ಈ ರೀತಿ ಸಾಲ ಸೌಲಭ್ಯಗಳನ್ನು ನೀಡಿ ಅವರ ಬದುಕಿನಲ್ಲಿ ಹೊಸ ಆಯಾಮಗಳನ್ನು ಸೃಷ್ಟಿಸುವತ್ತ ಸರ್ಕಾರ ಯೋಚನೆ ಮಾಡಿರುವುದು ನಿಜಕ್ಕೂ ಅಭಿನಂದನಾರ್ಹ.

ಇಂದು ದೇಶದ ಒಟ್ಟು ವಾರ್ಷಿಕ ಆದಾಯವಾದ ಸುಮಾರು ಎರಡು ಲಕ್ಷ ಕೋಟಿರೂಗಳಲ್ಲಿ ಒಂದು ಲಕ್ಷ ಕೋಟಿರೂಗಳ ಚಲಾವಣೆ ನಗರಗಳಲ್ಲೇ ಇದೆ.

ಈ ಚಲಾವಣೆಯ ಸಂಪೂರ್ಣ ನಿಯಂತ್ರಣ ಕೂಡಾ ಪಂಚತಾರಾ ಸಂಸ್ಕೃತಿಯ ಉದ್ಯಮ ಪ್ರಭುಗಳ ಹಿಡಿತದಲ್ಲೇ ಇದೆ.

ಈ ಅಸಮತೋಲನವನ್ನು ನಿವಾರಿಸುವ ನಿಟ್ಟಿನಲ್ಲಿ ನಗರದ ಬಡ ಮತ್ತು ಮಧ್ಯಮ ವರ್ಗದ ನಿರುದ್ಯೋಗಿ ವಿದ್ಯಾವಂತ ಯುವಜನರಿಗೆ ಬ್ಯಾಂಕುಗಳು ಸಾಲ ಸೌಲಭ್ಯ ಒದಗಿಸಿ ಗ್ರಾಮೀಣ ಪ್ರದೇಶಗಳಲ್ಲಿ ಅವರು ತಮ್ಮ ಸಣ್ಣ ಉದ್ಯಮಗಳನ್ನು ಆರಂಭಿಸುವಂತೆ ಪ್ರೋತ್ಸಾಹಿಸಿದರಂತೂ ಇದೊಂದು ಅಪೂರ್ವ ಆರ್ಥಿಕಾಭಿವೃದ್ಧಿ ಕಾರ್ಯಕ್ರಮವಾಗುತ್ತದೆ ಎನ್ನಬಹುದು.

ದೇಶದಲ್ಲಿ ಪ್ರಸ್ತುತ ಇರುವ ಎಪ್ಪತ್ತು ಕೋಟಿ ಜನಸಂಖ್ಯೆಯಲ್ಲಿ ಶೇಕಡಾ 50ರಷ್ಟು ಮಂದಿ ಬಡತನ ರೇಖೆಯ ಕೆಳಗಿದ್ದಾರೆ. ಸರ್ಕಾರ ಬಡ ಮತ್ತು ಮಧ್ಯಮ ವರ್ಗದ ನಗರವಾಸಿ ವಿದ್ಯಾವಂತರಿಗೆ ಸಾಲ ನೀಡಿ ಹಳ್ಳಿಗಳತ್ತ ಕಳುಹಿಸಿ ಉದ್ಯಮಗಳನ್ನು ಆರಂಭಿಸುವಂತಾದರೆ ಬಡತನದ ರೇಖೆಯನ್ನು ಇನ್ನೂ ಕೆಳಗೆ ತರಬಹುದೆನ್ನುವುದರಲ್ಲಿ ಎರಡು ಮಾತಿಲ್ಲ.

ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಸಾಮೂಹಿಕ ಚಿಂತನೆ ನಡೆಯಬೇಕಿದೆ. ಜೊತೆಗೆ ಸಾಲ ನೀಡುವ ಸಂದರ್ಭದಲ್ಲಿ ನಡೆಯುವ ನಾನಾ ತೆರನಾದ ಭ್ರಷ್ಟಾಚಾರಗಳಿಗೆ ಕಡಿವಾಣ ಹಾಕಬೇಕಾಗಿದೆ.

ಅದಕ್ಕಾಗಿ ಆಗಾಗ್ಗೆ ಹಠಾತ್ ದಾಳಿಗಳನ್ನು ನಡೆಸಬೇಕು. ಸಾಲ ನೀಡುವಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರಗಳು ನಡೆದ ಬಗ್ಗೆ ಪತ್ರಿಕೆಗಳು ಬಹಿರಂಗಗೊಳಿಸುವ ವರದಿಗಳ ಕುರಿತೂ ಪ್ರಾಮಾಣಿಕ ತನಿಖೆಗಳನ್ನು ನಡೆಸುವ ಸಹೃದಯತೆಯನ್ನೂ ಕೇಂದ್ರ ಹಣಕಾಸು ಖಾತೆ ತೋರಬೇಕು.

ಹೀಗಾದಲ್ಲಿ ಮಾತ್ರ ನಗರಗಳ ಬಡ ಮತ್ತು ಮಧ್ಯಮ ವರ್ಗದವರಿಗೆ ನೀಡುವ ಸಾಲಸೌಲಭ್ಯಗಳ ಯೋಜನೆ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳಲು ಸಾಧ್ಯವಾಗುತ್ತದೆ.

ಮುಂಗಾರು

ಶನಿವಾರ, ಏಪ್ರಿಲ್ 18, 1987

ನಿಖರ ಚರ್ಚೆ ನಡೆಯಲಿ

ಇದು ಕೇವಲ ಮೂವತ್ತು ಕೋಟಿ ರೂಪಾಯಿ ಕಮಿಶನ್‌ನ ಪ್ರಶ್ನೆಯಲ್ಲ. ನಮ್ಮ ವ್ಯವಸ್ಥೆ ಹಿಡಿದಿರುವ ದುರಂತಮಯ ದಾರಿಯ ದಿಕ್ಸೂಚಿ.

"ರಕ್ಷಣಾ ಖಾತೆಯ ಶಸ್ತ್ರಾಸ್ತ್ರ ಕೊಳ್ಳುವ ವ್ಯವಹಾರವೊಂದರಲ್ಲಿ ಏಜಂಟನೊಬ್ಬ 30ಕೋಟಿ ರೂಪಾಯಿ ಕಮಿಷನ್ ಪಡೆದಿದ್ದಾನೆಂಬ ಬಗ್ಗೆ ರಕ್ಷಣಾ ಖಾತೆ ಸಚಿವರಾಗಿದ್ದ ವಿ.ಪಿ. ಸಿಂಗ್ ತನಿಖೆಗೆ ಆಜ್ಞೆ ಮಾಡಿದ್ದು ಸರಿ. ಆದರೆ ಅದನ್ನು ಬಹಿರಂಗಪಡಿಸಿದ್ದು ತಪ್ಪು" ಎಂದು ಲೋಕಸಭೆಯಲ್ಲಿ ಆಳುವ ಪಕ್ಷದ ಸದಸ್ಯರು ಅಬ್ಬರಿಸಿದ್ದಾರೆ.

ತನಿಖೆ ಮಾಡುವ ನಿರ್ಧಾರವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದಕ್ಕೆ ವಿ.ಪಿ. ಸಿಂಗ್ ಮೇಲೆ ಆಳುವ ಸದಸ್ಯರೆಲ್ಲ ಒಕ್ಕೊರಳಿನಿಂದ ದಾಳಿ ನಡೆಸಿದ್ದಾರೆ. ತರಾಟೆಗೆ ತೆಗೆದುಕೊಂಡಿದ್ದಾರೆ.

ರಕ್ಷಣಾ ವ್ಯವಹಾರದ ಕಮಿಶನ್ ವಿಷಯ, ಫೇರ್‌ಫಾಕ್ಸ್ ಹಗರಣ, ವಿ. ಪಿ. ಸಿಂಗ್ ರಾಜೀನಾಮೆ ಇದೆಲ್ಲ ಒಂದರ ಹಿಂದೆ ಒಂದರಂತೆ ಬಯಲಿಗೆ ಬಂದಿವೆ. ಕೇಂದ್ರ ಸರ್ಕಾರ ನಡೆಸಿರುವ 'ಅವ್ಯವಹಾರ'ಗಳ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಸಬೇಕೆಂದು ಪ್ರತಿಪಕ್ಷಗಳನಾಯಕರು ಒಟ್ಟು ಸೇರಿ ಒತ್ತಾಯಿಸಿದ್ದಾರೆ. ಎಲ್ಲ ಹಗರಣಗಳ ಹಿನ್ನೆಲೆಯಲ್ಲಿರುವ ವಿಷಯಗಳು ಈ ದೇಶದ ಜನರ ಮುಂದೆ ಬತ್ತಲಾಗಬೇಕೆಂದು ಆಗ್ರಹಿಸಿದ್ದಾರೆ.

ಪ್ರತಿಪಕ್ಷಗಳ ಈ ಆಗ್ರಹ ನ್ಯಾಯ ಸಮ್ಮತ-ಸತ್ಯ ಬತ್ತಲಾಗಲೇಬೇಕು. ಅದಕ್ಕೆ ಪಕ್ಷಬೇಧ ಕೂಡದು. 'ರಕ್ಷಣಾ ವಿಷಯ ಎಂಬ ಮುಖವಾಡವೂ ಸಲ್ಲದು.

ಶಸ್ತ್ರಾಸ್ತ್ರ ವ್ಯವಹಾರ ದೇಶದ ರಕ್ಷಣೆಗೆ ಸಂಬಂಧಿಸಿದ್ದು. ಅದನ್ನು ಬಹಿರಂಗಪಡಿಸುವುದು ಸಾಧುವಲ್ಲ ಎಂಬ ಮಾತು ಹಾಸ್ಯಾಸ್ಪದ. ದೇಶದ ರಕ್ಷಣೆಗೆ ಯಾವ ದೇಶಗಳಿಂದ ಎಷ್ಟು ಶಸ್ತ್ರಾಸ್ತ್ರ ಕೊಳ್ಳಲಾಗಿದೆ, ಅದಕ್ಕೆ ಎಷ್ಟು ಖರ್ಚು ತಗುಲಿದೆ ಎಂದು ತಿಳಿಯುವ ಹಕ್ಕು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಇದ್ದೇ ಇದೆ. 'ರಕ್ಷಣೆ'ಯ ನೆಪದಲ್ಲಿ 'ರಹಸ್ಯ'ದ ಮುಸುಕು ಹೊದ್ದು ಸತ್ಯವನ್ನು ಮುಚ್ಚಿಡುವುದು ಸಭ್ಯರ ಲಕ್ಷಣವಲ್ಲ.

ಈ ದೇಶದಲ್ಲಿ ಸಾರ್ವಜನಿಕರ ತಿಳುವಳಿಕೆಗೆ ಬರದ ಹೆಚ್ಚಿನೆಲ್ಲ ವಿಷಯಗಳಲ್ಲೂ ಅವ್ಯವಹಾರದ ವಾಸನೆ ಹೊಡೆದಿದೆ. ಸಾರ್ವಜನಿಕರಿಗೆ ತಿಳಿಯಬಾರದು ಎಂಬ ಮಾತು ಬಂದೊಡನೆ ಅಲ್ಲಿ ಅವ್ಯವಹಾರ ನಡೆದಿದೆ ಎಂಬುದು ನಿಸ್ಸಂಶಯ.

ನೂರಾರು ಕೋಟಿ ರೂ.ಗಳ ರಾಷ್ಟ್ರೀಯ ವ್ಯವಹಾರವೊಂದರಲ್ಲಿ ರಾಜಕಾರಣಿಗಳ ಬಂಧು-ಬಳಗದವರು, ಹಿಂಬಾಲಕರು, ಕಮಿಶನ್ ಕಬಳಿಸುವುದೆಂದರೆ ನಮ್ಮ ವ್ಯವಸ್ಥೆ ದುರಂತದ ದಾರಿ ಹಿಡಿದಿದೆಯೆಂದೇ ಅರ್ಥ.

ರಕ್ಷಣಾ ವ್ಯವಹಾರ ರಹಸ್ಯದ್ದು ಎನ್ನುವುದೂ ಇಲ್ಲಿ ಸಮರ್ಥನೀಯವಲ್ಲ. ಶಸ್ತ್ರಾಸ್ತ್ರ ಗುತ್ತಿಗೆ ಪಡೆದ ವಿದೇಶೀಯ ಕಂಪೆನಿ ಈ ವ್ಯವಹಾರವನ್ನು ಗುಟ್ಟಾಗಿ ಇಡುತ್ತದೆಂದು ಏನು ಗ್ಯಾರಂಟಿ? ವಿದೇಶದಲ್ಲಿ ಬಹಿರಂಗವಾಗಬಹುದಾದ ವಿಷಯ ದೇಶದೊಳಗಿನ ಸಾರ್ವಜನಿಕರಿಗೆ ಅಸ್ಪೃಶ್ಯವೆನಿಸುವುದರಲ್ಲಿ ಯಾವ ನ್ಯಾಯವಿದೆ?

ಅಮೆರಿಕಾದಂತಹ ರಾಷ್ಟ್ರಗಳಲ್ಲೇ ರಕ್ಷಣಾ ಇಲಾಖೆಯ ಎಲ್ಲ ಕೊಡು-ಕೊಳ್ಳುವಿಕೆಯನ್ನು ಜನಪ್ರತಿನಿಧಿಗಳ ಮುಂದೆ ತರಲಾಗುತ್ತದೆ. ಸಾರ್ವಜನಿಕ ಮಟ್ಟದಲ್ಲಿ ಚರ್ಚೆ ನಡೆಯುತ್ತದೆ. ಭಾರತದಲ್ಲಿ ಅವೆಲ್ಲಾ ರಕ್ಷಣೆಯ ಮುಸುಕಿನಡಿಯಲ್ಲಿ ಏಕೆ ಭೂಗತಗೊಳ್ಳಬೇಕು?

ರಾಜಕಾರಣಿಗಳ ನೈತಿಕತೆ ಬಗ್ಗೆ ಈ ದೇಶದ ತುಂಬಾ ಸಂಶಯದ ಹೊಗೆ ಎದ್ದಿರುವಾಗ ಆಳುವ ಹಕ್ಕನ್ನೇ ಬಳಸಿಕೊಂಡು ಅವ್ಯವಹಾರ ಮುಚ್ಚಿಡುವುದು ಸರಿಯಲ್ಲ. ರಾಜಕಾರಣಿಗಳ ನಿಜರೂಪ ಬಹಿರಂಗ ಆಗಬೇಕಾದದ್ದು ಈಗ ಅತೀ ಅಗತ್ಯ.

ಆಳುವ ಪಕ್ಷ ಅವ್ಯವಹಾರ ನಡೆಸುವುದು ಹೊಸತಲ್ಲ. ಅದನ್ನು ಪತ್ತೆ ಹಚ್ಚಲೆಂದೇ ಪ್ರತಿಪಕ್ಷಗಳಿರುವುದು. ಕೇಂದ್ರದಲ್ಲಾಗಲೀ ಅಥವಾ ಕರ್ನಾಟಕ, ಆಂಧ್ರ ಮತ್ತಿತರ ರಾಜ್ಯಗಳಲ್ಲೇ ಆಗಲಿ, ಜನರ ಅರಿವಿಗೆ ಬರದೆ ಸರ್ಕಾರ ಯಾವುದೇ ವ್ಯವಹಾರ ಕೈಗೊಳ್ಳುವುದು ಜನರಿಗೇ ದ್ರೋಹ ಬಗೆದಂತೆ.

ಪ್ರತಿಪಕ್ಷಗಳು ಕರೆನೀಡಿದಂತೆ ಈ ಎಲ್ಲ ವ್ಯವಹಾರಗಳ ಬಗ್ಗೆ ಸಾರ್ವಜನಿಕ ಚರ್ಚೆ ನಡೆಯಬೇಕು. ರಾಜಕಾರಣಿಗಳ ಆತ್ಮಸಾಕ್ಷಿಯನ್ನು ಚುಚ್ಚುವ ಕೆಲಸ ನಡೆಯಬೇಕು. ಪ್ರಜೆಗಳ ಕಣ್ಗಾವಲಿಲ್ಲದೆ ಎಚ್ಚರತಪ್ಪುವ ಅಧಿಕಾರಸ್ಥರ ಆಟ ನಿಲ್ಲಬೇಕು. ಜನತಂತ್ರ ಯಾವ ದಾರಿಯಲ್ಲಿ ಹೋಗಬೇಕೆಂದು ನಿರ್ಧರಿಸುವ ಹಕ್ಕು ಜನತೆಗಿರುವುದರಿಂದ ಚರ್ಚೆ ಬಗ್ಗೆ ಎರಡು ಮಾತೇ ಕೂಡದು.

ಅವ್ಯವಹಾರಗಳೇ ನಡೆದಿಲ್ಲವೆಂದಾದರೆ ಅಧಿಕಾರಸ್ಥರು ಚರ್ಚೆಗೆ ಹೆದರುವುದಾದರೂ ಯಾಕೆ?

ನಿಖರ ಸಾರ್ವಜನಿಕ ಚರ್ಚೆ ನಡೆದಲ್ಲಿ ಮಾತ್ರ ಸತ್ಯ ಬತ್ತಲಾಗುತ್ತದೆ.

ಮುಂಗಾರು

ಮಂಗಳವಾರ, ಏಪ್ರಿಲ್ 21, 1987

ಇನ್ನು ಬೇಡ ಆತ್ಮವಂಚನೆ

ಗಡಿ ಪ್ರದೇಶಗಳ ಜನರ ಅಭಿಮತ ಸಂಗ್ರಹಿಸಿ ಕರ್ನಾಟಕ-ಮಹಾರಾಷ್ಟ್ರ ರಾಜ್ಯಗಳ ನಡುವಿನ ಗಡಿ ವಿವಾದ ಇತ್ಯರ್ಥವಾಗಬೇಕೆಂಬ ಸೂಚನೆಯನ್ನು ಕನ್ನಡ ಕಾವಲು ಸಮಿತಿಯ ಅಧ್ಯಕ್ಷ ಪಾಟೀಲ ಪುಟ್ಟಪ್ಪನವರು "ಅಪ್ರಸ್ತುತ ಹಾಗೂ ಅಸಂಬದ್ಧ" ಎಂದು ವರ್ಣಿಸಿ ತಿರಸ್ಕರಿಸಿರುವರೆಂದು ವರದಿಯಾಗಿದೆ.

ಗಡಿ ವಿವಾದದ ಇತ್ಯರ್ಥಕ್ಕೆ ಜನಮತ ಸಂಗ್ರಹದ ಸೂತ್ರವನ್ನು ಮುಂದಿಟ್ಟವರು ಮಹಾರಾಷ್ಟ್ರದ ಮುಖ್ಯಮಂತ್ರಿ ಎಸ್. ಬಿ. ಚವಾಣ್. ಕಳೆದ ಮೂವತ್ತೆರಡು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಈ ಗಡಿ ವಿವಾದದ ಪರಿಹಾರ ಯತ್ನದಲ್ಲಿ ಕೆಲವೊಮ್ಮೆ ಚರ್ಚೆಗೆ ಬಂದ ಸೂತ್ರವಿದು. ಈ ಸೂತ್ರದ ಅನುಸರಣೆ ತಮಗೆ ಹಿತಕಾರಿಯಾಗುವುದೆಂಬ ನಂಬಿಕೆ ಮಹಾರಾಷ್ಟ್ರೀಯರಿಗೆ ಇರುವುದರಿಂದಲೇ ಅವರು ಈಗೀಗ ಇದಕ್ಕೆ ಒತ್ತು ಕೊಡುತ್ತಿದ್ದಾರೆ.

ಜನಮತ ಗಣನೆಯ ಸೂತ್ರ ಮಹಾರಾಷ್ಟ್ರೀಯರಿಗೆ ಹೆಚ್ಚು ಪ್ರಿಯವಾಗುತ್ತಿದೆಯೆನ್ನುವುದಕ್ಕಾಗಿಯೇ ಅದು ಕನ್ನಡಿಗರಿಗೆ ಅಪ್ರಿಯವಾಗುತ್ತಿದೆ-ಅಸಂಬದ್ಧವೆನ್ನಿಸುತ್ತಿದೆ. ಕನ್ನಡ ಕಾವಲು ಸಮಿತಿಯ ಅಧ್ಯಕ್ಷ ಪಾಟೀಲ ಪುಟ್ಟಪ್ಪನವರು ಸಮಸ್ತ ಕನ್ನಡಿಗರ ಅಭಿಮತವನ್ನು ಪ್ರತಿಧ್ವನಿಸಿರುವರೇ ಹೊರತು ಮತ್ತೇನೂ ಅಲ್ಲ. ಕರ್ನಾಟಕದ ಎಲ್ಲ ರಾಜಕಾರಣಿಗಳು, ಸಾಹಿತಿಗಳು, ಕಲಾವಿದರು ಹಾಗೂ ಕನ್ನಡಾಭಿಮಾನಿಗಳು ಪುಟ್ಟಪ್ಪನವರಿಗಿಂತಲೂ ತುಸು ಉಗ್ರವಾದ ಶೈಲಿಯಲ್ಲಿ ಜನಮತ ಸಂಗ್ರಹದ ಸೂತ್ರವನ್ನು ತಿರಸ್ಕರಿಸಬಹುದು.

ಬೆಳಗಾವಿ ಗಡಿ ವಿವಾದದ ವಿಚಾರದಲ್ಲಿ ಕನ್ನಡ ಜನ ಇಂತಹ ಒಂದು ಅಪ್ರತಿಮ ಕನ್ನಡಾಭಿಮಾನವನ್ನು ಪ್ರದರ್ಶಿಸುತ್ತಲೇ ಬಂದಿದ್ದಾರೆ. "ಅಪ್ಪಟ ಕನ್ನಡ ನೆಲವಾದ ಬೆಳಗಾವಿ ನಗರವನ್ನು ಕಬಳಿಸಲು ಮಹಾರಾಷ್ಟ್ರೀಯರು ನಡೆಸುತ್ತ ಬಂದಿರುವ ತಂತ್ರಗಳನ್ನು ಖಂಡಿಸುವುದು ಕನ್ನಡಾಭಿಮಾನ ಹೆಗ್ಗುರುತಾಗಿ ಉಳಿದುಕೊಂಡು ಬಂದಿದೆ. ಕನ್ನಡ ಜನರನ್ನು ಆವರಿಸಿರುವ ಈ ಬೆಳಗಾವಿ ವ್ಯಾಮೋಹ". ಕಾಸರಗೋಡಿನ ಕನ್ನಡಿಗರ ಬವಣೆಗಳ ಬಗ್ಗೆ ಕನ್ನಡಿಗರನ್ನು ಕುರುಡಾಗಿಸಿದೆ.

ಫಜಲ್ ಅಲಿ ಆಯೋಗದ ಶಿಫಾರಸಿನ ಆಧಾರದ ಮೇಲೆ 1956ರಲ್ಲಿ ಭಾಷಾವಾರು ರಾಜ್ಯಗಳ ರಚನೆಯಾದಾಗ ಹಲವಾರು ಗಡಿ ಸಮಸ್ಯೆಗಳು ಹುಟ್ಟಿಕೊಂಡಿದ್ದವು. ಇವುಗಳಲ್ಲಿ ಇಂದಿಗೂ ತಲೆ ಸಿಡಿತದ ಸಮಸ್ಯೆಗಳಾಗಿ ಉಳಿಕೊಂಡ ಗಡಿವಿವಾದಗಳೆಂದರೆ ಬೆಳಗಾವಿ ಮತ್ತು ಕಾಸರಗೋಡು. ಭೌಗೋಳಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಕರ್ನಾಟಕದ ಅವಿಭಾಜ್ಯ ಅಂಗವೆನಿಸಿದ್ದ ಕಾಸರಗೋಡನ್ನು ಫಜಲ್ ಅಲಿ ಆಯೋಗ ಕೇರಳಕ್ಕೆ ಕೊಟ್ಟಾಗ ಕಾಸರಗೋಡಿನ ಕನ್ನಡಿಗರ ಒಡಲಿಗೆ ಬೆಂಕಿ ಬಿದ್ದಿತ್ತು. ಹಾಗೆಯೇ ಪ್ರಾದೇಶಿಕ ಮಹತ್ವಾಕಾಂಕ್ಷೆಯನ್ನು ಹೊತ್ತು ಮೆರೆಯಲು ಸಿದ್ಧರಾಗಿದ್ದ ಮಹಾರಾಷ್ಟ್ರೀಯರಿಗೆ ಮರಾಠಿ ಮಾತನಾಡುವ ಜನರೇ ಅತ್ಯಧಿಕ ಸಂಖ್ಯೆಯಲ್ಲಿರುವ ನಿಪ್ಪಾಣಿ, ಖಾನಾಪುರ ಮತ್ತು ಬೆಳಗಾವಿ ತಮ್ಮ ಕೈತಪ್ಪಿ ಹೋದಾಗ ಆಘಾತವಾಗಿತ್ತು.

ಮಹಾರಾಷ್ಟ್ರೀಯರೇ ಅಧಿಕ ಸಂಖ್ಯೆಯಲ್ಲಿರುವ ನಿಪ್ಪಾಣಿ, ಖಾನಾಪುರ ಮತ್ತು ಬೆಳಗಾವಿಯನ್ನು ಕರ್ನಾಟಕಕ್ಕೆ ಸೇರಿಸಿದ ಫಜಲ್ ಅಲಿ ಆಯೋಗ ಪ್ರಸ್ತುತ [illegible] ವಾಗಿ ಕನ್ನಡ ಭಾಗಗಳಾದ ಸೋಲಾಪುರ ಮತ್ತು ಅಕ್ಕಲಕೋಟೆ ಪ್ರದೇಶಗಳನ್ನು ಮಹಾರಾಷ್ಟ್ರದಲ್ಲೇ ಉಳಿಸಿತ್ತು.

ಈ ವಿವಾದದಲ್ಲಿ ಕನ್ನಡಿಗರಾದ ನಾವು [illegible] ... [illegible] ದಾದ ಕೆಲವಂಶಗಳಿವೆ. ಕಾಸರಗೋಡಿನ ಕನ್ನಡಿಗರ ಒಡಲಿಗೆ ಬಿದ್ದ ಉರಿ ಆರಿಸಲು ನಾವು ಹೋಗಿಲ್ಲ. ಸೋಲಾಪುರ – ಅಕ್ಕಲಕೋಟೆಯ ಬಡ ಕನ್ನಡಿಗರ ಕೂಗಿಗೆ ನಾವು ಕಿವಿಗೊಡಲಿಲ್ಲ. ನಮ್ಮ ಕನ್ನಡ ಭಾಷಾಭಿಮಾನವೆಲ್ಲ ಇಲ್ಲಿ ಇರಲು ಒಲ್ಲದ ಮಹಾರಾಷ್ಟ್ರೀಯರನ್ನು ಹಿಡಿದಿಡುವ ಕೆಲಸದಲ್ಲೇ ಪ್ರಕಟವಾಯಿತು. ಭಾಷೆಯ ನೆಲೆಯಲ್ಲಿ ಕನ್ನಡ ಜನರ ರಾಜ್ಯ ಕಟ್ಟಲು ಹೊರಟ ನಮಗೆ ಮಹಾರಾಷ್ಟ್ರೀಯರೇ ಅಧಿಕ ಸಂಖ್ಯೆಯಲ್ಲಿರುವ ಬೆಳಗಾವಿ ಪ್ರದೇಶಗಳನ್ನು ಬಗಲಲ್ಲಿಟ್ಟುಕೊಳ್ಳುವುದೇ ಪವಿತ್ರ ಕರ್ತವ್ಯವಾಯಿತು. ಪರಿಣಾಮವಾಗಿ ಈಗ ಕಾಸರಗೋಡಿನಲ್ಲಿ ಕನ್ನಡತನ ಬಹುಮಟ್ಟಿಗೆ ಜಾರಿ ಹೋಗಿದೆ. – ಸೋಲಾಪುರ ಅಕ್ಕಲಕೋಟೆಯಲ್ಲಿ ಕನ್ನಡ ಜನರ ಧ್ವನಿ ಕುಂದಿದೆ.

ಭಾರತದಂತಹ ಒಂದು ಬಹುಭಾಷಾ ಗಣರಾಜ್ಯದಲ್ಲಿ ಅಲ್ಲಿ-ಇಲ್ಲಿ ಅಲ್ಪ ಸ್ವಲ್ಪ ಮಟ್ಟಿಗೆ ವಿಭಿನ್ನ ಭಾಷೆಗಳ ಜನರಿರುವುದು ಅನಿವಾರ್ಯ. ಆದರೆ ಒಂದು ಪ್ರದೇಶದಲ್ಲಿ ಬಹುಸಂಖ್ಯಾತರಾಗಿರುವ ಜನರ ಆಶೋತ್ತರಗಳನ್ನು ಅದುಮಿ ಹಿಡಿದು ಅವರ ಭಾಷೆಯನ್ನಾಡುವ ಜನರಲ್ಲಿ ಒಂದಾಗಿ ಬಾಳಿ ಬೆಳೆಯುವ ಅವಕಾಶ ನಿರಾಕರಿಸುವುದು ಅಪರಾಧವಾಗುತ್ತದೆ. ಕನ್ನಡಿಗರಾದ ನಾವು ಬೆಳಗಾವಿಯ ವಿಚಾರದಲ್ಲಿ ಇಂತಹ ಅಪರಾಧವನ್ನು ಎಸಗುತ್ತಲೇ ಬಂದಿದ್ದೇವೆ. ಇದರಿಂದಾಗಿಯೇ ನಮಗೆ ಕಾಸರಗೋಡು ನಮ್ಮದೆಂದು ಹೇಳುವ ನೈತಿಕ ಹಕ್ಕು ಉಳಿದಿಲ್ಲ. ಸೋಲಾಪುರ-ಅಕ್ಕಲಕೋಟೆಯನ್ನು ಕೇಳಲು ಬಾಯಿ ಇಲ್ಲ.

ಕಾಲವೇ ಹುಣ್ಣನ್ನು ವಾಸಿ ಮಾಡುವುದೆಂಬ ಗ್ರಹಿಕೆ ಕಾಸರಗೋಡಿನ ವಿಚಾರದಲ್ಲೀಗ ನಿಜವಾಗುತ್ತಿದೆ. ಅಲ್ಲಿನ ಕನ್ನಡಿಗರು ಈಗೀಗ ಕರ್ನಾಟಕವನ್ನು ಮರೆತು ಬಿಡುತ್ತಿದ್ದಾರೆ. ಸೋಲಾಪುರ–ಅಕ್ಕಲಕೋಟೆಯಲ್ಲೂ ಇದೆ ಹಾಡು. ಆದರೆ ಬೆಳಗಾವಿಯಲ್ಲಿ ಮಾತ್ರ ಮಹಾರಾಷ್ಟ್ರೀಯರ ಮನಸ್ಸಿಗಾದ ಘಾಸಿವಾಸಿಯಾಗಿಲ್ಲ. ವರ್ಷ ಕಳೆದಂತೆ ಅದು ಉಲ್ಬಣಿಸುತ್ತಲೇ ಇದೆ. ಕಳೆದ ಏಳು ಚುನಾವಣೆಗಳಲ್ಲಿ ಬೆಳಗಾವಿಯ ಮಹಾರಾಷ್ಟ್ರೀಯರು ಕರ್ನಾಟಕದ ವಿಧಾನಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುತ್ತಲೇ ಇದ್ದಾರೆ. ತಮ್ಮ ಆಸೆಯನ್ನು ಈಡೇರಿಸಿಕೊಳ್ಳುವ ಆತ್ಮ ಬಲವನ್ನೂ ಅವರು ತೋರಿಸಿದ್ದಾರೆ.

ನಮ್ಮದಲ್ಲದ ಬೆಳಗಾವಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಗಡಿನಾಡ ಕನ್ನಡಿಗರ ಹಿತವನ್ನು ನಾವು ಹಾಳು ಮಾಡಿದ್ದೇವೆ. ಕೊನೆಯಲ್ಲಿ ನಮಗೆ ಕಾಸರಗೋಡೂ ಹೋಯ್ತು. ಸೋಲಾಪುರ–ಅಕ್ಕಲಕೋಟೆಯೂ ಇಲ್ಲವಾಯ್ತು ಬೆಳಗಾವಿಯೂ ಕೈತಪ್ಪಿ ಹೋಯ್ತು ಎನ್ನುವ ಸ್ಥಿತಿ ಬರಬಹುದು.

ಮಹಾರಾಷ್ಟ್ರೀಯರು ಮಹಾಜನ ಆಯೋಗದ ವರದಿಯನ್ನೊಪ್ಪಲು ಸಿದ್ಧರಿಲ್ಲವೆಂದಾದ ಮೇಲೆ ಅದನ್ನು ಅವರ ಮೇಲೆ ಹೇರುವ ಸಾಮರ್ಥ್ಯ ಕರ್ನಾಟಕಕ್ಕಿದೆಯೆಂದು ತಿಳಿದರೆ ಅದೊಂದು ಭ್ರಮೆ ಎನ್ನಿಸೀತು. ಕನ್ನಡಿಗರಾದ ನಾವು ಇನ್ನಾದರೂ ವಾಸ್ತವತೆಯ ಅರಿವು ಮಾಡಿಕೊಳ್ಳಬೇಕು. ಬೆಳಗಾವಿಯಲ್ಲಿ ಬಹುಸಂಖ್ಯಾತರಾಗಿರುವ ಮಹಾರಾಷ್ಟ್ರೀಯರಿಗೆ [illegible]

[illegible]

ಮುಂಗಾರು

ಶನಿವಾರ, ಏಪ್ರಿಲ್ 25, 1987

ನೀರಿನ ಬವಣೆ ನೀಗುವುದು ಹೇಗೆ?

ಮಂಗಳೂರು ನಗರದಲ್ಲಿ ನೀರಿನ ಬರ. ನಾಲ್ಕು ಲಕ್ಷ ಪ್ರಜೆಗಳಿಗೆ ಆರದ ಬಾಯಾರಿಕೆ. ಬಾಯಾರಿಕೆ ನೀಗುವ ನೇತ್ರಾವತಿ ನೆರೆಯಿಲ್ಲದೆ ಸೊರಗಿದ್ದಾಳೆ. ನಾಲ್ಕು ವರ್ಷಗಳಿಂದ ಸಾಕಷ್ಟು ಮಳೆಯಾಗದ್ದೇ ಈ ಸೊರಗಿಗೆ ಕಾರಣ. ಘಟ್ಟ ಪ್ರದೇಶದಲ್ಲಿ ಅನಾವೃಷ್ಟಿ ಮಟ್ಟಕ್ಕೆ ಮುಟ್ಟಿದ್ದು ಆಶ್ಚರ್ಯ ಸಂಗತಿ.

ನೇತ್ರಾವತಿ ಒಂದು ಜೀವ ನದಿ. ಆದರೂ ಈ ಈ ನೀರಿನ ಬರ ಏಕೆ? ನದಿಯ ಮೇಲ್ತೊರೆಗಳಲ್ಲಿ ನೀರನ್ನು ಅಡ್ಡಗಟ್ಟಿ ವ್ಯವಸಾಯಕ್ಕೆ ಬಳಸಲಾಗುತ್ತಿದೆ. ವ್ಯವಸಾಯಕ್ಕೆ ಬಳಸುವ ನೀರನ್ನು ವಿದ್ಯುತ್ ಪಂಪುಗಳ ಮೂಲಕ ಪೂರಹಾಯಿಸಲಾಗುತ್ತಿದೆ. ಈ ವಿದ್ಯುತ್‌ಪಂಪುಗಳು ಸೆಳೆದುಕೊಳ್ಳುವ ನೀರಿನಪ್ರಮಾಣ ಸಾಮಾನ್ಯವಾಗಿ ಅತ್ಯಧಿಕ. ಹೀಗಾಗಿ ನದಿ ಬತ್ತುವುದು ಸಹಜ.

ನೇತ್ರಾವತಿ ನದಿ ಹರಿಯುವ ಮಾರ್ಗದಲ್ಲಿ ತುಂಬೆಯಲ್ಲಿ ನದಿಯ ಪಕ್ಕಕ್ಕೆ ನೀರು ಹಾಯಿಸಿ ಜಲಾಶಯ ನಿರ್ಮಿಸಲಾಗಿದೆ. ಈ ಜಲಾಶಯದಿಂದಲೇ ನಗರಕ್ಕೆ ನೀರು ಸರಬರಾಜಾಗುವುದು. ಈ ಜಲಾಶಯಕ್ಕೆ ಬಂದು ತುಂಬಬಹುದಾದ ನೀರನ್ನು ತುಂಬೆಯಿಂದ ಮೇಲ್ಭಾಗಕ್ಕೆ ಪಾಣೆಮಂಗಳೂರುವರೆಗೆ ರೈತರು ಹೊರಗೆತ್ತಿ ನದಿಯನ್ನು ಬತ್ತಿಸುತ್ತಿದ್ದಾರೆ.

ರೈತರದೂ ತಪ್ಪಿಲ್ಲ.ಏಕೆಂದರೆ ಅವರಿಗೆ ಸಂಬಂಧಪಟ್ಟ ಇಲಾಖೆಗಳಿಂದ ಈ ನೀರು ಬಳಸಿಕೊಳ್ಳಲು ಅನುಮತಿ ಉಂಟು. ಆದರೆ ಈ ರೈತರಿಗೆ ಅನುಮತಿ ನೀಡಿರುವುದರಲ್ಲಿ ಒಂದು ಷರತ್ತಿದೆ. ಮಂಗಳೂರು ನಗರಕ್ಕೆ ನೀರು ಪೂರೈಕೆ ಕೊರತೆ ಬಿದ್ದಾಗ ರೈತರು ಪಂಪ್‌ಸೆಟ್‌ಗಳನ್ನು ಬಂದ್ ಮಾಡಬೇಕೆಂಬುದೇ ಈ ಷರತ್ತು.

ಈ ಷರತ್ತು ಸರಿಯಾಗಿ ಪಾಲನೆಯಾಗದಿದ್ದುದೇ ನಗರದ ಜನತೆಗೆ ನೀರಿನ ಬರತಟ್ಟಲು ಕಾರಣ. ಈ ಕಾರಣವನ್ನು ಕಂಡು ಹಿಡಿದ ಜಿಲ್ಲಾಧಿಕಾರಿಯವರು ನಿಜಕ್ಕೂ ಸ್ತುತ್ಯರ್ಹರು.

ಕಾರಣ ಕಂಡು ಹಿಡಿದದ್ದಷ್ಟೇ ಅಲ್ಲ. ರೈತರಿಗೆ ಸೂಕ್ತ ಎಚ್ಚರಿಕೆ ನೀಡಿ, ಷರತ್ತನ್ನು ಪಾಲಿಸದ ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿಸಿಹಾಕಿ ಕ್ರಮ ಕೈಗೊಂಡದ್ದೂ ಪ್ರಶಂಸಾರ್ಹ.

ಇದರಿಂದಾಗಿ ನಗರದ ನೀರು ಪೂರೈಕೆ ಸ್ವಲ್ಪ ಮಟ್ಟಿಗೆ ಸುಧಾರಿಸಿದೆಯೆಂದೂ ಮಾತು ಕೇಳಿ ಬರುತ್ತಿದೆ.

ನಾಗರಿಕರ ನೀರಿನ ಬವಣೆಯನ್ನು ಬಗೆಹರಿಸುವಲ್ಲಿ ನಗರದ ಮೇಯರ್ ಅಜಿತ್‌ಕುಮಾರ್ ತಳೆದ ಪಾತ್ರ ಹಾಗೂ ಅವರ ಕಾಳಜಿ, ನಿಜಕ್ಕೂ ಪ್ರಥಮ ಪ್ರಜೆ ಎನಿಸಿಕೊಂಡ ಅವರ ಘನತೆಗೆ ಒಂದು ದೃಷ್ಟಾಂತ. ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಬೇಕೆಂಬ ಅವರ ಕಾಳಜಿ ನಾಗರಿಕರೆಲ್ಲ ಮೆಚ್ಚಬೇಕಾದ್ದು.

ಕಳೆದ ನಾಲ್ಕಾರು ದಿನಗಳಿಂದ ಮೇಯರ್ ಹಾಗೂ ಜಿಲ್ಲಾಧಿಕಾರಿಯವರಿಬ್ಬರೂ ನೀರಿನ ಬವಣೆ ನೀಗುವ ಪ್ರಯತ್ನದಲ್ಲಿ ಅವಿಶ್ರಾಂತರಾಗಿ ದುಡಿದಿದ್ದಾರೆ.

ಪಾಣೆ ಮಂಗಳೂರಿನಿಂದ ತುಂಬೆಯವರೆಗೆ ಹರಿದು ಬರುವ ನೇತ್ರಾವತಿಯ ನದಿ ಪಕ್ಕದ ರೈತರಿಗೆ ಬೆಳೆ ಹಾನಿಯಾಗದಂತೆ ವರುಣ ಕೃಪೆ ಆದರೆ ಅರ್ಥಾತ್ ಇನ್ನೆರಡು ಮೂರು ದಿನದಲ್ಲೇ ಮಳೆಬಂದರೆ ನಗರದ ನಾಗರಿಕರೂನಿಟ್ಟುಸಿರು ಬಿಡಬಹುದು. ರೈತರೂ ನಿರಾಳವಾಗಿ ನೀರು ಬಳಸಿಕೊಳ್ಳಬಹುದು.

ಈಗ ನಗರ ಪ್ರದೇಶದಲ್ಲಿ ತೋಡಲಾಗುತ್ತಿರುವ ಇಪ್ಪತ್ತು ಕೊಳವೆ ಬಾವಿಗಳು ಆಯಾ ಸುತ್ತುಮುತ್ತಿನ ಜನರ ಒಪ್ಪೊತ್ತಿನ ನೀರನ್ನೂ ಪೂರೈಸದು. ಸೂಕ್ತವಾದ ಭೂಗರ್ಭ ಜಲ ಸಂಶೋಧಕರ ನೆರವು ಪಡೆದು, ಅಕ್ಷೋಭ್ಯವಾದ ಜಲಧಾರೆ ಇರುವ ಕಡೆಗಳಲ್ಲಿ ಕನಿಷ್ಠ 400 ಕೊಳವೆ ಬಾವಿಗಳನ್ನಾದರೂ ಸ್ಥಾಪಿಸಿದರೆ ಅಷ್ಟಿಷ್ಟು ಪರಿಹಾರವಾದೀತು.

ಮಂಗಳೂರು ನಗರಕ್ಕೆ ಸುವ್ಯವಸ್ಥಿತವಾಗಿ ನೀರು ಸರಬರಾಜಾಗಲು ಒಂದು ಸಮಗ್ರ ಯೋಜನೆಯನ್ನು ಸಿದ್ಧಪಡಿಸಬೇಕು. ಅಂತಹ ಯೋಜನೆಯನ್ನು ನಗರ ಪಾಲಿಕೆ ಮತ್ತು ರಾಜ್ಯ ಸರಕಾರ ಕೂಡಿ, ತ್ವರಿತ ಗತಿಯಲ್ಲಿ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು. ಇಂಥದೊಂದು ಸಮಗ್ರ ಯೋಜನೆ ಕಾರ್ಯಗತವಾದರೆ ಮಾತ್ರ ನಾಗರಿಕರ ನೀರಿನ ಬವಣೆ ನಿರಂತರ ಕಾಲಕ್ಕೂ ಬಗೆಹರಿದೀತು.

ಮುಂಗಾರು

ಬುಧವಾರ, ಏಪ್ರಿಲ್ 22, 1987

ತಕ್ಷಣ ವಿಭಜಿಸಿ

ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣ ಇಲಾಖೆಯನ್ನು ದಕ್ಷಿಣ ಮತ್ತು ಉತ್ತರ ಎಂಬ ಎರಡು ವಲಯಗಳಾಗಿ ವಿಂಗಡಿಸಿ ಉತ್ತರ ವಲಯಕ್ಕೆ ಉಡುಪಿಯನ್ನೂ, ದಕ್ಷಿಣ ವಲಯಕ್ಕೆ ಮಂಗಳೂರನ್ನೂ ಕೇಂದ್ರಗಳನ್ನಾಗಿ ಮಾಡಬೇಕೆಂದು ದ. ಕ. ಜಿಲ್ಲಾ ಪರಿಷತ್‌ನ ಶಿಕ್ಷಣ ಸಮಿತಿ ಒತ್ತಾಯಿಸಿದೆ.

ಶಿಕ್ಷಣ–

ನಮಗೆ ಬದುಕು ಏನೆಂದು ತೋರಿಸಿಕೊಡಬೇಕಾದ, ಏಕೆ ಎಂದು ತಿಳಿಸಿಕೊಡಬೇಕಾದ ಸಂಪತ್ತು. ನಮ್ಮಲ್ಲಿ ಪುರೋಗತಿಯ ಬಯಕೆ ಹುಟ್ಟಿಸಿ ಬೆಂಗಾಡಲ್ಲಿ ಭರವಸೆಯ ಚಿಲುಮೆ ಹುಟ್ಟಿಸಬೇಕಾದ ಸಾಧನ, ಆತ್ಮ ವಿಶ್ವಾಸ, ಬದುಕುವ ಛಲ ಮೂಡಿಸಬಲ್ಲ ಆಯುಧ.

ಆದರೆ ಇಂದೇನಾಗಿದೆ ?

ಶಿಕ್ಷಣ ರಂಗ ನಮ್ಮ ಕುಸಿದುಬಿದ್ದ ಆಶೋತ್ತರಗಳ ಪ್ರತೀಕವೆನ್ನಿಸಿದೆ. ಎಲ್ಲ ಸರ್ಕಾರಿ ಇಲಾಖೆಗಳಂತೆ ಇಲ್ಲೂ ಸಮಸ್ಯೆಗಳ ಜೇಡಬಲೆ ಜಾಳಾಗಿ ಹೆಣೆದುಕೊಂಡಿದೆ. ಫೈಲುಗಳ ಸಾಲುಗಳಡಿಯಲ್ಲಿ ವಿದ್ಯಾರ್ಥಿಗಳ, ಶಿಕ್ಷಕರ ಸುಂದರ ಕನಸುಗಳು ಧೂಳು ತಿನ್ನುತ್ತಿವೆ.

ರಾಜ್ಯದ ಸಾಕ್ಷರತೆ ಶೇಕಡಾ 37ರಷ್ಟು ಎಂಬ ಅಂದಾಜಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸಾಕ್ಷರತೆ ಅದರ ದುಪ್ಪಟ್ಟು. ಬೆಳೆಯುತ್ತಿರುವ ಹಳ್ಳಿಗಳು, ರೂಪುಗೊಳ್ಳುತ್ತಿರುವ ನಗರಗಳು–ದಕ್ಷಿಣ ಕನ್ನಡದ ಮೂಲೆ ಮೂಲೆಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹೆಚ್ಚಿಸಿವೆ.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ 1807 ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಿವೆ. 214 ಪ್ರೌಢಶಾಲೆಗಳಿವೆ. 76ರಷ್ಟು ಪ್ರೌಢ ಮತ್ತು ಪಿಯುಸಿ ತರಗತಿಗಳನ್ನೊಳಗೊಂಡ ಕಿರಿಯ ಮಹಾವಿದ್ಯಾಲಯಗಳಿವೆ. ಇವುಗಳಲ್ಲಿ ಸರಕಾರಿ ಮತ್ತು ಏಯ್ಡೆಡ್ ಶಾಲೆಗಳೂ ಒಳಗೊಂಡಿವೆ.

ಬಹುಶಃ ರಾಜ್ಯದಲ್ಲಿ ಬೆಂಗಳೂರು ಜಿಲ್ಲೆಯೊಂದನ್ನು ಬಿಟ್ಟರೆ ಅತ್ಯಂತ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಜಿಲ್ಲೆ ದಕ್ಷಿಣ ಕನ್ನಡ.

ಇಷ್ಟೆಲ್ಲ ಶಿಕ್ಷಣ ಸಂಸ್ಥೆಗಳಿದ್ದೂ ಇಲ್ಲಿನ ವಿದ್ಯಾರ್ಥಿಗಳು, ಶಿಕ್ಷಕರು ಅನುಭವಿಸುತ್ತಿರುವ ಬವಣೆ ಹೇಳತೀರದಷ್ಟಿದೆ. ಎಲ್ಲಕ್ಕೂ ಶಿಕ್ಷಣ ಇಲಾಖೆ ಅಧಿಕಾರಿಗಳನ್ನು ದೂರುವಂತಿಲ್ಲ. ಕೆಲಸದ ಒತ್ತಡ ಹೆಚ್ಚಿದಂತೆಲ್ಲ ಸಮಸ್ಯೆಗಳು ತಾವಾಗೇ ಬೆಳೆಯುತ್ತವೆ. ಶಿಕ್ಷಕರ ಸಂಬಳ, ಶಿಕ್ಷಣ ಸಂಸ್ಥೆಗಳ ಅನುದಾನ, ಶಿಕ್ಷಕರ ನೇಮಕಾತಿ, ಶಾಲಾಕಟ್ಟಡಗಳ ದುರವಸ್ಥೆ ಹೀಗೆ ಎಲ್ಲ ಕಡೆಗಳಲ್ಲೂ ಫೈಲುಗಳು ಬೆಳೆಯತೊಡಗುತ್ತವೆ.

ಫೈಲುಗಳು ಬೆಳೆಯತೊಡಗಿದುವೆಂದರೆ ಅಲ್ಲಿ ಚಕ್ರವ್ಯೂಹ ನಿರ್ಮಾಣವಾಗತೊಡಗಿತೆಂದೇ ಅರ್ಥ. ಆಗ ವಿಶ್ವಲ ಬದುಕು, ದೀರ್ಘ ಆಲಸ್ಯ ಪೊರೆಕಟ್ಟತೊಡಗುತ್ತದೆ. ನಡೆಯಬೇಕಾದ ದಾರಿಯಲ್ಲಿ ಕತ್ತಲೆಯ ಮುಸುಕು ಆವರಿಸುತ್ತದೆ.

ಈಗಲೂ ನಮ್ಮಲ್ಲಿ ಕಟ್ಟಡಗಳಿಲ್ಲದ, ಇದ್ದರೂ ಕುಸಿದು ಬೀಳಲು ಸನ್ನದ್ಧವಾಗಿರುವ ಶಿಕ್ಷಣ ಸಂಸ್ಥೆಗಳಿವೆ. ಹರದಾರಿ ನಡೆದು ಶಾಲೆ ತಲುಪಬೇಕಾದ ಕುಗ್ರಾಮಗಳಿವೆ. ಕಬಡ್ಡಿಗೂ ಸಾಲದ ಅಂಗಣದಲ್ಲಿ ಕ್ರಿಕೆಟ್ ಆಡಬೇಕಾದ (ಅ)ವ್ಯವಸ್ಥೆಯಿದೆ.

ಕಾಂಟ್ರಾಕ್ಟುಗಳ ನೊಗಕ್ಕೆ ಹೆಗಲು ಸಿಕ್ಕಿಸಿ ದಿನ ದೂಡುವ ಅಧ್ಯಾಪಕರಿದ್ದಾರೆ. ಕನಸುಗಳೇ ಬತ್ತಿಹೋಗಿರುವ ವಿದ್ಯಾರ್ಥಿಗಳಿದ್ದಾರೆ. ಬದುಕಿನ ಮಾರ್ಗಗಳಿಲ್ಲ, ಪ್ರಯೋಗದ ಉತ್ಸಾಹವಿಲ್ಲ. ಸೋರುವ ಸೂರಿಗೆ ಮಕ್ಕಳ ಅಸಹಾಯಕತೆಯ ನಿಟ್ಟುಸಿರು.

ಹಾಗಾಗುವುದಕ್ಕೆ ಮುನ್ನ ನಾವು ಕಣ್ಣುತೆರೆಯೋಣ. ಜಿಲ್ಲಾ ಪರಿಷತ್ತಿನ ಶಿಕ್ಷಣ ಸಮಿತಿಯ ಒತ್ತಾಯದತ್ತ ಮನಗೊಡೋಣ.

ಬೆಂಗಳೂರು ಜಿಲ್ಲೆಯಲ್ಲಿ ಈಗಾಗಲೇ ಮೂವರು ವಿದ್ಯಾಂಗ ಉಪನಿರ್ದೇಶಕ (ಡಿಡಿಪಿಐ)ರಿದ್ದಾರೆ. ಹಾಗಿದ್ದರೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಎರಡು ವಿಭಾಗ ಮಾಡಿ ಇಬ್ಬರು ವಿದ್ಯಾಂಗ ಉಪನಿರ್ದೇಶಕರನ್ನು ನೇಮಿಸಲು ಏನಡ್ಡಿ ?

ಜಿಲ್ಲೆಯ ಹೆಚ್ಚಿನ ಶಿಕ್ಷಕರು ಪಟ್ಟಣಗಳಲ್ಲಿರಲು ಹೆಚ್ಚು ಆಸಕ್ತಿ ತೋರುತ್ತಿರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕರ ಕೊರತೆ ಉಂಟಾಗಿದೆ. ಈ ಕೊರತೆಯನ್ನು ನೀಗಿಸಲೂ ವಿಕೇಂದ್ರೀಕರಣ ಉತ್ತಮದಾರಿ.

ಕಾರ್ಯ ವ್ಯವಸ್ಥೆಯೊಂದಕ್ಕೆ ಗೆದ್ದಲು ಹಿಡಿದು ಅದು ಕುಸಿದು ಬೀಳುವವರೆಗೆ ಸುಮ್ಮನಿರುವುದು, ಅನಂತರ, ಅಯ್ಯೋ ಹೀಗಾಯಿತಲ್ಲಾ ಎಂದು ಗೋಳಿಡುವುದು ನಮ್ಮ ಜಾಯಮಾನ.

ಈ ವಿಷಯದಲ್ಲಾದರೂ ಆ ಜಾಯಮಾನ ತಪ್ಪಲಿ.

ಮುಂಗಾರು

ಶನಿವಾರ, ಜೂನ್ 2 . 1987

ಆಳುವ ಶೈಲಿ ಇದಾಗಬಾರದು

ಇದನ್ನು ಕೆಲವರು ಜಾಣ್ಮಾತನ ಎನ್ನುತ್ತಾರೆ. ಇನ್ನು ಕೆಲವರು ಬುದ್ಧಿವಂತಿಕೆ ಎನ್ನುತ್ತಾರೆ.

ಗುರುವಾರ ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಸಚಿವ ಸಂಪುಟದ ಸಭೆ ನಡೆಸಿದರು. ಹೆಗಡೆಯವರು ವಿದೇಶದಿಂದ ಹಿಂದಿರುಗಿದಾಗ ಇಲ್ಲಿ ಬಹಿರಂಗಗೊಂಡಿದ್ದ ಹಲವಾರು ಸಮಸ್ಯೆಗಳಿಗೆ ಉತ್ತರ ಕೊಡುವ ಹೊಣೆಗಾರಿಕೆ ಈ ಸಂಪುಟ ಸಭೆಯ ಮೇಲಿತ್ತು.

ವಿದ್ಯೆಯ ವ್ಯಾಪಾರ ಭರದಿಂದ ಸಾಗುತ್ತಿರುವುದರ ವಿರುದ್ಧ ಬೌರಿಂಗ್ ಆಸ್ಪತ್ರೆಯ ವೈದ್ಯರು ತೀವ್ರ ಪ್ರತಿಭಟನೆ ಎಬ್ಬಿಸಿದ್ದಾರೆ. ವಿದ್ಯುತ್, ಹಾಲು ಮುಂತಾದ ದೈನಂದಿನ ಅವಶ್ಯಕತೆಗಳ ಬೆಲೆಯೇರಿಕೆ ವಿರುದ್ಧ ರಾಜ್ಯದ ಜನರು ಅಸಮಾಧಾನದಲ್ಲಿದ್ದಾರೆ. ಆಡಳಿತದಲ್ಲಿ ಹೆಚ್ಚುತ್ತಿರುವ ಆಲಸ್ಯ ಕೂಡಾ ಜನರನ್ನು ಸಿಟ್ಟಿಗೆಬ್ಬಿಸುತ್ತಿದೆ.

ಈ ಸಂದರ್ಭದಲ್ಲಿ ಸಚಿವ ಸಂಪುಟದ ಸಭೆ ಜರುಗಿತು. ವಿಚಿತ್ರವೆಂದರೆ ಮೇಲಿನ ಯಾವ ಸಮಸ್ಯೆಗಳೂ ಸಂಪುಟದಲ್ಲಿ ಚರ್ಚೆಯಾಗಲಿಲ್ಲ.

ಅಡ್ಡಗೋಡೆಯ ಮೇಲೆ ದೀಪ ಇಟ್ಟ ಹಾಗೆ, ಸಚಿವ ಸಂಪುಟ ನಿರ್ಧಾರ ಕೈಗೊಂಡಿದೆ. 'ಈ ವರ್ಷ ಹೊಸ ಮೆಡಿಕಲ್, ಇಂಜಿನಿಯರಿಂಗ್, ಬಿ. ಎಡ್ ಕಾಲೇಜುಗಳ ಸ್ಥಾಪನೆ ಇಲ್ಲ.'

ಈ ವರ್ಷ ಇಲ್ಲ ಎಂದರೆ, ಮುಂದಿನ ವರ್ಷ ಇದೆ ಎಂದು ಅರ್ಥವೆ?

ಸರಕಾರ ತನ್ನ ಈ ನಿರ್ಧಾರಕ್ಕೆ ಕೊಟ್ಟಿರುವ ಕಾರಣಗಳನ್ನು ಗಮನಿಸಿದರೆ ಈ ನಿರ್ಧಾರದ ಹಿಂದಿನ ಅನಾರೋಗ್ಯಕರ ಮನೋಭಾವ ಕೂಡಾ ಸ್ಪಷ್ಟವಾಗುತ್ತದೆ.

'ಸಾಕಷ್ಟು ಪೂರ್ವ ಸಿದ್ಧತೆ ಹಾಗೂ ಸೌಲಭ್ಯಗಳಿಲ್ಲದೆ ಇಂತಹ ಕೆಲವು ಕಾಲೇಜ್‌ಗಳನ್ನು ಪ್ರಾರಂಭಿಸಿರುವುದೇ ಈ ತೀರ್ಮಾನಕ್ಕೆ ಕಾರಣ.'—ಇದು ಸಂಪುಟದ ವಿವರಣೆ.

ಅಂದರೆ, ಸಾಕಷ್ಟು ಪೂರ್ವ ಸಿದ್ಧತೆ ಹಾಗೂ ಸೌಲಭ್ಯಗಳನ್ನು ಹೊಂದಿದವರಾದರೆ ನಾವು ವಿದ್ಯೆಯ ವ್ಯಾಪಾರ ಮಾಡಲು ಅನುಕೂಲವಾಗುವ ಕ್ಯಾಪಿಟೇಶನ್ ಕಾಲೇಜುಗಳಿಗೆ ಅನುಮತಿ ನೀಡುತ್ತೇವೆ—ಎಂದು ಅರ್ಥ ತಾನೆ?

ಈಗ ಸಂಪುಟದ ಮುಂದೆ 17 ಮೆಡಿಕಲ್ ಕಾಲೇಜ್‌ಗಳಿಗೆ ವಿದ್ಯೆಯ ವ್ಯಾಪಾರಿಗಳು ಸಲ್ಲಿಸಿದ ಅರ್ಜಿಗಳಿವೆ. ಈ ಅರ್ಜಿಗಳನ್ನು ಸಾರಾಸಗಟಾಗಿ ತಳ್ಳಿಹಾಕುವ ತಾತ್ವಿಕ ನೆಲೆಗಟ್ಟು ಸರ್ಕಾರಕ್ಕಿಲ್ಲ. ಆದ್ದರಿಂದ ಈ ವರ್ಷ ಮಾತ್ರ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳಿಗೆ ಅನುಮತಿ ಇಲ್ಲ ಎನ್ನುವ ಜಾಣಾಕ್ಷತನ!

ಬೆಂಗಳೂರಿನ ಅಂಬೇಡ್ಕರ್ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೆ ಬೌರಿಂಗ್ ಆಸ್ಪತ್ರೆಯ ಸೌಲಭ್ಯ ನೀಡಿದ್ದರಿಂದ ಸಿಟ್ಟಿಗೆದ್ದಿರುವ ಬೌರಿಂಗ್ ಆಸ್ಪತ್ರೆಯ ಜೂನಿಯರ್ ವೈದ್ಯರು ಈಗಾಗಲೇ ಬೀದಿಗಿಳಿದಿದ್ದಾರೆ. ಸರ್ಕಾರದ ಗಮನ ಸೆಳೆದು ಹೋರಾಟ ಆರಂಭಿಸಿದ್ದಾರೆ. ಆದರೆ ಆ ವಿಷಯದ ಬಗ್ಗೆ ಸಂಪುಟದ ಚರ್ಚೆ ವೇಳೆ ಪ್ರಸ್ತಾಪವೇ ಬರಲಿಲ್ಲ.

ರಾಜ್ಯಾದ್ಯಂತ ಜನಸಾಮಾನ್ಯರು ವಿದ್ಯುತ್‌ದರ ಏರಿಕೆ ಹಾಗೂ ಹಾಲಿನ ದರ ಏರಿಕೆ ಬಗ್ಗೆ ಅಸಮಾಧಾನದಲ್ಲಿದ್ದಾರೆ. ಆ ಬಗ್ಗೆ ಸಚಿವ ಸಂಪುಟ ಅಧಿಕೃತ ಚರ್ಚೆಯನ್ನೇ ನಡೆಸಲಿಲ್ಲ.

ರಾಜ್ಯದ ಜನಸಾಮಾನ್ಯರ ಜೀವನಕ್ಕೆ ನೇರವಾದ ಹೊಣೆಗಾರಿಕೆ ಹೊಂದಿರುವ ಸಚಿವ ಸಂಪುಟವೊಂದು ಹೀಗೆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದು ಸರಿಯೇ?

ಸಂಪುಟ ಸಭೆಯ ವೇಳೆ ಹೊರ ಬಂದ ಮಾಹಿತಿ ಪ್ರಕಾರ 45 ಸಾವಿರ ಫೈಲುಗಳು ಸಂಪುಟದೆದುರು ಇತ್ಯರ್ಥವಾಗದೆ ಬಾಕಿ ಉಳಿದಿವೆ. ಕಳೆದ ವರ್ಷ ಈ ಫೈಲುಗಳ ಸಂಖ್ಯೆ 37 ಸಾವಿರವಾಗಿತ್ತು.

ಸರ್ಕಾರದ ಕಾರ್ಯವಿಧಾನ ಅತ್ಯಂತ ನಿಧಾನವಾಗಿದೆಯೆಂಬ ಕಾರಣ ನೀಡಿಯೇ ಸಚಿವ ಸಂಪುಟದ ಗಾತ್ರವನ್ನು ಮುಖ್ಯಮಂತ್ರಿಯವರು 35ಕ್ಕೆ ಏರಿಸಿದ್ದರು. ಜಿಲ್ಲಾ ಪರಿಷತ್ತುಗಳ ರಚನೆಯಾದ ನಂತರವಂತೂ ಸರಕಾರದ ಹಲವು ಮಹತ್ವದ ಹೊಣೆಗಾರಿಕೆಗಳು ಜಿಲ್ಲಾ ಪರಿಷತ್ತಿಗೆ ವರ್ಗಾವಣೆಗೊಂಡಿವೆ. ಹೀಗಿದ್ದೂ ಸಂಪುಟದೆದುರಿನ ಫೈಲುಗಳ ಸಂಖ್ಯೆ ಸಾವಿರಗಟ್ಟಳೆ ಹೆಚ್ಚಿದೆಯೆಂದರೆ ಏನರ್ಥ?

ಬೆಳಗಾವಿಯಲ್ಲಿ ಎಂ. ವಿಶ್ವೇಶ್ವರಯ್ಯ ಹೆಸರಿನಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಲು ಸರ್ಕಾರ ಕೈಗೊಂಡ ನಿರ್ಧಾರ ಸ್ವಾಗತಾರ್ಹ. ಆದರೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ವ್ಯಾಪಾರ ನಡೆಸಹೊರಟಿರುವವರೊಡನೆ ಸರ್ಕಾರ ನಡೆಸುತ್ತಿರುವ ಚೆಕ್ಕಂದ ನಿಲ್ಲಬೇಕು.

ಫೈಲುಗಳ ವಿಲೇವಾರಿಯನ್ನು ಕ್ಷಿಪ್ರವಾಗಿ ಮಾಡುವ ನಿಟ್ಟಿನಲ್ಲಿ ಮುಖ್ಯಮಂತ್ರಿಯವರು ತಮ್ಮ ಅನಗತ್ಯ ಪ್ರವಾಸಗಳನ್ನು ಕಡಿತಗೊಳಿಸಬೇಕು. ಜನಸಾಮಾನ್ಯರ ಜೀವನವನ್ನು ದುಬಾರಿಯಾಗಿಸುವ ಬೆಲೆ ಏರಿಕೆಗಳ ಬಗ್ಗೆ ಸಂಪುಟ ಚರ್ಚೆ ವೇಳೆ ಮೌನ ವಹಿಸುವುದು ಜನತೆಗೆ ಹೊಣೆಗಾರರಾಗಿರುವ ಅಧಿಕಾರಸ್ಥರಿಗೆ ಶೋಭಿಸುವಂತಹದ್ದಲ್ಲ.

ಅಥವಾ ಇದು ಜನತೆಯನ್ನು ನಿಭಾಯಿಸುವ ಹೊಸ ಆಡಳಿತ ಶೈಲಿಯೆ? ಸರ್ಕಾರದ ಬಗ್ಗೆ ಜನತೆಯೇ ನಿರ್ಧಾರವೊಂದಕ್ಕೆ ಬರುವ ಮುನ್ನ ಸರಕಾರ ತನ್ನ ನಡವಳಿಕೆಗಳನ್ನು ತಿದ್ದಿಕೊಳ್ಳುವ ನಿರ್ಧಾರಕ್ಕೆ ಬರಲಿ.

ಮುಂಗಾರು ಮೇ 8, 1987, ಪುಟ ಐದು

ಮುಂಗಾರು

ಶುಕ್ರವಾರ, ಮೇ 8, 1987

ಭಾವನೆಗಳು ಸಾಯುತ್ತಿವೆ

"ಭಾರತದ ಪಡೆಗಳು ಚೀನಾದ ಗಡಿಯನ್ನು ಉಲ್ಲಂಘಿಸುತ್ತಿವೆ ಎಂದು ಚೀನಾ ಆರೋಪಿಸಿದೆ. ಭಾರತ ಈ ಬಗ್ಗೆ ಇನ್ನೂ ಯಾವುದೇ ಅಧಿಕೃತ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲವಾದರೂ ಚೀನಾದ ಆರೋಪವನ್ನು ಅಲ್ಲಗಳೆಯುವ ಸಾಧ್ಯತೆ ಇದೆ..."

"ವಿದೇಶಾಂಗ ಸಚಿವ ಎನ್. ಡಿ. ತಿವಾರಿ ಅವರ ಅಫ್ಘಾನಿಸ್ತಾನ ಭೇಟಿಯ ಬಗ್ಗೆ ಪಾಕಿಸ್ತಾನ ಕಳವಳ ವ್ಯಕ್ತಪಡಿಸಿದೆ..."

"ಪಾಕಿಸ್ತಾನದ ಎರಡು ಅಮೆರಿಕ ನಿರ್ಮಿತ ಎಫ್–16 ವಿಮಾನಗಳು ಅಫ್ಘಾನಿಸ್ತಾನದ ಪಕ್ತಿಯಾ ಪ್ರಾಂತ್ಯದಲ್ಲಿ ವಾಯು ಸೀಮೆಯನ್ನು ಉಲ್ಲಂಘಿಸಿವೆ ಎಂದು ಅಫ್ಘಾನಿಸ್ತಾನದ ವಿದೇಶಾಂಗ ಖಾತೆ ತನ್ನ ಪ್ರತಿಭಟನೆ ಸಲ್ಲಿಸಿದೆ..."

"ದೇಶದ ಅಣುಶಕ್ತಿ ಸ್ಥಾವರಗಳ ಸುರಕ್ಷತಾ ವಿಧಾನಗಳು ಉತ್ತಮವಾಗಿದ್ದು ಯಾವುದೇ ಕಳವಳಕ್ಕೆ ಅವಕಾಶವಿಲ್ಲವೆಂದು ಪ್ರಧಾನಿ ರಾಜೀವ್‌ಗಾಂಧಿ ಲೋಕಸಭೆಗೆ ಭರವಸೆ ನೀಡಿದ್ದಾರೆ..."

ಇವೆಲ್ಲಾ ಇತ್ತೀಚಿನ ಸುದ್ದಿ. ಸುದ್ದಿ ಓದುವವರಿಗೆ, ಕೇಳುವವರಿಗೆ ಸಾಮಾನ್ಯವಾಗಿ ಹೋದ ಸಾಮಾನ್ಯ ಸುದ್ದಿಯ ತುಣುಕುಗಳು.

ಇವು ಕೇವಲ ಭಾರತದ ನೆರೆಹೊರೆಗೆ ಸಂಬಂಧಿಸಿದ್ದಾದರೆ, ಯುರೋಪ್, ಅಮೆರಿಕ, ಆಫ್ರಿಕಾ, ರಷ್ಯಾಗಳದ್ದಂತೂ ಇನ್ನೂ ಭೀಕರವಾದ ಸುದ್ದಿಗಳು. ಒಟ್ಟಾರೆ, ಎಲ್ಲೆಲ್ಲೂ ಗೊಂದಲ, ಘರ್ಷಣೆ, ಅಸಮಾಧಾನ.

ಎರಡು ಮಹಾಯುದ್ಧಗಳಲ್ಲಿ ಮನುಕುಲದ ರಕ್ತ ಹರಿದ ಸತ್ಯ ನಮ್ಮ ಮುಂದಿದೆ. ಭಾರತ–ಪಾಕ್, ಭಾರತ–ಚೀಣಾ ನಡುವಣ ಯುದ್ಧಗಳ ಕೆಟ್ಟ ಅನುಭವಗಳ ಇತಿಹಾಸ ಕಣ್ಣಿಗೆ ಕಟ್ಟಿದಂತಿದೆ. ಆದರೆ ಇತಿಹಾಸ ಕೇವಲ ಪುಸ್ತಕಗಳಲ್ಲಿ, ದಾಖಲೆಗಳಿಗಷ್ಟೇ ಸೀಮಿತಗೊಂಡಂತಿದೆ. ಮನುಷ್ಯರ ಮನಸ್ಸಿನಾಳಕ್ಕೆ ಇಳಿಯದಿರುವುದೊಂದು ದುರಂತವಾಗಿದೆ. ಭವಿಷ್ಯದ ಭೀಕರತೆಗೆ ಸಾಕ್ಷ್ಯವಾಗುತ್ತಿದೆ.

ಸಾಮ್ರಾಜ್ಯಷಾಹಿ ಪಟ್ಟಭದ್ರರ ಸೋಗಲಾಡಿತನದ ನಾಟಕಗಳು ಇಂದು ನಿತ್ಯದ ದೃಶ್ಯಗಳಾಗಿವೆ. ಎಲ್ಲೆಲ್ಲೂ ಸ್ವಪ್ರತಿಷ್ಠೆ, ಆತ್ಮ ವಂಚನೆ, ಅಸೂಯೆ, ಅಧಿಕಾರದಾಹ... ಗಳು ತಾಂಡವ ನೃತ್ಯಗೈಯುತ್ತಿವೆ.

ಹೌದು, ಭಾವನೆಗಳು ಸಾಯುತ್ತಿವೆ...

ಮನುಷ್ಯ, ಮನುಷ್ಯನ ನಡುವಣ ಸಂಬಂಧ ಕೆಡುತ್ತಿದೆ. ದಿನದಿನವೂ ಆತನ ಮನಸ್ಸು ಭ್ರಷ್ಟಗೊಳ್ಳುತ್ತಲೇ ಸಾಗುತ್ತಿದೆ.

ಮನುಷ್ಯ, ಮನುಷ್ಯನ ದೇಶ ದೇಶಗಳ ನಡುವಣ ಸಂಬಂಧ ಇಂದು ಕೇವಲ ಪ್ರೀತಿಯಾಗಿ ಉಳಿದಿಲ್ಲ. ಜಾತಿಯಾಗಿ, ಜನಾಂಗವಾಗಿ, ಪರಮಾಣು ಶಕ್ತಿಗಳಾಗಿ, ಅಧಿಕಾರದ ಅಹಂ ಆಗಿ, ಮೈಯ ಬಣ್ಣವಾಗಿ ಬೊಬ್ಬಿರಿಯುತ್ತಿದೆ... ಮೆರೆಯುತ್ತಿದೆ.

ಏಷ್ಯಾಖಂಡದಲ್ಲಿ ತನ್ನ ನೆಲೆಯಾಗಿ ಪಾಕಿಸ್ತಾನವನ್ನು ಬಳಸಿಕೊಳ್ಳುವ ತರಾತುರಿಯಲ್ಲಿ ಅಮೆರಿಕಾ 'ರಾಜತಾಂತ್ರಿಕ' ಚಟುವಟಿಕೆ ನಡೆಸತೊಡಗಿದರೆ, ರಷ್ಯಾ ಅದಕ್ಕೆ ಪ್ರತಿಸ್ಪರ್ಧಿಯಾಗಿ ಅಫ್ಘಾನಿಸ್ತಾನದಲ್ಲಿ ತನ್ನ ಕಾಲುಗಳನ್ನೂರಿದೆ.

ಜನಾಂಗ ದ್ವೇಷಕ್ಕೆ, ಕೊಳಕು ಮನಸ್ಸುಗಳ ಅಧಿಕಾರದ ಅಹಂ, ವ್ಯಾಮೋಹಗಳಿಗೆ ಉದಾಹರಣೆಯಾಗಿ ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾಗಳ ನೊಂದ ಜನಸಮುದಾಯದ ಕಣ್ಣೀರ ಕತೆಗಳು ಇಂದು ನಿತ್ಯದ ಸುದ್ದಿಯಾಗಿವೆ.

ಹಾಗಾದರೆ ಇದಕ್ಕೆಲ್ಲಾ ಪರಿಹಾರವೇ ಇಲ್ಲವೇ... ಕೇವಲ ಕೆಲವು ಭ್ರಷ್ಟ ಮನಸ್ಸುಗಳ ವಿಕೃತ ಕ್ರಿಯೆಗಳಿಗೆ ಸಿಲುಕಿ ಕೋಟ್ಯಾಂತರ ಮುಗ್ಧ ಜನ ಸಮುದಾಯ ಅಣ್ವಸ್ತ್ರಗಳ ಕರಿಧೂಮದೊಳಗೆ ಸಿಲುಕಿ ಉಸಿರುಗಟ್ಟಬೇಕೇ...

ಇಲ್ಲ. ಅಲ್ಲಲ್ಲಿ ಆಗೊಮ್ಮೆ ಹೀಗೊಮ್ಮೆ ನಿರಾಸೆಯ ನೀಲ ಬಾನಲ್ಲಿ ಆಸೆಯ ಬೆಳ್ಳಿ ಚುಕ್ಕಿಗಳೂ ಮೂಡುತ್ತವೆ... ಆಶಾಕಿರಣಗಳಾಗುತ್ತಿವೆ.

ಒಬ್ಬ ಮಹಾತ್ಮಾಗಾಂಧಿ ನಮ್ಮ ಹಲವು ಗೊಂದಲಗಳಿಗೆ ಪರಿಹಾರವಾಗಿ ಮಿನುಗುವುದುಂಟು. ಲಂಡನ್, ನ್ಯೂಯಾರ್ಕ್, ಟೋಕಿಯೋಗಳಲ್ಲಿ ಲಕ್ಷಾಂತರ ಜನತೆ ಅಣ್ವಸ್ತ್ರಗಳ ವಿರುದ್ಧ ದೊಡ್ಡ ಪ್ರತಿಭಟನೆ ಸಲ್ಲಿಸಬಲ್ಲರು. ವಿಶ್ವಶಾಂತಿಯ ಕನಸುಗಳನ್ನು ಬಾಚಿಕೊಳ್ಳುವ ತವಕದಲ್ಲಿ ಶಾಂತಿಯುತ ಹೋರಾಟ ಸಂಘಟಿಸಿ ಸಾಮ್ರಾಜ್ಯಷಾಹಿಗಳ ಕ್ರೂರ ಗುಂಡಿಗೆಯೊಳಗೂ ತಲ್ಲಣ ಹುಟ್ಟಿಸಬಲ್ಲರು.

ಇಲ್ಲಿ ಈ ಶತಮಾನ ಕಂಡ ಮಹಾನ್ ಸಮಾಜವಾದಿ ಲೋಹಿಯ ನೆನಪಾಗುತ್ತಾರೆ. "...ಜರ್ಮನಿ ತಾನು ಏಕಾಂಗಿಯಾಗಿಯೇ ಇಡೀ ಜಗತ್ತನ್ನು ಗೆಲ್ಲುತ್ತೇನೆ. ಏನೋ ಪವಾಡ ನಡೆಸುತ್ತೇನೆ ಎಂದು ಎರಡೆರಡು ಸಲ ಎದ್ದು ನಿಂತಿತ್ತು. ಆದರೆ ಅದೊಂದು ಹುಚ್ಚು. ಜರ್ಮನಿಯ ಜನ, ಕನಿಷ್ಠ ಈಚಿನ ಇತಿಹಾಸದಲ್ಲಾದರೂ, ತಾವೆಷ್ಟು ಹುಚ್ಚರಾಗಿದ್ದೇವೆಂಬುದನ್ನು ಈಗ ಅಷ್ಟಿಷ್ಟು ಕಂಡುಕೊಂಡಿದ್ದಾರೆ" ಎಂದು ಅವರು ಹೇಳಿದ ಮಾತು ಇಂದು ಕೇವಲ ಜರ್ಮನಿಗೇ ಅಲ್ಲ ಎಲ್ಲಾ ಸಾಮ್ರಾಜ್ಯಷಾಹಿ ರಾಷ್ಟ್ರಗಳಿಗೂ ಅನ್ವಯಿಸುತ್ತದೆ ಎಂದರೆ ಅತಿಶಯೋಕ್ತಿ ಎನಿಸದು.

ಈ ಹಿನ್ನೆಲೆಯಲ್ಲಿ ಭಾರತ ಕೂಡಾ ಯೋಚಿಸಬೇಕಾದುದು ಬಹಳಷ್ಟಿದೆ. ತನ್ನ ಒಡಲಲ್ಲಿ ನೂರು ಪಂಜಾಬ್, ತ್ರಿಪುರ, ಭಯೋತ್ಪಾದಕತೆ, ಭಾಷಾ ಗೊಂದಲಗಳನ್ನು ಅಡಗಿಸಿಟ್ಟುಕೊಂಡಿರುವ ಭಾರತದ. ಆಫ್ರಿಕಾದ ಸಮಸ್ಯೆ ಬಗ್ಗೆ ದೊಡ್ಡ ಜನಾಂದೋಲನ ಮೂಡಿಸುವುದು ಅಸಾಧ್ಯವೇನೋ ಎಂಬ ಸಂಶಯ ಕಾಡುತ್ತಿದೆ. ಇದೊಂದು ಉದಾಹರಣೆಯಷ್ಟೆ.

ಸಾಮ್ರಾಜ್ಯಷಾಹಿ, ಬಂಡವಾಳಿಗ ಪಟ್ಟಭದ್ರರ ಹಿಡಿತದಲ್ಲಿರುವ ಭಾರತದ ಉದ್ಯಮ ಪ್ರಭುಗಳ ನಿಯಂತ್ರಣದಿಂದ ಇನ್ನಾದರೂ ನಮ್ಮ ಆಳುವ ವರ್ಗ ತಪ್ಪಿಸಿಕೊಳ್ಳಲಾರದಾ...

ಅಂತರರಾಷ್ಟ್ರೀಯ ಶಕ್ತಿ ಸಮತೋಲನ ಕಾಪಿಡುವ ಸಮಜಾಯಿಸಿ ನೀಡಿ ರಷ್ಯಾದ ಬೆನ್ನು ಹತ್ತುವುದೇ ಆಗಲಿ, ಅಮೆರಿಕಾದ ಎದುರು ಮಸಲತ್ತು ನಡೆಸುವುದೇ ಆಗಲಿ ಗಾಂಧಿ ಹುಟ್ಟಿದ ಈ ನಾಡಿಗೆ ಸಲ್ಲದ ಕಾರ್ಯವೆನಿಸುತ್ತೆ.

ಈ ನಿಟ್ಟಿನಲ್ಲಿ, ಇಡೀ ಜನಸಮುದಾಯ ಎಚ್ಚೆತ್ತುಕೊಳ್ಳಬೇಕಿದೆ. ಎಲ್ಲ ದೇಶಗಳ, ಎಲ್ಲ ನಾಡಿನ ಕೊಳಕು ಮನಸ್ಸಿನ ಅಧಿಕಾರದಾಹಿಗಳ, ಉದ್ಯಮ ಪ್ರಭುಗಳ ವಿರುದ್ಧ ಹೋರಾಟ ಸಂಘಟಿಸಬೇಕಿದೆ.

ಮುಂದಿನ ಪೀಳಿಗೆಗೆ ನಾವು ಸುಂದರ ಭಾವನೆಗಳನ್ನು ಕೊಡಬೇಕಾಗಿದೆಯೇ ಹೊರತು, ಅಣ್ವಸ್ತ್ರಗಳನ್ನಲ್ಲ. ಅಸೂಯೆ, ದ್ವೇಷ, ಮೇಲರಿಮೆ, ಕೀಳರಿಮೆಗಳನ್ನಲ್ಲ.

ಮುಂಗಾರು

ಶನಿವಾರ, ಜೂನ್ 13, 1987

ಬ್ರಿಟಿಷರ ದೌರ್ಬಲ್ಯದ ಸಂಕೇತ

ರಾಜಕೀಯ ವೀಕ್ಷಕರು ಮತ್ತು ಪತ್ರಿಕಾ ವರದಿಗಾರರು ನಿರೀಕ್ಷಿಸಿದಂತೆ ಗುರುವಾರ ನಡೆದ ಬ್ರಿಟನ್ನಿನ ಚುನಾವಣೆಯಲ್ಲಿ ಮಾರ್ಗರೆಟ್ ಥ್ಯಾಚರ್ ಬಹುಮತ ಗಳಿಸಿದ್ದಾರೆ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ತಾಯ್ನಾಡು ಎನ್ನಿಸಿರುವ ಬ್ರಿಟನ್ನಿನ ಈ ಸಲದ ಸಾರ್ವತ್ರಿಕ ಚುನಾವಣೆಯ ಫಲಿತಾಂಶಕ್ಕೆ ಐತಿಹಾಸಿಕ ಮಹತ್ವವೂ ಬಂದಿದೆ.

ದ್ವಿಪಕ್ಷ ಪದ್ಧತಿಯನ್ನು ಬಹಳ ನಾಜೂಕಾಗಿ ಉಳಿಸಿಕೊಂಡು ಬಂದಿರುವುದು ಬ್ರಿಟಿಷ್ ಪ್ರಜಾಪ್ರಭುತ್ವ ಪದ್ಧತಿಯ ಒಂದು ಹೆಗ್ಗುರುತು. ಸುಧಾರಣಾವಾದಿಗಳೆನ್ನಿಸಿರುವ ಕನ್ಸರ್ವೇಟಿವ್ಸ್ ಮತ್ತು ಪುರೋಗಾಮಿ ಪ್ರತಿಷ್ಠೆ ಇರುವ ಲೇಬರ್ ಪಾರ್ಟಿಗಳನ್ನು ಅದಲು - ಬದಲು ಮಾಡಿ ದೇಶವನ್ನಾಳಲು ಅವಕಾಶ ಮಾಡಿಕೊಡುತ್ತ ಬಂದಿರುವ ಬ್ರಿಟನ್ನಿನ ಪ್ರಜ್ಞಾವಂತ ಮತದಾರರು ಅಧಿಕಾರ ಸ್ಥಾನವನ್ನು ಎಂದೂ ವ್ಯಕ್ತಿ ಅಥವಾ ಪಕ್ಷಗಳಿಗೆ ಮೂಲಗೇಣಿಗೆ ಕೊಟ್ಟವರಲ್ಲ. ದೇಶದ ಪ್ರಧಾನಿಯಾದವ ಎಷ್ಟೇ ಪ್ರಭಾವಿ ವ್ಯಕ್ತಿಯಾದರೂ ಅಂತಹ ಪ್ರಭಾವ ದೇಶ ಹಿತದ ಪ್ರಜ್ಞೆಯ ಮೇಲೆ ನೆರಳು ಬೀರಲು ಬಿಟ್ಟವರಲ್ಲ. ಒಂದು ಪಕ್ಷದ ನಾಯಕನಾದ ವ್ಯಕ್ತಿ ದೇಶಕ್ಕೆ ಹಿತಕಾರಿಯಾದ ಕೆಲಸ ಮಾಡಬಲ್ಲ ಎನ್ನಿಸಿದರೆ ಆ ವ್ಯಕ್ತಿಯನ್ನು ಅಧಿಕಾರಕ್ಕೆ ತಂದು ಬೇಡವೆನ್ನಿಸಿದಾಗ ನಿರ್ದಾಕ್ಷಿಣ್ಯವಾಗಿ ಬದಿಗೆ ಸರಿಸುವುದರಲ್ಲಿ ಬ್ರಿಟನ್ನಿನ ಮತದಾರರು ವೈಚಾರಿಕ ಪ್ರೌಢಿಮೆಯನ್ನು ತೋರಿಸುತ್ತ ಬಂದವರು. ದ್ವಿತೀಯ ಮಹಾಯುದ್ಧದ ಸಂಕಟ ಕಾಲದಲ್ಲಿ ದೇಶಕ್ಕೆ ಸಮರ್ಥ ನಾಯಕತ್ವ ನೀಡಿದ ವಿನ್‌ಸ್ಟನ್ ಚರ್ಚಿಲ್ ಅವರನ್ನು ಯುದ್ಧ ಮುಗಿದ ಬಳಿಕ ನಡೆದ ಚುನಾವಣೆಯಲ್ಲಿ ಕಿಂಚಿತ್ತೂ ಅಳುಕಿಲ್ಲದೆ ಮನೆಗೆ ಕಳುಹಿಸಿದ ಅಮೋಘ ದಾಖಲೆ ಮಾಡಿದ ಮತದಾರರಿರುವರು.

ಅಧಿಕಾರಾರೂಢ ವ್ಯಕ್ತಿಯ ವರ್ಚಸ್ಸನ್ನು ಮೇರೆ ಮೀರಿ ಬೆಳೆಯಗೊಟ್ಟರೆ ಪ್ರಜಾಪ್ರಭುತ್ವ ಪದ್ಧತಿಯ ತಿರುಳು ಕೆಡುವುದೆಂಬುದನ್ನು ಸರಿಯಾಗಿ ಅರಿತಿರುವ ಬ್ರಿಟನ್ನಿನ ಮತದಾರರು ಈ ಸಲದ ಚುನಾವಣೆಯಲ್ಲಿ ಬೆಳೆಯುತ್ತಿರುವ ವ್ಯಕ್ತಿ ವರ್ಚಸ್ಸಿಗೆ ಗಾಳಿ ಹಾಕಿರುವುದು ಒಂದು ಕೌತುಕವೆನ್ನಬಹುದು. ಮಾರ್ಗರೆಟ್ ಥ್ಯಾಚರ್ ಅವರನ್ನು ಮೂರನೆಯ ಅವಧಿಗೆ ದೇಶದ ಪ್ರಧಾನಿಯಾಗಿ ಆಯ್ಕೆಮಾಡಿರುವುದು ಬ್ರಿಟಿಷ್ ಪ್ರಜಾ[illegible]ದ ಒಂದು ಹೊಸ ದಾಖಲೆ, ಇಪ್ಪತ್ತನೆಯ ಶತಮಾನದಲ್ಲಿ [illegible] ಬ್ರಿಟಿಷ್ ಪ್ರಧಾನಿಯೂ ಮೂರನೇ ಅವಧಿಗೆ ಮರು ಆಯ್ಕೆಯಾ[illegible]ಲ್ಲ.

ಮಾರ್ಗರೆಟ್ ಥ್ಯಾಚರ್ ಈಗ ಬ್ರಿಟಿಷ್ ಪ್ರಜಾಪ್ರಭುತ್ವದ ಇತಿಹಾಸಕ್ಕೆ ಅಂತಹ ಒಂದು ಹೊಸ ಅಧ್ಯಾಯವನ್ನು ಸೇರಿಸಿದ್ದಾರೆ. ಬ್ರಿಟನ್ನಿನ ರಾಜಕೀಯ ಜೀವನದಲ್ಲಿ ಬೆಳೆಯುತ್ತಿರುವ ಥ್ಯಾಚರ್ ಪ್ರಭಾವದ ಪರಿಣಾಮ ಇದೆಂದು ಪರಿಗಣಿಸಬಹುದು. ಸಾಮಾನ್ಯ ರಾಜಕಾರಣಿಗಳ ಸಾಲಿಗೆ ಸೇರುವ ಈ ಜಾಣ ಮಹಿಳೆ ಬ್ರಿಟನ್‌ನಂತಹ ದೇಶಕ್ಕೆ ಅನಿವಾರ್ಯವೆನ್ನಿಸುವಷ್ಟು ಬೆಳೆದುದು ರಾಜಕೀಯ ಆಸಕ್ತರ ಸಮೀಕ್ಷೆಗೆ ಒಳಪಡಬೇಕಾದ ವಿಷಯ.

ಬ್ರಿಟನ್ನಿನಲ್ಲೀಗ ಬೆಳೆದಿರುವ ಥ್ಯಾಚರ್ ಪ್ರಭಾವದಲ್ಲಿ ಆ ದೇಶದ ಅಂತಃಸತ್ವದ ಕಳೆಗುಂದುತ್ತಿರುವುದರ ಕುರುಹುಗಳನ್ನು ನಾವು ಕಾಣಬಹುದು. ಸೂರ್ಯ ಅಸ್ತಂಗತನಾಗದ ಸಾಮ್ರಾಜ್ಯವನ್ನು ಕಳೆದುಕೊಂಡು ತಮ್ಮ ರಾಷ್ಟ್ರಜೀವನಕ್ಕೆ ಉನ್ನತ ಮಾನವೀಯ ಮೌಲ್ಯಗಳ ನೆಲೆಕಂಡುಕೊಳ್ಳಲಾಗದ ಬ್ರಿಟಿಷ್ ಜನರ ಮಾನಸಿಕ ತುಮುಲವೇ ಇಂದು ಥ್ಯಾಚರ್ ಪ್ರಭಾವವನ್ನು ಬೆಳೆಸುತ್ತಿದೆ. ಕಳಚಿಹೋದ ಸಾಮ್ರಾಜ್ಯದ ಪರೆಯನ್ನು ಮರೆತು ಬಿಡಲಾಗದ ಬ್ರಿಟಿಷರ ಮನದಾಳದ ನೋವಿಗೆ ಥ್ಯಾಚರ್ ಸ್ಪಂದಿಸುತ್ತಿರುವುದೇ ಇದಕ್ಕೆ ಕಾರಣ. ಪೂರ್ಣ ವಿಸರ್ಜಿತವಾದ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಪಳೆಯುಳಿಕೆಯಂತೆ ಉಳಿದಿರುವ ಫಾಕ್‌ಲ್ಯಾಂಡ್‌ನಂತಹ ಒಂದು ಕಿರುದ್ವೀಪ ಸಮುದಾಯವನ್ನು ಉಳಿಸಿಕೊಳ್ಳಲು ಐದು ವರ್ಷಗಳ ಹಿಂದೆ ಅರ್ಜೆಂಟೀನಾದ ಮೇಲೆ ಯುದ್ಧ ಸಾರಿದ ಥ್ಯಾಚರ್ ಬ್ರಿಟಿಷರ "ಜನನಾಯಕಿ" ಆಗಿದ್ದಾರೆ.

ತಮ್ಮ ಹಳೆಯ ವಸಾಹತುಗಳಿಂದ ವಲಸೆ ಬರುತ್ತಿರುವ ಬಿಳಿಯಲ್ಲದ ಜನರ ಬಗ್ಗೆ ಭೀತರಾಗಿರುವ ಬ್ರಿಟಿಷರು ಇಂತಹ ವಲಸೆಯನ್ನು ತಡೆಗಟ್ಟುತ್ತಿರುವ ಥ್ಯಾಚರ್ ನಾಯಕತ್ವವನ್ನು ಅಪ್ಪಿಕೊಳ್ಳುತ್ತಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಬಹು ಸಂಖ್ಯಾತ ಕರಿಯರನ್ನು ನಿರ್ದಯವಾಗಿ ಆಳುತ್ತಿರುವ ಬಿಳಿಯರ ಸರಕಾರಕ್ಕೆ ಕೊಡುತ್ತಿರುವ ಪ್ರತ್ಯಕ್ಷ ಹಾಗೂ ಪರೋಕ್ಷ ಬೆಂಬಲದಿಂದಲೂ ಬ್ರಿಟನ್ನಿನ ಬಿಳಿಯರು ಥ್ಯಾಚರ್ ನಾಯಕತ್ವಕ್ಕೆ ಮಾರು ಹೋಗಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ಆಳ್ವಿಕೆಯ ಮುಂದುವರಿಕೆಯಲ್ಲಿ ಬ್ರಿಟಿಷರು ತಮ್ಮ ಗತ ವೈಭವದ ಕುರುಹನ್ನು ಕಾಣುತ್ತಿದ್ದಾರೆ. ಬ್ರಿಟನ್ನಿನ ಇತ್ತೀಚಿನ ಇತಿಹಾಸದಲ್ಲಿ ದಕ್ಷಿಣ ಆಫ್ರಿಕಾದ ಬಿಳಿಯರ ಸರಕಾರಕ್ಕೆ ಥ್ಯಾಚರ್ ಅವರಷ್ಟು ಬೆಂಬಲ ನೀಡಿದ ಇನ್ನಾವ ಪ್ರಧಾನಿಯೂ ಇಲ್ಲ. ಈ ಕಾರಣಕ್ಕಾಗಿ ಥ್ಯಾಚರ್ ಜನಪ್ರಿಯರಾಗುವುದಾದರೆ ಅದು ಆ ಜನರ ದೌರ್ಬಲ್ಯದ ಲಕ್ಷಣವೆಂದೇ ತಿಳಿಯಬೇಕಾಗುತ್ತದೆ.

ಇಂದು ವಿಶ್ವದ ಆರ್ಥಿಕ ಹಾಗೂ ರಾಜಕೀಯ ಭೂಪಟದಲ್ಲಿ ತನ್ನ ಮೊದಲ ಸ್ಥಾನ ಕಳೆದುಕೊಳ್ಳುತ್ತಿರುವ ಬ್ರಿಟನ್ನಿನ ಜನರಲ್ಲಿ ತಮ್ಮ ಭವಿಷ್ಯದ ಬಗ್ಗೆ ಮೂಡುತ್ತಿರುವ ಭಯವೂ ಅವರನ್ನು ಥ್ಯಾಚರ್ ಪ್ರಭಾವದ ನೆರಳಿಗೆ ಆಕರ್ಷಿಸುತ್ತಿದೆಯೆನ್ನಬಹುದು. ಥ್ಯಾಚರ್ ನಾಯಕತ್ವದಲ್ಲಿ ಅಮೆರಿಕದ ಬಂಡವಳ ಹರಿದು ಬರುವುದೆಂಬ ಆಸೆ ಅವರಲ್ಲೀಗ ಮೂಡಿದೆ. ಲೇಬರ್‌ಪಾರ್ಟಿ ಇಂತಹ ವಿದೇಶಿ ಬಂಡವಳಕ್ಕೆ ವಿರೋಧವಾಗಿದೆ.

ಇದೆಲ್ಲಕ್ಕಿಂತ ಮಿಗಿಲಾಗಿ ಲೇಬರ್ ಪಾರ್ಟಿಯ ನಾಯಕ ನೀಲ್ ಕಿನ್ನೊಕ್ ಬ್ರಿಟಿಷ್ ನೆಲದಿಂದ ಅಮೆರಿಕದ ಅಣ್ವಸ್ತ್ರಗಳನ್ನು ಮೂಟೆ ಕಟ್ಟಿ ಹಿಂದಕ್ಕೆ ಕಳುಹಿಸುವುದಾಗಿ ನೀಡಿದ ಹೇಳಿಕೆ ಬ್ರಿಟಿಷ್ ಮತದಾರರಲ್ಲಿ ರಕ್ಷ[illegible]ಹುಟ್ಟಿಸಿದೆಯೆನ್ನಬಹುದು. ಬ್ರಿಟಿಷ್ ಜನತೆಗೆ ಇಂದು ಅಮೆರಿಕದ ಅಣ್ವಸ್ತ್ರಗಳ ರಕ್ಷಾಕವಚ ಬೇಕಾಗಿದೆ. ಬ್ರಿಟನ್ನಿನ ಬೀದಿಗಳಲ್ಲಿ ಅಮೆರಿಕನ್ ಸೈನಿಕರಗಸ್ತು ಅಲ್ಲಿನಜನರಲ್ಲಿ ಸುರಕ್ಷತೆಯ ಭಾವನೆಯನ್ನು ಮೂಡಿಸುತ್ತಿದೆ. ಬ್ರಿಟಿಷ್ ಜನರಲ್ಲಿ ಬೆಳೆಯುತ್ತಿರುವ ಇಂತಹ ದೌರ್ಬಲ್ಯಗಳೇ ಮಾರ್ಗರೆಟ್ ಥ್ಯಾಚರ್‌ಅವರ ಪ್ರಭಾವದ ರೂಪದಲ್ಲಿ ಪ್ರಕಟವಾಗುತ್ತಿದೆ. ಈ ಹಿನ್ನೆಲೆಯಲ್ಲಿಮೂರನೆ ಬಾರಿ ಬ್ರಿಟಿಷ್ ಪ್ರಧಾನಿಯಾಗಿ ಆಯ್ಕೆಗೊಂಡ ಮಾರ್ಗರೆಟ್ ಥ್ಯಾಚರ್ ಅವರನ್ನು ಅಭಿನಂದಿಸುವಾಗ ದುರ್ಬಲರಾಗುತ್ತಿರುವ ಬ್ರಿಟಿಷರ ಬಗ್ಗೆ ಕನಿಕರ ಪಡಬೇಕಾಗುತ್ತದೆ.

ಮುಂಗಾರು

ಗುರುವಾರ, ಜೂನ್ 11, 1987

ಮತ್ತೆ ಮರುಕಳಿಸದಿರಲಿ

ಬೆಂಗಳೂರಿನ ರಾಜಭವನದಲ್ಲಿ ನಡೆದ ಕಹಿ ಘಟನೆಯೊಂದು ರಾಜಕಾರಣದ ಬಗ್ಗೆ ಒಲವುಳ್ಳ ಎಲ್ಲರ ಕುತೂಹಲ ಕೆರಳಿಸಿದೆ.

ಜನತಾ ಸರ್ಕಾರದ ವೈಫಲ್ಯವನ್ನು ಪ್ರತಿಭಟಿಸಿ ರಾಜಭವನಕ್ಕೆ ಮೆರವಣಿಗೆ ತೆರಳಿದ್ದ ಕಾಂಗ್ರೆಸ್–ಐ ಸದಸ್ಯರಿಗೂ, ರಾಜ್ಯಪಾಲರಿಗೂ ಅಹಿತಕರ ಮಾತಿನ ಚಕಮಕಿ ನಡೆಯಿತು. ವಿಧಾನ ಪರಿಷತ್ತಿನ ಪ್ರತಿಪಕ್ಷ ನಾಯಕ ಟಿ. ಎನ್. ನರಸಿಂಹಮೂರ್ತಿ ಅವರ ಏರಿದ ಧ್ವನಿಯಿಂದ ಕೋಪಗೊಂಡ ರಾಜ್ಯಪಾಲರು 'ನಿಮ್ಮನ್ನು ಹೊರಹೋಗಲು ಹೇಳಬೇಕಾಗುತ್ತದೆ' ಎಂದು ಎಚ್ಚರಿಸಿದರು.

'ಇದರಿಂದ ಸಿಟ್ಟಿಗೆದ್ದ ಕಾಂಗ್ರೆಸ್–ಐ ನಾಯಕರು ರಾಜ್ಯಪಾಲರ ವಿರುದ್ಧ ಘೋಷಣೆ ಕೂಗಿ, ಪ್ರತಿಭಟಿಸಿ ಹೊರಬಂದರು. ಕಾಂಗ್ರೆಸ್–ಐ ಪ್ರದೇಶ ಸಮಿತಿ ಅಧ್ಯಕ್ಷ ಆಸ್ಕರ್ ಫೆರ್ನಾಂಡಿಸ್ ಅವರು ರಾಜ್ಯಪಾಲರ ವರ್ತನೆಯನ್ನು ಖಂಡಿಸಿದ್ದಾರೆ'-ಇದು ರಾಜಭವನದಲ್ಲಿ ನಡೆದ ಘಟನೆಯ ಬಗ್ಗೆ ಬಂದಿರುವ ವರದಿ.

ರಾಜ್ಯಪಾಲರ ಹುದ್ದೆಯ ಬಗ್ಗೆ ಈಗ ಏಳ ತೊಡಗಿರುವ ಸಾಂವಿಧಾನಿಕ ಬಿಕ್ಕಟ್ಟಿನ ಬಗ್ಗೆ ಇಲ್ಲಿ ಚರ್ಚಿಸುವುದು ನಮ್ಮ ಉದ್ದೇಶವಲ್ಲ. ಆದರೆ ಈ ಹಿಂದೆಂದೂ ಕರ್ನಾಟಕದಲ್ಲಿ ಘಟಿಸದಂತಹ ಒಂದು ಪ್ರಕರಣ ಇದಾದ್ದರಿಂದ, ಇಲ್ಲಿ ತಪ್ಪು ಯಾರದ್ದು ಎನ್ನುವುದರ ಬಗ್ಗೆ ವಿವೇಚಿಸಬೇಕಾಗಿದೆ.

ರಾಜ್ಯಪಾಲರದ್ದು ಒಂದು ಗೌರವಾರ್ಹ ಹುದ್ದೆ. ರಾಜ್ಯ ಸರ್ಕಾರಗಳು ಸಂವಿಧಾನಬದ್ಧವಾಗಿ ಕಾರ್ಯ ನಿರ್ವಹಿಸುತ್ತಿವೆಯೆ, ಆಡಳಿತ ಯಂತ್ರ ಲೋಪವಿಲ್ಲದೆ ಕೆಲಸ ಮಾಡುತ್ತಿದೆಯೆ ಎಂಬುದನ್ನು ನೋಡಿಕೊಳ್ಳಬೇಕಾದ ಹೊಣೆ ರಾಜ್ಯಪಾಲರದ್ದು. ರಾಜ್ಯ ಸರ್ಕಾರದ ವಿರುದ್ಧ ಯಾವುದೇ ಆರೋಪಗಳು ತಮ್ಮ ಬಳಿ ಬಂದರೂ ಅದನ್ನು ಸೌಜನ್ಯದಿಂದ ಸ್ವೀಕರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸುವುದಾಗಿ ಭರವಸೆ ನೀಡಬೇಕಾದದ್ದು ಕ್ರಮ.

ರಾಜ್ಯಪಾಲರ ಬಳಿ ನಿಯೋಗದಲ್ಲಿ ಬಂದ ಕಾಂಗ್ರೆಸ್–ಐ ನಾಯಕರು ನೀಡಿದ ಮನವಿ ಪಟ್ಟಿ ಏಳೆಂಟು ಪುಟಗಳಿದ್ದದ್ದೇನೊ ಸರಿ. ರಾಜ್ಯಪಾಲರು ಮನವಿ ತಂದವರ ಸಮ್ಮುಖದಲ್ಲೇ ಅದನ್ನು ಪೂರ್ಣ ಓದಿ ಮನನ ಮಾಡಬೇಕಾದ ಅಗತ್ಯ ಇಲ್ಲವೆನ್ನುವ ವಾದವನ್ನೂ ಒಪ್ಪಬಹುದು. ಆದರೆ ತಮಗೆ ಮನವಿ ನೀಡಲು ಬಂದವರು ಪ್ರಜೆಗಳಿಂದ ಆಯ್ಕೆ ಹೊಂದಿದ ಜವಾಬ್ದಾರಿಯುತ ಜನನಾಯಕರು, ಅವರಿಗೆ ಸಂವಿಧಾನಬದ್ಧವಾಗಿರುವ ಕರ್ತವ್ಯಗಳನ್ನು ನಿರ್ವಹಿಸಲು ಅವರು ಬಂದಿದ್ದಾರೆ ಎನ್ನುವುದನ್ನೂ ರಾಜ್ಯಪಾಲರು ಗಮನಿಸಬೇಕಿತ್ತು.

ದೂರು ನೀಡಲು ಬಂದ ಕಾಂಗ್ರೆಸ್–ಐ ನಾಯಕರ ಬಳಿ ತಮ್ಮ ಅಧಿಕಾರ ವ್ಯಾಪ್ತಿಯ ಬಗ್ಗೆ ಚರ್ಚಿಸಬೇಕಾದ, ಪ್ರಶ್ನೆಯೆತ್ತಬೇಕಾದ ಅಗತ್ಯ ರಾಜ್ಯಪಾಲರಿಗೇನಿತ್ತು? ಸಂವಿಧಾನದ ಪಾಠ ಹೇಳಬೇಕಾದ ಸಂದರ್ಭ ಖಂಡಿತಾ ಆದಾಗಿರಲಿಲ್ಲ. ಮನವಿಯ ಮೇಲೆ ಕಣ್ಣಾಡಿಸಿ 'ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ಕಳುಹಿಸುತ್ತೇನೆ' ಎಂದು ಹೇಳಿ ಔಪಚಾರಿಕ ಮುಗುಳ್ನಗೆ ಬೀರಿದ್ದರೆ ಸಾಕಿತ್ತು.

ರಾಜ್ಯಪಾಲರು ಅಪ್ರಸ್ತುತವೆನ್ನಬಹುದಾದ, ರಾಜ್ಯಾಂಗ ವಿಧಿಗಳ ಬಗ್ಗೆ, ರಾಜ್ಯಪಾಲರ ಕರ್ತವ್ಯದ ಬಗ್ಗೆ ಕಾಂಗ್ರೆಸ್ ನಾಯಕರ ಬಳಿ ಪ್ರಶ್ನಿಸಿದ್ದರ ಹಿನ್ನೆಲೆ ಅತ್ಯಂತ ಪ್ರಾಮಾಣಿಕವಾಗಿತ್ತು ಎಂದು ನಂಬುವುದಕ್ಕೆ ಸಾಧ್ಯವಾಗುತ್ತಿಲ್ಲ. ತಮ್ಮ ದೂರುಗಳಿಗೆ ರಾಜ್ಯಪಾಲರು ಪರಿಹಾರ ನೀಡುತ್ತಾರೆಂಬ ವಿಶ್ವಾಸದಿಂದಂತೂ ಕಾಂಗ್ರೆ ನಾಯಕರು ರಾಜಭವನಕ್ಕೆ ತೆರಳಿರಲಿಲ್ಲ. ಯಾಕೆಂದರೆ ಪರಿಹಾರ ನೀಡುವುದು ರಾಜ್ಯಪಾಲರ ಕೆಲಸವಲ್ಲ ಎನ್ನುವುದು ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು.

ಸಂಸದೀಯ ವ್ಯವಸ್ಥೆಯ ಎರಡು ಪಕ್ಷಗಳ ನಡುವಣ ಇಂತಹ ಸೂಕ್ಷ್ಮ ಸಂಘರ್ಷದ ವೇಳೆ ಕತ್ತಿಯ ಮೇಲೆ ನಡೆದಾಡುವ ಕೆಲಸವನ್ನು ರಾಜ್ಯಪಾಲರು ಇನ್ನಷ್ಟು ಚೆನ್ನಾಗಿ ನಿರ್ವಹಿಸಿದ್ದರೆ ಈ ಪ್ರತಿಭಟನಾ ಪ್ರಮೇಯ ಉದ್ಭವಿಸುತ್ತಿರಲಿಲ್ಲ. ಈ ನಿಟ್ಟಿನಲ್ಲಿ ರಾಜ್ಯಪಾಲರ ವರ್ತನೆ ಸರಿಯಲ್ಲ ಎನ್ನುವುದನ್ನು ವಿಚಾರವಂತರೆಲ್ಲರೂ ಒಪ್ಪ ಬೇಕಾದದ್ದೆ.

ಪ್ರತಿಭಟನಾ ಮೆರವಣಿಗೆಯಲ್ಲಿ ರಾಜಭವನಕ್ಕೆ ತೆರಳಿದ ಕಾಂಗ್ರೆಸ್ ನಾಯಕರು ಕೂಡಾ ಒಂದೆಡೆ ತಪ್ಪಿ ಬಿದ್ದಿದ್ದಾರೆ. ರಾಜ್ಯಪಾಲರಂತಹ ಗೌರವಾರ್ಹ ಹುದ್ದೆಯಲ್ಲಿರುವವರ ಬಳಿ ಮಾತನಾಡಬೇಕಾದ ರೀತಿಯನ್ನು ಕಾಂಗ್ರೆಸ್ ನಾಯಕರು ಮರೆತಂತಿದೆ. ಸಾವಿರಾರು ಮಂದಿಯ ಮೆರವಣಿಗೆಯ ಪ್ರತಿನಿಧಿಗಳಾಗಿ ಕೇವಲ ಒಂದಿಬ್ಬರು ರಾಜಭವನದ ಒಳಗೆ ಹೋಗಿ ಮನವಿ ಸಲ್ಲಿಸಬಹುದಿತ್ತು. ತಮ್ಮ ನಿಲುವನ್ನು ಸೌಜನ್ಯಪೂರ್ಣರಾಗಿ ರಾಜ್ಯಪಾಲರಿಗೆ ವಿವರಿಸಿ ಹೇಳಬೇಕಾಗಿತ್ತು. ರಾಜ್ಯಪಾಲರು ಕೇವಲ ಒಂದೆರಡು ನಿಮಿಷದಲ್ಲಿ ಓದಿ ಮುಗಿಸಬಹುದಾದ ರೀತಿಯಲ್ಲಿ ಮನವಿ ಪತ್ರವನ್ನು ಬರೆಯಬೇಕಾಗಿತ್ತು.

ಆದರೆ ಒಂದಿಬ್ಬರ ಬದಲಿಗೆ ಹತ್ತಿಪ್ಪತ್ತು ಸಂಸತ್ಸದಸ್ಯರು, ಶಾಸಕರು ರಾಜಭವನದ ಆವರಣದೊಳಗೆ ನುಗ್ಗಿದ್ದೇಕೆ? ರಾಜಭವನದ ಒಳಗೂ ಒಂದಿಬ್ಬರ ಬದಲಿಗೆ ಹಲವಾರು ಜನ ಹೋಗಿ ಮನವಿ ಒಪ್ಪಿಸುವುದರಲ್ಲಿ ಸ್ವಪ್ರತಿಷ್ಠೆಯ ಮೆರೆದಾಟದ ಹೊರತಾದ ಯಾವ ಉದ್ದೇಶಗಳಿವೆ ?

ರಾಜಕಾರಣಿಗಳು ಈ ದೇಶದಲ್ಲಿ ಸಂಸದೀಯ ಸಂಪ್ರದಾಯವನ್ನು ಮೀರಿ ಹಾದಿ ತಪ್ಪಿ ನಡೆಯುತ್ತಿರುವುದು ಈಗಾಗಲೇ ಮಾಮೂಲಾಗಿದೆ. ಈಗ ರಾಜ್ಯಪಾಲರು ಕೂಡಾ ಇದೇ ಹಾದಿ ಹಿಡಿದರೆ... ನಮ್ಮ ಸಂಸದೀಯ ಸಂಪ್ರದಾಯಗಳ ಔಚಿತ್ಯದ ಬಗ್ಗೆಯೇ ಸಂಶಯಗಳು ಏಳುತ್ತವೆ.

ಇಂತಹ ಪ್ರಕರಣಗಳು ಮತ್ತೆ ಮರುಕಳಿಸದಿರಲಿ ಎಂಬುದಷ್ಟೇ ನಮ್ಮ ಹಾರೈಕೆ.

ಮುಂಗಾರು, ಜೂನ್ 21, 1987 [illegible]

ಮುಂಗಾರು

ಭಾನುವಾರ ಜೂನ್ 21, 1987

ಈ ಆತ್ಮವಂಚನೆ ಸಾಕು

ಭಾರತದ ರಾಜಕಾರಣಿಗಳು ಇಂದು ಬಂಡವಾಳಶಾಹಿಗಳ ಆಟಿಕೆಯ ಬೊಂಬೆಗಳಾಗುತ್ತಿರುವಂತಹ ಮಟ್ಟವನ್ನು ತಲುಪುತ್ತಿದ್ದಾರೆಂದೆನಿಸುತ್ತಿದೆ. ಉದ್ಯಮ ಪ್ರಭುಗಳು ಈ ದೇಶದ ರಾಜಕಾರಣಿಗಳಿಗೆ ಚುನಾವಣೆಯ ಸಂದರ್ಭಗಳಲ್ಲಿ ಅಪಾರ ಹಣ ನೀಡಿ ಅವರನ್ನು ತಮ್ಮ ಕೈಗೊಂಬೆಗಳನ್ನಾಗಿಸಿಕೊಳ್ಳುತ್ತಿದ್ದಾರೆನ್ನುವುದಂತೂ ಸ್ಪಷ್ಟವಾಗಿದೆ.

ಈ ಹಿನ್ನೆಲೆಯಲ್ಲಿ ಮಾಜಿ ರಕ್ಷಣಾ ಸಚಿವ ವಿ.ಪಿ. ಸಿಂಗ್ ಅವರು ನೀಡಿರುವ ಸಲಹೆಯಂತೂ ಬಹಳ ಅರ್ಥಪೂರ್ಣವಾಗಿದೆ. ವ್ಯಾಪಾರೀ ಸಂಸ್ಥೆಗಳು ದೇಣಿಗೆ ಸಲ್ಲಿಸುವ ಮೂಲಕ ಪ್ರಭಾವ ಬೀರುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಕಾನೂನು ಬದ್ಧ [illegible] ಹಣ ಖರ್ಚುಮಾಡಬೇಕೆಂದು ಕಡ್ಡಾಯಗೊಳಿಸುವ ಅವಶ್ಯಕತೆಯ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಸಬೇಕೆಂದು ಅವರು ಹೇಳಿದ್ದಾರೆ. ಇದು ನಿಜಕ್ಕೂ ವಿಚಾರಪ್ರದವಾದುದು.

ಈ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಜೀವಾಳವಾದ ಚುನಾವಣೆಗಳು ಇಂದು ಭ್ರಷ್ಟಾಚಾರದ ಕೂಪವಾಗಿದೆ. ಅಭ್ಯರ್ಥಿಗಳು ಇಂತಿಷ್ಟೇ ಖರ್ಚು ಮಾಡಬೇಕೆಂದು ಸರ್ಕಾರ ನಿಗದಿ ಪಡಿಸಿದ್ದರೂ ಅದರ ಕಟ್ಟುನಿಟ್ಟಿನ ಅನುಷ್ಠಾನ ಸಾಧ್ಯವಿಲ್ಲವಾಗಿದೆ. ಏಕೆಂದರೆ ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾದವರೂ ಕೂಡಾ ಉದ್ಯಮ ಪ್ರಭುಗಳ ಪ್ರಭಾವಕ್ಕೆ ಒಳಗಾಗಿದ್ದಾರೆ.

ಚುನಾವಣೆಗಳಲ್ಲಿ ಗೆದ್ದ ವಿಧಾನಸಭಾ ಸದಸ್ಯರು ಮತ್ತು ಲೋಕಸಭಾ ಸದಸ್ಯರುಗಳು ತಾವು ಚುನಾವಣೆಗಾಗಿ ಇಷ್ಟೇ ಹಣ ಖರ್ಚುಮಾಡಿದ್ದೇವೆಂದು ಪ್ರಮಾಣ ವಚನ ಸ್ವೀಕರಿಸುತ್ತಾರೆ. ಇದನ್ನು ಅಪ್ರಾಮಾಣಿಕ ವಚನ ಎನ್ನಬಹುದು. ಎಲ್ಲರೂ ಯದ್ವಾತದ್ವಾ ಹಣ ಸುರಿದು ಪ್ರಚಾರಗಿಟ್ಟಿಸಿಕೊಂಡು ಗೆದ್ದು ಬಂದಿರುತ್ತಾರೆ. ಆದರೂ ಪ್ರಾಮಾಣಿಕತೆಯ ಬಗ್ಗೆ 'ಪ್ರಮಾಣ ವಚನ' ಸ್ವೀಕರಿಸುತ್ತಾರೆ. ಆತ್ಮವಂಚನೆ ಮಾಡಿಕೊಳ್ಳುತ್ತಾರೆ. ಇಡೀ ಜನಸಮುದಾಯವನ್ನು ವಂಚಿಸುತ್ತಾರೆ.

ಈ ನಿಟ್ಟಿನಲ್ಲಿ ವಿ. ಪಿ. ಸಿಂಗ್ ಅವರ ಸಲಹೆಯನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾದ ಅವಶ್ಯಕತೆ ಇದೆ. ಚುನಾವಣೆಗಳಲ್ಲಿ ಅಪಾರವಾದ ದುಂದುವೆಚ್ಚ, ಭ್ರಷ್ಟಾಚಾರಗಳನ್ನು ತಡೆಗಟ್ಟುವ [illegible]ನಲ್ಲಿ ಕಾನೂನುಬದ್ಧವಾದ ಚುನಾವಣಾ ನಿಧಿಯೊಂದನ್ನು ಸ್ಥಾಪಿಸಬೇಕಾದ ಅನಿವಾರ್ಯತೆ ಇದೆ.

ಚುನಾವಣೆಗಳಲ್ಲಿ ಲಕ್ಷಾಂತರ ಹಣವನ್ನು ನೀರಿನಂತೆ ಚೆಲ್ಲುವ ರಾಜಕಾರಣಿಗಳಿಗೆ ಆ ಹಣ ಎಲ್ಲಿಂದ ಬರುತ್ತದೆ ಎನ್ನುವ ಪ್ರಶ್ನೆಯ ಆಳದಲ್ಲೇ ನಮ್ಮ ಇಡೀ ರಾಜಕೀಯ ವ್ಯವಸ್ಥೆಯ ಭ್ರಷ್ಟತೆಯ ಬೇರುಗಳು ಅಡಗಿವೆ.

ಇಂದು ನಮ್ಮ ದೇಶದಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ಉದ್ಯಮ ಪ್ರಭುಗಳಿಂದ ಹಣವನ್ನು ತೆಗೆದುಕೊಂಡಿರುತ್ತಾರೆನ್ನುವುದಂತೂ ಮೇಲ್ನೋಟಕ್ಕೆ ಕಾಣುವ ಸತ್ಯವಾಗಿದೆ. ಇಂತಹ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದಾಗ ಸರ್ಕಾರದ ಬೊಕ್ಕಸದ ಕೀಲಿಕೈ ಉದ್ಯಮ ಪ್ರಭುಗಳ ಕಿಸೆಗೆ ಹೋಗಿರುತ್ತದೆ. ಅವರು ಈ ದೇಶದ ಕೋಟ್ಯಾಂತರ ತೆರಿಗೆದಾರರ ಹಣವನ್ನು ತಮ್ಮ ಉನ್ನತಿಗೆ ಅತ್ಯಂತ ವ್ಯವಸ್ಥಿತವಾಗಿ ಬಳಸಿಕೊಳ್ಳುವ ಜಾಣರಾಗಿರುತ್ತಾರೆ.

ಇದರಿಂದ ಸರ್ಕಾರದ ಬೊಕ್ಕಸ ಲೂಟಿಯಾಗುವುದಷ್ಟೇ ಅಲ್ಲ ಇಡೀ ಸಾರ್ವಜನಿಕ ಜೀವನವೇ ಕಲುಷಿತಗೊಳ್ಳುತ್ತದೆ. ಕಪ್ಪುಹಣದ ದೊರೆಗಳ ಬುಟ್ಟಿಯಲ್ಲಿರುವ ರಾಜಕಾರಣಿಗಳು, ರಾಜಕೀಯ ಪಕ್ಷಗಳು ಎಷ್ಟರ ಮಟ್ಟಿಗೆ ಜನಪರವಾಗಿ ಪ್ರಾಮಾಣಿಕ ಕೆಲಸ ಮಾಡಲು ಸಾಧ್ಯವಿದೆ?

ಈ ನಿಟ್ಟಿನಲ್ಲಿ ಇಂದು ವ್ಯಾಪಕವಾದ ಚರ್ಚೆ ನಡೆಯಬೇಕಿದೆ. ಜನಾಭಿಪ್ರಾಯ ರೂಪುಗೊಳ್ಳಬೇಕಾಗಿದೆ.

ಕಾನೂನು ಬದ್ಧವಾದ ಚುನಾವಣಾ ನಿಧಿಯೊಂದರ ಸ್ಥಾಪನೆ ಒಂದು ಹಂತದಲ್ಲಿ ಈ ಎಲ್ಲಾ ಭ್ರಷ್ಟಾಚಾರ ಮತ್ತು ಸಮಸ್ಯೆಗಳಿಗೆ ಸೂಕ್ತ ಪರಿಹಾರವೆನಿಸುವುದರಲ್ಲಿ ಯಾವುದೇ ಸಂಶಯವಿಲ್ಲ. ಇದರಿಂದ ಕಪ್ಪುಹಣದ ಖದೀಮರು ಈ ದೇಶದ ಸರ್ಕಾರದ ಮೇಲೆ, ಸರ್ಕಾರ ರೂಪಿಸುವ ಧೋರಣೆಗಳ ಮೇಲೆ ಪ್ರಭಾವ ಬೀರುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ.

ಇದನ್ನು ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೆ ತರುವ ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಪ್ರಾಮಾಣಿಕವಾಗಿ ಯೋಚಿಸಬೇಕಾಗಿದೆ. ಹೀಗೆ ಮಾಡದೇ ಇದ್ದರೆ ಈಗಾಗಲೇ ಕೊಳೆತು ನಾರುತ್ತಿರುವ ಈ ದೇಶದ ವ್ಯವಸ್ಥೆ ಇನ್ನೂ ಹದಗೆಡುವ ಸಾಧ್ಯತೆಗಳಿವೆ. ಪ್ರಜಾಪ್ರಭುತ್ವ ವ್ಯವಸ್ಥೆ ದುರಂತದ ಹಾದಿಯಲ್ಲಿ ಸಾಗುವ ಅಪಾಯವಿದೆ.

ಚುನಾವಣಾ ವೆಚ್ಚಕ್ಕೆ ಸಂಬಂಧಪಟ್ಟಂತೆ ಇನ್ನಾದರೂ ಈ ಆತ್ಮವಂಚನೆ ಕೊನೆಗೊಳ್ಳಲಿ. ಪ್ರಜಾಪ್ರಭುತ್ವ ವ್ಯವಸ್ಥೆಯ ಈ ನಮ್ಮ ಆಡಳಿತಾಂಗಗಳು ಉದ್ಯಮ ಪ್ರಭುಗಳ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ನಡೆಯಲಿ.

ಮುಂಗಾರು

ಬಂಧನಕಾರಿಯಾಗಬಲ್ಲ ಅಪ್ಪುಗೆ!

"ರಾಜಕೀಯವಾಗಿ ಬಹಳ ಮಹತ್ವದ್ದು" ಎಂದು ವರ್ಣಿಸಲಾಗಿರುವ ಪ್ರಧಾನಿ ರಾಜೀವ್ ಗಾಂಧಿಯವರ ರಶ್ಯಾ ಭೇಟಿಯ ಸಂದರ್ಭದಲ್ಲಿ ಅಲ್ಲವರಿಗೆ ತೀರಾ ಆತ್ಮೀಯವಾದ ಹಾಗೂ ಸಂಭ್ರಮದ ಸ್ವಾಗತ ಸಿಕ್ಕಿತೆಂಬ ವರದಿ ಬಂದಿದೆ. ರಶ್ಯಾ ಮತ್ತು ಭಾರತದ ನಡುವಿನ ರಾಜಕೀಯ ಸ್ನೇಹಕ್ಕೆ ಸಾಂಸ್ಕೃತಿಕ ಸಂಬಂಧದ ಬೆಸುಗೆಯಾಗುವಂತೆ ರೂಪಿಸಲಾದ 'ಭಾರತ ಉತ್ಸವ'ದ ಉದ್ಘಾಟನೆ ಸಮಾರಂಭದಲ್ಲಿ ಭಾಗಿಯಾಗಲು ರಶ್ಯಾಕ್ಕೆ ಭೇಟಿ ನೀಡಿರುವ ಪ್ರಧಾನಿ ರಾಜೀವ್ ಗಾಂಧಿಯವರು ರಶ್ಯಾದ ನಾಯಕರೊಡನೆ ಪರಸ್ಪರ ಹಿತದ ಹಲವಾರು ಪ್ರಮುಖ ವಿಚಾರಗಳನ್ನೂ ಚರ್ಚಿಸಲಿದ್ದಾರೆ.

ಭಾರತ ಸ್ವಾತಂತ್ರ್ಯಗಳಿಸಿದ ದಿನದಿಂದಲೇ ರಶ್ಯಾದೊಡನೆ ಬೆಳೆದು ಬಂದ ಸ್ನೇಹ ಸಂಬಂಧ ಕಳೆದ ಈ ನಾಲ್ವತ್ತು ವರ್ಷಗಳ ಅವಧಿಯಲ್ಲಿ ಗಾಢ ಸ್ನೇಹವಾಗಿಯೂ ರಾಜಕೀಯ ಮೈತ್ರಿಯಾಗಿಯೂ ಮೈದಳೆದಿದೆ. ರಶ್ಯಾದಂತಹ ಒಂದು ಬಲಿಷ್ಠ ರಾಷ್ಟ್ರದೊಡನೆ ಭಾರತಗಳಿಸಿರುವ ಈ ಮೈತ್ರಿ ಸಂಬಂಧ ಬಡ ಭಾರತಕ್ಕೆ ಸುರಕ್ಷಾ ಭಾವನೆಯನ್ನೂ-ಸಮಾಧಾನವನ್ನೂ ತಂದು ಕೊಟ್ಟಿದೆ.

ಇಂತಹ ಒಂದು ಗಾಢ ಸ್ನೇಹದ ಹಿನ್ನೆಲೆಯಲ್ಲಿ ರಾಜೀವ್ ಗಾಂಧಿಯವರಿಗೆ ರಶ್ಯಾದಲ್ಲಿ ಸಿಕ್ಕಿರುವ ಆತ್ಮೀಯ ಸ್ವಾಗತ ಸಹಜವಾದುದೇ. ಭಾರತದ ಪ್ರಜಾಸಮೂಹದಂತೆ ಪ್ರಧಾನಿ ರಾಜೀವ್ ಗಾಂಧಿಯವರೂ ರಶ್ಯಾದೊಡನೆ ಭಾರತ ಬೆಳೆಸಿಕೊಂಡು ಬಂದಿರುವ ಸ್ನೇಹ ಸಂಬಂಧಕ್ಕೆ ಬಹಳ ಮಹತ್ವ ಕೊಟ್ಟಿದ್ದಾರೆ. ವಿಶ್ವರಾಜಕಾರಣದಲ್ಲಿ ರಶ್ಯಾಕ್ಕೆ ಇರುಸು-ಮುರುಸಾಗುವ ಯಾವ ಮಾತನ್ನೂ ಇವರಾಡಿದವರಲ್ಲ. ಹೀಗಾಗಿ ರಶ್ಯಾ ನಾಯಕರು ಭಾರತದ ಪ್ರಧಾನಿ ರಾಜೀವ್ ಗಾಂಧಿಯವರಲ್ಲಿ ಒಬ್ಬ 'ನಂಬಿಕಸ್ತ' ಸ್ನೇಹಿತನನ್ನು ಗುರುತಿಸಿರುವುದು ಸಹಜ. ಅದರಲ್ಲಿಯೂ ರಾಜೀವ್ ಗಾಂಧಿಯವರು ವಿಶ್ವರಾಜಕಾರಣದ ವಿದ್ಯಮಾನಗಳಲ್ಲಿ ತಮ್ಮ ನಿಲುವನ್ನು ನಿರ್ಧರಿಸುವ ಮೊದಲು ರಶ್ಯಾ ನಾಯಕರೊಡನೆ ಸಮಾಲೋಚನೆ ನಡೆಸುವ 'ಬಂಧುತ್ವವನ್ನು' ತೋರಿಸಿದವರು. 1986ರಲ್ಲಿ ಅಮೆರಿಕ ಪ್ರವಾಸ ಮುಗಿಸಿ ಸ್ವದೇಶಕ್ಕೆ ಬರುವ ಮೊದಲು ರಶ್ಯಾ ನಾಯಕರೊಡನೆ ವಿಶ್ವರಾಜಕಾರಣವನ್ನು ಚರ್ಚಿಸುವ ಆಸಕ್ತಿ ತೋರಿಸಿದವರು. ಇಂತಹ ಒಬ್ಬ 'ಆತ್ಮೀಯ ಬಂಧು'ವಿಗೆ ತೋರಿಸುವ ಆತ್ಮೀಯತೆಯನ್ನು ರಶ್ಯಾದ ನಾಯಕರು ತಮ್ಮದೇ ಆದ ಶೈಲಿಯಲ್ಲಿ ತೋರಿಸಿದ್ದಾರೆ.

ಜಗತ್ತಿನ ದುರ್ಬಲ ದೇಶಗಳಿಗೆ ರಾಜಕೀಯ ನೀತಿಯನ್ನು ನಿರ್ದೇಶಿಸುವ ಎರಡು ಬಲಿಷ್ಠ ರಾಷ್ಟ್ರಗಳಲ್ಲಿ ಒಂದಾದ ರಶ್ಯಾದಲ್ಲಿ ನಮ್ಮ ಪ್ರಧಾನಿಗೆ ಸಿಕ್ಕಿದ 'ಭವ್ಯ ಸ್ವಾಗತ' ಭಾರತೀಯರಿಗೆ ಸಂತಸವನ್ನುಂಟು ಮಾಡಬಲ್ಲುದು.

ಭಾರತ-ರಶ್ಯಾ ಸಂಬಂಧವನ್ನು ಇನ್ನಷ್ಟು ನಿಕಟವೂ-ಗಾಢವೂ ಆಗಿ ಮಾಡಬಲ್ಲ ಪ್ರಧಾನಿ ರಾಜೀವ್ ಗಾಂಧಿಯವರ ರಶ್ಯಾ ಭೇಟಿಯನ್ನು ನಾವೀಗ ಭಾರತೀಯ ದೃಷ್ಟಿಯಲ್ಲಿ ಅವಲೋಕಿಸಬೇಕಾದ ಅಗತ್ಯ ಬೀಳುತ್ತದೆ. ಈ ದೃಷ್ಟಿಯಲ್ಲಿ ಅವಲೋಕಿಸಿದಾಗ ರಶ್ಯಾದ ನಾಯಕರು ಪ್ರಧಾನಿ ರಾಜೀವ್ ಗಾಂಧಿಯವರಿಗೆ ಭಾರತದಂತಹ ಒಂದು ಬೃಹತ್ ರಾಷ್ಟ್ರದ ಪ್ರಮುಖನಿಗೆ ತೋರಿಸಬೇಕಾದ ಗೌರವ ಅಥವಾ ಆದರವನ್ನು ತೋರಿಸಿಲ್ಲವೆನ್ನಬೇಕಾಗುತ್ತದೆ. ರಾಜೀವ್ ಗಾಂಧಿಯವರು ಈದೇಶದ ಒಬ್ಬ ಚುನಾಯಿತ ಪ್ರಧಾನಿ ಮಾತ್ರವಲ್ಲದೆ ಆಳುವ ಪಕ್ಷದ ಅಧ್ಯಕ್ಷರೂ ಆಗಿದ್ದಾರೆ. 1985ರಲ್ಲಿ ರಾಜೀವ್ ಗಾಂಧಿಯವರು ರಶ್ಯಾಕ್ಕೆ ಭೇಟಿ ನೀಡಿದಾಗ ಅವರ ಸ್ಥಾನಕ್ಕೆ ಸಲ್ಲಬೇಕಾದ ಗೌರವ ಸಿಕ್ಕಿತ್ತು. ರಶ್ಯಾದ ರಾಜಕೀಯ ವ್ಯವಸ್ಥೆಯಲ್ಲಿ ಕೇವಲ ಕಾರ್ಯ ನಿರ್ವಾಹಕ ಅಧಿಕಾರಿಗಳಂತಿರುವ ಅಲ್ಲಿನ ಪ್ರಧಾನಿ, ವಿದೇಶಾಂಗ ಮಂತ್ರಿ ಮತ್ತಿತರರೊಂದಿಗೆ ರಶ್ಯಾದ ರಾಷ್ಟ್ರ ಪ್ರಮುಖರಾದ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಮೈಕೆಲ್ ಗೊರ್ಬಚೇವ್ ಅವರೂ ರಾಜೀವ್‌ರನ್ನು ಸ್ವಾಗತಿಸಲು ಮಾಸ್ಕೋ ವಿಮಾನ ನಿಲ್ದಾಣಕ್ಕೆ ಬಂದಿದ್ದರು.

ವರ ಮೇಲೆ "ಆತ್ಮೀಯತೆಯ ಮಳೆಗರೆಯಲು" ತಮ್ಮ ಕೈಕೆಳಗಿನ ಪದಾಧಿಕಾರಿಗಳನ್ನು ಕಳುಹಿಸಿದರು.

'ಪ್ರಧಾನಿ' ಎನ್ನುವ ಬಿರುದಿರುವ ಎಲ್ಲ ಚಿಕ್ಕ-ಪುಟ್ಟ ಅಗಣ್ಯ ದೇಶಗಳ ಪ್ರಮುಖರನ್ನು ಸ್ವಾಗತಿಸಲು ರಶ್ಯಾದ ಪ್ರಧಾನಿ ವಿಮಾನ ನಿಲ್ದಾಣಕ್ಕೆ ಹೋಗುತ್ತಾರೆ. ಗಣ್ಯ ರಾಷ್ಟ್ರವೊಂದರ ಪ್ರಮುಖರು ಬಂದಾಗ ಮಾತ್ರ ರಶ್ಯಾ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಅವರನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಹೋಗುತ್ತಾರೆ. ಈ ದೃಷ್ಟಿಯಿಂದ ಈ ಬಾರಿ ಪ್ರಧಾನಿ ರಾಜೀವ್ ಗಾಂಧಿಯವರಿಗೆ ರಶ್ಯಾದಲ್ಲಿ ಗಣ್ಯ ರಾಷ್ಟ್ರವೊಂದರ ಪ್ರಧಾನಿಗೆ ಸಿಗಬೇಕಾದ ಗೌರವ ಸಂದಿಲ್ಲವೆಂದು ಹೇಳಬೇಕಾಗುತ್ತದೆ.

ಗೊರ್ಬಚೇವ್ 28 ಕೋಟಿ ಜನ ಸಂಖ್ಯೆ ಇರುವ ಒಂದು ದೇಶದ ಪ್ರಮುಖರು. ರಾಜೀವ್ ಗಾಂಧಿ 80 ಕೋಟಿ ಭಾರತೀಯರ ಮಹಾಪ್ರಧಾನಿ. ರಾಜಕೀಯದಲ್ಲಿ ಜನ ಪ್ರಾತಿನಿಧ್ಯಕ್ಕೆ ಬೆಲೆ ಇರುವುದಾದರೆ ರಾಜೀವ್ ಗಾಂಧಿಯವರ ತೂಕ ಗೊರ್ಬಚೇವ್‌ಗಿಂತ ಸುಮಾರು ಎರಡೂವರೆ ಪಟ್ಟು ಹೆಚ್ಚು. ಆದರೆ ಗೊರ್ಬಚೇವ್ ದೃಷ್ಟಿಯಲ್ಲಿ ರಾಜೀವ್ ಗಾಂಧಿಯವರ ತೂಕ ಕಡಿಮೆಯಾಗಲು ಕಾರಣವಾದುದು ಭಾರತದ ಬಡತನ ಮತ್ತು ಅದರ ಅವಲಂಬನೆ.

ಭಾರತೀಯರು ತಮ್ಮ 'ವೈರಿರಾಷ್ಟ್ರ' ವೆಂದು ಪರಿಗಣಿಸುವ ಪಾಕಿಸ್ತಾನಕ್ಕೆ ಬಲಿಷ್ಠ ರಾಷ್ಟ್ರವಾದ ಅಮೆರಿಕ ಮಾರಕಾಸ್ತ್ರಗಳ ಪೂರೈಕೆ ಮಾಡುತ್ತಿರುವುದರಿಂದ ಭಾರತದ ಭದ್ರತೆಗೆ ಬರುತ್ತಿರುವ ಅಪಾಯದ ಕುರಿತು ಚರ್ಚಿಸುವುದು ರಾಜೀವ್ ಗಾಂಧಿಯವರ ಈ ಸಲದ ರಶ್ಯಾ ಭೇಟಿಯ ಪ್ರಮುಖ ಉದ್ದೇಶವೆಂದು ಹೇಳಲಾಗಿದೆ. ರಾಜೀವ ಗಾಂಧಿ ಗುರುವಾರ ಗೊರ್ಬಚೇವ್‌ಜತೆ ನಡೆಸಿದ ಎರಡು ಗಂಟೆಗಳ ಮಾತುಕತೆಯಲ್ಲಿ ಅಮೆರಿಕ ಪಾಕಿಸ್ತಾನಕ್ಕೆ ಪೂರೈಸುತ್ತಿರುವ ಅವಾಕ್ಸ್ ವಿಮಾನಗಳ ಪ್ರಸ್ತಾಪವಾಯಿತೆಂದು ಹೇಳಲಾಗಿದೆ. ಅಮೆರಿಕ ಪಾಕಿಸ್ತಾನಕ್ಕೆ ಕೊಡುತ್ತಿರುವ 'ಅವಾಕ್ಸ್' ವಿಮಾನಗಳ ಬದಲಿಗೆ ರಾಜೀವ್ ಗಾಂಧಿಯವರು ರಶ್ಯಾದಿಂದ ಅತ್ಯಾಧುನಿಕ ಆವಿಷ್ಕಾರದ 'ಮಿಗ್' ವಿಮಾನಗಳನ್ನು ಕೇಳಿರಬಹುದು. ಪಾಕಿಸ್ತಾನದಿಂದ ಬರಬಹುದಾದ ಅಣ್ವಸ್ತ್ರ ಧಾಳಿಗೆ ರಾಜೀವ್ ಗಾಂಧಿಯವರು ರಶ್ಯಾದ ಅಣ್ವಸ್ತ್ರಗಳ ರಕ್ಷಾಕವಚವನ್ನು ಯಾಚಿಸಬಹುದು. ಒಟ್ಟಿನಲ್ಲಿ ರಾಜೀವ್ ಗಾಂಧಿಯವರ ರಶ್ಯಾ ಭೇಟಿಯ ಪ್ರಮುಖ ಉದ್ದೇಶ ಭಾರತದ ಭದ್ರತೆಗೆ ಬಂದಿರುವ ಬಾಹ್ಯ ಬೆದರಿಕೆಗೆ ರಕ್ಷಣೆ ಕೇಳುವುದು. ತನ್ನ ಭದ್ರತೆಯ ಪ್ರಶ್ನೆಯನ್ನು ಹೊತ್ತು ಮಾರುವ ಒಂದು ದೇಶದ ಪ್ರಧಾನಿಗೆ ಗೌರವ ಸಿಗೋದಿಲ್ಲ. ಇದನ್ನೇ ಈಗ ಗೊರ್ಬಚೇವ್ ಪ್ರಧಾನಿ ರಾಜೀವ್ ಗಾಂಧಿಯವರಿಗೆ ಸೂಚ್ಯವಾಗಿ ತಿಳಿಸಿದ್ದಾರೆ.

ಜಗತ್ತಿನ ಇನ್ನೊಂದು ಯಜಮಾನ ರಾಷ್ಟ್ರವಾದ ಅಮೆರಿಕದ ಬಾಗಿಲಿಗೆ ರಾಜೀವ್‌ಗಾಂಧಿ ಇಂತಹ ಭದ್ರತೆಯ ಭಯದ ಹೊರೆ ಹೊತ್ತು ಹೋಗಿದ್ದರೆ ಅಧ್ಯಕ್ಷ ರೇಗನ್ ಕೂಡಾ ಹೀಗೆಯೇ ನೋಡಿಕೊಳ್ಳುತ್ತಿದ್ದರು. ಈ ಬಲಿಷ್ಠ ರಾಷ್ಟ್ರಗಳ ಮೂಲ ಗುಣ ಒಂದೇ. ಇವೆರಡೂ ರಾಷ್ಟ್ರಗಳಿಗೆ ವಿಶ್ವದ ಯಜಮಾನಿಕೆ ಬೇಕು. ಅಮೆರಿಕ ತನ್ನ ಯಜಮಾನ್ಯವನ್ನು ಅಬ್ಬರದಿಂದ ಪ್ರದರ್ಶಿಸಬಹುದು. ರಶ್ಯಾ ತನ್ನ ವಿಸ್ತರಣಾ ಆಕಾಂಕ್ಷೆಗಳಿಗೆ ತಾತ್ವಿಕ ಮೆರುಗು ಕೊಡಬಹುದು. ಇದು ಬಾಹ್ಯ ವ್ಯತ್ಯಾಸವೇ ಹೊರತು ಮೂಲ ಗುಣದ್ದಲ್ಲ.

ಪಾಕಿಸ್ತಾನ ಭಾರತದ ಮೇಲಿನ ಸೇಡು ತೀರಿಸಿಕೊಳ್ಳಲು ಅಮೆರಿಕದ ಆಳಾಗಿ ಬದುಕಲೂ ಸಿದ್ಧವಾಗುತ್ತಿದೆ. ಈ ಅಪಾಯದಿಂದ ಪಾರಾಗಲು ಭಾರತ ರಶ್ಯಾವನ್ನು ಅಪ್ಪಿಕೊಳ್ಳುತ್ತಿದೆ. ಭಾರತ ಮತ್ತು ರಶ್ಯಾ ದೇಶಗಳ ನಡುವಿನ ಈ "ಆತ್ಮೀಯ ಅಪ್ಪುಗೆ" ನಾಳೆ ಬಿಡಿಸಿಕೊಳ್ಳಲಾಗದ ರಾಜಕೀಯಬಂಧನವಾಗಬಹುದು. ಆಂತರಿಕ ಸ್ಥಿತಿ ಹದಗೆಡುತ್ತಿರುವ ಭಾರತೀಯ ಸನ್ನಿವೇಶದಲ್ಲಿ ಭಾರತದ ಸಮಗ್ರತೆಯ ರಕ್ಷಣೆಗೂ [illegible] "ಸ್ನೇಹಹಸ್ತ" [illegible] [illegible]

ಮುಂಗಾರು

ಶನಿವಾರ, ಆಗಸ್ಟ್ 1, 1987

'ಪ್ರೀತಿಯ ಬೆಸುಗೆ ಬೇಕಿದೆ'

ಮನುಷ್ಯ ಮನುಷ್ಯರ ನಡುವೆ ಇರಲೇಬೇಕಾದ ಪರಸ್ಪರ ಪ್ರೀತಿ, ನಂಬಿಕೆಗಳು ನಾಶವಾಗಿವೆ... ಎಲ್ಲರ ಎದೆಯಾಳದಲ್ಲಿ ದ್ವೇಷ ತನ್ನ ಬೇರಿಳಿಸಿದೆ. ಹೂವು ಅರಳುವಲ್ಲಿ ಪಾಪಾಸು ಕಳ್ಳಿ ಚಿಗುರುತ್ತಿದೆ... ಹೌದು. ಪಂಜಾಬ್ ಜನ ಸಮುದಾಯದ ಅಂತರಂಗ ಇಂದು ಅಲ್ಲೋಲ ಕಲ್ಲೋಲವಾಗಿದೆ. ಹಕ್ಕಿಯ ಇಂಚರ ಕೇಳ ಬೇಕಾದೆಡೆ ಬರೇ ಪೊಲೀಸರ ಬೂಟುಗಾಲಿನ ಸದ್ದು... ಆಗಿಂದಾಗ್ಗೆ ಬಂದೂಕಿನಿಂದ ಸಿಡಿವ ಗುಂಡಿನ ಸದ್ದುಗಳೇ ಕೇಳಿಸುತ್ತಿವೆ.

ಇದು ಈಗ ಬರೇ ಪಂಜಾಬ್‌ಗೇ ಸೀಮಿತಗೊಂಡಿಲ್ಲ. ಇತ್ತೀಚೆಗಿನ ದಿನಗಳಲ್ಲಿ ಈ ರಾಷ್ಟ್ರದ ರಾಜಧಾನಿಯ ಜನಗಳ ಮನಸ್ಸನ್ನೂ ತತ್ತರಗೊಳಿಸಿದೆ. ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಬಿ. ಜೆ. ಪಿ. ಸದಸ್ಯ ಹಂಸರಾಜ ಸೇಠಿಯವರೂ ಸೇರಿದಂತೆ ಇಬ್ಬರನ್ನು ನಿನ್ನೆ ಭಯೋತ್ಪಾದಕರು ಗುಂಡಿಕ್ಕಿ ಕೊಂದಿದ್ದಾರೆಂಬ ಸುದ್ದಿ ಬಂದಿದೆ. ಪಂಜಾಬ್‌ನಲ್ಲಿ ನಿನ್ನೆ ರಾತ್ರಿ ಪೊಲೀಸ್ ಪೇದೆಗಳ ಸಹಿತ ಮೂವರು ಕೊಲೆಯಾಗಿದ್ದಾರೆಂಬ ಸುದ್ದಿ ಬಂದಿದೆ. ಅಚ್ಚರಿ ಎಂದರೆ ಈ ಸುದ್ದಿಗಳು ನಮ್ಮನ್ನು ಇತ್ತೀಚೆಗೆ ದಿಗಿಲುಗೊಳಿಸುತ್ತಿಲ್ಲ. ಪ್ರತಿನಿತ್ಯ ಇಂತಹ ಸುದ್ದಿಗಳನ್ನು ಕೇಳಿ ಕೇಳಿ ನಮ್ಮ ಹೃದಯ ಜಡ್ಡುಗಟ್ಟಿ ಹೋಗಿದೆ... ಸ್ಪಂದನಗಳು ಸುಟ್ಟು ಹೋಗಿವೆ ಏನೋ ಎಂಬ ಸಂಶಯ ಕಾಡುತ್ತಿದೆ. ಇದು ಮನುಕುಲದ ದುರಂತವಲ್ಲದೆ ಮತ್ತೇನು?

ಮನುಷ್ಯ ಸಮುದಾಯಗಳ ಪ್ರೀತಿಯ ಆಳಕ್ಕೆ ಪೊಲಸು ರಾಜಕೀಯದ ಕೊಳೆ ಇಳಿ ಬಿದ್ದಾಗ ಇಂತಹದ್ದು ಸಾಮಾನ್ಯ. ಇತಿಹಾಸದ ಉದ್ದಕ್ಕೂ ನಾವಿದನ್ನೇ ಕಾಣುತ್ತಾ ಬಂದಿದ್ದೇವೆ. ಇಂತಹ ಐತಿಹಾಸಿಕ ಸತ್ಯಗಳು ನಮ್ಮ ಕಣ್ಣ ಮುಂದಿದ್ದರೂ ಮತ್ತೆ ನಾವು ಅದೇ ದುರಂತದ ಅಂಚಿಗೆ ಸಾಗುತ್ತಿದ್ದೇವೆ. ಇಂದು ಭುಗಿಲೆದ್ದಿರುವ ಪಂಜಾಬ್ ಸಮಸ್ಯೆಗೆ ಕೆಲವು ನೂರು ವರುಷಗಳ ಇತಿಹಾಸವಿದೆ. ಆ ಇತಿಹಾಸದಿಂದ ನಾವೇನನ್ನೂ ಅರಗಿಸಿಕೊಳ್ಳದಿರುವುದೇ ಇಂದಿನ ಈ ದುರಂತಕ್ಕೆ ಕಾರಣವಾಗುತ್ತಿದ್ದೇವೆನ್ನಬಹುದು.

ಪಂಜಾಬ್ ಸಮಸ್ಯೆಯನ್ನು ನಾವು ಪೊಲೀಸ್ ಕಾರ್ಯಾಚರಣೆಯ ಮೂಲಕ, 'ಕಂಡಲ್ಲಿ ಗುಂಡು' ಆಜ್ಞೆಗಳ ಮೂಲಕ ಬಗೆಹರಿಸುತ್ತೇವೆಂಬ ನಿರೀಕ್ಷೆ ಇಟ್ಟುಕೊಳ್ಳುವುದು ಮೂರ್ಖತನವಾಗುತ್ತದೆ. ಇದಕ್ಕೆ ತಕ್ಷಣ ಆಗಬೇಕಾದುದು ರಾಜಕೀಯ ಪರಿಹಾರ. ಆ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಇನ್ನಾದರೂ ಚಿಂತಿಸಬೇಕಿದೆ. ಕಾರ್ಯಪ್ರವೃತ್ತವಾಗಬೇಕಿದೆ.

ಮುಂದಿನ 15 ದಿನಗಳ ಒಳಗೆ ಅಂದರೆ ಸ್ವಾತಂತ್ರ್ಯೋತ್ಸವದ ಒಳಗೆ ದಿಲ್ಲಿಯ ಸಾರ್ವಜನಿಕ ಹಾಗೂ

ಇದನ್ನು ಅರಿವು ಮಾಡಿಕೊಂಡು ಕೇಂದ್ರ ಸರ್ಕಾರ ಇನ್ನಾದರೂ ಪಂಜಾಬ್‌ಗೆ ಸ್ವಾಯತ್ತೆ ನೀಡಲೇ ಬೇಕಾಗಿದೆ. ಇಲ್ಲದಿದ್ದರೆ ಇನ್ನೂ ಭೀಕರವಾದ ಪರಿಣಾಮಗಳನ್ನು ಭಾರತ ಎದುರಿಸಬೇಕಾಗಬಹುದು.

ಇದು ಕೇವಲ ಪಂಜಾಬ್‌ಗೇ ಸೀಮಿತವಾದ ಸಮಸ್ಯೆಯಲ್ಲ. ಗೂರ್ಖಾಲ್ಯಾಂಡ್, ಪೂರ್ವಭಾಗದ ಗುಡ್ಡಗಾಡು ಪ್ರದೇಶಗಳಿಗೆಲ್ಲಾ ಈ ಸಮಸ್ಯೆ ಇದೆ. ಮೇಘಾಲಯ, ಅರುಣಾಚಲ ಪ್ರದೇಶಗಳೂ ಇದರಿಂದ ಹೊರತಾಗಿಲ್ಲ.

ಈ ಸಂದರ್ಭದಲ್ಲಿ ನಾವು ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಬಂಧಗಳನ್ನು ಪುನರ್ ಪರಿಶೀಲಿಸಬೇಕಾದ ಅನಿವಾರ್ಯತೆ ಇದೆ. ಕೇಂದ್ರ ತನ್ನ 'ಹಿರಿಯಣ್ಣನ ನಡುವಳಿಕೆ'ಯ ಬಗ್ಗೆ ಮತ್ತೆ ಯೋಚಿಸಬೇಕಿದೆ. ನಮ್ಮ ದೇಶ ಸಾಂಸ್ಕೃತಿಕ, ಭಾಷಾ, ಭೌಗೋಳಿಕ ಮತ್ತು ಜನಾಂಗೀಯ ವೈವಿಧ್ಯತೆಗಳನ್ನೊಂದಿರುವಂತಹದ್ದು. ಇದನ್ನು ನಾವು ಒಂದೇ ಘಟಕವಾಗಿ ನೋಡುತ್ತೇವೆಂದರೆ ಅದು ತಪ್ಪು ಸಿದ್ಧಾಂತವಾಗುತ್ತದೆ. ಆತ್ಮವಂಚನೆಯಾಗುತ್ತದೆ. ಅದಕ್ಕಾಗಿ ಆಯಾ ಜನಾಂಗಗಳಿಗೆ ಅನುಸರಿಸಿ ರಾಜ್ಯಗಳ ಪುನರ್‌ವಿಂಗಡಣೆ ಆಗಬೇಕಿದೆ. ಸ್ವಾಯತ್ತ ರಾಜ್ಯಗಳ ಒಕ್ಕೂಟವನ್ನು ನಾವು ನಿರ್ಮಿಸಬೇಕಿದೆ.

ಆದರೆ ಇಂದು ನಮ್ಮ ರಾಜ್ಯಗಳು ಕೇಂದ್ರ ಸರ್ಕಾರದ ನೆರಳಿನಲ್ಲಿ 'ಮುನಿಸಿಪಾಲಿಟಿ'ಗಳ ರೀತಿ ಕಾರ್ಯನಿರ್ವಹಿಸುತ್ತಿದೆ. ಇದು ಕೊನೆಗಾಣಬೇಕಿದೆ. ಇಲ್ಲದಿದ್ದರೆ ಈ ದೇಶ ಭವಿಷ್ಯದಲ್ಲಿ ಇನ್ನು ನೂರು 'ಪಂಜಾಬ್'ಗಳನ್ನು ಎದುರಿಸಬೇಕಾಗಬಹುದು.

ಈ ನಿಟ್ಟಿನಲ್ಲಿ ನಮ್ಮ ಸಂವಿಧಾನವನ್ನೇ ಪುನರ್ ವಿಮರ್ಶೆ ಮಾಡಬೇಕಿದೆ. ವಿದೇಶ ವ್ಯವಹಾರ, ರಕ್ಷಣೆ, ಸಾರಿಗೆ, ಕರೆನ್ಸಿ ನೋಟುಗಳ ಮುದ್ರಣಗಳನ್ನು ಬಿಟ್ಟು ಉಳಿದೆಲ್ಲಾ ಅಧಿಕಾರಗಳನ್ನು ರಾಜ್ಯಗಳಿಗೆ ಕೊಡಬೇಕಾಗಿರುವುದು ಭಾರತದಂತಹ ಒಕ್ಕೂಟ ರಾಷ್ಟ್ರಕ್ಕೆ ಅನಿವಾರ್ಯವಾಗುತ್ತದೆ.

ಈ ಪ್ರಮುಖ ರಾಷ್ಟ್ರೀಯ ಸಮಸ್ಯೆಯನ್ನು ಪರಿಗಣಿಸಿ ಪ್ರಸ್ತುತ ಲೋಕಸಭಾ ಅಧಿವೇಶನವನ್ನೇ ರಾಜ್ಯಾಂಗಸಭೆಯಾಗಿ ಮಾರ್ಪಡಿಸಿ ರಾಜ್ಯಗಳಿಗೆ ಸ್ವಾಯತ್ತೆ ಕೊಡುವುದಕ್ಕೆ ಸಂಬಂಧಿಸಿದಂತೆ ಸಂವಿಧಾನವನ್ನೇ ಪುನರ್‌ವಿಮರ್ಶೆಗೆ ಒಳಪಡಿಸುವುದಾದರೆ ಅದು ಈ ದೇಶದಲ್ಲಿ ಶಾಂತಿ ಸ್ಥಾಪಿಸಲು ಜನ ಸಮುದಾಯಗಳ ನಡುವೆ ಪ್ರೀತಿ ಮೂಡಿಸಲು ತೆಗೆದುಕೊಳ್ಳಬಹುದಾದ ಒಂದು ಪ್ರಮುಖ ನಿರ್ಧಾರವಾಗುತ್ತದೆ. ಇತಿಹಾಸದಲ್ಲೊಂದು ಶಾಂತಿಯ ಮೈಲು

ಮುಂದಿನ 15 ದಿನಗಳ ಒಳಗೆ ಅಂದರೆ ಸ್ವಾತಂತ್ರ್ಯೋತ್ಸವದ ಒಳಗೆ ದಿಲ್ಲಿಯ ಸಾರ್ವಜನಿಕ ಹಾಗೂ ಧಾರ್ಮಿಕ ಸ್ಥಳಗಳಲ್ಲೆಲ್ಲಾ ಭೀಕರವಾದ ಹಿಂಸಾಚಾರಗಳನ್ನು ನಡೆಸಲು ದೇಶಗಳಿಂದ ರಾಜಧಾನಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಕೆಲವು ಭಯೋತ್ಪಾದಕರು ಬರಲಿದ್ದಾರೆಂಬ ಸುದ್ದಿ ಈಗ ವ್ಯಾಪಕವಾಗಿ ಹಬ್ಬಿದ್ದು ನಾಗರಿಕರೆಲ್ಲರನ್ನು ತಲ್ಲಣಗೊಳಿಸಿದೆ; ಭಯಪೀಡಿತರನ್ನಾಗಿಸಿದೆ. ಪಂಜಾಬ್ ಸಮಸ್ಯೆಗೆ ಒಂದು ನಿಖರವಾದ ರಾಜಕೀಯ ಪರಿಹಾರ ನೀಡುವವರೆಗೆ ಇಂತಹ ಭಯೋತ್ಪಾದಕತೆಗಳು, 'ತಲ್ಲಣಗೊಳ್ಳುವಿಕೆ' ಗಳು ಸಾಮಾನ್ಯವಾಗಿರುತ್ತೆ ಎಂಬ ಸತ್ಯವನ್ನು ಕೇಂದ್ರ ಸರ್ಕಾರ ಅರಿತುಕೊಳ್ಳಬೇಕಿದೆ.

ಶ್ರೀಲಂಕಾದ ಜನಾಂಗೀಯ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಆ ನಾಡಿನ ತಮಿಳರೇ ಹೆಚ್ಚಾಗಿರುವ ಪೂರ್ವ ಮತ್ತು ಉತ್ತರ ಪ್ರಾಂತ್ಯಗಳಿಗೆ ಸ್ವಾಯತ್ತೆ ನೀಡಬೇಕೆಂದು ಭಾರತ ಸರ್ಕಾರ ಹೇಳುತ್ತಾ ಬಂದು ಅದೇ ನಿಟ್ಟದಲ್ಲಿ ಯಶಸ್ವಿ ಸಂಧಾನ ನಡೆಸಿ 'ಪರಿಹಾರ ಸೂತ್ರ' ರೂಪಿಸುವುದರಲ್ಲಿ ಸಫಲವಾಗಿದೆ. ಇಲ್ಲಿ ರಾಜೀವ್‌ಗಾಂಧಿಯವರನ್ನು ನಾವು ಮೆಚ್ಚಿದ್ದೇವೆ. ಇದೇ ಸೂತ್ರವನ್ನು ಅವರು ಪಂಜಾಬ್ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲೂ ಏಕೆ ಅಳವಡಿಸಬಾರದು?

ಪಂಜಾಬ್ ಸಮಸ್ಯೆ ಕೂಡಾ ಶ್ರೀಲಂಕಾ ತಮಿಳರ ಸಮಸ್ಯೆಗಿಂತ ಭಿನ್ನವೇನೂ ಆಗಿಲ್ಲ. ಇಲ್ಲಿ ಕೂಡಾ ಸಿಖ್ಖರು ತಮ್ಮ ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ವಿಷಯಗಳಲ್ಲಿ ಪ್ರತ್ಯೇಕತೆಯನ್ನು ಹೊಂದಿದ್ದಾರೆ. ಅವುಗಳ ಮೇಲೆ ದಿಲ್ಲಿ ದರಬಾರಿನ ಪ್ರಹಾರ ನಡೆಸುವುದನ್ನು ಇಚ್ಛಿಸುವುದಿಲ್ಲ. ತಮ್ಮ ಸಾಂಸ್ಕೃತಿಕ, ಧಾರ್ಮಿಕ ಆಚರಣೆಗಳ ಮೇಲೆ ಅನಾವಶ್ಯಕ 'ಹೇರುವಿಕೆ'ಗಳನ್ನು ಅವರು ಬಯಸಲಾರರು. ಅದಕ್ಕಾಗಿಯೇ ಅವರು ಇಂದು ಕೇಂದ್ರ ಸರ್ಕಾರದೊಡನೆ ಘರ್ಷಣೆಗೆ ಇಳಿದಿದ್ದಾರೆ. ಕೇಂದ್ರ ಸರ್ಕಾರದ ಬೇಜವಾಬ್ದಾರಿ ನೀತಿಯಿಂದ ಸಿಖ್ಖರ ಸೂಕ್ಷ್ಮ ಮನಸ್ಸುಗಳು ಕೆರಳಿವೆ.

ವಾಗುತ್ತದೆ. ಇತಿಹಾಸದಲ್ಲೊಂದು ಶಾಂತಿಯ ಮೈಲುಗಲ್ಲಾಗುತ್ತದೆ. ಮಹಾತ್ಮಾ ಗಾಂಧೀಜಿಯವರ 'ವಿಕೇಂದ್ರೀಕರಣ ಕಲ್ಪನೆ' ಸಾಕಾರಗೊಂಡಂತಾಗುತ್ತದೆ. ಈ ನಿಟ್ಟಿನಲ್ಲಿ ಇನ್ನಾದರೂ ರಾಜೀವ್‌ಗಾಂಧಿ ಯೋಚಿಸುವಂತಾಗಲಿ.

ಈ ದೇಶದ ರಾಜಧಾನಿ ಇಂದು ಭಯೋತ್ಪಾದಕರ ಬಂದೂಕಿನ ನಳಿಗೆಯ ನೆರಳಿನಲ್ಲಿ ಜೀವ ಹಿಡಿದು ಕುಳಿತಿದೆ. ಪ್ರೀತಿ ಸತ್ತಿದೆ. ಎಲ್ಲೆಲ್ಲೂ ಅಶಾಂತಿ ತಾಂಡವವಾಡುತ್ತಿದೆ. ಇದೆಲ್ಲವೂ ಕೇಂದ್ರ ಸರಕಾರದ ಹಠಮಾರಿತನ, ಒರಟುತನ, 'ಹಿರಿಯಣ್ಣನ ನಡವಳಿಕೆಯ' ಕೆಟ್ಟ ಪರಿಣಾಮಗಳೆಂದು ಇನ್ನೂ ಬಿಡಿಸಿ ಹೇಳಬೇಕಾಗಿಲ್ಲವಲ್ಲ

ಆದ್ದರಿಂದ ಇನ್ನಾದರೂ ಈ ನಾಡಿನಲ್ಲಿ ಜನತಂತ್ರ ನೆಲೆ ತಪ್ಪದಿರಬೇಕಾದರೆ, ಮಾನವೀಯ ಬಾಂಧವ್ಯ ಮಧುರಗೊಳ್ಳಬೇಕಾದರೆ ಕೇಂದ್ರ ಸರ್ಕಾರ ಪ್ರಸ್ತುತ ಪ್ರಾದೇಶಿಕ ಸಮಸ್ಯೆಗಳನ್ನು ಶೈತ್ಯಾಗಾರಕ್ಕೆ ತಳ್ಳದೆ ಪ್ರಾದೇಶಿಕ ಸ್ವಯಮಾಧಿಕಾರ ನೀಡುವತ್ತ ಕಾರ್ಯ ಪ್ರವೃತ್ತವಾಗಬೇಕಿದೆ. ಮನುಷ್ಯ ಮನುಷ್ಯರ ನಡುವಣ ಸಂಬಂಧ ಸಮುದಾಯಗಳ ನಡುವಣ ಸಂಬಂಧ ಪ್ರೀತಿಯ ಬೆಸುಗೆಯಿಂದ ಕೂಡಿರಬೇಕಿದ್ದರೆ ಕೇಂದ್ರ ಸರ್ಕಾರ ಈ ಬಗ್ಗೆ ಪ್ರಾಮಾಣಿಕ ಚಿಂತನೆ ನಡೆಸಬೇಕಿದೆ. ಇದಿಲ್ಲದೆ ಭಯೋತ್ಪಾದಕತೆಯನ್ನು 'ಕರ್ಫ್ಯೂ' ಮೂಲಕ ಎದುರಿಸ ಹೊರಟರೆ ಅದು ಇನ್ನೂ ಬಹಳಷ್ಟು ಅನಾಹುತಗಳಿಗೆ ಎಡೆಕೊಡುತ್ತದೆ ಎಂಬ ಸತ್ಯವನ್ನೂ ಕೇಂದ್ರ ಸರ್ಕಾರ ಅರಿತುಕೊಳ್ಳಬೇಕಿದೆ.

ಈ ಸೂಕ್ಷ್ಮ ಸಮಸ್ಯೆಗಳ ಆಳವನ್ನು ರಾಜೀವ್ ಮನವರಿಕೆಮಾಡಿಕೊಳ್ಳಬೇಕಿದೆ ಸಮಸ್ಯೆಗಳ ಪರಿಹಾರದ ನಿಟ್ಟಿನಲ್ಲಿ ಅವರು ಜಯವರ್ಧನೆಯವರ ಮೇಲ್ಪಂಕ್ತಿಯನ್ನು ಅನುಸರಿಸಬೇಕಿದೆ. ಇದು ಅವರಿಂದ ಸಾಧ್ಯವಾದರೆ ಮಾತ್ರ ಕೇಂದ್ರ-ರಾಜ್ಯಗಳ ನಡುವೆ, ಜನಾಂಗ ಜನಾಂಗಗಳ ನಡುವೆ, ಪ್ರೀತಿಯ ಬೆಸುಗೆ ಸಾಧ್ಯವಾಗುತ್ತದೆ.

ಮುಂಗಾರು

ಮಂಗಳವಾರ ಆಗಸ್ಟ್ 11, 1987

ಮರುಕಳಿಸಬೇಕಾದ ಸ್ಫೂರ್ತಿಯ ಗುರಿ ಏನು?

ಭಾರತದ ಇತಿಹಾಸಕ್ಕೆ ಸ್ವಾಭಿಮಾನ ಅಥವಾ ಸ್ವಾತಂತ್ರ್ಯದ ಬಯಕೆಯ ಹೊಸಸಂಪುಟವನ್ನು ಸೇರಿಸಿದ "ಕ್ವಿಟ್ ಇಂಡಿಯಾ" ಚಳವಳಿಯ ಸ್ಫೂರ್ತಿಯನ್ನು ರಾಷ್ಟ್ರದ ಯುವ ಪ್ರಧಾನಿ ರಾಜೀವ್‌ಗಾಂಧಿ ಭಾನುವಾರ ಮುಂಬಯಿ ಮಹಾನಗರದಲ್ಲಿ ಸ್ಮರಿಸಿದ್ದಾರೆ.

ಒಂದು ಜನಾಂಗವನ್ನು ಭಾವನಾತ್ಮಕವಾಗಿ ಏಕಸೂತ್ರದಲ್ಲಿ ಸೆರೆಹಿಡಿವ ಹಾಗೂ ಅವರ ಒಡಲಲ್ಲಿ ಉದಾತ್ತ ವಿಚಾರಗಳನ್ನು ಸ್ಫುರಿಸುವ ಚಳವಳಿ ಸಾಮಾಜಿಕ ಜೀವನದಲ್ಲಿ ಸದ್‌ಶಕ್ತಿಗಳ ಬೆಳೆ ತೆಗೆಯುವುದೆಂಬ ಮಾತಿದೆ. ಇತಿಹಾಸದುದ್ದಕ್ಕೂ ಪರಾಡಳಿತದ ಬಂಧನದಲ್ಲಿ ಸೊರಗಿ ಸ್ವಾಭಿಮಾನದ ಬೆನ್ನು ಬಗ್ಗಿದ ಭಾರತೀಯರು ಸ್ವಾತಂತ್ರ್ಯದ ಬಯಕೆಯಿಂದ ಸೆಟೆದು ನಿಲ್ಲುವಂತೆ ಮಾಡಿದ "ಕ್ವಿಟ್ ಇಂಡಿಯಾ" ಚಳವಳಿಯ ಸ್ಫೂರ್ತಿ ಎಲ್ಲಾ ಕಾಲಕ್ಕೂ ಪ್ರಖರವಾಗಿ ಉಳಿಯಬೇಕೆಂಬುದು ನಿಜ "ಕ್ವಿಟ್ ಇಂಡಿಯಾ" ಸ್ಫೂರ್ತಿಯ ಪರಿಸರದಲ್ಲಿ ಕಣ್ತೆರೆದವರು ಪ್ರಧಾನಿ ರಾಜೀವ ಗಾಂಧಿಯವರಲ್ಲ. ಭಾರತದ ರಾಜಕೀಯ ಆಕಾಂಕ್ಷೆಗಳು ವಿಜೃಂಭಿಸಿದ 1942ರ ಆ ದಿನಗಳಲ್ಲಿ ರಾಜೀವ್‌ಗಾಂಧಿ ಹುಟ್ಟಿರಲಿಲ್ಲ. ಆದರೂ 1942ರ ಆಗಸ್ಟ್ 9ರಂದು ದೇಶದ ಉದ್ದಗಲಕ್ಕೂ ಪ್ರಜಾ ಸಮೂಹದ ಒಡಲಿಂದ ಉಮ್ಮಳಿಸಿದ "ಕ್ವಿಟ್ ಇಂಡಿಯಾ" ಚಳವಳಿಯ ಇತಿಹಾಸವನ್ನು ಓದಿ ಪ್ರಭಾವಿತರಾದವರು ರಾಜೀವ್ ಇತಿಹಾಸದ ಓದಿನಿಂದ ಅಥವಾ ಹಿರಿಯರಿಂದ ಕೇಳಿದ ಕಥನಗಳಿಂದಲೇ ಪ್ರಧಾನಿ ರಾಜೀವ್‌ಗಾಂಧಿಯವರ ವಿಚಾರಗಳ ಮೇಲೆ ಆ ಚಳವಳಿ ಪ್ರಭಾವ ಬೀರಿದೆಯೆಂಬುದು ಸಂತೋಷದ ಸಂಗತಿ.

ಇಂದು ದೇಶದ ವಿಭಿನ್ನ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರಧಾರಿಗಳಾಗಿರುವ ರಾಜೀವ್‌ಗಾಂಧಿಯವರ ತಲೆಮಾರಿನ ಯುವ ಪೀಳಿಗೆಯ ಮನಸ್ಸಿನ ಮೇಲೆ "ಕ್ವಿಟ್ ಇಂಡಿಯಾ" ಚಳವಳಿಯ ಪ್ರಭಾವ ಅಷ್ಟಾಗಿ ಬಿದ್ದಿರಲಾರದು. ಆ ಚಳವಳಿಯ ಸಂದೇಶಗಳ ಆಳ ಅರಿವೂ ಇರಲಾರದು. ಸ್ವತಂತ್ರ ಭಾರತ ಹಿಡಿಯಬೇಕೆಂದಿದ್ದ ಪುನರ್ನಿರ್ಮಾಣದ ಹಾದಿಯ ಸುಳಿವೂ ಈ ಯುವ ಪೀಳಿಗೆಗೆ ಇದ್ದಿರಲಾರದು. ಇದರಿಂದಾಗಿಯೇ ಇಂದು ಈ ದೇಶದ ಎಲ್ಲ ವ್ಯವಹಾರಗಳೂ ಹಳಿ ತಪ್ಪಿ ಹೋಗುತ್ತಿರಬೇಕು. ಘೋಷಿತ ತತ್ವಗಳಾವುವನ್ನೂ ಆಚರಣೆಗೆ ತರಲಾಗದಷ್ಟು ವಾತಾವರಣ ಕಲುಷಿತವಾಗಿರುವುದೂ ಇದರಿಂದಾಗಿಯೇ.

ಇಂತಹ ಒಂದು ವಿಷಮ ಪರಿಸ್ಥಿತಿಯಲ್ಲಿ ದೇಶದ ಪ್ರಧಾನಿಯಾಗಿ ಕಂಗಾಲಾಗುತ್ತಿರುವ ರಾಜೀವ್‌ಗಾಂಧಿಯವರಿಗೆ ಈಗ "ಕ್ವಿಟ್ ಇಂಡಿಯಾ" ಸ್ಫೂರ್ತಿ ಮರುಕಳಿಸಬೇಕೆಂದು ಅನ್ನಿಸುವುದರಲ್ಲಿ ಅರ್ಥವಿದೆ. ಪ್ರಧಾನಿಯವರ ಈ ಆಶಯದ ಹಿಂದಿರುವ ಪ್ರಾಮಾಣಿಕತೆಯನ್ನು ಪ್ರಶ್ನಿಸಲು ನಾವು ಹೋಗುವುದಿಲ್ಲ. ಇಂತಹ ಒಂದು ಚಳವಳಿ ಮರುಕಳಿಸಬೇಕಾದ ಅಗತ್ಯ ಬಹಳ ಜರೂರಾಗಿದೆಯೆಂದೂ ನಮ್ಮ ಅಭಿಪ್ರಾಯ.

ಆದರೆ ಆ ಸ್ಫೂರ್ತಿ ಇಂದಿನ ಕಲುಷಿತ ವಾತಾವರಣದಲ್ಲಿ ಮರುಕಳಿಸಲು ಸಾಧ್ಯವೇ? ಎಂಬ ಪ್ರಶ್ನೆ ಏಳುತ್ತದೆ. 1942ರಲ್ಲಿ ಉಮ್ಮಳಿಸಿದ ರಾಜಕೀಯ ಸ್ಫೂರ್ತಿಗೆ ನಾಲ್ಕು ದಶಕಗಳ ಕಾಲದ ತಾತ್ವಿಕ ಜಿಜ್ಞಾಸೆ ಹಾಗೂ ರಾಜಕೀಯ ಸಂಘರ್ಷದ ಹಿನ್ನೆಲೆ ಇತ್ತು. ಭಾರತದ ಬಡತನಕ್ಕೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವನತಿಗೆ ಮೂಲ ಕಾರಣರೆಂದು ಎಲ್ಲರೂ ಒಮ್ಮನಸ್ಸಿನಿಂದ ಗುರುತಿಸಿದ ಬ್ರಿಟಿಷ್ ದೊರೆಗಳು ಇಲ್ಲಿದ್ದರು. ಎಲ್ಲರಿಗೂ ಬೇಡವೆನ್ನಿಸಿದ ಈ ಬ್ರಿಟಿಷ್ ದೊರೆಗಳನ್ನು ಹೊರಗಟ್ಟಬೇಕೆನ್ನುವ "ಕ್ವಿಟ್ ಇಂಡಿಯಾ" ಸ್ಫೂರ್ತಿ ಎಲ್ಲರ ಮನಸ್ಸನ್ನೂ ಆವರಿಸಿತ್ತು. ಈಗ ಅಂತಹದೇ ಒಂದು ಸ್ಫೂರ್ತಿ ಮರುಕಳಿಸಲು ಪ್ರೇರಕವಾದ ವಾತಾವರಣವಿದೆಯೇ? ಇರುವುದಾದರೆ ಅದೇನೆಂಬುದನ್ನು ಪ್ರಧಾನಿ ರಾಜೀವ್ ಗಾಂಧಿ ಬೊಟ್ಟಿಟ್ಟು ತೋರಿಸಬೇಕಿತ್ತು.

ದೇಶ ಸ್ವಾತಂತ್ರ್ಯ ಗಳಿಸಿದ ಈ ನಾಲ್ವತ್ತುವರ್ಷಗಳ ಅವಧಿಯಲ್ಲಿ ಅದನ್ನು ಒಂದಡಿ ಮುಂದಿಡಲು ಬಿಡದ ಶತ್ರುಗಳ್ಯಾರೆಂಬುದನ್ನು ಗುರುತಿಸಿ ಹೇಳಬೇಕಾದ ಹೊಣೆಗಾರಿಕೆ ಪ್ರಧಾನಿಯಾದವರ ಮೇಲಿದೆ. ಅದನ್ನು ಬಿಟ್ಟು ಅದ್ಯಾವುದೋ ಪರದೇಶೀ ಶಕ್ತಿಗಳು ಭಾರತದಲ್ಲಿ ರಾಜಕೀಯ ಅಭದ್ರತೆಯನ್ನು ತರುತ್ತಿವೆ. ಪ್ರಾದೇಶಿಕ ಹಾಗೂ ಭಾಷಾ ಭಿನ್ನತೆಗಳು ರಾಷ್ಟ್ರೀಯ ಸಮಗ್ರತೆಯನ್ನು ಅಲುಗಿಸುತ್ತಿವೆ. ಕೋಮು ಕಲಹಗಳು ಸಾಮಾಜಿಕ ಸ್ವಾಸ್ಥ್ಯವನ್ನು ಕೆಡಿಸುತ್ತಿವೆ. ರಾಜಕೀಯ ವಿರೋಧಿಗಳು ದೇಶದ್ರೋಹಿಗಳಾಗುತ್ತಿದ್ದಾರೆ. ಬಡತನದ ನಿರ್ಮೂಲನಕ್ಕೆ ಹೆಸರಿಲ್ಲದ ಪಟ್ಟಭದ್ರ ಹಿತಗಳು ಅಡ್ಡಗಾಲಿಡುತ್ತಿವೆಯೆಂದೆಲ್ಲ ಹಲುಬಿದರೆ ಸಾಲದು. ಇಂತಹ ಗೋಣಗಾಟದಿಂದ"ಕ್ವಿಟ್‌ಇಂಡಿಯಾ" ಸ್ಫೂರ್ತಿ ಮರುಕಳಿಸಲಾರದು.

ರಾಷ್ಟ್ರೀಯ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಅರ್ಥಹೀನವಾಗಿ ಮಾಡಿರುವುದರಲ್ಲಿ ದೇಶದ ಬಾಹ್ಯ ಶತ್ರುಗಳಿಗಿಂತ ಶ್ರೀಮಂತ ಕುಳಗಳೆನ್ನಿಸಿದ ಆಂತರಿಕ ಶತ್ರುಗಳ ಪಾತ್ರ ಹಿರಿದೆನ್ನುವುದರ ಅರಿವು ರಾಜೀವ್ ಗಾಂಧಿಯವರಿಗೆ ಇರಲೇಬೇಕು. ದೇಶ ಸ್ವಾತಂತ್ರ್ಯ ಗಳಿಸಿದ ಈ ನಾಲ್ವತ್ತು ವರ್ಷಗಳಲ್ಲಿ ದೇಶದ ಸಂಪತ್ತನ್ನೆಲ್ಲಾ ಲೂಟಿ ಹೊಡೆದು ತಮ್ಮ ಸಂಪತ್ತನ್ನು ನಾಲ್ವತ್ತು ಪಟ್ಟು ಹೆಚ್ಚಿಸಿಕೊಂಡ ಹಳೆಯ ಕುಬೇರರು ಮತ್ತು ಹೊಸ ಕುಬೇರರ ಪರಿಚಯ ರಾಜೀವ್ ಗಾಂಧಿಯವರಿಗೆ ಇರಲೇ ಬೇಕು. ಈ ಕುಬೇರರ ಕೂಟಗಳೇ ಇಂದು ಈ ದೇಶದಲ್ಲಿ ಭೋಗ ಜೀವನದ ನಡುಗಡ್ಡೆಗಳನ್ನು ನಿರ್ಮಿಸಿವೆ. ಕಪ್ಪು ಹಣದ ಮೂಟೆಗಳನ್ನು ಬಿಚ್ಚಿ ಎಲ್ಲ ವರ್ಗಗಳಲ್ಲೂ ಪ್ರಾಮಾಣಿಕ ಬದುಕು ಅಸಾಧ್ಯವೆನ್ನುವ ಪರಿಸರವನ್ನು ನಿರ್ಮಿಸಿವೆ. 25 ಕೋಟಿಯಷ್ಟು ಜನರಿಗೆ ಎರಡು ಹೊತ್ತು ಊಟ ಸಿಗದಂತೆ ಮಾಡಿವೆ. ಕೋಮು ಕಲಹಗಳಿಗೆ ಗಾಳಿ ಹಾಕುತ್ತಿವೆ. ರಾಜಕೀಯ ಗೊಂದಲದ ಸೂತ್ರಧಾರಿಗಳಾಗಿವೆಯೆಂಬುದು ದೇಶದ ಪ್ರಧಾನಿಯಾದವರ ಗಮನಕ್ಕೆ ಬಂದಿರಲೇಬೇಕು. ದೇಶದ ಮುಗ್ಧ ಜನರು ಉತ್ಪಾದಿಸಿದ ಸಂಪತ್ತನ್ನು ವಿದೇಶೀ ಬ್ಯಾಂಕುಗಳಿಗೆ ಕದ್ದು ಸಾಗಿಸುತ್ತಿರುವವರೂ ಈ ಕುಬೇರರ ಪೀಳಿಗೆಯೆಂಬುದರಲ್ಲಿ ಪ್ರಧಾನಿ ರಾಜೀವ್ ಗಾಂಧಿಯವರಿಗೆ ಸಂಶಯ ಇರಲಿಕ್ಕೆ ಸಾಧ್ಯವಿಲ್ಲ.

ಪದಗೆಡುತ್ತಿರುವ ಇಂದಿನ ಸನ್ನಿವೇಶದಲ್ಲಿ 'ಕ್ವಿಟ್ ಇಂಡಿಯಾ' ಸ್ಫೂರ್ತಿ ಮರುಕಳಿಸಬೇಕೆಂದು ಬಯಸುವ ಪ್ರಧಾನಿ ಇಂತಹ ಚಳವಳಿ ಯಾರ ವಿರುದ್ಧ ನಡೆಯಬೇಕೆಂಬುದನ್ನು ನಿಖರವಾಗಿ ಹೇಳಬೇಕು. ಇಲ್ಲವಾದರೆ ಅವರು ಭಾನುವಾರ ಮುಂಬಯಿ ನಗರದಲ್ಲಾಡಿದ ಮಾತುಗಳು ಮಾಮೂಲಿಯಾದ ರಾಜಕೀಯ ಸಂತೆಯಲ್ಲಿ ಮಾರಾಟಕ್ಕಿಟ್ಟ ಅಗ್ಗದ ಸರಕುಗಳೆಂದೇ ತಿಳಿಯಬೇಕಾಗುತ್ತದೆ.

ಮುಂಗಾರು

ಮಂಗಳವಾರ ಜೂನ್ 30, 1987

ಕಡತಗಳಲ್ಲಿ ಪವಡಿಸಿದ ಯೋಜನೆ!

ಸ್ವತಂತ್ರ ಭಾರತದಲ್ಲಿ ಕೇವಲ ಆಶಯವಾಗಿ ಉಳಿದ ಅನೇಕ ಕಾರ್ಯಕ್ರಮಗಳಲ್ಲಿ ವಯಸ್ಕರ ಶಿಕ್ಷಣವೂ ಒಂದು. ಎಲ್ಲ ಸರಕಾರಿ ಕಾರ್ಯಕ್ರಮಗಳಂತೆ, ಕೆಂಪು ಪಟ್ಟಿಯ ಕಡತಗಳಲ್ಲಿ ಪವಡಿಸಿ ಆಗೊಮ್ಮೆ-ಈಗೊಮ್ಮೆ ಚಡಪಡಿಸುವ ಕಾರ್ಯಕ್ರಮವಾಗಿ ಇದು ಉಳಿದಿದೆ.

ಸರಕಾರ ಮಾಡಿದ ಘೋಷಣೆಗಳು ಮತ್ತು ರೂಪಿಸಿದ ಯೋಜನೆಗಳಲ್ಲಿ ಕೆಲವಂಶ ಕಾರ್ಯಗತಗೊಂಡಿದ್ದರೂ ಅನಕ್ಷರಸ್ಥ ಪ್ರಜೆಗಳ ಸಂಖ್ಯೆ ಬಹುಮಟ್ಟಿಗೆ ಕಡಿಮೆಯಾಗಬಹುದಾಗಿದ್ದ ಈ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಬಗ್ಗೆ ಕರ್ನಾಟಕದ ವಯಸ್ಕರ ಶಿಕ್ಷಣ ಇಲಾಖೆಯ ನಿರ್ದೇಶಕ ಕೆ. ಶ್ರೀಧರ ಶೆಟ್ಟಿಯವರು ಶನಿವಾರ ಮಂಗಳೂರಿನಲ್ಲಿ ಕೆಲವು ಮಹತ್ವದ ಮಾತುಗಳನ್ನಾಡಿದ್ದಾರೆ. 1995ರ ವೇಳೆಗೆ ದೇಶದ 15ರಿಂದ 35 ವರ್ಷ ವಯಸ್ಸಿನೊಳಗಿನ ಹತ್ತು ಕೋಟಿ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿ ಮಾಡುವ ಗುರಿ ವಯಸ್ಕರ ಶಿಕ್ಷಣ ಇಲಾಖೆಗೆ ಇರುವುದಾಗಿ ಹೇಳಿದ್ದಾರೆ.

ದೇಶದ ವಯಸ್ಕರ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳಲ್ಲಿ ಒಬ್ಬರಾದ ಶ್ರೀಧರ ಶೆಟ್ಟರು ತಮ್ಮ ಇಲಾಖೆಯ ಮುಂದಿರುವ ಒಂದು ನಿಶ್ಚಿತ ಕಾರ್ಯಕ್ರಮದ ಆಕರ್ಷಕ ಚಿತ್ರವನ್ನು ಈ ಹೇಳಿಕೆಯಲ್ಲಿ ಬಿಡಿಸಿದ್ದಾರೆ. ಈ ಚಿತ್ರವನ್ನು ಸಾಕಾರಗೊಳಿಸಲು ತಾವು ಇಡಬೇಕೆಂದಿರುವ ಹೆಜ್ಜೆಗಳನ್ನೂ ಗುರುತಿಸಿದ್ದಾರೆ. ಇಲಾಖೆಯು ಇರಿಸಿಕೊಂಡಿರುವ ಗುರಿ 1995ರ ಒಳಗೆ ಈಡೇರಿದರೆ ಈ ದೇಶ ಸಾಕ್ಷರತೆಯಲ್ಲಿ ದೊಡ್ಡ ದಾಪುಗಾಲು ಇಟ್ಟಂತಾಗುವುದು.

ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಕಾಲೇಜು ವಿದ್ಯಾರ್ಥಿಗಳ ಸೇವಾ ಸಂಸ್ಥೆಗಳಾದ ಎನ್. ಸಿ. ಸಿ. ಮತ್ತು ಎನ್. ಎಸ್. ಎಸ್. ಅನ್ನು ದೊಡ್ಡ ಪ್ರಮಾಣದಲ್ಲಿ ತೊಡಗಿಸುವ ಉದ್ದೇಶವನ್ನೂ ಶ್ರೀಧರ ಶೆಟ್ಟರು ನಿರೂಪಿಸಿದ್ದಾರೆ. 1990ರ ಒಳಗೆ ರಾಜ್ಯದಲ್ಲಿ 800 ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ 50 ರಿಂದ 55 ಲಕ್ಷ ಮಂದಿ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಗುರಿ ಇರುವುದಾಗಿಯೂ ಅವರು ಹೇಳಿದ್ದಾರೆ.

ಇವೆಲ್ಲ ಹೊಸ ಉದ್ದೇಶಗಳೂ ಅಲ್ಲ. ಇದುವರೆಗೆ ನಿರೂಪಿಸದೇ ಇದ್ದ ಕಾರ್ಯಕ್ರಮಗಳೂ ಅಲ್ಲ. 1953ರಿಂದ ಈ ದೇಶದಲ್ಲಿ ಅನಕ್ಷರತೆಯ ನಿವಾರಣೆಯ ಭಾರಿ-ಭಾರಿ ಉದ್ಘೋಷಗಳಾಗಿವೆ. ವಯಸ್ಕರ ಶಿಕ್ಷಣ ಇಲಾಖೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಹದಿನೈದು ವರ್ಷಗಳ ಅವಧಿಯಲ್ಲಿ ಭಾರತೀಯರೆಲ್ಲರನ್ನೂ ಅಕ್ಷರಸ್ಥರನ್ನಾಗಿ ಮಾಡುವ ಘನ ಉದ್ದೇಶ ಕಿಂಚಿತ್ತೂ ಈಡೇರದೆ ರಾಜಕಾರಣಿಗಳ ಭಾಷಣದ ಹಳಸಲು ಪದಾರ್ಥವಾಗಿ ಉಳಿದಿತ್ತು.

ವಯಸ್ಕರ ಶಿಕ್ಷಣ ಯೋಜನೆ ಉದ್ಘೋಷಿತವಾಗಿ ಇಪ್ಪತ್ತೈದು ವರ್ಷಗಳು ಸಂದ ಮೇಲೆ 1978ರಲ್ಲಿ ಕೇಂದ್ರ ಸರಕಾರ ಅನಕ್ಷರತೆಯ ನಿರ್ಮೂಲನಕ್ಕೆ ಮಹಾಸಂಕಲ್ಪ ಮಾಡಿದ್ದನ್ನು ನಾವೀಗ ಸ್ಮರಿಸಿಕೊಳ್ಳಬಹುದು. ಅಂದಿನವರೆಗೆ ಈ ದೇಶವನ್ನಾಳಿದ್ದ ಕಾಂಗ್ರೆಸ್ ಸರಕಾರ ಅನಕ್ಷರತೆಯನ್ನು ನಿವಾರಿಸಿಲ್ಲವೆಂದು ದೂರಿ ಈ ಮಹತ್ಕಾರ್ಯವನ್ನು ತಾವು ಕೇವಲ ಐದು ವರ್ಷಗಳಲ್ಲಿ ಮಾಡುವುದಾಗಿ ಜನತಾ ಸರಕಾರದ ಪ್ರಧಾನಮಂತ್ರಿಯಾಗಿದ್ದ ಮೊರಾರ್ಜಿ ದೇಸಾಯಿ ಸಾರಿದ್ದರು. ಆ ವರ್ಷ ಮಹಾತ್ಮಾಗಾಂಧಿಯವರ ಜನ್ಮದಿನವಾದ ಅಕ್ಟೋಬರ್ 2ರಂದು ಅನಕ್ಷರತೆಯ ವಿರುದ್ಧ ಸಮರ ರೂಪದ ವಯಸ್ಕರ ಶಿಕ್ಷಣದ ವ್ಯಾಪಕ ಯೋಜನೆಗೆ ಪ್ರಧಾನಿ ಮೊರಾರ್ಜಿ ದೇಸಾಯಿ ಚಾಲನೆ ಕೊಟ್ಟಿದ್ದರು.

ಗಳ ಅಂದಾಜು ವೆಚ್ಚದಲ್ಲಿ ಚಾಲನೆ ಪಡೆದ ಈ ವಯಸ್ಕರ ಶಿಕ್ಷಣ ಯೋಜನೆ ಐದು ವರ್ಷಗಳಲ್ಲಿ 23ಕೋಟಿ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಗುರಿ ಹೊಂದಿತ್ತು. ದೊಡ್ಡ ಪ್ರಚಾರದ ಅಬ್ಬರದಲ್ಲಿ ಆರಂಭವಾದ ಈ ಸಾಕ್ಷರತೆಯ ಯೋಜನೆ ಇದುವರೆಗೆ ಸಾಧಿಸಿದ್ದೇನು ? ಎನ್ನುವ ಪ್ರಶ್ನೆ ಏಳುತ್ತದೆ. ಐದು ವರ್ಷಗಳಲ್ಲಿ ಆಗಬೇಕಾಗಿದ್ದ ಕೆಲಸ ಹತ್ತು ವರ್ಷಗಳಾಗುತ್ತಾ ಬಂದರೂ ಪೂರ್ತಿಯಾಗಿಲ್ಲವೆಂಬ ಅಪ್ರಿಯ ಸತ್ಯ ನಮ್ಮ ಮುಂದೆ ನಿಲ್ಲುತ್ತದೆ. ವಯಸ್ಕರ ಶಿಕ್ಷಣ ಕಾರ್ಯಕ್ರಮ ನಮ್ಮ ರಾಷ್ಟ್ರೀಯ ಜೀವನದಲ್ಲಿ ಹೆಪ್ಪುಗಟ್ಟಿ ನಿಂತಿರುವ ಅನಕ್ಷರತೆಯ ಸಮಸ್ಯೆಯನ್ನು ಕಿಂಚಿತ್ತೂ ಕರಗಿಸಿಲ್ಲವೆಂಬುದು ಎದ್ದು ಕಾಣುತ್ತದೆ.

15ರಿಂದ 35 ವರ್ಷ ವಯಸ್ಸಿನವರನ್ನು ಸಾಕ್ಷರಸ್ಥರನ್ನಾಗಿ ಮಾಡುವ ಮಾತಿರಲಿ-6ರಿಂದ 15ವರ್ಷ ವಯಸ್ಸಿನೊಳಗಿನ ಶೇಕಡಾ 40ರಷ್ಟು ಮಂದಿ ಮಕ್ಕಳಿಗೂ ವಿದ್ಯೆಕೊಡಲು ಈ ದೇಶದ ಸರಕಾರಕ್ಕೆ ಇದುವರೆಗೆ ಆಗಿಲ್ಲ. ವರ್ಷ ಕಳೆದಂತೆ ಈ ಅನಕ್ಷರಸ್ಥ ಮಕ್ಕಳು ಅನಕ್ಷರಸ್ಥ ವಯಸ್ಕರ ಸೇನೆಗೆ ಸೇರುತ್ತಾರೆ. ಕಳೆದ ಮೂವತ್ತೈದು ವರ್ಷಗಳ ಅವಧಿಯಲ್ಲಿ ನಮ್ಮ ಸರಕಾರ ವಯಸ್ಕರ ಸಾಕ್ಷರತೆಯನ್ನು ಒತ್ತಟ್ಟಿಗಿಟ್ಟು ಪ್ರಾಪ್ತ ವಯಸ್ಸಿನ ಪ್ರತಿಯೊಂದು ಮಗುವಿಗೂ ಶಿಕ್ಷಣ ಕೊಟ್ಟಿದ್ದರೆ ಇಂದು ವಯಸ್ಕರ ಶಿಕ್ಷಣದ ಮೂಟೆ ಹೊತ್ತು ಮಾರಾಟ ಮಾಡಬೇಕಾದ ಅಗತ್ಯವಿರುತ್ತಿರಲಿಲ್ಲ.

ಭಾರತ ದೇಶದಲ್ಲಿ ಅನಕ್ಷರತೆಯನ್ನು ಜೀವಂತವಾಗಿ ಉಳಿಸಿಕೊಂಡು ಬಂದಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ನಮ್ಮ ಯೋಜಕರು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದೇ ಇದಕ್ಕೆ ಕಾರಣವೆನ್ನಬೇಕಾಗುತ್ತದೆ. ವಯಸ್ಕ ಅನಕ್ಷರಸ್ಥರು ಮತ್ತು ಶಾಲೆಗೆ ಹೋಗದಿರುವ ಮಕ್ಕಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತೀರಾ ಕೆಳ ಅಂತಸ್ತಿಗೆ ಸೇರಿದವರು. ಇವರಿಗೆ ಅಕ್ಷರಾಭ್ಯಾಸಕ್ಕಿಂತ ಮಿಗಿಲಾದ ಬದುಕಿನ ಬವಣೆಗಳಿವೆ-ಸಾಮಾಜಿಕ ಒತ್ತಡಗಳಿವೆ. ಕೆಳ ಅಂತಸ್ತಿನ ಜನವರ್ಗಕ್ಕೆ ಸೇರಿದ ಜನರನ್ನು ಸಾಮಾಜಿಕ ಒತ್ತಡದಿಂದ ಬಿಡುಗಡೆಗೊಳಿಸದೆ-ಅವರನ್ನು ಆರ್ಥಿಕ ಅಡಚಣೆಗಳಿಂದ ಪಾರು ಮಾಡದೆ ಅಕ್ಷರಾಭ್ಯಾಸದ ಕಾರ್ಯಕ್ರಮಗಳು ಅವರನ್ನು ಮುಟ್ಟಲಾರವು. ವಯಸ್ಕರ ಶಿಕ್ಷಣ ಕಾರ್ಯಕ್ರಮ ಒಂದಡಿ ಮುಂದಿಡಲಾಗದೆ ಹೀಗೆ ಜಡವಾಗಿ ನಿಂತಿರುವುದಕ್ಕೆ ಇದು ಕಾರಣವೆಂಬುದನ್ನು ಅಧಿಕಾರಿಗಳು ಈಗಲಾದರೂ ಅರಿತುಕೊಳ್ಳದಿದ್ದರೆ ಈ ಕಾರ್ಯಕ್ರಮದಿಂದ ಹೆಚ್ಚಿನದೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ.

ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆದು ಶಿಕ್ಷಕರನ್ನು ನೇಮಿಸಿ ಅಲ್ಲಿಗೆ ಬರುವ ಅನಕ್ಷರಸ್ಥರಿಲ್ಲದೆ ಬರೇ ಗುಲ್ಲು ನಿದ್ದೆಗೇಡು ಎನ್ನುವ ದಾರಿಯಲ್ಲೇ ಈ ಕಾರ್ಯಕ್ರಮ ಸಾಗಿದರೆ ಆಗುವುದು ಅದೇ. ವ್ಯರ್ಥ ವೆಚ್ಚ ಮತ್ತು ಅಂಕೆ-ಸಂಖ್ಯೆಗಳ ಕಣ್ಣು ಮುಚ್ಚಾಲೆ. ಈ ಕಾರ್ಯಕ್ರಮ ಅರ್ಥವತ್ತಾಗಬೇಕು-ಅದರಿಂದೇನಾದರೂ ಸಾಧನೆಯಾಗಬೇಕೆಂಬ ನಿಜವಾದ ಕಳಕಳಿ ಇಲಾಖೆಗೆ ಇರುವುದಾದರೆ ಮಂಗಳೂರು ವಿಶ್ವವಿದ್ಯಾನಿಲಯ ರಿಜಿಸ್ಟ್ರಾರ್ ಕೆ.ಎಂ.ಕಾವೇರಿಯಪ್ಪನವರು ಹೇಳಿದಂತೆ ಅನಕ್ಷರಸ್ಥರ ಮನೆಯ ಬಾಗಿಲಿಗೆ ಹೋಗಿ ಅವರಿಗೆ ಅಕ್ಷರಾಭ್ಯಾಸ ಮಾಡಿಸುವ ಕಾರ್ಯಕ್ರಮ ರೂಪಿಸಬೇಕು. ಇದಕ್ಕೆ ವಿದ್ಯಾವಂತ ಜನರ ಸಾಮಾಜಿಕ ಬದ್ಧತೆ ಬೇಕು. ವಿದ್ಯೆ ಇಲ್ಲದ ಬಳವನಿಗೆ ವಿದ್ಯೆಕೊಟ್ಟು ಸಬಲನನ್ನಾಗಿ ಮಾಡುವ ಸಾಮಾಜಿಕ ಪ್ರಜ್ಞೆ ಈ ದೇಶದಲ್ಲಿದೆಯೇ? ಎಲ್ಲರೂ ಆತ್ಮಶೋಧನೆ ಮಾಡಿ ಉತ್ತರಿಸಬೇಕಾದ ಪ್ರಶ್ನೆ ಇದು.

ಮುಂಗಾರು

ಬುಧವಾರ, ಸೆಪ್ಟೆಂಬರ್ 30, 1987

ಮಿಸ್ ಮೇಯೊ ಹೇಳಿದ್ದು ಇದನ್ನೇ....

"ಭಾರತೀಯರು ಮೂಲತಃ ರಸಿಕತೆಯ ಸೋಗಿನಲ್ಲಿರುವ ಕಾಮುಕರು. ಆತ್ಮವಂಚನೆಯಲ್ಲಿ ಮಹಾ ವಿಷ್ಣಾತರು. ಮಹಾ ಕ್ರೂರಿಗಳು. ಹಿಂಸಾ ಪ್ರವೃತ್ತಿ ಇವರ ಮನಸ್ಸಿನಲ್ಲಿ ಘನೀಕೃತವಾಗಿದೆ... ಭಾರತವೆಂಬ ಈ ದೇಶದಲ್ಲಿ ಮಹಿಳೆಯನ್ನು ದೇವಿಯೆಂದು ಕರೆದು ಆಕೆಯನ್ನು ಭೋಗ ವಸ್ತುವಾಗಿ ಬಳಸಲಾಗುತ್ತಿದೆ... ...", ಎಂದೆಲ್ಲ ಈ ಶತಮಾನದ ಆದಿಯಲ್ಲಿ ಭಾರತದ ಜನಜೀವನದ ಆಳಅಧ್ಯಯನ ಮಾಡಿದ ಮಿಸ್‌ಕೆಥರಿನ್ ಮೇಯೊ ಎಂಬ ಬ್ರಿಟಿಷ್ ಮಹಿಳೆ "ಮದರ್ ಇಂಡಿಯಾ", ಎಂಬ ಪುಸ್ತಕದಲ್ಲಿ ಹೇಳಿದ್ದರು.

ಈ ಪುಸ್ತಕ ಆಗ ಭಾರತೀಯರ ಮನಸ್ಸನ್ನು ನೋಯಿಸಿತ್ತು. ಎಲ್ಲರೂ ಈ ಮಾತುಗಳನ್ನು ಪ್ರತಿಭಟಿಸಿದ್ದರು. ಮಹಾತ್ಮಾಗಾಂಧಿಯವರು ಮಿಸ್‌ಮೇಯೊ ಪುಸ್ತಕವನ್ನು "ಕೊಚ್ಚೆ ಪರೀಕ್ಷಕನ ವರದಿ", ಎಂದು ಖಂಡಿಸಿದ್ದರು. ನಿಜ-ಮಿಸ್ ಮೇಯೊ ತಮ್ಮ ಪುಸ್ತಕದಲ್ಲಿ ಭಾರತೀಯ ಜನಜೀವನದಲ್ಲಿ ಮೇಲ್ನೋಟಕ್ಕೆ ಗೋಚರಿಸಿದ ಹಲವಾರು ದೋಷಗಳಿಗೆ ಭೂತಕನ್ನಡಿ ಹಿಡಿದಿದ್ದರು. ಭಾರತೀಯ ಸಮಾಜದ ಕೊಳಕನ್ನು ಕೆದಕಿ ತೋರಿಸುವುದರಲ್ಲಿ ತೋರಿಸಿದ ಆಸಕ್ತಿಯನ್ನವರು ಒಳಿತನ್ನು ಗುರುತಿಸುವುದರಲ್ಲಿ ತೋರಿಸಲಿಲ್ಲ. ಭಾರತೀಯ ಮಹಿಳೆಯರ ಬಹಳ ಒಪ್ಪವಾದ ಸೀರೆ ಉಡುಗೆಯಲ್ಲಿ, ಹಣೆಗಿಡುವ ಕುಂಕುಮದಲ್ಲಿ, ಜಡೆ ಹೆಣೆದು ಅದಕ್ಕೆ ಹೂವಿನ ಅಲಂಕಾರಮಾಡುವ ಸಂಪ್ರದಾಯದಲ್ಲಿ ಕಾಮುಕತೆಯನ್ನು ಕೆರಳಿಸುವ ಗುಣವನ್ನು ಕಂಡಿದ್ದರು.

ಈ ದೃಷ್ಟಿಯಿಂದ ಮಿಸ್ ಮೇಯೊ ಪುಸ್ತಕದಲ್ಲಿ ಮಾಡಲಾದ ಭಾರತೀಯ ಗುಣಗಳ ವಿಶ್ಲೇಷಣೆಯಲ್ಲಿ ಉತ್ಪ್ರೇಕ್ಷೆ ಇದೆಯೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಮಿಸ್ ಮೇಯೊ ಕಲೆಹಾಕಿದ ಭಾರತೀಯ ಕಂದಾಚಾರಗಳು, ಮೂಢನಂಬಿಕೆಗಳು ಮತ್ತು ಇತರ ಸಾಮಾಜಿಕ ಹೊಲಸುಗಳ ರಾಶಿಯನ್ನು ನಾವು ಕಡೆಗಣಿಸುವಂತಿಲ್ಲ. ದೇವರು ಮತ್ತು ಧರ್ಮದ ಹೆಸರಿನಲ್ಲಿ ಇಂದಿಗೂ ನಮ್ಮ ನಡುವೆ ನಡೆಯುತ್ತಿರುವ ಕ್ರೌರ್ಯಗಳನ್ನು ನಾವು ಗಮನಿಸಬೇಕಾಗುತ್ತದೆ. ದೇವಿ ದುರ್ಗೆಯನ್ನು ಒಲಿಸಿಕೊಳ್ಳಲು ಮಕ್ಕಳ ಕತ್ತು-ಕತ್ತರಿಸುವ ಕ್ರೌರ್ಯ ಇಂದಿಗೂ ನಮ್ಮ ದೇಶದಲ್ಲಿ ನಡೆಯುತ್ತಿದೆ. ಮಾನವ ಕುಲದಲ್ಲಿ ಅಸ್ಪೃಶ್ಯತೆಯಂತಹ ಅಮಾನುಷವಾದ ಸಂಪ್ರದಾಯವನ್ನು ಬೆಳೆಸಿದ ಭಾರತೀಯ ಪರಂಪರೆ ಇಂದಿಗೂ ಮಾನವರಾಗಿ ಬದುಕುವ ಬಯಕೆ ತೋರಿದ ಹರಿಜನರನ್ನು ಗುಂಡಿಕ್ಕಿ ಕೊಲ್ಲುತ್ತಿದೆ. ಜಾತೀಯ ಗಣನೆಯನ್ನು ಮೆಟ್ಟಿ ನಿಂತು ಮಾನವೀಯ ಗುಣಗಳನ್ನು ಗುರುತಿಸಲು ಭಾರತೀಯರಾದ ನಮಗಿನ್ನೂ ಸಾಧ್ಯವಾಗಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ಆಚರಣೆಯಲ್ಲಿರುವ ವರ್ಣಭೇದ ನೀತಿಯನ್ನು ಧ್ವನಿ ಏರಿಸಿ ಖಂಡಿಸುತ್ತಿರುವ ಭಾರತೀಯರಾದ ನಾವು ನಮ್ಮ ಊರು-ಕೇರಿಗಳಲ್ಲಿ ಅಸ್ಪೃಶ್ಯರ ಕಾಲೊನಿಗಳನ್ನು ಉಳಿಸಿಕೊಂಡಿದ್ದೇವೆ. ಹೊಸ ಹರಿಜನ ಕಾಲೊನಿಗಳನ್ನು ಕಟ್ಟುವ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದೇವೆ.

ಮಹಿಳೆಯೊಬ್ಬರನ್ನು ಪ್ರಧಾನಿಯ ಪಟ್ಟಕ್ಕೇರಿಸಿ ಸ್ತ್ರೀ ಸ್ವಾತಂತ್ರ್ಯವನ್ನು ಮೆರೆದಾಡಿಸಿದೆವೆಂದು ಉಬ್ಬಿಕೊಳ್ಳುತ್ತಿರುವ ಭಾರತೀಯರಾದ ನಮಗೆ ಮಹಿಳೆಯನ್ನು 'ಭೋಗ ವಸ್ತುವಿನ' ಸ್ಥಾನದಿಂದ ಮೇಲೆತ್ತಲು ಇಂದಿಗೂ ಸಾಧ್ಯವಾಗಿಲ್ಲ. ಕೇಳಿದಷ್ಟು ವರದಕ್ಷಿಣೆ ತಂದಿಲ್ಲವೆಂಬ ಕಾರಣಕ್ಕಾಗಿ ಮಹಿಳೆಯರನ್ನು ಸಜೀವ ದಹನ ಮಾಡುವ ದಾನವಗುಣ ನಮ್ಮ ನಡುವೆ ನರ್ತಿಸುತ್ತಿದೆ. ಮಹಿಳೆಯರ ಮೇಲೆ ಭಾರತದಲ್ಲಿ ನಡೆಯುತ್ತಿರುವಷ್ಟು ಅತ್ಯಾಚಾರ-ಹಿಂಸೆ ಜಗತ್ತಿನ ಇನ್ನಾವ ಸಮಾಜದಲ್ಲೂ ನಡೆಯುತ್ತಿಲ್ಲ.

ವಿಧವೆಯಾದ ಮಹಿಳೆಗೆ ಬದುಕುವ ಹಕ್ಕನ್ನು ನಿರಾಕರಿಸಿ, ಆಕೆ ಗಂಡನ ಚಿತೆಗೆ ಹಾರಿ ಜೀವದಾನ ಮಾಡುವ ಅಥವಾ ಆಕೆ ಜೀವದಾಸೆ ತೋರಿಸಿದರೆ ಕೈ ಕಾಲು ಕಟ್ಟಿ ಚಿತೆಗೆ ಹಾಕಿ ಸುಟ್ಟುಬಿಡುವ ಕ್ರೌರ್ಯ ಪ್ರದರ್ಶನಕ್ಕೆ ಧರ್ಮದ ಲೇಪ ಹಚ್ಚಿದ ಸಂಸ್ಕೃತಿ ಜಗತ್ತಿನಲ್ಲಿ ಇನ್ನೊಂದಿಲ್ಲ.

ಮಾನವಕುಲ ಮೂಢನಂಬಿಕೆಗಳು ಮತ್ತು ಕಂದಾಚಾರಗಳ ಬಂಧನಗಳಿಂದ ಬಿಡುಗಡೆಹೊಂದಿ ಮಾನವನ ಕೃತು ಶಕ್ತಿಯನ್ನು ಉತ್ತುಂಗಕ್ಕೇರಿಸಬಲ್ಲ ಇಪ್ಪತ್ತೊಂದನೆಯ ಶತಮಾನಕ್ಕೆ ಜಿಗಿಯುವ ಸನ್ನಾಹದಲ್ಲಿರುವಾಗ ಭಾರತೀಯರಾದ ನಾವಿನ್ನೂ ಸತಿ ಸಹಗಮನದಂತಹ ಕ್ರೌರ್ಯವನ್ನು ವೈಭವೀಕರಿಸುತ್ತಿದ್ದೇವೆ. ಸೆಪ್ಟಂಬರ್ ನಾಲ್ಕರಂದು ರಾಜಸ್ತಾನದ ದೇವರಾಲ ಗ್ರಾಮದಲ್ಲಿ ರೂಪ್‌ಕನ್ವರ್ ಎಂಬ ತುಂಬು ಯೌವ್ವನದ ಮಹಿಳೆ ತನ್ನ ಗಂಡನ ಚಿತೆಗೆ ಹಾರಿ ಪ್ರಾಣಾರ್ಪಣೆ ಮಾಡಿರುವುದು ಇದಕ್ಕೊಂದು ನಿದರ್ಶನ. ಒಬ್ಬ ಮಹಿಳೆ ಮೂಢನಂಬಿಕೆಯಿಂದ ನಡೆಸಿದ ಆತ್ಮಹತ್ಯೆವಾಗಿ ಇದು ಕೊನೆಗೊಂಡಿದ್ದರೆ ಇದಕ್ಕೆ ಅಷ್ಟೇನೂ ಮಹತ್ವ ಬರುತ್ತಿರಲಿಲ್ಲ. ಆದರೆ ಈ ಸತಿ ಸಹಗಮನ ನಡೆದ ರೀತಿ ಮತ್ತು ಅನಂತರದ ದಿನಗಳಲ್ಲಿ ಜನರು ಮೈಮರೆತು ಇಂತಹ ಹೀನ ಕೃತ್ಯವನ್ನು ವೈಭವೀಕರಿಸುತ್ತಿರುವ ರೀತಿ ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಸೂಪರ್ ಕಂಪ್ಯೂಟರ್‌ನ ಮೇಲೆ ಬೆರಳಿಡುತ್ತಿರುವ ನಾಡಿನ ಸರಕಾರ ಇಂತಹ ಅಮಾನುಷ ಕೃತ್ಯಕ್ಕೆ ಅವಕಾಶವಿತ್ತಿತೆಂಬುದು ಒಂದು ದುರ್ದೈವದ ಸಂಗತಿ.

ಮಾನವತೆಯ ಮಾರಣಹೋಮದಂತಿರುವ ಈ ಸತಿಸಹಗಮನದ ಬೂದಿಯ ಮೇಲೆ ಅಲ್ಲಿನ ಜನರೀಗ ದೇವಾಲಯದ ನಿರ್ಮಾಣಕ್ಕೆ ಹೊರಟಿರುವುದು ಇನ್ನಷ್ಟು ಆತಂಕಕಾರಿಯಾಗಿದೆ. ಜನರ ಮೂಢನಂಬಿಕೆಗಳ ಮೇಲೆ ಅಧಿಕಾರ ಗದ್ದುಗೆಗೆ ಏರಿರುವ ನೀಚ ರಾಜಕಾರಣಿಗಳೀಗ ಅದರಲ್ಲಿ ಶಾಮೀಲಾಗುತ್ತಿರುವರೆಂಬ ವರದಿ ಬಂದಿದೆ. "ಜನರಿಗೆ ಸತಿಸಹಗಮನ ಪದ್ಧತಿ ಬೇಕಾದರೆ ಅದನ್ನು ಬೇಡವೆನ್ನಲು ನಾವ್ಯಾರು ?", ಎನ್ನುವ ಮಾತುಗಳನ್ನು ಈ ರಾಜಕಾರಣಿಗಳಾಡಬಹುದು. ಮುಂದಿನ ದಿನಗಳಲ್ಲಿ ರಾಜಸ್ತಾನದ "ವೀರಯೋಧರು" ವಿಧವೆಯರಾದ ಹೆಣ್ಣು ಮಕ್ಕಳ ಕೈಕಾಲು ಕಟ್ಟಿ ಚಿತೆಗೆ ತಳ್ಳಿ, ತಮ್ಮ ಪೌರುಷ ಪ್ರದರ್ಶನ ಮಾಡಬಹುದು. ಈ ಹೀನ ಕೃತ್ಯದ ಪುನರುತ್ಥಾನಕ್ಕೆ ರೂಪ್‌ಕನ್ವರ್ ಸಮಾಧಿ ಚೇತನಕಾರಿಯಾಗಬಹುದು. ಅಲ್ಲಾಗುವ ದೇವಾಲಯದಲ್ಲಿ ದೈವೀಶಕ್ತಿಯ ಆವಿಷ್ಕಾರದ ಶ್ಲೋಕ ಪಠಿಸುವ ಪುರೋಹಿತರಿಗೆ ನಮ್ಮ ದೇಶದಲ್ಲೇನೂ ಕೊರತೆ ಇಲ್ಲ.

ದೇಶದ ಊರು – ಕೇರಿಗಳಲ್ಲಿರುವ ಧರ್ಮಗುರುಗಳು ರೂಪ್ ಕನ್ವರ್ ಸಹಗಮನದ ಬಗ್ಗೆ ತಳೆದಿರುವ ಗಂಭೀರವಾದ ಮೌನವನ್ನು ಗಮನಿಸಿದರೆ ಸತಿ ಸಹಗಮನದ ಪುನರುತ್ಥಾನದ ಭಯ ಬಲವಾಗುತ್ತದೆ. ದಿನಬೆಳಗಾದರೆ, ಶಾಂತಿ–ಸಹಿಷ್ಣುತೆ, ಪ್ರೀತಿ–ವಾತ್ಸಲ್ಯ, ಆಧ್ಯಾತ್ಮ–ಮಾನವೀಯತೆ ಬಗ್ಗೆ ಉಪದೇಶ ಮಾಡುತ್ತಿರುವ ಈ ಧರ್ಮಗುರುಗಳು ರೂಪ್ ಕನ್ವರ್ ಸಜೀವ ದಹನದ ಬಗ್ಗೆ ವಹಿಸಿರುವ ಮೌನ ಅಪಾಯಕಾರಿಯೆನ್ನಿಸುತ್ತಿದೆ.

ಮೂಢನಂಬಿಕೆಗಳ ಆಗರವಾಗಿರುವ ಭಾರತವನ್ನು ಒಂದು ಸ್ವಸ್ಥ ಸಮಾಜವಾಗಿ ಪರಿವರ್ತಿಸುವ ಚಿಂತನೆಯುಳ್ಳ ಜನರೆಲ್ಲ ನಮ್ಮ ಸಮಾಜಕ್ಕಂಟಿರುವ ರೋಗದ ಲಕ್ಷಣಗಳನ್ನು ಈಗಲಾದರೂ ಗುರುತಿಸಬೇಕು. ಮಾನವೀಯ ಗುಣಗಳ ನೆಲೆಯಲ್ಲಿ ನಿಲ್ಲಲು ಈ ದೇಶದ ಮುಗ್ಧ ಜನರಿಗೆ ನೆರವಾಗಬೇಕು. ಜನರನ್ನು ಸಾಮೂಹಿಕವಾಗಿ ಸದ್ವಿಚಾರಗಳ ಚಿಂತನೆಯ ಕುಲುಮೆಗೆ ತಳ್ಳಬೇಕು. ಇಂತಹ ಒಂದು ದೊಡ್ಡ ಕೆಲಸಕ್ಕೆ ವಿಚಾರವಂತರೆನ್ನುವ ಜನರೆಲ್ಲ ಮುಂದಾಗಬೇಕು. ಇಲ್ಲವಾದರೆ ಭಾರತವೆಂಬ ದೇಶ ಮಾನವಕುಲದ ಕೊಚ್ಚೆಯಾಗಿಯೇ ಉಳಿಯುತ್ತದೆ.

ಮುಂಗಾರು

ಬುಧವಾರ, ಆಗಸ್ಟ್ 12, 1987

ಅಂತರಂಗವನ್ನು ಅರ್ಥಮಾಡಿಕೊಳ್ಳಿ

ಈ ನಾಡಿನ ಮಣ್ಣಿನ ಅಣು ಅಣುಗಳ ಗುಣವೂ ಇದೇ ನಾಡಿನ ಮಕ್ಕಳಾದ ಸಿಕ್ಖರ ರಕ್ತದ ಪ್ರತಿ ಹನಿ ಹನಿಗಳಲ್ಲಿ ಬೆರೆತುಕೊಂಡಿದ್ದರೂ ಅವರು ಇಂದು ತಾವು ನಿಂತ ನೆಲದಲ್ಲೇ ಪರದೇಶಿಗಳಾಗಿದ್ದಾರೆ. ಪ್ರತಿ ಸಿಕ್ಖನೂ ಒಂಟಿತನದ ಬೇಗೆಯಿಂದ ನರಳುತ್ತಿದ್ದಾನೆ. ವ್ಯವಸ್ಥೆಯ ರಾಜಕೀಯ ಕುಟಿಲತೆಗಳಿಗೆ ಸಿಲುಕಿ ತತ್ತರಿಸಿ ಒಂಟಿತನದ ಕೂಪಕ್ಕೆ ತಳ್ಳಲ್ಪಟ್ಟ ಒಬ್ಬ ವ್ಯಕ್ತಿ ಅಥವಾ ಒಂದು ಸಮುದಾಯದ ಮನಸ್ಸು ಯಾವ ರೀತಿ ವಿಕೃತಗೊಳ್ಳುತ್ತೆ ಎನ್ನುವುದಕ್ಕೆ ಇಂದು ಹೊತ್ತಿ ಉರಿಯುತ್ತಿರುವ ಪಂಜಾಬ್ ಸಮಸ್ಯೆಯೇ ನಮಗೆ ಜ್ವಲಂತ ಉದಾಹರಣೆಯಾಗಿದೆ.

ಈಗ ಸಮಸ್ಯೆಗೆ ಮತ್ತೊಂದು ಹೊಸ ತಿರುವು ಸಿಗುವಂತಿದೆ. ಸಿಕ್ಖರ ವ್ಯವಹಾರಗಳನ್ನು ಉಗ್ರಗಾಮಿಗಳೇ ನೋಡಿಕೊಳ್ಳಲು ಅನುಕೂಲವಾಗುವಂತೆ ಏಕೀಕೃತ ಅಕಾಲಿ ದಳವು ಸಿಖ್ ಸಮುದಾಯದ ನಾಯಕತ್ವದಿಂದ ಹಿಂದೆ ಸರಿದಿದೆ ಎಂದು ಅದರ ಕಾರ್ಯಾಧ್ಯಕ್ಷ ಉಜಾಗರ್ ಸಿಂಗ್ ಶೇಖ್ವಾನ್ ಅವರು ನಿನ್ನೆ ಅಮೃತಸರದಲ್ಲಿ ಪ್ರಕಟಿಸಿದ್ದಾರೆ.

ಅಕಾಲ್‌ತಖ್ತ್‌ನ ಹಂಗಾಮಿ ಪ್ರಧಾನ ಅರ್ಚಕ ಪ್ರೊಫೆಸರ್ ದರ್ಶನ್‌ಸಿಂಗ್ ಅವರು ಕೂಡಾ ಇದೇ ನಿರ್ಧಾರ ತೆಗೆದುಕೊಂಡಿದ್ದಾರೆ. ಪ್ರಸ್ತುತ ತೀವ್ರವಾಗಿರುವ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಸಿಕ್ಖರ ನಾಯಕತ್ವವನ್ನು ಯುವಕರಿಗೆ ಬಿಟ್ಟುಕೊಡುತ್ತಿದ್ದೇವೆ ಎಂದು ಅವರೆಲ್ಲಾ ಒಮ್ಮತದ ತೀರ್ಮಾನಕ್ಕೆ ಬಂದು ಬಿಟ್ಟಿದ್ದಾರೆ.

ಕೇಂದ್ರ ಸರ್ಕಾರ ತನ್ನ ಹಠಮಾರಿತನದ ಧೋರಣೆಯಿಂದ ಸಮಸ್ಯೆಯ ಈ ಭೀಕರತೆಗೆ ಪ್ರಮುಖ ಕಾರಣಕರ್ತವಾಗಿದೆ ಎಂಬುದಂತೂ ಸ್ಪಷ್ಟ. ಈವರೇಗೆ ಅದು ಮಂದಗಾಮಿಗಳೊಡನೆ ತನ್ನ ಮೂಗಿನ ನೇರದ ಸಂಧಾನಗಳ ಸರ್ಕಸ್ ನಡೆಸುತ್ತಾ, ನಿಖರ ಪರಿಹಾರ ಕಂಡು ಹುಡುಕುವುದನ್ನು ಮುಂದೂಡುತ್ತಾ ಬಂದಿದೆ. ಉಗ್ರಗಾಮಿಗಳನ್ನು ಅತ್ಯಂತ ಕೆಟ್ಟ ಮನುಷ್ಯರನ್ನಾಗಿ ಹೊರಜಗತ್ತಿಗೆ ತೋರಿಸುತ್ತಾ, ತಾನು ಮಾತ್ರ ಇಡೀ ಜಗತ್ತಿನ ಜನರ ಅನುಕಂಪವನ್ನು ಗುತ್ತಿಗೆ ತೆಗೆದುಕೊಂಡಿತ್ತು. ಆದರೆ ಈಗ ಇಡೀ ಸಿಕ್ಖ್ ಜನಸಮುದಾಯವನ್ನು ಪ್ರತಿನಿಧಿಸುವ ಈ ಜನಾಂಗದ ಆಶೋತ್ತರಗಳ ಧ್ವನಿರೂಪವಾದ ಅಮೃತಸರ ಸ್ವರ್ಣ ದೇಗುಲದ ಹಿಡಿತ ಉಗ್ರಗಾಮಿಗಳ ಕೈಗೆ ಹೋಗಲಿದೆ. ಮಂದಗಾಮಿಗಳು ಹಿಂದೆ ಸರಿದಿದ್ದಾರೆ. ಇದು ಈವರೇಗೆ ನಡೆದ ಸಿಕ್ಖ್ ಸಮುದಾಯದ ಹೋರಾಟದ ಒಂದು ಪ್ರಮುಖ ಘಟ್ಟವೆನ್ನ

ಜೀವ ಹಿಡಿದು ಬದುಕುತ್ತಿದ್ದಾರೆ. ಇದು ಕೇಂದ್ರ ಸರ್ಕಾರದ ಕೇಂದ್ರೀಕರಣ ನೀತಿಯ ವಿಕೃತಿಯ ಪರಿಣಾಮ.

ಶ್ರೀಲಂಕಾದಲ್ಲಿ ಉಗ್ರರೂಪ ತಳೆದಿದ್ದ ಜನಾಂಗೀಯ ಸಮಸ್ಯೆಯನ್ನು ಬಗೆಹರಿಸುವಲ್ಲಿ ರಾಜೀವ್ ಗಾಂಧಿ ತಳೆದ ನಿರ್ಧಾರವನ್ನು ನಾವು ಮೆಚ್ಚಿದ್ದೇವೆ. ಶ್ರೀಲಂಕಾ ತಮಿಳರಿಗೆ ಸ್ವಾಯತ್ತೆ ನೀಡುವ ಬಗ್ಗೆ ಅವರ ಪ್ರತಿಪಾದನೆ ಸ್ವಾಗತಾರ್ಹವಾದುದು. ಅವರು ಅದೇ ನಿಲುವನ್ನು ಪಂಜಾಬ್ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆಯೂ ಏಕೆ ತಳೆಯಬಾರದು. ತಮ್ಮದೇ ಆದ ವಿಶಿಷ್ಟ ಧರ್ಮ, ಸಾಂಸ್ಕೃತಿಕ ಹಿನ್ನಲೆ ಮತ್ತು ಸಾಮಾಜಿಕ ಬದುಕನ್ನು ಹೊಂದಿರುವ ಸಿಕ್ಖ್ ಜನಾಂಗವೇ ಬಹುಸಂಖ್ಯಾತರಾಗಿರುವ ಪಂಜಾಬ್‌ಗೆ ಸ್ವಾಯತ್ತೆ ಘೋಷಿಸುವಲ್ಲಿ ಹಿಂದೇಟು ಹೊಡೆಯುತ್ತಿರುವುದಾದರೂ ಏಕೆ?

ಕೇವಲ ಪಂಜಾಬ್ ಸಮಸ್ಯೆಯೊಂದನ್ನೇ ಕೇಂದ್ರವಾಗಿರಿಸಿಕೊಳ್ಳುವುದೂ ತಪ್ಪಾಗುತ್ತದೆ. ಆ ಸಮಸ್ಯೆ ನಿವಾರಣೆಯಾದರೂ ಇಡೀ ದೇಶದಲ್ಲಿ ಅಂತಹ ನೂರು ಪಂಜಾಬ್‌ಗಳು ಹುಟ್ಟಿಕೊಳ್ಳುವ ಸಾಧ್ಯತೆಗಳಿವೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೇಗೆ ವಿಭಿನ್ನ ಧರ್ಮ, ಜಾತಿ, ಸಂಸ್ಕೃತಿ, ಭಾಷೆಗಳ ಹತ್ತಾರು ಜನಾಂಗಗಳಿವೆ. ಈ ಹಿನ್ನೆಲೆಯಲ್ಲಿ ಇವುಗಳೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಬಂಧವನ್ನು ಪುನರ್ವಿಮರ್ಶಿಸಬೇಕಾಗಿದೆ. ಪ್ರತಿರಾಜ್ಯಗಳಿಗೂ ಸ್ವಾಯತ್ತೆ ನೀಡಬೇಕಿದೆ. ರಕ್ಷಣೆ, ಕರೆನ್ಸಿನೋಟುಗಳ ಮುದ್ರಣ, ಸಂಪರ್ಕ, ವಿದೇಶಿ ವ್ಯವಹಾರಗಳನ್ನು ಹೊರತು ಪಡಿಸಿ ಮತ್ತೆಲ್ಲದರ ಸಂಪೂರ್ಣ ಅಧಿಕಾರವನ್ನು ರಾಜ್ಯಗಳಿಗೆ ನೀಡಬೇಕಾದ ಅನಿವಾರ್ಯತೆ ಇದೆ. ಈ ಬಗ್ಗೆ ಕೇಂದ್ರ ಸರ್ಕಾರ ಯೋಚಿಸಲಿ.

ಈ ಬಗ್ಗೆ ಕೇವಲ ರಾಜೀವ್ ಮಾತ್ರವಲ್ಲ ಪಕ್ಷಭೇದವಿಲ್ಲದೆ ಈ ನಾಡಿನ ಎಲ್ಲಾ ರಾಜಕಾರಣಿಗಳೂ ಪ್ರಾಮಾಣಿಕವಾಗಿ ಚಿಂತಿಸಬೇಕಾಗಿದೆ.

ಮನುಷ್ಯ ಮತ್ತು ಮನುಷ್ಯರ ನಡುವಣ ಸಂಬಂಧಗಳು ಈ ದೇಶದಲ್ಲಿ ಜಾತಿ, ಧರ್ಮಗಳ ಕೊಂಡಿಯಿಂದ ಬೇರ್ಪಡಿಸದಂತಹ ಸ್ಥಿತಿ ಇದೆ. 'ಮನುಷ್ಯ'ರಾಗಿ ಯೋಚಿಸುವ ಪ್ರಜ್ಞೆಯನ್ನೇ ಕಳೆದುಕೊಂಡಿದ್ದಾರೇನೋ ಎಂದೆನಿಸುತ್ತಿದೆ. ಈ ಪ್ರಜ್ಞೆಯೇ ರಾಜಕೀಯದೊಳಗೆ ಬೆರೆತಾಗ ಇಡೀ ವ್ಯವಸ್ಥೆಯೇ ಕಲುಷಿತಗೊಳ್ಳುತ್ತೆ. ಪಂಜಾಬ್‌ನಲ್ಲಿ ಆದದ್ದೂ ಹೀಗೆಯೇ. ಮೊದಲು ಸಿಕ್ಖ್ ಸಮುದಾಯ ನೆಲಜಲ

ಬಹುದು.

ಇಡೀ ಸಿಕ್ಖ್ ಸಮುದಾಯದ ಪ್ರತ್ಯಕ್ಷ ಮತ್ತು ಪರೋಕ್ಷ ಬೆಂಬಲವಿಲ್ಲದೆ ಏಕೀಕೃತ ಅಕಾಲಿ ದಳ ಈ ತೀರ್ಮಾನ ಕೈಗೊಳ್ಳುತ್ತಿರಲಿಲ್ಲ. ಮಂದಗಾಮಿಗಳು ತೆರೆಯ ಮರೆಗೆ ಸರಿದು ಉಗ್ರಗಾಮಿ ಯುವಕರು ಅಮೃತಸರ ಸ್ವರ್ಣದೇಗುಲವನ್ನು ತಮ್ಮ ಅಧಿಕೃತ ಕೋಟೆಯನ್ನಾಗಿಸಿಕೊಳ್ಳುತ್ತಿದ್ದಾರೆ. ಇಷ್ಟರ ವರೆಗೆ ಮಂದಗಾಮಿಗಳೊಡನೆ ಕೇವಲ 'ಮಾತುಕತೆ' ನಡೆಸುತ್ತಾ ಬಂದ ಕೇಂದ್ರ ಸರ್ಕಾರ ಇನ್ನು ಮುಂದೆ ಭಾರಿ ತೊಡಕನ್ನು ಎದುರಿಸುವಂತಾಗಿದೆ. ಉಗ್ರಗಾಮಿಗಳನ್ನು ತಮ್ಮ ಹಿಡಿತಕ್ಕೆ ತಂದುಕೊಳ್ಳುವುದಂತೂ ಅದಕ್ಕೆ ಅಸಾಧ್ಯವಾಗಬಹುದು.

ಹಾಗಾದರೆ ಇಲ್ಲಿ ನಡೆಯುತ್ತಿರುವ ನರಮೇಧಗಳಿಗೆ, ಹಿಂಸಾಕಾಂಡಗಳಿಗೆ ಕೊನೆಯೆ ಇಲ್ಲವೇ. ಮನುಷ್ಯನ ಜೀವಕ್ಕೆ ಬೆಲೆಯೆ ಇಲ್ಲವೇ. ಮನುಷ್ಯನ ಭಾವನೆಗಳನ್ನು, ಕನಸುಗಳನ್ನು, ಅಂತರಂಗವನ್ನು ಯಾವುದೇ ಪೂರ್ವಾಗ್ರಹ ಪೀಡಿತರಾಗದೆ ಮಾನವೀಯ ನೆಲೆಯಲ್ಲಿ ಪ್ರೀತಿಯಿಂದ ಅರ್ಥಮಾಡಿಕೊಳ್ಳುವ ಸಾಧ್ಯತೆಯೆ ಇಲ್ಲವೇ. ಇದೆಲ್ಲವೂ ಅಸಾಧ್ಯವಾದುದೇನಲ್ಲ. ಇದಕ್ಕೆ ಕೇಂದ್ರ ಸರ್ಕಾರ ತನ್ನ ಹಠಮಾರಿತನ ಬಿಡಬೇಕು. ಪ್ರತಿಷ್ಠೆಯ ಪ್ರಶ್ನೆಯನ್ನೇ ದೊಡ್ಡದಾಗಿಸಿಕೊಳ್ಳುವ ಧೋರಣೆಯನ್ನು ಕೈಬಿಡಬೇಕು. ಮುಖ್ಯವಾಗಿ ಸಿಕ್ಖರ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕಿದೆ.

ಹದಿನಾಲ್ಕನೆ ಶತಮಾನದಲ್ಲಿ ಹುಟ್ಟಿದ ಸಿಕ್ಖ್ ಧರ್ಮ ಭಾರತ ರಾಷ್ಟ್ರಜೀವನದ ನೆರಳಲ್ಲೇ ಬದುಕುತ್ತಾ ಬಂದಿದೆ. ಆದರೆ ಇಂದು ಸಿಕ್ಖ್ ಧರ್ಮಿಯರು ಇದೇ ಭಾರತದಲ್ಲಿ ಭಯದ ನೆರಳಿನಲ್ಲೇ ಗಳ ಸಮಸ್ಯೆಯನ್ನು ಎದುರಿಟ್ಟುಕೊಂಡು ಹೋರಾಟ ಆರಂಭಿಸಿದರು. ಅಂದು ರಾಜಕಾರಣಿಗಳು ತಮ್ಮ ರಾಜಕೀಯ ಆಕಾಂಕ್ಷೆಗಳಿಗೆ ಈ ಹೋರಾಟದೊಳಗೆ 'ಧಾರ್ಮಿಕತೆ' ಯನ್ನು ತುರುಕಿದರು. ಇದರಿಂದಾದ ಅನಾಹುತ ನಮ್ಮ ಕಣ್ಣಮುಂದಿದೆ.

ಈ ದೇಶದಲ್ಲಿ ಜಾತಿ, ಧರ್ಮ ಎನ್ನುವಂತಹದ್ದು ವಾಸ್ತವಿಕ. ಅದನ್ನು ಅಲ್ಲಗಳೆದು ಸಮಗ್ರ ಭಾರತೀಯರೆಲ್ಲಾ ಒಂದು ಎಂದು ಹೇಳುವುದು ಆತ್ಮವಂಚನೆಯಾಗುತ್ತೆ. ಕೇಂದ್ರ ಸರಕಾರ ತನ್ನ ಎಲ್ಲಾ ರಾಜ್ಯ, ಜನಾಂಗಗಳ ಮೇಲೆ ತನ್ನ ಹಿಡಿತ ಇರಿಸಿಕೊಳ್ಳಲಿಕ್ಕಾಗಿ ಈ ಆತ್ಮವಂಚನೆ ಮಾಡಿಕೊಳ್ಳುತ್ತಿದೆ. ಇದಕ್ಕೆ ಇತಿಶ್ರೀ ಹಾಡಲೇ ಬೇಕಿದೆ.

ಹಿಂದೆ ಅಮೃತಸರ ಸ್ವರ್ಣದೇಗುಲವನ್ನು ಉಗ್ರಗಾಮಿಗಳು ತಮ್ಮ ಭದ್ರಕೋಟೆಯನ್ನಾಗಿಸಿಕೊಂಡಾಗ ನಡೆದ ಭೀಕರ ಘಟನೆಗಳು ನಮಗೆ ಗೊತ್ತಿವೆ. ಈಗ ಮತ್ತೆ ಉಗ್ರಗಾಮಿ ಯುವಕರು ಅಧಿಕೃತವಾಗಿಯೇ ಸ್ವರ್ಣದೇಗುಲವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದಾರೆ. ಇದರಿಂದ ಉಗ್ರಗಾಮಿಗಳ ಬಲವರ್ಧನೆಯಾಗುವುದಂತೂ ಖಚಿತ.

ಕೇಂದ್ರ ಸರ್ಕಾರ ಇನ್ನು ತಡಮಾಡಬಾರದು ಇಡೀ ಸಿಕ್ಖ್ ಸಮುದಾಯ ಸಿಡಿದೆದ್ದಿರುವುದು ಏಕೆಂಬುದನ್ನು ಅರ್ಥಮಾಡಿಕೊಳ್ಳಲಿ. ಸಿಕ್ಖರ ಒಂಟಿತನ ನೋವುಗಳ ಅರಿವು ಮಾಡಿಕೊಳ್ಳಲಿ. ಸಿಕ್ಖರ ಮುಗ್ಧ ಭಾವನೆಗಳಿಗೆ ವಿಷತುಂಬಿ ಕೆರಳಿಸುವ ಕೆಲಸವನ್ನು ಯಾರೂ ಮಾಡದಿರಲಿ. ಸಿಕ್ಖರ ಬೇಡಿಕೆಗಳನ್ನು ಮುಕ್ತ ಮನಸ್ಸಿನಿಂದ ಪರಿಶೀಲಿಸಲಿ. ಇಲ್ಲದಿದ್ದರೆ ಮುಂದೆ ಇನ್ನೂ ಘೋರ ಅನಾಹುತಗಳನ್ನು ಈ ದೇಶ ಎದುರಿಸಬೇಕಾಗಬಹುದು.

ಮುಂಗಾರು

ಭಾನುವಾರ, ಅಕ್ಟೋಬರ್ 11, 1987

ಚೀನಾದ ದಬ್ಬಾಳಿಕೆ ಖಂಡನಾರ್ಹ

'ಜಗತ್ತಿನ ಪೀಠಭೂಮಿ' ಎಂದು ಕರೆಯಲಾಗುವ ಸುಂದರ ನಾಡು ಟಿಬೆಟ್ ತನ್ನ ನೆರೆಯಲ್ಲಿ ಚೀನಾದಂತಹ ಪ್ರಬಲ ದೇಶವನ್ನು ಹೊಂದಿರುವುದರಿಂದಲೋ ಏನೋ ಅಲ್ಲಿನ ಜನ ಸಮುದಾಯ ನಿರಂತರವಾಗಿ ಅಶಾಂತಿಯ ರಾಜಕೀಯ ತುಮುಲಗಳಿಗೆ ಸಿಲುಕಿ ತತ್ತರಿಸುತ್ತಿದೆ. ಪ್ರಶಾಂತವಾಗಿದ್ದ ಟಿಬೆಟ್ ಭೂಪ್ರದೇಶದೊಳಗೆ 1950ರಲ್ಲಿ ಚೀನಾ ತನ್ನ ಸೇನೆಯೊಡನೆ ಪ್ರವೇಶಿಸಿ ಅಲ್ಲಿನ ಜನಜೀವನವನ್ನು ಅಲ್ಲೋಲ ಕಲ್ಲೋಲಗೊಳಿಸಿತು. ಇತ್ತೀಚೆಗೆ ಚೀನಾ ತನ್ನ 'ಸೇನಾ ಪ್ರವೇಶ'ದ 37ನೇ ವಾರ್ಷಿಕೋತ್ಸವವನ್ನು ಅಲ್ಲಿನ ರಾಜಧಾನಿ ಲಾಸ್ಸಾದಲ್ಲಿ ಆಚರಿಸಿತು. ಇದೇ ಸಂದರ್ಭದಲ್ಲಿ ಚೀನಾದ ಆಡಳಿತವನ್ನು ಪ್ರತಿಭಟಿಸಿ ಅಲ್ಲಲ್ಲಿ ದಂಗೆಗಳಾದವು. ಟಿಬೆಟ್ ಜನಾಂಗದ ಈ ಪ್ರತಿಭಟನೆಯನ್ನು ಅಡಗಿಸಲು ಚೀನಾ ಶತಪ್ರಯತ್ನ ನಡೆಸತೊಡಗಿದೆ.

ಟಿಬೆಟ್‌ನ ಧಾರ್ಮಿಕ ನಾಯಕ ದಲ್ಯಾಲಾಮ ಆ ಭೂಪ್ರದೇಶದ ಮತ್ತು ಜನಾಂಗದ ಪರಮೋಚ್ಚ ಮುಖಂಡ. ಅವರು ಪ್ರಸ್ತುತ ಭಾರತದಲ್ಲಿದ್ದಾರೆ. ಅವರ ರಾಜಕೀಯ ಚಟುವಟಿಕೆಗಳನ್ನು ನಿರ್ಬಂಧಿಸಬೇಕೆಂದು ಭಾರತವನ್ನು ಚೀನಾ ಒತ್ತಾಯಿಸತೊಡಗಿದೆ.

ಇದೊಂದು ಸೂಕ್ಷ್ಮವಾದ ರಾಜಕೀಯ ಪ್ರಶ್ನೆ. ಸ್ವಾತಂತ್ರ್ಯನಂತರದಿಂದಲೂ ಭಾರತ – ಚೀನಾ ಸಂಬಂಧ ಅಷ್ಟೊಂದು ಸೌಹಾರ್ದಯುತವಾಗಿಲ್ಲ. ಚೀನಾದ ಸಾಮ್ರಾಜ್ಯಶಾಹಿ ಧೋರಣೆಗೆ ಭಾರತ ಎಂದೂ ಸೊಪ್ಪುಹಾಕದಿರುವುದೇ ಚೀನಾದ ಅಸಮಾಧಾನಕ್ಕೆ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ.

1959ರಲ್ಲಿ ಚೀನಾದ ದಬ್ಬಾಳಿಕೆಯನ್ನು ಸಹಿಸಲಾಗದೆ ಸಹಸ್ರಾರು ಟಿಬೆಟಿಯನ್ನರು ಭಾರತಕ್ಕೆ ನಿರಾಶ್ರಿತರಾಗಿ ಬಂದರು. ಇಂದು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಟಿಬೆಟಿಯನ್ ನಿರಾಶ್ರಿತರು ಭಾರತ, ನೇಪಾಳ, ಭೂತಾನ, ಸಿಕ್ಕಿಂಗಳಲ್ಲಿ ಹಂಚಿಹೋಗಿದ್ದಾರೆ. ಅವರು ತಮ್ಮ ದೇಶ ಚೀನಿಯರ ಹಿಡಿತದಿಂದ ತಪ್ಪಿಸಿಕೊಳ್ಳುವುದನ್ನು ಆಸೆಗಣ್ಣುಗಳಿಂದ ನಿರೀಕ್ಷಿಸುತ್ತಿದ್ದಾರೆ. ಇವರೆಲ್ಲರ ಪ್ರತಿನಿಧಿಯಾಗಿ ದಲ್ಯಾಲಾಮ ಅವರು ಟಿಬೆಟ್‌ನ ವಿಮೋಚನೆಗಾಗಿ ಪ್ರಯತ್ನಗಳನ್ನು ನಡೆಸುತ್ತಲೇ ಇದ್ದಾರೆ.

ಪ್ರಸ್ತುತ ಅವರು ಅಮೆರಿಕಾಕ್ಕೆ ತೆರಳಿದ್ದಾರೆ. ಅಲ್ಲಿ ಅವರು ರೇಗನ್‌ರನ್ನು ಭೇಟಿಯಾಗಿದ್ದಾರೆಂಬ ಸುದ್ದಿ ಚೀನಿ ಸಾಮ್ರಾಜ್ಯಶಾಹಿಗಳ ಕಣ್ಣು ಉರಿಗೆ ಕಾರಣವಾಗಿದೆ. ಟಿಬೆಟಿಯನ್ನರು ಅಮೆರಿಕದ ನೆರವು ಪಡೆದು [illegible] ಅರಿವು ಚೀನಾಕ್ಕೆ ಇದೆ.

ಆದರೆ ದಲ್ಯಾಲಾಮ ಅವರು ತಮ್ಮ 'ರಾಜಕೀಯ ಹೇಳಿಕೆ'ಗಳನ್ನು ಪತ್ರಿಕೆಗಳಿಗೆ ನೀಡದಂತೆ ನಿರ್ಬಂಧಿಸಬೇಕೆಂದು ಚೀನಾ ಸರ್ಕಾರ ಭಾರತ ಸರ್ಕಾರಕ್ಕೆ ತಿಳಿಸಿರುವುದರಲ್ಲಿ ಯಾವುದೇ ಅರ್ಥವಿಲ್ಲ. ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ. ಚೀನಾ ಪಟ್ಟಭದ್ರರ ಮೂಗಿನ ನೇರಕ್ಕೆ ನಮ್ಮ ಪತ್ರಿಕಾ ಧರ್ಮವನ್ನು ತಿರುಚಿಕೊಳ್ಳುವುದು ಅಸಾಧ್ಯ. ಚೀನಾದಲ್ಲಿ ಮಾನವ ಹಕ್ಕುಗಳ ಧ್ವನಿಗಳನ್ನು ಅದುಮಿ ಇಟ್ಟಂತೆ ಇಲ್ಲಿ ಅದುಮಲು ಸಾಧ್ಯವಿಲ್ಲ. ಇದನ್ನು ಚೀನಾ ಸರ್ಕಾರ ಮೊದಲು ಅರಿತುಕೊಳ್ಳಲಿ.

1,221,700 ಚದರ ಕಿ.ಮೀ.ಯಷ್ಟು ವಿಸ್ತಾರದ ಭೂಪ್ರದೇಶವನ್ನು ಹೊಂದಿರುವ ಈ ಗುಡ್ಡಗಾಡು ನಾಡಿನ ಜನಸಮುದಾಯ ಒಂದೇ ಜನಾಂಗಕ್ಕೆ ಸೇರಿದ,ಒಂದೇ ಸಂಸ್ಕೃತಿ ಮತ್ತು ಭಾಷೆಯನ್ನೊಂದಿದೆ. ಇದು ಹಿಮಾಲಯ ಶ್ರೇಣಿಗಳ ನಡುವೆ ಅತ್ಯಂತ ಆಯಕಟ್ಟಿನ ಪ್ರದೇಶದಲ್ಲಿದೆ. ರಕ್ಷಣಾ ದೃಷ್ಟಿಯಿಂದ ಅತ್ಯಂತ ಮಹತ್ವದ ಭೂಪ್ರದೇಶವಾಗಿರುವ ಟಿಬೆಟ್‌ನ ಮೇಲೆ ಮೊದಲಿನಿಂದಲೂ ಕಣ್ಣಿಟ್ಟಿದ್ದ ಚೀನಾ ಅತ್ಯಂತ ವ್ಯವಸ್ಥಿತವಾಗಿ ಇಲ್ಲಿ ತನ್ನ ಹಿಡಿತವನ್ನು ಸಾಧಿಸಿಕೊಂಡುಬಿಟ್ಟಿದೆ. ಇಲ್ಲಿಯ ವಿಶಿಷ್ಟ ಜನಾಂಗದ ಸಂಸ್ಕೃತಿಯ ಮೇಲೆ ಚೀನಾ ತನ್ನ ಅಭಿಪ್ರಾಯಗಳನ್ನು ಬಲವಂತವಾಗಿ ಹೇರಿದೆ. ಇದು ನಿಜಕ್ಕೂ ಖಂಡನಾರ್ಹ.

ಇದರ ವಿರುದ್ಧ ಪ್ರತಿಭಟನೆ ವ್ಯಕ್ತವಾದಾಗಲೆಲ್ಲಾ ಚೀನಾ ನಿರ್ದಯವಾಗಿ ಅವನ್ನು ದಮನಿಸುತ್ತಾ ಬಂದಿದೆ. ಇತ್ತೀಚೆಗೆ ಪ್ರತಿಭಟನೆ ತೀವ್ರವಾಗತೊಡಗಿದೆ. ಇದರ ಬಗ್ಗೆ ವರದಿ ಮಾಡಲು ಟಿಬೆಟ್‌ಗೆ ತೆರಳಿದ್ದ 15 ವಿದೇಶಿ ಪತ್ರಕರ್ತರನ್ನು ಚೀನಾ ಹೊರಗಟ್ಟಿದೆ. ಟಿಬೆಟಿನ ಯಾವುದೇ ಆಗುಹೋಗುಗಳು ಹೊರ ಜಗತ್ತಿಗೆ ಗೊತ್ತಾಗದಂತಹ ಪರಿಸ್ಥಿತಿಯನ್ನು ಉಂಟು ಮಾಡಿದೆ. ಇದು ತಪ್ಪು.

ಇದು ನಮಗೆ ಹೊಸತೇನೂ ಅಲ್ಲ. 1963ರಿಂದ 1971ರವರೆಗೆ ನೇಪಾಳದ ಕೆಲವೇ ಕೆಲವು ವರ್ತಕರನ್ನು ಹೊರತುಪಡಿಸಿ ಬೇರೆ ಯಾರೊಬ್ಬರೂ ಟಿಬೆಟ್‌ನ ಒಳ ಪ್ರವೇಶಿಸದಂತೆ ನಿರ್ಬಂಧಿಸಲಾಗಿತ್ತು. ಈಗ ಮತ್ತೆ ಅದರ ಪುನರಾವರ್ತನೆಯಾಗಿದೆ ಅಷ್ಟೆ.

1965ರಿಂದ ಟಿಬೆಟ್‌ನಲ್ಲಿ ತನ್ನದೇ ಆದ ಸರ್ಕಾರ ಒಂದನ್ನು ಸ್ಥಾಪಿಸಿ ಸೇನಾಧಿಕಾರಿಯೊಬ್ಬರ ಮೂಲಕ ಚೀನಾ ಅಲ್ಲಿ ತನ್ನ ಆಡಳಿತ ನಡೆಸುತ್ತಿದೆ. ಆ ಭೂಪ್ರದೇಶದ ಜನರ ಮೇಲೆ ದಬ್ಬಾಳಿಕೆ ನಡೆಸುತ್ತಾ ಬಂದಿದೆ.

ಈ ದಬ್ಬಾಳಿಕೆ ಅಸಹನೀಯವಾಗಿರುವ ಪರಿಸ್ಥಿತಿ ನಿರ್ಮಾಣಗೊಂಡಿರುವುದರಿಂದಲೇ ಟಿಬೆಟ್‌ನ ಒಳಗೂ ಹೊರಗೂ ಪ್ರತಿಭಟನೆಯ ಸೊಲ್ಲು ಕೇಳಿ ಬರುತ್ತಿದೆ. ಮಾನವೀಯ ನೆಲೆಯಲ್ಲಿ ಚೀನಾದ ಈ ಸಾಮ್ರಾಜ್ಯಶಾಹಿ ಧೋರಣೆ ಅಕ್ಷಮ್ಯ. ಅನಗತ್ಯವಾಗಿ ಅಂತರರಾಷ್ಟ್ರೀಯ ಮಟ್ಟದ ರಾಜಕಾರಣದಲ್ಲಿ ಗೊಂದಲಗಳನ್ನು ಹುಟ್ಟುಹಾಕುತ್ತಿದೆ.

ಇನ್ನಾದರೂ ಚೀನಾ ತನ್ನ ಸಾಮ್ರಾಜ್ಯಶಾಹಿ ಧೋರಣೆಯಿಂದ ಹೊರಬಂದು ಟಿಬೆಟ್ ಸಮಸ್ಯೆಗೆ ಮಾನವೀಯ ನೆಲೆಯಲ್ಲಿ ಪರಿಹಾರ ಹುಡುಕಲಿ ಅಂದರೆ ಆ ದೇಶದ ಮೇಲಿನ ತನ್ನ ಹಿಡಿತವನ್ನು ಕೊನೆಗೊಳಿಸಲಿ.

ಮುಂಗಾರು

ಶುಕ್ರವಾರ, ಅಕ್ಟೋಬರ್ 16, 1987

ಅನಗತ್ಯ ಆರೋಪ ಬೇಡ

ಪಾಕಿಸ್ತಾನಕ್ಕೆ ಅಮೆರಿಕ ನೀಡಲು ಉದ್ದೇಶಿಸಿರುವ ಮಿಲಿಟರಿ ಹಾಗೂ ಹಣಕಾಸಿನ ನೆರವನ್ನು ತಡೆಹಿಡಿಯಲು ಕಾರಣವಾದ 'ಪರ್ವೇಜ್ ಪ್ರಕರಣ'ದ ಹಿಂದೆ ಭಾರತದ ಕೈವಾಡವಿದೆ ಎಂದು ಪಾಕಿಸ್ತಾನದ ಪ್ರಧಾನಿ ಮಹಮ್ಮದ್‌ಖಾನ್ ಜುನೇಜೊ ಆರೋಪಿಸಿದ್ದಾರೆ. ಇದು ನಿಜಕ್ಕೂ ಕ್ಷುಲ್ಲಕ ಆಪಾದನೆ ಎಂಬುದು ಸ್ಪಷ್ಟ. ತಾನು ಮಾಡಿರುವ ತಪ್ಪನ್ನು ಹೇಗಾದರೂ ಮಾಡಿ ಇನ್ನೊಬ್ಬರ ತಲೆಗೆ ವರ್ಗಾಯಿಸಿ ಅಮೆರಿಕದ ಮನ ಒಲಿಸಿಕೊಳ್ಳುವುದಕ್ಕಾಗಿ ಪಾಕಿಸ್ತಾನ ನಡೆಸುತ್ತಿರುವ ತಂತ್ರಗಾರಿಕೆ ಇದು ಎಂಬುದು ಇದರಿಂದ ಗೊತ್ತಾಗುತ್ತದೆ.

ಪರಮಾಣು ಶಸ್ತ್ರಾಸ್ತ್ರಗಳನ್ನು ತಯಾರಿಸಲು ಪಾಕಿಸ್ತಾನಕ್ಕೆ ಅಮೆರಿಕ ಭಾರಿ ಪ್ರಮಾಣದ ನೆರವು ನೀಡುತ್ತಿತ್ತು ಮತ್ತು ಇದಕ್ಕೆ ಸಂಬಂಧಿಸಿದಂತೆ ಪರಮಾಣು ತಯಾರಿಕಾ ಕಾರ್ಯಕ್ರಮ ಒಂದನ್ನು ಕೂಡಾ ರೂಪಿಸಿತ್ತು. ಆದರೆ ಈ ನಡುವೆ ಅಮೆರಿಕದ ಗಮನಕ್ಕೆ ಬಾರದಂತೆ ಪಾಕಿಸ್ತಾನ ಇನ್ನೂ ಭಾರಿ ಪ್ರಮಾಣದ ಪರಮಾಣು ಶಸ್ತ್ರಾಸ್ತ್ರಗಳನ್ನು ತಯಾರಿಸುವ ಯೋಜನೆ ಹಾಕಿಕೊಂಡಿದ್ದನ್ನು ಅಮೆರಿಕದ ಗೂಢಚಾರರು ಆಧಾರ ಸಹಿತ ಪತ್ತೆ ಮಾಡಿಬಿಟ್ಟರು.

ಪಾಕಿಸ್ತಾನದ ನಾಗರಿಕ ಅರ್ಷದ್ ಪರ್‌ವೇಜ್ ಎಂಬಾತ ತನ್ನ ದೇಶಕ್ಕೆ ಅಮೆರಿಕದಿಂದ ಪರಮಾಣು ಶಸ್ತ್ರಾಸ್ತ್ರಗಳ ತಯಾರಿಕಾ ಸಾಮಗ್ರಿಗಳ ಕಳ್ಳಸಾಗಾಟ ನಡೆಸುತ್ತಿದ್ದಾಗ ಆತನನ್ನು ಅಮೆರಿಕದ ಪೊಲೀಸರು ಫಿಲಿಡೆಲ್ಫಿಯಾದಲ್ಲಿ ಬಂಧಿಸಿದರು. ಇದರಿಂದ ಪಾಕಿಸ್ತಾನ ಅಮೆರಿಕಕ್ಕೆ ನಡೆಸಿದ ವಿಶ್ವಾಸದ್ರೋಹ ಬಹಿರಂಗಗೊಂಡಿತು. ಇದರಿಂದ ಅಸಮಧಾನಗೊಂಡ ಅಮೆರಿಕ ಸರ್ಕಾರ ಈ ಬಗ್ಗೆ ತನಿಖೆ ನಡೆಸುವ ಕಾರಣವನ್ನೊಡ್ಡಿ ಈ ಮೊದಲೇ ನಿಯೋಜಿತವಾಗಿದ್ದ ಪರಮಾಣು ಕಾರ್ಯಕ್ರಮಕ್ಕೆ ನೆರವು ನೀಡುವುದನ್ನು ಮುಂದೂಡಿತು.

ಪಾಕಿಸ್ತಾನ ತಪ್ಪು ಮಾಡಿ ಆಧಾರ ಸಹಿತ ಸಿಕ್ಕಿಕೊಂಡಿತು. ಈ ಘಟನೆಯಿಂದ ಗಳಸ್ಯ ಕಂಠಸ್ಯವಾಗಿದ್ದ ಅಮೆರಿಕ-ಪಾಕ್ ಸಂಬಂಧದ ನಡುವೆ ಬಿರುಕು ಬಿಟ್ಟಿತು. ತನ್ನ ಮಿಲಿಟರಿ ಬಲವರ್ಧನೆಗೆ ಅಮೆರಿಕವನ್ನೇ ನಂಬಿಕೊಂಡಿರುವ ಪಾಕಿಸ್ತಾನಕ್ಕೆ ಈ ಘಟನೆಯಿಂದ ಭಾರಿ ಪೇಚಿಗಿಟ್ಟುಕೊಂಡಿತು.

ಅಮೆರಿಕದ ನೆರವಿನ ಮಿತಿಯನ್ನೂ ಮೀರಿ ಅದರ ಗಮನಕ್ಕೇ ಬಾರದಂತೆ ತಾನೇ ಭಾರಿ ಪ್ರಮಾಣದ ಪರಮಾಣು ಶಸ್ತ್ರಾಸ್ತ್ರಗಳನ್ನು ತಯಾರಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದ ಪಾಕಿಸ್ತಾನದ ಸಂಚು ನಿಜಕ್ಕೂ ಹೇಯವಾದುದು ಮತ್ತು ಮನುಕುಲವನ್ನು ವಿನಾಶದ ಅಂಚಿಗೆ ಕೊಂಡೊಯ್ಯಲು ತೋರಿದ ಆತುರವಾಗಿದೆ, ಅಷ್ಟೆ.

ಪರಮಾಣು ಶಸ್ತ್ರಾಸ್ತ್ರಗಳನ್ನು ಯಾರೇ ತಯಾರಿಸಿದರೂ ಅದು ಮಾನವೀಯ ನೆಲೆಯಲ್ಲಿ ಭಾರಿ ತಪ್ಪಾಗುತ್ತದೆ. ಅಮೆರಿಕ ತನ್ನ ಸಾಮ್ರಾಜ್ಯಶಾಹಿ ದಾಹದಿಂದ ಸಣ್ಣಪುಟ್ಟ ದೇಶಗಳನ್ನೆಲ್ಲಾ ತನ್ನ ಕಪಿಮುಷ್ಟಿಯೊಳಗೆ ಇರಿಸಿಕೊಳ್ಳುವ ನಿಟ್ಟಿನಲ್ಲಿ ಅಲ್ಲಿಗೆ ಅದು ಪರಮಾಣು ಶಸ್ತ್ರಾಸ್ತ್ರಗಳ ನೆರವು ನೀಡುತ್ತಿದೆ. ಇದು ಮನುಕುಲವನ್ನು ದುರಂತದ ಅಂಚಿಗೆ ತಳ್ಳುವಂತಹದ್ದೆಂದು ಮಾನವತೆಯನ್ನು ಪ್ರೀತಿಸುವ ಎಲ್ಲರೂ ಸಾರಿ ಸಾರಿ ಹೇಳುವಂತಹದ್ದಾಗಿದೆ.

ಪಾಕಿಸ್ತಾನ ಏಷ್ಯಾ ಖಂಡದ ಆಯಕಟ್ಟಿನ ಪ್ರದೇಶದಲ್ಲಿದೆ. ಈ ದೇಶವನ್ನು ತನ್ನ ರಕ್ಷಣಾ ನೆಲೆಯನ್ನಾಗಿ ಮಾಡಿಕೊಳ್ಳಲು ಅಮೆರಿಕಾ ಬಹಳ ಹಿಂದಿನಿಂದಲೂ ಪ್ರಯತ್ನಗಳನ್ನು ನಡೆಸಿಕೊಂಡು ಬಂದಿದೆ. ಅದರಲ್ಲಿ ಸಫಲತೆಯನ್ನೂ ಕಂಡಿದೆ. ಇದರ ಅರಿವು ಪಾಕ್‌ಗೆ ಬಾರದಿರುವುದು ಆ ದೇಶದ ಜನಗಳ ದುರಂತವಾಗಿದೆ.

ಪಾಕಿಸ್ತಾನದ ಒಳಗೆ ಅಮೆರಿಕದ ಕಣ್ಣು ತಪ್ಪಿಸಿ ಇನ್ನೂ ಭಾರಿ ಪ್ರಮಾಣದ ಪರಮಾಣು ಶಸ್ತ್ರಾಸ್ತ್ರಗಳನ್ನು ತಯಾರಿಸುವ ಹುನ್ನಾರದಲ್ಲಿದ್ದ ಪಾಕ್ ನೇರವಾಗಿಯೇ ಸಿಕ್ಕಿಬಿದ್ದಿದೆ. ಈಗ ಅದು ಬೇರೆ ದಾರಿ ಕಾಣದೆ ತನ್ನ ತಪ್ಪನ್ನು ಮುಚ್ಚಿಟ್ಟು ಭಾರತದ ಮೇಲೆ ಗೂಬೆ ಕೂರಿಸುವ ಪ್ರಯತ್ನ ನಡೆಸಿದೆ. ಇದು ತೀರಾ ಸಣ್ಣತನದ ಪರಮಾವಧಿ. ಭಾರತ-ಪಾಕ್ ನಡುವಣ ಸಂಬಂಧ ಹಿಂದಿನಿಂದಲೂ ಸೌಹಾರ್ದಮಯವಾಗೇನೂ ಇಲ್ಲ. ಈಗ ಮತ್ತೆ ಆ ಸಂಬಂಧಗಳ ನಡುವಣ ಬಿರುಕನ್ನು ಹೆಚ್ಚು ಮಾಡಲು ಇಂತಹ ಪ್ರಕರಣಗಳು ಕಾರಣವಾಗುತ್ತವೆ.

ಅದಕ್ಕಾಗಿ 'ಪರ್ವೇಜ್ ಪ್ರಕರಣ'ಕ್ಕೆ ಪಾಕಿಸ್ತಾನ ಬೇರೆಯೇ ಆಯಾಮ ನೀಡಲು ಯತ್ನಿಸಿದೆ. ಪಾಕ್-ಅಮೆರಿಕ ಸಂಬಂಧದ ನಡುವೆ ಹುಳಿ ಹಿಂಡಲು ಭಾರತ ನಡೆಸಿದ ಕುತಂತ್ರ ಇದಾಗಿದೆ ಎಂದು ಅದು ಇತ್ತೀಚೆಗೆ ರಾಗ ಎಳೆಯತೊಡಗಿದೆ. ಇದು ತೀರಾ ಬಾಲಿಶ ಹೇಳಿಕೆ. ಅಮೆರಿಕವಂತೂ ಇದನ್ನು ನಂಬಲು ಸಾಧ್ಯವಿಲ್ಲ. ಏಕೆಂದರೆ ಸತ್ಯ ಅವರ ಕಣ್ಣ ಮುಂದಿದೆ. ಈಗ ಜುನೇಜೊ ಹೇಳಿಕೆ 'ಕೈಲಾಗದವನು ಮೈ ಪರಚಿಕೊಂಡಂತೆ' ಆಗಿದೆ ಅಷ್ಟೆ.

ಜುನೇಜೊ ಅವರ ಹೇಳಿಕೆಯ ಬಗ್ಗೆ ಭಾರತದ ಪ್ರತಿಕ್ರಿಯೆ ಸಮಂಜಸವಾಗಿದೆ. "ಪ್ರತಿಕ್ರಿಯೆಗೆ ಅನರ್ಹವಾಗಿರುವಂತಹ ಗೇಲಿಯ ಹೇಳಿಕೆ ಇದಾಗಿದೆ" ಎಂದು ಭಾರತ ಅಭಿಪ್ರಾಯ ಪಟ್ಟಿರುವುದು ಅರ್ಥಪೂರ್ಣ.

ಈ ಕಳ್ಳಸಾಗಾಣಿಕೆಯ ಪ್ರಕರಣದಲ್ಲಿ ಶಾಮೀಲಾಗಿ ವಿಚಾರಣೆಗಾಗಿ ಅಮೆರಿಕಕ್ಕೆ ಬೇಕಾಗಿರುವ ಪಾಕಿಸ್ತಾನದ ಮಾಜಿ ಬ್ರಿಗೇಡಿಯರ್ ಇನಾಮತ್ ಉಲ್ ಹಕ್ ಅವರ ವಿಳಾಸ ಪಾಕಿಸ್ತಾನ ಸರ್ಕಾರಕ್ಕೆ ಗೊತ್ತಿದ್ದರೂ ಆತನನ್ನು ಇನ್ನೂ ಬಂಧಿಸದಿರಲು ಕಾರಣವಾದರೂ ಏನು ಎಂಬ ಬಗ್ಗೆಯಾದರೂ ಪಾಕ್ ಸರ್ಕಾರ ನಿಖರವಾದ ಸ್ಪಷ್ಟೀಕರಣ ನೀಡಬೇಕಿತ್ತು. ಅದನ್ನೂ ಮಾಡಲು ಹಿಂದೇಟು ಹೊಡೆಯುತ್ತಿರುವ ಅದು ಅನಗತ್ಯವಾಗಿ ಈ ಪ್ರಕರಣದೊಳಗೆ ಭಾರತವನ್ನು ಎಳೆದು ಪ್ರಕರಣವನ್ನೆ ಗೋಜಲುಗೊಳಿಸಿ ತಾನು ಪಾರಾಗುವ ಭಾರಿ ಹವಣಿಕೆಯಲ್ಲಿರುವಂತಿದೆ. ಇದು ಪಾಕಿಸ್ತಾನದ ಧೂರ್ತತನವಾಗಿದೆ. ಈ ಧೂರ್ತತನಕ್ಕೆ ಚಾಣಾಕ್ಷರಾದ ಅಮೆರಿಕನ್ನರು ಬಲಿಬೀಳಲಿಕ್ಕಿಲ್ಲವಾದರೂ ಭಾರತದ ಹೆಸರಿಗೆ ಅನಗತ್ಯವಾಗಿ ಮಸಿ ಬಳಿಯುವ ಈ ಪ್ರಯತ್ನ ಮಾತ್ರ ಖಂಡನಾರ್ಹ.

ಮುಂಗಾರು

ಗುರುವಾರ, ಅಕ್ಟೋಬರ್

ಪ್ರಧಾನಿ ಮಾತು ಅರ್ಥಪೂರ್ಣ

ಫಿಜಿಯಲ್ಲಿ ಪ್ರಜಾಪ್ರಭುತ್ವ, ಸಾಮರಸ್ಯ ಮತ್ತು ನಾಗರಿಕ ಆಡಳಿತ ಸ್ಥಾಪನೆಯಾಗಬೇಕೆಂದು ಪ್ರಧಾನಿ ರಾಜೀವ್‌ಗಾಂಧಿಯವರು ವ್ಯಾಂಕೋವರ್‌ನಲ್ಲಿ ನಡೆಯುತ್ತಿರುವ 26ನೇ ಕಾಮನ್‌ವೆಲ್ತ್ ಶೃಂಗ ಸಮ್ಮೇಳನದ ಉದ್ಘಾಟನಾ ಅಧಿವೇಶನದಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ. ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದ ಪ್ರಧಾನಿಯಾಗಿ ಅವರು ಸಮುರ್ಪಕವಾದ ದಿಟ್ಟತನದ ಮಾತನ್ನೇ ಆಡಿದ್ದಾರೆ. ಫಿಜಿಯಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸಬೇಕೆಂದು ಅವರು ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ನೀಡಿದ ಕರೆ ಬಹಳ ಅರ್ಥಪೂರ್ಣವಾದುದು.

ಶಾಂತ ಸಾಗರದ ನೈರುತ್ಯ ಭಾಗದ ಆಯಕಟ್ಟಿನ ಪ್ರದೇಶದಲ್ಲಿರುವ ಫಿಜಿದ್ವೀಪಸ್ತೋಮಪ್ರಸ್ತುತ ಗೊಂದಲಗಳ ಆಗರವಾಗಿದೆ. ಈ ದ್ವೀಪಸ್ತೋಮದ ಒಟ್ಟು ಜನಸಂಖ್ಯೆಯ ಅರ್ಧಕ್ಕೂ ಹೆಚ್ಚು ಮಂದಿ ಭಾರತೀಯ ಮೂಲದವರಾಗಿದ್ದಾರೆ. 1874ರಲ್ಲಿ ಈ ಪ್ರದೇಶ ಬ್ರಿಟಿಷರ ಅಧಿಪತ್ಯಕ್ಕೆ ಒಳಪಟ್ಟಿತು. ನಂತರ 1879ರಿಂದ ಬ್ರಿಟಿಷರು ಅಲ್ಲಿ ತಾವು ಆರಂಭಿಸಿದ ಕಬ್ಬಿನ ಕೃಷಿಗಾರಿಕೆಯಲ್ಲಿ ಕೆಲಸ ಮಾಡಲು ಕಾರ್ಮಿಕರನ್ನು ಭಾರತದಿಂದ ಅಪಾರ ಸಂಖ್ಯೆಯಲ್ಲಿ ಕರೆದೊಯ್ದರು. 1970ರಲ್ಲಿ ಫಿಜಿ ಸ್ವತಂತ್ರ ರಾಷ್ಟ್ರವಾಯಿತು. ಅದಾಗಲೇ ಭಾರತೀಯ ಮೂಲದ ಫಿಜಿಯನ್ನರೆಲ್ಲಾ ತಮ್ಮ ಕಷ್ಟ ಸಹಿಷ್ಣುತೆ, ಶ್ರಮದ ದುಡಿತಗಳಿಂದ ಆರ್ಥಿಕವಾಗಿ ಬಹಳ ಮೇಲೆ ಏರಿದ್ದರು.

ಇದನ್ನು ಸಹಿಸದ ಫಿಜಿಯ ಮೂಲನಿವಾಸಿಗಳು ಭಾರತೀಯ ಮೂಲದವರ ಮೇಲೆ ಕೆಂಗಣ್ಣು ಬೀರತೊಡಗಿದರು. ಭಾರತೀಯ ಮೂಲದವರು ರಾಜಕೀಯವಾಗಿಯೂ ಅಲ್ಲಿ ಬಲಿಷ್ಠವಾಗ ತೊಡಗಿದಂತೆ, ಇತ್ತೀಚೆಗೆ ರಬೂಕ ಎಂಬ ವ್ಯಕ್ತಿ ಸೇನೆಯ ನೆರವಿನಿಂದ ಅಲ್ಲಿನ ಪ್ರಜಾಪ್ರಭುತ್ವ ಸರಕಾರವನ್ನು ಬದಿಗೆ ತಳ್ಳಿ ತನ್ನ ನಿರಂಕುಶ ಪ್ರಭುತ್ವ ನಡೆಸುತ್ತಿದ್ದಾರೆ. ಈ ಸೇನಾಡಳಿತದ ಮೂಲಕ ರಬೂಕ ಭಾರತೀಯ ಮೂಲದವರ ಆರ್ಥಿಕ ಮತ್ತು ರಾಜಕೀಯ ಚಟುವಟಿಕೆಗಳನ್ನು ತುಳಿಯಲಾರಂಭಿಸಿದ್ದಾರೆ. ಇದು ನಿಜಕ್ಕೂ ತಪ್ಪು.

ಭಾರತೀಯ ಸಂಜಾತರು ಈ ದ್ವೀಪಸ್ತೋಮದ ಆರ್ಥಿಕಾಭಿವೃದ್ಧಿಗೆ ಸಲ್ಲಿಸಿದ ಕಾಣಿಕೆ ಉನ್ನತವಾದುದು. ಅದನ್ನು ಫಿಜಿಯ ಮೂಲನಿವಾಸಿಗಳು ತಿಳಿದುಕೊಳ್ಳಬೇಕಿತ್ತು. ಶತಮಾನಗಳಿಂದ ಫಿಜಿ ಮಣ್ಣಿನಲ್ಲೇ ತಮ್ಮ ಬದುಕನ್ನು ರೂಪಿಸಿಕೊಂಡಿರುವ ಇವರನ್ನು ಫಿಜಿ ಮೂಲದವರು ಪರಕೀಯರಂತೆ ಕಾಣುತ್ತಿರುವುದು ಅವರ ಸಣ್ಣತನದ ಪರಮಾವಧಿ ಅಷ್ಟೆ. ಅದನ್ನು ಅವರು ಅರಿತು ಕೊಳ್ಳಬೇಕಿತ್ತು.

ಫಿಜಿಯ ಮೂಲನಿವಾಸಿಗಳು ಆ ದೇಶದಲ್ಲಿ ಭಾರತೀಯ ಮೂಲದವರ ಹಕ್ಕುಗಳನ್ನು ದಮನ ಮಾಡುವುದನ್ನು ಜಗತ್ತಿನ ಎಲ್ಲಾ ರಾಷ್ಟ್ರಗಳು ಖಂಡಿಸಬೇಕಿದೆ. ಅದರಲ್ಲೂ ವಿಶೇಷವಾಗಿ ಕಾಮನ್‌ವೆಲ್ತ್ ರಾಷ್ಟ್ರಗಳು ಈ ನಿಟ್ಟಿನಲ್ಲಿ ಗಮನ ಹರಿಸಬೇಕಿದೆ. ಬ್ರಿಟಿಷರು ಆಸ್ಟ್ರೇಲಿಯವನ್ನು ತಮ್ಮ ಅಧಿಪತ್ಯಕ್ಕೆ ಒಳಪಡಿಸಿಕೊಂಡ ನಂತರ ಅಲ್ಲಿ ಲಕ್ಷಾಂತರ ಬಿಳಿಯರು ಹೋಗಿ ನೆಲೆ ನಿಂತರು. ಅದೇ ರೀತಿ ಅಮೆರಿಕಾದಲ್ಲಿ ಯುರೋಪಿಯನ್ನರು ನೆಲೆ ನಿಂತರು. ಫಿಜಿಯನ್ನರ ದೃಷ್ಟಿಯಲ್ಲೇ ನೋಡುವುದಾದರೆ ಈಗ ಬಿಳಿಯರಿಗೂ ಆ ಪ್ರದೇಶದಲ್ಲಿ ಬದುಕುವ ಹಕ್ಕು ಇರುವುದಿಲ್ಲವಲ್ಲ!

ಫಿಜಿಯನ್ನರ ಇಂತಹ ಜನಾಂಗೀಯ ನಿಲುವಿನ ಬಗ್ಗೆ ರಾಜೀವ್‌ಗಾಂಧಿಯವರು ಕಾಮನ್‌ವೆಲ್ತ್ ರಾಷ್ಟ್ರಗಳ ವರಿಷ್ಠರ ಸಮಾವೇಶದಲ್ಲಿ ದಿಟ್ಟವಾಗಿ ಪ್ರತಿಭಟಿಸಿ ಮಾತನಾಡಿದುದು ನಿಜಕ್ಕೂ ಅರ್ಥಪೂರ್ಣವಾಗಿದೆ. ಕಾಮನ್‌ವೆಲ್ತ್ ವರಿಷ್ಠರು. ದ. ಆಫ್ರಿಕಾದಲ್ಲಿ ಬಿಳಿಯರ ದಬ್ಬಾಳಿಕೆಯನ್ನು ಖಂಡಿಸುವಷ್ಟೇ ಫಿಜಿಯಲ್ಲಿ ಭಾರತೀಯ ಸಂಜಾತರ ಮೇಲೆ ನಡೆಯುತ್ತಿರುವ ರಬೂಕ ನೇತೃತ್ವದ ನಿರಂಕುಶ ಪ್ರಭುತ್ವದ ದಬ್ಬಾಳಿಕೆಯನ್ನೂ ಖಂಡಿಸಬೇಕಿದೆ.

ಫಿಜಿಯನ್ನರ ಇಂತಹ ವಿವೇಚನಾರಹಿತ ಧೋರಣೆಯ ವಿರುದ್ಧ ಇಂಗ್ಲೆಂಡ್ ಇಷ್ಟರಲ್ಲೇ ದಂಡನೆ ವಿಧಿಸಬೇಕಿತ್ತು. ಅದಕ್ಕೆ ಆ ಅವಕಾಶ ಇದೆ. ಫಿಜಿಯ ಗವರ್ನರ್ ಜನರಲ್ ಇಂದಿಗೂ ಬ್ರಿಟಿಷ್ ಅರಸೊತ್ತಿಗೆಯ ಪ್ರತಿನಿಧಿ. ಬ್ರಿಟಿಷ್ ಪ್ರಭುತ್ವದ ಮಾತಿಗೆ ಇಂದಿಗೂ ಅಲ್ಲಿ ಮಾನ್ಯತೆ ಇದೆ. ಇಂತಹದರಲ್ಲೂ ಇಂಗ್ಲೆಂಡ್ ಈ ಬಗ್ಗೆ ಇನ್ನೂ ಯಾವುದೇ ಪ್ರತಿಕ್ರಿಯೆ ನೀಡದಿರುವುದು ಅದರ ಸೋಗಲಾಡಿತನಕ್ಕೆ ಸಾಕ್ಷಿಯಾಗಿದೆ. ಇನ್ನಾದರೂ ಅದು ತನ್ನ ಈ ಜಡ ನಿಲುವಿಗೆ ಅಂಟಿಕೊಳ್ಳದೆ ಫಿಜಿ ಮೂಲದವರ ಜನಾಂಗೀಯ ದ್ವೇಷದ ವಿರುದ್ಧ ಕ್ರಮ ಕೈಗೊಳ್ಳಲಿ.

ಈವಾಗಲೆ ಆ ದ್ವೀಪಸ್ತೋಮದಲ್ಲಿ ಪ್ರಜಾಪ್ರಭುತ್ವ ಉರುಳಿ ರಬೂಕ ಎಂಬ ವ್ಯಕ್ತಿಯ ನಿರಂಕುಶ ಪ್ರಭುತ್ವ ನಡೆಯುತ್ತಿದೆ. ಇದರ ವಿರುದ್ಧ ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲಾ ಮಾನವೀಯ ನೆಲೆಯಲ್ಲಿ ಪ್ರತಿಭಟಿಸಬೇಕಿದೆ. ಕಾಮನ್‌ವೆಲ್ತ್ ಒಕ್ಕೂಟ 40 ರಾಷ್ಟ್ರಗಳ ಸದಸ್ಯತ್ವವನ್ನು ಹೊಂದಿದೆ. ಈ ಸಮಾವೇಶದಲ್ಲಿ ಎಲ್ಲರೂ ಒಮ್ಮತಕ್ಕೆ ಬಂದು ಫಿಜಿಯ ನಿರಂಕುಶ ಪ್ರಭುತ್ವದ ವಿರುದ್ಧ ಪ್ರತಿಭಟಿಸಬೇಕಾದ ಅನಿವಾರ್ಯತೆ ಇದೆ.

ಕಾಮನ್‌ವೆಲ್ತ್ ಒಕ್ಕೂಟ ಒಂದೇ ದೃಢ ನಿಲುವು ತೆಗೆದುಕೊಂಡು ಫಿಜಿ ಇದೇ ತೆರನಾದ ಧೋರಣೆಯನ್ನು ಮುಂದುವರಿಸಿದರೆ 'ಆರ್ಥಿಕ ದಿಗ್ಬಂಧನ' ಹೇರುವ ಬೆದರಿಕೆಯನ್ನೂ ನೀಡಬೇಕಿದೆ. ಈ ನಿಟ್ಟಿನಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳ ವರಿಷ್ಠರೆಲ್ಲಾ ಪ್ರಾಮಾಣಿಕವಾಗಿ ಸ್ಪಂದಿಸಬೇಕಿದೆ.

ಈ ಹಿನ್ನೆಲೆಯಲ್ಲಿ "ಫಿಜಿಯಲ್ಲಿ ಪ್ರಜಾಪ್ರಭುತ್ವ ಸಾಮರಸ್ಯ ಮತ್ತು ನಾಗರಿಕ ಆಡಳಿತ ಸ್ಥಾಪನೆಯಾಗಬೇಕೆಂದು ನಾವು ಬಯಸುತ್ತೇವೆ" ಎಂದು ಪ್ರಧಾನಿ ರಾಜೀವ್‌ಗಾಂಧಿ ಶೃಂಗಸಭೆಯಲ್ಲಿ ಹೇಳಿದ್ದು ನಿಜಕ್ಕೂ ಅರ್ಥಗರ್ಭಿತವಾದುದು ಮತ್ತು ಮಾನವೀಯ ಮೌಲ್ಯಗಳಿಂದ ಕೂಡಿರುವಂತಹದ್ದಾಗಿದೆ.

ಈವಾಗಲೆ ಫಿಜಿಯ ಭಾರತೀಯ ಸಂಜಾತರು ಸಾಕಷ್ಟು ಕಷ್ಟ ನಷ್ಟಗಳನ್ನು ಅನುಭವಿಸಿರಬಹುದು. ಅವರನ್ನು ಆದಷ್ಟು ಬೇಗನೆ ಆ ನೋವಿನಿಂದ ಪಾರು ಮಾಡಬೇಕಾದ ಅನಿವಾರ್ಯತೆ ಮನುಷ್ಯರಾಗಿ ಯೋಚಿಸುವ ಎಲ್ಲಾ ರಾಷ್ಟ್ರಗಳ ವರಿಷ್ಠರಿಗೂ ಇದೆ. ಆದ್ದರಿಂದ ಈ ನಿಟ್ಟಿನಲ್ಲಿ ತಕ್ಷಣ ಕಾಮನ್‌ವೆಲ್ತ್ ರಾಷ್ಟ್ರಗಳ ವರಿಷ್ಠರು ಒಂದು ದೃಢ ನಿಲುವು ತೆಗೆದುಕೊಳ್ಳಬೇಕಿದೆ.

ಮುಂಗಾರು

ಶುಕ್ರವಾರ, ಅಕ್ಟೋಬರ್ 17, 1987

ಸ್ವಾಗತಾರ್ಹ ನಿಲುವು

ದಕ್ಷಿಣ ಆಫ್ರಿಕಾದ ಮೇಲೆ ದಿಗ್ಬಂಧನ ಹೇರಬೇಕೆಂದು ಬ್ರಿಟನ್ ಹೊರತು ಪಡಿಸಿ ಕಾಮನ್ವೆಲ್ತ್ ರಾಷ್ಟ್ರಗಳ ಮಂತ್ರಿಗಳೆಲ್ಲಾ ಒತ್ತಾಯಿಸಿದ್ದಾರೆ. ವಾಂಕೂವರ್‌ನಲ್ಲಿ ನಡೆದಿರುವ ಕಾಮನ್ವೆಲ್ತ್ ಶೃಂಗಸಭೆಯಲ್ಲಿ ಈ ಅಭಿಪ್ರಾಯ ವ್ಯಕ್ತಪಟ್ಟಿದೆ. ಮಾನವೀಯ ನೆಲೆಯಲ್ಲಿ ಇದೊಂದು ಸ್ವಾಗತಾರ್ಹ ನಿಲುವೇ ಆಗಿದೆ.

ಆದರೆ ಬ್ರಿಟನ್‌ನ ಪ್ರಧಾನಿ ಮಾರ್ಗರೆಟ್ ಥ್ಯಾಚರ್ ಮಾತ್ರ ದ. ಆಫ್ರಿಕಾದ ಮೇಲೆ ದಿಗ್ಬಂಧನ ಹೇರುವುದನ್ನು ವಿರೋಧಿಸಿದ್ದಾರೆ. ಇದು ಅಚ್ಚರಿಯದ್ದೇನೂ ಅಲ್ಲ. ಬಹಳ ಹಿಂದಿನಿಂದಲೂ ದ. ಆಫ್ರಿಕಾದ ಬಿಳಿಯರ ಸರ್ಕಾರವನ್ನು ಬೆಂಬಲಿಸುತ್ತಲೇ ಬಂದಿರುವ ಬ್ರಿಟನ್ ಈ ನಿಲುವು ತೆಗೆದುಕೊಂಡಿರುವುದು ಅನಿರೀಕ್ಷಿತವೇನೂ ಅಲ್ಲ.

ದ. ಆಫ್ರಿಕಾದಲ್ಲಿ ಇಂದಿಗೂ ಬಿಳಿಯರ ಸರಕಾರ ಅಲ್ಲಿನ ಕರಿಯರ ಮೇಲೆ ದಬ್ಬಾಳಿಕೆ ನಡೆಸುತ್ತಲೇ ಇದೆ. ಅಲ್ಲಿನ ಕರಿಯರ ಸ್ಥಿತಿಯಂತೂ ಅಲ್ಲೋಲ ಕಲ್ಲೋಲವಾಗಿದೆ. ಅವರ ಬದುಕು ಸಂಪೂರ್ಣ ದುರ್ಭರಗೊಂಡಿದೆ.

ಸಮಾನತೆಯ ತಳಹದಿಯಲ್ಲಿ ಮಾನವೀಯ ನೆಲೆಯಲ್ಲಿ ಯೋಚಿಸುವ ಸ್ವಾಭಿಮಾನಿ ಕಪ್ಪು ಜನರೆಲ್ಲಾ ಬಿಳಿಯರ ದಮನಕಾರಿ ನೀತಿಯ ವಿರುದ್ಧ ನಡೆಸುವ ಪ್ರತಿಭಟನೆಗಳನ್ನು ಬರ್ಬರವಾಗಿ ಮಟ್ಟಹಾಕಲಾಗುತ್ತಿದೆ. ಕಪ್ಪು ಜನರನ್ನು ಅಲ್ಲಿ ಕೀಟಗಳನ್ನು ಹೊಸಕಿ ಹಾಕುವಂತೆ ಕೊಲ್ಲಲಾಗುತ್ತಿದೆ.

ಅಲ್ಲಿನ ಚಿನ್ನದ ಗಣಿಗಳಲ್ಲಿ ಕಪ್ಪು ಜನರು ಕತ್ತೆಗಳಂತೆ ದುಡಿಯುತ್ತಿದ್ದಾರೆ. ಅಲ್ಲಿಯ ಮಣ್ಣಿನ ಪ್ರತಿ ಕಣಕಣಗಳಲ್ಲೂ ಕರಿಯರ ಬೆವರ ಹನಿಗಳು ಸಿಂಚನಗೊಂಡಿವೆ. ಆದರೆ ಅಲ್ಲಿರುವ ಅಲ್ಪಸಂಖ್ಯಾತ ಬಿಳಿಯರು ಕರಿಯರ ಮೇಲೆ ಆರ್ಥಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ನಿರಂತರವಾಗಿ ಶೋಷಣೆಗೈಯುತ್ತಲೇ ಬಂದಿದ್ದಾರೆ. ತಮ್ಮ ಮಾನವೀಯ ಹಕ್ಕುಗಳ ಬಗ್ಗೆ ಕರಿಯರು ಧ್ವನಿ ಎತ್ತುತ್ತಿದ್ದಂತೆ ಆ ಧ್ವನಿಯನ್ನು ತಮ್ಮ ಬಂದೂಕಿನ ನಳಿಗೆಯಿಂದ ಅದುಮುತ್ತಿದ್ದಾರೆ ಬಿಳಿಯರು.

ಆಧುನಿಕ ತಂತ್ರಜ್ಞಾನಗಳ ಬಗ್ಗೆ ಮಾತಾಡುವ ಈ ಮನುಕುಲದ ಕಾಲಬುಡದಲ್ಲೇ ದ. ಆಫ್ರಿಕಾದಂತಹ ದೇಶವನ್ನೂ ನಾವು ಕಾಣಬೇಕಾಗಿದೆ. ಇದು ಮನುಕುಲದ ದುರಂತ. ಈ ದುರಂತದ ವಿರುದ್ಧ ಈಗಾಗಲೇ ಬಹಳಷ್ಟು ಜಾಗತಿಕ ವೇದಿಕೆಗಳಲ್ಲಿ ಭಾರಿ ಭಾರಿ ಘೋಷಣೆಗಳನ್ನು ಕೇಳಿದ್ದೇವೆ. ಆದರೆ ಯಾರಿಂದಲೂ ಈವರೇಗೆ ದ. ಆಫ್ರಿಕಾದ ಬಿಳಿಯರ ಕ್ರೂರ ಸರ್ಕಾರವನ್ನು ಅಲ್ಲಾಡಿಸಲು ಸಾಧ್ಯವಾಗಲಿಲ್ಲ.

ಈ ಸರ್ಕಾರಕ್ಕೆ ಬ್ರಿಟನ್‌ನಂತಹ ಸಾಮ್ರಾಜ್ಯಶಾಹಿ ಶಕ್ತಿಗಳ ಬೆಂಬಲ ಇರುವುದಂತು ಸ್ಪಷ್ಟ. ಕಾಮನ್ವೆಲ್ತ್ ಶೃಂಗ ಸಭೆಯಲ್ಲಿ ದ. ಆಫ್ರಿಕಾಕ್ಕೆ ದಿಗ್ಬಂಧನ ಹಾಕುವುದಕ್ಕೆ ಅದು ಒಂದೇಟು ಹೊಡೆದಿರುವುದರಿಂದಲೇ ಇದು ಸ್ಪಷ್ಟವಾಗುತ್ತದೆ.

ಇದಕ್ಕೆ ಬ್ರಿಟನ್ ನೀಡಿರುವ ಸಮರ್ಥನೆಯಂತೂ ಅಸಮಂಜಸವಾಗಿದೆ. ಹಾಗೆ ಮಾಡಿದರೆ ಕರಿಯರ ಊರುಗಳಲ್ಲಿ ಮತ್ತಷ್ಟು ಕಷ್ಟವನ್ನುಂಟು ಮಾಡಿದಂತಾಗುತ್ತದೆ ಎಂದಿದ್ದಾರೆ ಥ್ಯಾಚರ್. ಅಂದರೆ ಕರಿಯರ ಊರುಗಳಲ್ಲಿ ಈಗ ಸುಖದ ಹೊನಲು ಹರಿಯುತ್ತಿದೆಯೋ? ಇದು ಥ್ಯಾಚರ್ ತನ್ನ ನಿಲುವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಅನಿವಾರ್ಯವಾಗಿ ನೀಡಿದ ಒಂದು ಸಮರ್ಥನೆಯಲ್ಲದೆ ಮತ್ತೇನೂ ಅಲ್ಲ.

ಬ್ರಿಟನ್‌ನ ಈ ಧೋರಣೆಯನ್ನು ಕಾಮನ್ವೆಲ್ತ್ ಶೃಂಗ ಸಭೆಯಲ್ಲಿ ರಾಜೀವ್‌ಗಾಂಧಿಯವರು ಕಟುವಾಗಿಯೇ ಟೀಕಿಸಿದ್ದಾರೆ. ದಕ್ಷಿಣ ಆಫ್ರಿಕಾದ ಜತೆ ಕೆಲವು ರಾಷ್ಟ್ರಗಳು ವಿಮಾನ ಸಂಪರ್ಕ ಕಳಕೊಂಡಿವೆ. ಆದರೆ ಮತ್ತೆ ಕೆಲವು ವಿಮಾನ ಸಂಪರ್ಕವನ್ನು ಹೆಚ್ಚಿಸಿವೆ ಎಂದು ಅವರು ಬ್ರಿಟನ್‌ನ್ನು ಪರೋಕ್ಷವಾಗಿ ಟೀಕಿಸಿದ್ದಾರೆ. ಇದೇ ದಿಟ್ಟತನವನ್ನು ಜಗತ್ತಿನ ಎಲ್ಲಾ ರಾಷ್ಟ್ರಗಳೂ ತೋರಬೇಕಾದ ಅನಿವಾರ್ಯತೆ ಇಂದು ಅಗತ್ಯವಾಗಿದೆ.

ದ. ಆಫ್ರಿಕಾದ ಆರ್ಥಿಕ ಸ್ಥಿತಿಯು ಕುಸಿತದ ಹೊಸ್ತಿಲಲ್ಲಿ ಇಲ್ಲ ಎಂದು ಥ್ಯಾಚರ್ ಹೇಳಿರುವುದಂತೂ ತೀರಾ ಸೋಗಲಾಡಿತನದ ಮಾತಾಗಿದೆ. ಇದೇ ಸಂದರ್ಭದಲ್ಲಿ ಜಾಂಬಿಯಾದ ಅಧ್ಯಕ್ಷ ಕೆನೆತ್ ಕೌಂಡಾ ಹೇಳಿರುವ 'ದ. ಆಫ್ರಿಕಾದಲ್ಲಿ ಇಂದು ಕರಿಯರು ಅನುಭವಿಸುತ್ತಿರುವ ಸಂಕಷ್ಟಕ್ಕಿಂತ ಹೆಚ್ಚಿನ ಕಷ್ಟ ಬೇರೊಂದಿಲ್ಲ' ಎಂಬ ಮಾತು ಬಹಳ ಅರ್ಥಪೂರ್ಣವಾಗಿದೆ. ನೋವಿನ ಒಡಲಿನಿಂದ ಮೂಡಿಬಂದಿದೆ.

ಆರ್ಥಿಕ ಪ್ರಗತಿ ಮತ್ತು ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳು ವರ್ಣಭೇದದ ಅಂತ್ಯಕ್ಕೆ ಪೂರಕವಾಗಬಹುದು ಎಂದು ಇದೇ ಶೃಂಗಸಭೆಯಲ್ಲಿ ಥ್ಯಾಚರ್ ಹೇಳಿರುವುದಂತೂ ತೀರಾ ಬಾಲಿಶವಾಗಿದೆ. ಆರ್ಥಿಕ ಪ್ರಗತಿಯಾದರೆ ಅದರ ಫಲವೆಲ್ಲಾ ಹರಿದು ಸೇರುವುದು ಬಿಳಿಯರ ಕಿಸೆಯೊಳಗೇ ಎಂಬ ಸತ್ಯವನ್ನು ಅರಿಯದಷ್ಟು ಥ್ಯಾಚರ್ ಮೂರ್ಖರಲ್ಲ. ಅಂತೆಯೇ ಬಹುರಾಷ್ಟ್ರೀಯ ಸಂಸ್ಥೆಗಳ ಪ್ರಾಬಲ್ಯವೆಂದರೂ ಅದು ಬಿಳಿಯರ ಪ್ರಾಬಲ್ಯವೇ ಎಂಬ ಅರಿವೂ ಎಲ್ಲರಿಗೂ ಗೊತ್ತಿರುವಂತಹದ್ದೆ. ಆದರೂ ಥ್ಯಾಚರ್ ಮತ್ತೆ ಮತ್ತೆ ಇವೇ ಸಮರ್ಥನೆಗಳನ್ನು ನೀಡುತ್ತಿರುವುದು ನಾಚಿಕೆಗೇಡಾಗಿದೆ.

ಒಟ್ಟಾರೆ, ದ. ಆಫ್ರಿಕಾದಲ್ಲಿ ಕರಿಯರನ್ನು ಬಿಳಿಯರ ಅಮಾನುಷ ಆಡಳಿತದಿಂದ ವಿಮೋಚನೆಗೊಳಿಸುವ ನಿಟ್ಟಿನಲ್ಲಿ ಜಗತ್ತಿನ ಎಲ್ಲಾ ರಾಷ್ಟ್ರಗಳೂ ಪ್ರಾಮಾಣಿಕ ಯತ್ನ ನಡೆಸಬೇಕಾದ ಅನಿವಾರ್ಯತೆ ಮಾನವೀಯ ನೆಲೆಯಲ್ಲಿ ಇಂದು ಅಗತ್ಯವಾಗಿದೆ.

ಮುಂಗಾರು

ಭಾನುವಾರ, ಅಕ್ಟೋಬರ್ 18, 1987

ಸಾಮಾಜಿಕ ಕ್ರಾಂತಿ ಆಗಬೇಕಿದೆ

ಮಾನವತೆಯ ಪ್ರಫುಲ್ಲಿತ ಹೂವಿನ ಪಕಳೆಗಳ ಮೇಲೆ ವೈದಿಕತೆಯ ಎಣ್ಣೆ ಮತ್ತು ಬೆಂಕಿ ಬಿದ್ದು ಸುಟ್ಟು ಕರಕಲಾದ ಹೂವಿನ ಅಸ್ಥಿಪಂಜರದಂತಿದೆ ಇಂದು ಈ ನಾಡಿನ ಸಂಸ್ಕೃತಿ. ಈ ನಾಡಿನ ಜನ ಜೀವನದ ಮೇಲೆ, ಆರ್ಥಿಕ ಚಟುವಟಿಕೆಗಳ ಮೇಲೆ ಭಾರಿ ಪ್ರಭಾವವನ್ನು ಹೊಂದಿ ಅವುಗಳ ಹಿನ್ನಡೆಗೆ ಕಾರಣವಾಗಿರುವ ಧಾರ್ಮಿಕ ಮತ್ತು ಸಾಮಾಜಿಕ ವಿಕೃತಿಗಳು ವೈದಿಕತೆಯ ಕೂಸು ಎನ್ನುವುದು ಸ್ಪಷ್ಟ. ಮತ್ತೆ ಈ ಮಣ್ಣಿನಲಿ ಮಾನವತೆಯ ಪ್ರೀತಿಯ ಹೂಗಳ ಬೆಳೆಸುವ ನಿಟ್ಟಿನಲಿ ನಾವು ಈಗಿರುವ ಧಾರ್ಮಿಕ, ಸಾಮಾಜಿಕ ಮೌಢ್ಯಗಳ ಮೂಲವನ್ನು ಹುಡುಕಿ ಅವುಗಳ ಮೂಲೋತ್ಪಾಟನೆ ಮಾಡಬೇಕೇ ಹೊರತು, ತೇಪೆ ಹಾಕುವ ಕೆಲಸಗಳನ್ನಲ್ಲ.

1986ರ ಮಾರ್ಚ್‌ನಲ್ಲಿ ಚಂದ್ರಗುತ್ತಿ ಬೆತ್ತಲೆ ಸೇವೆ ಜಾತ್ರೆಯಲ್ಲಿ ನಡೆದ ಅಹಿತಕರ ಘಟನೆಗಳ ಬಗ್ಗೆ ತನಿಖೆ ನಡೆಸಿದ ಚನ್ನವೀರಪ್ಪ ವಿಚಾರಣಾ ಆಯೋಗದ ಶಿಫಾರಸಿನಂತೆ (ಶಿವಮೊಗ್ಗದ ಹಾಲಿ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಹಾಗೂ ಹಿಂದಿನ ಜಿಲ್ಲಾಧಿಕಾರಿಗಳ ಮೇಲೆ ಸರಕಾರ ಶೀಘ್ರದಲ್ಲಿಯೇ ಸೂಕ್ತ ಕ್ರಮ ತೆಗೆದುಕೊಳ್ಳಲಿದೆ ಎಂದು ಗೃಹಸಚಿವ ಆರ್. ಎಲ್. ಜಾಲಪ್ಪ ಅವರು ತಿಳಿಸಿದ್ದಾರೆಂಬ ಸುದ್ದಿ ಬಂದಿದೆ. ಈ ವ್ಯವಸ್ಥೆಯ ಕಾನೂನಿನ ಚೌಕಟ್ಟಿನ ಮಿತಿಯೊಳಗೆ ಸರ್ಕಾರ ಕ್ರಮ ತೆಗೆದುಕೊಳ್ಳಬಹುದು ಅಥವಾ ಬಿಡಬಹುದು...ಆದರೆ ಈ ಕ್ರಮಗಳು ಸಮಸ್ಯೆಯ ಮೂಲೋತ್ಪಾಟನೆ ಮಾಡುವಲ್ಲಿ ವಿಫಲಗೊಂಡಿರುವುದಂತು ನಿಜ. ಇವೆಲ್ಲಾ ತೇಪೆ ಹಾಕುವ ಕೆಲಸಗಳಲ್ಲದೆ ಬೇರೇನೂ ಅಲ್ಲ.

ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನ ಜಮಾಯಿಸಲಿದ್ದ ಈ ಜಾತ್ರೆಯ ನಿಯಂತ್ರಣಕ್ಕೆ ಕೇವಲ 200ಕ್ಕೂ ಕಡಿಮೆ ಪೊಲೀಸರನ್ನು ಕಳುಹಿ[illegible] ತಾವು ಅಂದು ಬೆಳಿಗ್ಗೆ ಭದ್ರಾವತಿಯಲ್ಲಿ ಮದುವೆ ಸಮಾರಂಭ ಒಂದರಲ್ಲಿ ಭಾಗವಹಿಸಲು ತೆರಳಿದ್ದ ಪೊಲೀಸ್ ಮುಖ್ಯಾಧಿಕಾರಿಯವರ ಮೇಲೆ ಸರಕಾರ ಕ್ರಮಕ್ಕೈಗೊಳ್ಳಬಹುದು. ಇದು ಸರಕಾರದ [illegible]ಗೆ ಅಗತ್ಯ ಕೂಡ. 1986ರ ಮಾರ್ಚ್ 20ರಂದು ಮನುಕುಲ ತಲೆ ತಗ್ಗಿಸುವ ಹೇಯ ಘಟನೆ ನಡೆಯಿತು. ಅಂದು ಭಾರಿ ಪ್ರಮಾಣದ ಗೊಂದಲ ಉಂಟಾಗಬಹುದೆಂದು ಮಾರ್ಚ್ 19ರಂದೇ ವರದಿ ಮಾಡಿದ ಏಕೈಕ ಪತ್ರಿಕೆ 'ಮುಂಗಾರು'. ಆದರೆ [illegible] ಚಂದ್ರಗುತ್ತಿ ನಾಚಿಕೆ [illegible] ಕಾರಣರಾದ ಪೊಲೀಸ್ ಅಧಿಕಾರಿ[illegible] ಬಗ್ಗೆ ಸರಕಾರ ಕ್ರಮಕ್ಕೆ [illegible] ಸ್ವಾಗತಾರ್ಹ.

ಆದರೆ ಒಬ್ಬ ಅಧಿಕಾರಿಯ ಮೇಲೆ ಅಥವಾ ಒಂದು ಜನರ ಗುಂಪಿನ ಮೇಲೆ ಕ್ರಮಕ್ಕೈಗೊಳ್ಳುವುದರಿಂದ ಬೆತ್ತಲೆ ಸೇವೆಯಂತಹ ಅನಿಷ್ಟ ಧಾರ್ಮಿಕ ವಿಕೃತಿಯನ್ನು ಜನರ ಮನಸ್ಸಿನಿಂದ ಕಿತ್ತೊಗೆಯಲು ಸಾಧ್ಯವೇ ? ಮುಗ್ಧ [illegible] ಮನಸ್ಸಿ[illegible] ಇಂತಹ ವಿಕೃತಿಗಳ ಗೆದ್ದಲು [illegible] ಶತ [illegible]ಮಾನಗಳ ವೈದಿಕ ಕುತಂತ್ರದ ಜಾಲ[illegible] ಮೂಲ[illegible] ನಾವು ಮಟ್ಟಿ ಹಾಕದೆ ಏನು ಮಾಡಿಯೂ ಪ್ರಯೋಜನವಿಲ್ಲ. ಈಗಾಗಲೇ ಕ್ಯಾ[illegible]ರ್‌ಗೆಡ್ಡೆಯಂತೆ, ಸರ್ಪಸುತ್ತಿನಂತೆ ಭಾರತೀಯ ಮನಸ್ಸುಗಳ ಆಳದಲ್ಲಿ ಜೀವಂತವಿರುವ ವೈದಿಕ ಸಂಸ್ಕೃತಿಯ ಮೂಲ[illegible]ಗಳನ್ನು ಸುಟ್ಟು ಹಾಕಬೇಕಿದ್ದರೆ ಮೊದಲು ಜನಜಾಗೃತಿ ಮೂಡಿಸಬೇಕಿದೆ. ಜನಮನಗಳಲ್ಲಿ ವೈಚಾರಿಕ ಚಿಂತನೆ ವೈಜ್ಞಾನಿಕ ಪ್ರಜ್ಞೆಗಳನ್ನು ಬೇರೂರಿಸಬೇಕಿದೆ. ಪ್ರೀತಿಯ ಮೂಲ ತಂತುವನ್ನೊಂದಿದ ಮಾನವತೆಯೇ ಪ್ರಮುಖ ಧರ್ಮವೆಂಬ ನಂಬಿಕೆಯನ್ನು ಜನಸಮುದಾಯದಲ್ಲಿ [illegible].

ಈ ನಿಟ್ಟಿನಲ್ಲಿ [illegible] ಹೇಳಿದ ಮಾತೊಂದು [illegible] ಅರ್ಥಪೂರ್ಣವೆನಿಸುತ್ತದೆ. "ಧರ್ಮಕ್ಕೆ ಅಧಿ[illegible] ಆರ್ಥಿಕ ಮತ್ತು ರಾಜಕೀಯ ವಿ[illegible] [illegible] ನಾಶ ಮಾಡದ ಹೊರತು ಧಾರ್ಮಿಕ [illegible]

ಘಟ್ಟದಲ್ಲಿ ಸಮಂಜಸವೆನಿಸುತ್ತದೆ. ಆದರೆ ಈ ದೇಶಕ್ಕೆ ಅವೆರಡಕ್ಕಿಂತ ಪ್ರಮುಖವಾದ ಸಾಮಾಜಿಕ ಪರಿಸ್ಥಿತಿಯನ್ನು ನಾಶ ಮಾಡುವ ಅನಿವಾರ್ಯತೆ ಇಂದು ಬಹಳಷ್ಟಿದೆ. ಚಂದ್ರಗುತ್ತಿಯಲ್ಲಿ ಬೆತ್ತಲೆ ಸೇವೆ ನಡೆಸುವ ಬಹುತೇಕ ಮಂದಿ ಸಾಮಾಜಿಕವಾಗಿ ಕೆಳಸ್ತರದಲ್ಲಿರುವ ದಲಿತರೇ ಆಗಿದ್ದಾರೆ. ಅವರ ಮನಸ್ಥಿತಿಯನ್ನು ಅಂತಹದೇ ಮೌಢ್ಯಗಳಲ್ಲಿ ಉಳಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಸಾಮಾಜಿಕವಾಗಿ ಮೇಲುಸ್ತರದ ಮಂದಿಯ ಧೂರ್ತತನದ ಬಗ್ಗೆ ಸರಕಾರ ಕ್ರಮಕ್ಕೈಗೊಳ್ಳಲು ಸಾಧ್ಯವೇ ?

ದೇವಸ್ಥಾನಕ್ಕೆ ಹೋಗುವವರನ್ನು ಬಲವಂತವಾಗಿ ತಡೆದು ವಾಪಾಸು ಕಳುಹಿಸುವುದರಿಂದ ಅಥವಾ ಆ ರೀತಿ ತಡೆಯಲು ವಿಫಲರಾದ ಅಧಿಕಾರಿಗಳ ಮೇಲೆ ಉಗ್ರಕ್ರಮಕ್ಕೈಗೊಳ್ಳುವುದರಿಂದ ಈ ಧಾರ್ಮಿಕ ಅರ್ಥಹೀನ ಮೌಢ್ಯಗಳನ್ನು ಒದ್ದೋಡಿಸಿದಂತಾಗುವುದಿಲ್ಲ. ಇದಕ್ಕೆ ಮೊದಲು ಜನಸಮುದಾಯವನ್ನು ವೈಚಾರಿಕ ಚಿಂತನೆಗೆ ಹಚ್ಚುವ ಶಿಕ್ಷಣ ನೀಡಬೇಕು, ಮೂಲಭೂತವಾದಿಗಳ ಚಟುವಟಿಕೆಗಳನ್ನು ನಿರ್ದಾಕ್ಷಿಣ್ಯವಾಗಿ ನಿಷ್ಕ್ರಿಯಗೊಳಿಸಬೇಕು.

ಧರ್ಮವನ್ನು ಸಾಮುದಾಯಿಕಗೊಳಿಸುವುದೇ ಆಗಲಿ, ರಾಜಕೀಯದೊಳಗೆ ಧರ್ಮವನ್ನು ತರುವುದೇ ಆಗಲಿ ಅದು ಮನುಕುಲವನ್ನು ಒಂದಲ್ಲಾ ಒಂದು ರೀತಿಯಲ್ಲಿ ದುರಂತದ ಅಂಚಿಗೆ ತಳ್ಳುವಂತದ್ದೇ ಎಂಬುದು ನಮಗೆ ಇತಿಹಾಸದಿಂದ ಗೊತ್ತಾಗಿದೆ. ಈ ಬಗ್ಗೆ ಜನಸಾಮಾನ್ಯರಲ್ಲಿ ಪ್ರಜ್ಞೆ ಮೂಡಬೇಕಾಗಿದೆ.

ಎಂದಿನವರೆಗೆ ಈ ದೇಶದ ರಾಜಕಾರಣಿಗಳು ಮತಬ್ಯಾಂಕುಗಳ ಮೇಲೆ ಕಣ್ಣಿಟ್ಟು ಸತಿಪದ್ಧತಿಯಂತಹ ಬೆತ್ತಲೆ ಸೇವೆ, ದೇವದಾಸಿ ಪದ್ಧತಿಗಳಂತಹ ಕ್ರೂರ ಸಾಮಾಜಿಕ ಧಾರ್ಮಿಕ ವಿಕೃತಿಗಳನ್ನು ಸಹಿಸಿಕೊಂಡಿರುತ್ತಾರೋ ಅಂದಿನವರೆಗೆ, ಈ ನಾಡಿನಲ್ಲಿ ನಾವು ಅವರಿಂದ ಯಾವುದೇ [illegible]ವಾದ [illegible] ಪೂರಕ[illegible] ಅಭ್ಯುದಯಗಳನ್ನು ಕಾಣಲು ಸಾಧ್ಯ[illegible] ಇಲ್ಲ. [illegible] ವ್ಯಾಪಾರಿ [illegible] ಧರ್ಮ [illegible] [illegible]ನೇತ್ರರು [illegible] [illegible]. ತಮ್ಮ [illegible] ಧ್ವನಿ [illegible] ಜಾಣಾಕ್ಷತನದಿಂದ [illegible] ಅವರು ಸಮರ್ಥರಾಗಿರುವುದನ್ನೂ ನಾವು [illegible]ಇತಿಹಾಸದ ಉದ್ದಕ್ಕೂ ಕಾಣುತ್ತಾ ಬಂದಿದ್ದೇವೆ.

ಆದ್ದರಿಂದ ಇಂದು ಇಂತಹ ಎಲ್ಲಾ ಮನುಷ್ಯ ವಿರೋಧಿ ಚಟುವಟಿಕೆಗಳ ವಿರುದ್ಧ ಮಾನವತೆಯ ಶಕ್ತಿ ತಲೆಎತ್ತಿ ಎದೆ ಸೆಟೆದು ನಿಲ್ಲಬೇಕಾದರೆ ಈ ನಾಡಿನಲ್ಲಿ ಸಾಮಾಜಿಕ ಕ್ರಾಂತಿ ಆಗಬೇಕಿದೆ. ಜನತೆ ತಮ್ಮ ಮನದೊಳಗಿರುವ ಜಾತಿ ಎಂಬ ಕೊಳಕನ್ನು ಕಿತ್ತೊಗೆಯಬೇಕಿದೆ. ಮನುಷ್ಯನನ್ನು ಮನುಷ್ಯನಾಗಿ ನೋಡುವ ಮನುಷ್ಯಧರ್ಮ ರೂಪುಗೊಳ್ಳಬೇಕಿದೆ. ವೈಜ್ಞಾನಿಕ ದೃಷ್ಟಿಕೋನ ಕ್ರಿಯಾಶೀಲತೆ, ವೈಚಾರಿಕ ಪ್ರಜ್ಞೆಗಳು ಈ ನಾಡ ಜನಸಮುದಾಯದ ಮನಸ್ಸುಗಳ ಒಳಗೆ ಗಟ್ಟಿಯಾಗಿ ನೆಲೆಯೂರಬೇಕಿದೆ.

ಇಂದು ನಮ್ಮನ್ನು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡಿರುವ ಬೆತ್ತಲೆಸೇವೆಯಂತಹ ಭಕ್ತಿಯ ವಿಕೃತರೂಪಗಳನ್ನು, ಅಂಧಶ್ರದ್ಧೆಗಳನ್ನು ಒಂದು ದಿನದ ಬಲವಂತದ ಪೊಲೀಸ್ ಕಾರ್ಯಾಚರಣೆಗಳ ಮೂಲಕ ಅಥವಾ ಕಡತಗಳಲ್ಲಿ ನಿದ್ರಿಸುವ ಕಾನೂನುಗಳನ್ನು ರಚಿಸುವ ಮೂಲಕ ಹೋಗಲಾಡಿಸಲು ಅಸಾಧ್ಯ. ಇಂತಹ ಸಮಸ್ಯೆಗಳ ಮೂಲವನ್ನು ಬಚ್ಚಿಟ್ಟುಕೊಂಡಿರುವ ಈ ನಾಡಿನ ಸಾಮಾಜಿಕ ಮತ್ತು ಧಾರ್ಮಿಕ ಕುತಂತ್ರದ ಜಾಲವನ್ನು ಭೇದಿಸಿ ಹೊಸ ವಿಚಾರಗಳನ್ನು [illegible] ಮಾತ್ರ [illegible] ಸಾಧ್ಯವಿದೆ. ಆ ನಿಟ್ಟಿನಲ್ಲಿ ಇಂದು [illegible] [illegible]

ಮುಂಗಾರು

ಶುಕ್ರವಾರ, ಅಕ್ಟೋಬರ್ 23, 1987

ಬಲಿಷ್ಠರ ಹಸ್ತಕ್ಷೇಪ ಸರಿಯಲ್ಲ

ಅಮೆರಿಕದ ಧ್ವಜವನ್ನು ಹೊಂದಿದ್ದ ಟ್ಯಾಂಕರಿಗೆ ಇರಾನ್ ಕ್ಷಿಪಣಿ ದಾಳಿ ನಡೆಸಿದುದಕ್ಕೆ ಪ್ರತಿಯಾಗಿ ಅಮೆರಿಕದ ಯುದ್ಧನೌಕೆಗಳು ಇರಾನಿನ ಕೊಲ್ಲಿ ಪ್ರದೇಶದ ತೈಲ ಬಾವಿಯೊಂದನ್ನು ನಾಶಪಡಿಸಿವೆ ಎಂದು ಸುದ್ದಿ ಬಂದಿದೆ. ಮಧ್ಯಪ್ರಾಚ್ಯದೇಶಗಳಿಗೆ ಸಂಬಂಧಿಸಿದಂತೆ ಇಂತಹ ಸುದ್ದಿಗಳು ಇತ್ತೀಚೆಗೆ ತೀರಾ ಸಾಮಾನ್ಯವೆನಿಸಿ ಬಿಟ್ಟವೆ. ಇಂತಹ ಸ್ಥಿತಿ ಮನುಷ್ಯನ ಮನಸ್ಸುಗಳು ತುಳಿಯುತ್ತಿರುವ ದುರಂತದ ಬಗೆಗಿನ ಸ್ಪಷ್ಟ ಸೂಚನೆಗಳಾಗಿವೆ.

ಇರಾನ್, ಇರಾಖ್‌ಗಳಲ್ಲಂತೂ ಬಾಂಬ್‌ದಾಳಿ ಮುಂತಾದ ಜೀವಹರಣದಂತಹ ಘಟನೆಗಳು ದೈನಂದಿನ ಚಟುವಟಿಕೆಗಳೇ ಆಗಿಬಿಟ್ಟಿವೆ. ಲೆಬನಾನ್‌ನ ಅಂತಃಕಲಹ, ಇಸ್ರೇಲ್, ಪ್ಯಾಲೆಸ್ತೀನ್ ಘರ್ಷಣೆಗಳು ಈಗಾಗಲೇ ಸಹಸ್ರಾರು ಮಂದಿ ಜನಸಾಮಾನ್ಯರನ್ನು ಕೀಟಗಳಂತೆ ಕೊಂದು ಹಾಕಿವೆ. ಆದರೆ ಈ ಬಗ್ಗೆ ಇನ್ನೂ ಈ ರಾಷ್ಟ್ರಗಳಿಗೆ ಜ್ಞಾನೋದಯವಾಗದಿರುವುದಂತೂ ಅಲ್ಲಿನ ಮನಸ್ಥಿತಿಗಳ ಬಗ್ಗೆ ಅನುಕಂಪ ಮೂಡುತ್ತದೆ.

ಅಮೆರಿಕದ ಟ್ಯಾಂಕರ್ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದುದಕ್ಕೆ ಪ್ರತಿಯಾಗಿ ಅಮೆರಿಕ ಇರಾನ್‌ನ ತೈಲ ಬಾವಿಯೊಂದನ್ನು ನಾಶಪಡಿಸಿದೆ. ಇದಕ್ಕೆ ಪ್ರತಿಕಾರವಾಗಿ ಮತ್ತೆ ಇರಾನ್ ದಾಳಿ ನಡೆಸುತ್ತೆ... ಮತ್ತೆ ಅಮೆರಿಕ ದಾಳಿ ನಡೆಸುತ್ತೆ...ಒಟ್ಟಾರೆ, ಈ ಪ್ರತಿಕಾರಗಳ, ದಾಳಿಗಳ ಸರಣಿ ನಡೆಯುತ್ತಲೇ ಇರುತ್ತೆ. ಇದು ಆಯಾ ರಾಷ್ಟ್ರಗಳ ಪ್ರತಿಷ್ಠೆಯ ಪ್ರಶ್ನೆಯಾಗುತ್ತೆ. ಆದರೆ ಈ ತಿಕ್ಕಾಟಗಳಿಗೆ ಸಿಲುಕಿ ನೋವು ಅನುಭವಿಸುವವರು ಮಾತ್ರ ಮುಗ್ಧ ಜನಸಾಮಾನ್ಯರೇ ಆಗಿರುತ್ತಾರೆ. ಇದಕ್ಕೆ ಕೊನೆಯೆ ಇಲ್ಲವೇ ?

ಹಿಂಸೆಗೆ ಪ್ರತಿಹಿಂಸೆ ಮೂಲಕ ಯಾವುದೇ ಜನಾಂಗ ಅಥವಾ ದೇಶ ಮನುಕುಲಕ್ಕೆ ಶಾಂತಿ ನೀಡಿಲ್ಲ ನೆಮ್ಮದಿಯ ಬದುಕು ನೀಡಿಲ್ಲ ಎಂಬ ಇತಿಹಾಸದ ಸತ್ಯ ನಮ್ಮ ಕಣ್ಣಿನ ಮುಂದಿದೆ. ಆದರೂ ಈ ರಾಷ್ಟ್ರಗಳು ಅರಿವು ಮೂಡಿಸಿಕೊಳ್ಳದೆ ಅನಗತ್ಯ ಸೆಣಸಾಟದಲ್ಲಿ ತೊಡಗಿರುವುದು ನಾಚಿಕೆಗೇಡಿನ ವಿಷಯವಾಗಿದೆ.

ಮಧ್ಯಪ್ರಾಚ್ಯ ರಾಷ್ಟ್ರಗಳ ಆಂತರಿಕ ವಿಚಾರಗಳಿಗೆ ಅಮೆರಿಕದಂತಹ ಸಾಮ್ರಾಜ್ಯಶಾಹಿ ಶಕ್ತಿಗಳು ಹಸ್ತಕ್ಷೇಪ ನಡೆಸದೆ ಇದ್ದಿದ್ದರೆ ಅಲ್ಲಿ ಎಂದೋ ಶಾಂತಿ ಮೂಡಿರುತ್ತಿತ್ತೇನೋ. ಆದರೆ ತಮ್ಮ ಪ್ರಭಾವವನ್ನು ಆ ಪ್ರದೇಶಗಳಲ್ಲಿ ಆಳವಾಗಿ ಬೇರೂರಿಸುವ ಮಹತ್ವಾಕಾಂಕ್ಷೆ ಇಟ್ಟುಕೊಂಡಿರುವ ಸಾಮ್ರಾಜ್ಯಶಾಹಿ ಶಕ್ತಿಗಳು ಅಲ್ಲಿ ಅನಗತ್ಯ ಗೊಂದಲಗಳನ್ನು ಹುಟ್ಟುಹಾಕುತ್ತಲೇ ಇರುತ್ತವೆ. ಕೊನೆಗೆ ಅಂತಹ ಗೊಂದಲ, ಘರ್ಷಣೆಗಳನ್ನು ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ಬಳಸಿಕೊಳ್ಳುವಲ್ಲಿ ಕೂಡಾ ಅವುಗಳು ಬಹಳ ಚಾಣಾಕ್ಷ್ಯರಾಗಿ ವರ್ತಿಸುತ್ತವೆ. ಇರಾನ್-ಇರಾಖ್‌ಗಳಲ್ಲಿ ನಡೆಯುತ್ತಿರುವುದೂ ಇದೆ. ಕಳೆದ ಹಲವಾರು ವರುಷಗಳಿಂದ ಪರೋಕ್ಷವಾಗಿ ಈ ಸಮರದಲ್ಲಿ ಭಾಗವಹಿಸುತ್ತಿದ್ದ ಅಮೆರಿಕ ಇತ್ತೀಚೆಗೆ ಬಹಿರಂಗವಾಗಿ ಮಧ್ಯಪ್ರಾಚ್ಯದಲ್ಲಿನ ತನ್ನ ಅಸ್ತಿತ್ವವನ್ನು ತೋರಿಸಬೇಕಾಗಿದೆ. ಇದು ನಿಜಕ್ಕೂ ವಿಷಾದಕರ ಸಂಗತಿಯಾಗಿದೆ.

ಒಂದು ಬಲಿಷ್ಠ ರಾಷ್ಟ್ರ ಇನ್ನೊಂದು ಪುಟ್ಟ ದೇಶ ಒಂದರ ಮೇಲೆ ದಾಳಿ ನಡೆಸಿದಾಗ ಅಥವಾ ಅದರೊಡನೆ ಮೈತ್ರಿ ಇಟ್ಟುಕೊಂಡು ತನ್ನ ಸೇನಾನೆಲೆಗಳನ್ನು ಸ್ಥಾಪಿಸುವುದರಿಂದ ಅದೇ ಭೂಪ್ರದೇಶದ ಸುತ್ತಮುತ್ತ ಇರುವ ಇತರ ಸಣ್ಣಪುಟ್ಟ ದೇಶಗಳಿಗೆಲ್ಲಾ ಅಭದ್ರತೆ ಕಾಡುವುದು ಸಹಜ. ಆಗ ಅವುಗಳು ಇನ್ನೊಂದು ಬಲಿಷ್ಠ ರಾಷ್ಟ್ರದ ಮೊರೆ ಹೋಗುತ್ತವೆ. ನಂತರ ಸಣ್ಣ ಪುಟ್ಟ ಘರ್ಷಣೆ, ಪ್ರತಿಷ್ಠೆಗಾಗಿ ಸೆಣಸಾಟ ಎಲ್ಲವೂ ಮಾಮೂಲು. ಈ ಎಲ್ಲಾ ವಿಷಜಾಲದ ಬಲಿಪಶುಗಳಾಗುವವರು ಮಾತ್ರ ಶ್ರೀಸಾಮಾನ್ಯರೆ.

ಘರ್ಷಣೆಗಳಿಂದ ವಿನಾಶ ತಪ್ಪದು ಎಂಬ ಸತ್ಯ ಜಗಜ್ಜಾಹೀರಾಗಿದ್ದರೂ ಈ ರಾಷ್ಟ್ರಗಳೆಲ್ಲಾ ನಿತ್ಯವೂ ಮತ್ತೆ ಮತ್ತೆ ಘರ್ಷಣೆಗಳಲ್ಲೇ ತಮ್ಮನ್ನು ತೊಡಗಿಸಿಕೊಳ್ಳುವ ಅವಿವೇಕವನ್ನು ಪ್ರದರ್ಶಿಸುತ್ತಿವೆ. ತಮ್ಮ ಈ ಅವಿವೇಕದ ಬಗ್ಗೆ ಆ ರಾಷ್ಟ್ರಗಳಿಗೆ ಎಂದು ತಿಳುವಳಿಕೆ ಮೂಡುತ್ತದೋ... ಆ ಭೂಪ್ರದೇಶಗಳಲ್ಲಿ ಜನ ನೆಮ್ಮದಿಯಿಂದ ಉಸಿರಾಡುವ ದಿನಗಳು ಎಂದು ಬರುತ್ತದೋ...

ಇರಾನ್-ಇರಾಖ್ ಯುದ್ಧ ಪ್ರದೇಶದಲ್ಲಿ ಇರಾನ್ ಜತೆ ಕದನಕ್ಕಿಳಿಯುವುದು ಅಮೆರಿಕಕ್ಕೆ ಬೇಕಿಲ್ಲ ಎಂದು ರೇಗನ್ ಹೇಳಿದ್ದಾರೆ. ಆದರೆ ಇದು ತೀರಾ ಕಪಟದ ಮಾತು ಎಂಬುದು ಜಗತ್ತಿಗೇ ಗೊತ್ತಿದೆ. ತಾನು ಹೇಳುತ್ತಿರುವುದು ಸುಳ್ಳು ಎಂಬುದು ಜಗತ್ತಿಗೇ ಗೊತ್ತಿದೆ ಎಂದು ಅಮೆರಿಕಕ್ಕೆ ತಿಳಿದಿದ್ದರೂ ಅದು ಮತ್ತೆ ಮತ್ತೆ ಅದೇ ಸುಳ್ಳನ್ನು ಹೇಳುತ್ತಿದೆ, ಅಮೆರಿಕ ಇನ್ನಾದರೂ ತನ್ನ ಈ ನಾಟಕೀಯ ವರ್ತನೆಗೆ ಇತಿಶ್ರಿ ಹೇಳಬೇಕಿದೆ.

ಮಾನವೀಯ ನೆಲೆಯಿಂದ ಅದು ಯೋಚಿಸಬೇಕಾದ ಅನಿವಾರ್ಯತೆ ಇಂದು ಬಹಳಷ್ಟಿದೆ. ತನ್ನ ಎಲ್ಲಾ ಹಿತಾಸಕ್ತಿಗಳನ್ನೂ ಬದಿಗೊತ್ತಿ, ಮಧ್ಯಪ್ರಾಚ್ಯದಿಂದ ಅದು ಹೊರಹೋಗಬೇಕಿದೆ. ಈ ನಿಟ್ಟಿನಲ್ಲಿ ಮಧ್ಯಪ್ರಾಚ್ಯದ ಎಲ್ಲಾ ರಾಷ್ಟ್ರಗಳೂ ಒಂದುಗೂಡಿ ಯೋಚಿಸಬೇಕಿದೆ. ಒಮ್ಮತಕ್ಕೆ ಬಂದು ಇಂತಹ ಅನಗತ್ಯ ಪ್ರಾಣಹಾನಿಗಳಿಗೆ ಇತಿಶ್ರಿ ಹಾಡಬೇಕಾದ ಪ್ರಯತ್ನದಲ್ಲಿ ತೊಡಗಬೇಕಿದೆ.

ಈ ನಿಟ್ಟಿನಲ್ಲಿ ವಿಶ್ವಸಂಸ್ಥೆ ಅಸಹಾಯಕವಾಗಿರುವುದು ಈಗಾಗಲೇ ಸ್ಪಷ್ಟವಾಗಿದೆ. ಆದ್ದರಿಂದ ಜಗತ್ತಿನ ಎಲ್ಲಾ ಶಾಂತಿಪ್ರಿಯರೂ ಒಕ್ಕೊರಲಿನಿಂದ ಇಂತಹ ಚಟುಪಟಿಕೆಗಳನ್ನು ಖಂಡಿಸಬೇಕಾಗಿದೆ.

ಮುಂಗಾರು

ಬುಧವಾರ, ಅಕ್ಟೋಬರ್ 21, 1987

ಬೇಕಾದದ್ದು ಕ್ರಿಯೆ, ಮಾತುಗಳಲ್ಲ

ಜೀವಜಗತ್ತನ್ನು ದುರಂತದಂಚಿಗೆ ತಳ್ಳುವ ಅಣ್ವಸ್ತ್ರಗಳನ್ನು ಪೂರ್ಣವಾಗಿ ನಿರ್ಮೂಲನ ಮಾಡಬೇಕೆಂದು ಪ್ರಧಾನಿ ರಾಜೀವ್ ಗಾಂಧಿ ಕರೆನೀಡಿದ್ದಾರೆ.

ರಾಜೀವ್‌ಗಾಂಧಿಯವರು ಎತ್ತಿರುವ ಪ್ರಶ್ನೆ ಬಹಳ ಮಹತ್ವದ್ದು. 21ನೇ ಶತಮಾನಕ್ಕೆ ಮುನ್ನುಗ್ಗುವ ಆತ್ಮವಿಶ್ವಾಸದಲ್ಲಿ ನಾವು ವಿನಾಶದಂಚಿಗೆ ಭರದಿಂದ ಜಾರುತ್ತಿದ್ದೇವೆಂಬ ಪರಿವೆ ಯಾರಿಗೂ ಇಲ್ಲ. 'ಆಧುನಿಕ ವಿಜ್ಞಾನ, ತಂತ್ರಜ್ಞಾನದ ಸಾಧನೆಗಳು ನಮಗೆ ಪ್ರಕೃತಿಯ ಮೇಲೆ ಹಿಡಿತ ಸಾಧಿಸಲು ನೆರವಾಗಿದೆ, ನಿಜ. ಆದರೆ ಅದನ್ನು ಮನುಕುಲದ ಉಳಿವಿಗೆ ಪೂರಕವಾಗಿ ಬಳಸಬೇಕಿದೆ' ಎಂದೂ ರಾಜೀವ್ ಗಾಂಧಿಯವರು ಹೇಳಿರುವ ಮಾತುಗಳು ಗಮನಾರ್ಹ.

ಅಣ್ವಸ್ತ್ರದಿಂದಾಗುವ ಅಪಾಯದ ಅರಿವು ಎಲ್ಲರಿಗೂ ಇದೆ. ಆದರೆ ಇದನ್ನೆಲ್ಲ ನಿರ್ಲಕ್ಷಿಸಿ, ವಿಶ್ವದ ಎಲ್ಲ ಸಣ್ಣ, ದೊಡ್ಡ ರಾಷ್ಟ್ರಗಳು ಅಣುವಿಕಿರಣದ ಜತೆ ಚೆಲ್ಲಾಟ ನಡೆಸತೊಡಗಿವೆ. ಪರಸ್ಪರ ಈರ್ಷ್ಯೆ, ದ್ವೇಷಗಳ ದಾವಾನಲಕ್ಕೆ ಎಣ್ಣೆಹೊಯ್ಯಲು ಅಣು ಸಂಶೋಧನಾ ಕೇಂದ್ರಗಳ ಮುಖವಾಡ ಧರಿಸಿ ಅಣ್ವಸ್ತ್ರಗಳನ್ನು ರೂಪಿಸತೊಡಗಿವೆ. ಸಣ್ಣ ರಾಷ್ಟ್ರಗಳ ಸಾಮರ್ಥ್ಯ ಕಡಿಮೆಯಾದಲ್ಲಿ ವಿಶ್ವದ ಶಕ್ತಿ ಬಣಗಳು ಅವಕ್ಕೆ ಶಸಾಸ್ತ್ರಗಳನ್ನು ಪೂರೈಸುವ ಕೆಲಸಗಳಲ್ಲಿ ತೊಡಗಿವೆ.

20ನೇ ಶತಮಾನದ ಪೂರ್ವಾರ್ಧದಲ್ಲಿ ಜಗತ್ತನ್ನೇ ಥರಗುಟ್ಟಿಸಿದ ಎರಡು ವಿಶ್ವಸಮರಗಳಿಂದಲೂ ಮನುಕುಲ ಪಾಠ ಕಲಿತಿಲ್ಲವೆಂಬುದನ್ನು ನಾವೀಗ ನೋಡುತ್ತಿದ್ದೇವೆ. ದ. ಆಫ್ರಿಕಾ, ಅಫಘಾನಿಸ್ತಾನ, ಇರಾನ್, ಇರಾಕ್, ಕೊರಿಯಾ, ವಿಯಟ್ನಾಂ, ನಿಕರಾಗುವಾ ಹೀಗೆ ಜಗತ್ತಿನ ಯಾವೆಡೆಯಲ್ಲಿ ನೋಡಿದರೂ ಹಿಂಸೆಯ ದಾವಾನಲ. ಎರಡನೆ ವಿಶ್ವಸಮರದ ನಂತರ ನಡೆದ ಇಂತಹ ಸಣ್ಣ ಸಮರಗಳಲ್ಲಿ ಈವರೆಗೆ ಸುಮಾರು ಎರಡೂವರೆ ಕೋಟಿ ಜನರು ಪ್ರಾಣಕಳಕೊಂಡಿದ್ದಾರೆಂಬ ಅಧ್ಯಯನವೊಂದರ ವರದಿ ನೋಡಿದರೆ ವಸ್ತುಸ್ಥಿತಿ ಸ್ಪಷ್ಟವಾಗುತ್ತದೆ.

ರಾಜೀವ್ ಗಾಂಧಿಯವರು ಇವತ್ತು ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಅಣ್ವಸ್ತ್ರಗಳನ್ನು ನಿರ್ಮೂಲನ ಮಾಡಲು ಕರೆಕೊಟ್ಟಿದ್ದಾರೆ. ಅಲ್ಲಿ ಸೇರಿದ್ದ ವಿಶ್ವದ ವಿವಿಧೆಡೆಗಳ ನಾಯಕರು ಈ ಪ್ರಸ್ತಾಪದ ಬಗ್ಗೆ ಮೆಚ್ಚುಗೆ ಸೂಚಿಸಿ, ಕರತಾಡನ ಮಾಡಿರಬಹುದು. ಆದರೆ ಕೇವಲ ಕರತಾಡನಗಳಿಂದ ಇವೆಲ್ಲ ಸಾಧ್ಯವಾಗುವಂತಹದ್ದಲ್ಲ.

ವಿಶ್ವದ ಎರಡು ದೈತ್ಯಶಕ್ತಿಬಣಗಳಾದ ಅಮೆರಿಕಾ ಮತ್ತು ರಷ್ಯಾವನ್ನೆ ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಕಳೆದ ವರ್ಷ ಜಿನೇವಾ ಮಾತುಕತೆಗೆ ಮುನ್ನ ಆಗಸ್ಟ್‌ನಲ್ಲಿ ರಷ್ಯಾದ ನಾಯಕ ಗೊರ್ಬಚೆವ್ ಅವರು ಐದು ತಿಂಗಳವರೆಗೆ ಎಲ್ಲ ಭೂಗತ ಅಣುಸ್ಫೋಟಗಳನ್ನು ನಿಷೇಧಿಸಬೇಕೆಂಬ ಪ್ರಸ್ತಾಪ ಮುಂದಿಟ್ಟಾಗ ಅಮೆರಿಕಾದ ಅಧ್ಯಕ್ಷ ರೇಗನ್ ಅದನ್ನು ಒಪ್ಪಿರಲಿಲ್ಲ. ಅನಂತರ ಶಸ್ತ್ರಸಂಗ್ರಹ ಪ್ರಮಾಣ ಕಡಿತದ ಬಗ್ಗೆ ಜಿನೇವಾದಲ್ಲಿ ನಡೆದ ಮಾತುಕತೆ ಕೂಡಾ ವಿಫಲವಾಯಿತು.

ಯಾವುದೇ ರಾಷ್ಟ್ರ ನಾಯಕರು ಜಗತ್ತಿನ ಇತರ ದೇಶಗಳಿಗೆ ಕರೆ ನೀಡುವುದಕ್ಕೆ ಮುಂಚೆ ತಮ್ಮ ದೇಶದ ಕಡೆಗೂ ಗಮನಿಸುವುದು ಒಳ್ಳೆಯದು. ರಾಜೀವ್ ಗಾಂಧಿ ವಿಶ್ವಸಂಸ್ಥೆಯಲ್ಲಿ ಕರೆ ನೀಡಿದ್ದೇನೋ ಸರಿ. ಆದರೆ ಭಾರತೀಯ ಉಪಖಂಡದಲ್ಲಿ ಅಣ್ವಸ್ತ್ರ ನಿಯಂತ್ರಣದ ಬಗ್ಗೆ ಏನನ್ನೂ ಸಾಧಿಸಲು ಸಾಧ್ಯವಾಗಿಲ್ಲವೆಂಬುದನ್ನೂ ಗಮನಿಸಬೇಕು.

ಭಾರತೀಯ ಉಪಖಂಡದಲ್ಲಿ ಪ್ರಮುಖ ಶಕ್ತಿಗಳಾದ ಭಾರತ ಮತ್ತು ಪಾಕಿಸ್ತಾನದ ಸಂಬಂಧವನ್ನೆ ಗಮನಿಸಿ. ಉಭಯ ದೇಶಗಳ ನಾಯಕರು ಪರಮಾಣು ಅಸ್ತ್ರಗಳ ವಿಷಯ ಬಂದಾಗ ಓತಿಕ್ಯಾತಗಳಂತೆ ಬಣ್ಣ ಬದಲಿಸುತ್ತಲೇ ಇದ್ದಾರೆ. ನೆರೆಹೊರೆಯಲ್ಲಿ ಶಸ್ತ್ರಾಸ್ತ್ರ ಜಮಾವಣೆಯಾಗುವುದರ ಬಗ್ಗೆ ಮತ್ತು ಪಾಕಿಸ್ತಾನ ಪರಮಾಣು ಬಾಂಬ್ ತಯಾರಿಸಲು ಯತ್ನಿಸುತ್ತಿರುವುದರ ಬಗ್ಗೆ ಭಾರತದ ಪ್ರಧಾನಿ ರಾಜೀವ್‌ಗಾಂಧಿಯವರು ಆಗಾಗ್ಗೆ ಎಚ್ಚರಿಕೆ ನೀಡುತ್ತಲೇ ಇದ್ದಾರೆ. ಆದರೆ ಇತ್ತೀಚೆಗೆ ಅಮೆರಿಕಾವು ಭಾರತ-ಪಾಕ್ ನಡುವೆ ಅಣ್ವಸ್ತ್ರ ಒಪ್ಪಂದ ನಡೆಯಬೇಕೆಂಬ ಪ್ರಸ್ತಾಪ ಮುಂದಿಟ್ಟಾಗ ಇದೇ ರಾಜೀವ್‌ಗಾಂಧಿ ಅದನ್ನು ಒಪ್ಪಿಕೊಳ್ಳಲಿಲ್ಲ.

ಅದೇ ರೀತಿ ಪಾಕಿಸ್ತಾನದ ಸರ್ವಾಧಿಕಾರಿ ಜಿಯಾವುಲ್‌ಹಕ್ ಭಾರತದ ಜತೆ ಅಣ್ವಸ್ತ್ರ ಒಪ್ಪಂದಕ್ಕೆ ಪಾಕ್ ಸಿದ್ಧ ಎಂಬ ಹೇಳಿಕೆ ನೀಡುತ್ತಲೇ, ಪರಮಾಣು ಸಾಮಗ್ರಿಗಳನ್ನು ಕಳ್ಳತನದಿಂದ ಪಾಕಿಗೆ ಸಾಗಿಸಿ ಬಾಂಬ್ ತಯಾರಿಯಲ್ಲಿ ತೊಡಗಿದ್ದಾರೆ.

ರಾಜಕೀಯ ನಾಯಕರು ಅಣ್ವಸ್ತ್ರದ ವಿಷಯವನ್ನು ಕೇವಲ ರಾಜಕೀಯ ದೃಷ್ಟಿಯಿಂದ ಮಾತ್ರ ನೋಡುತ್ತಾರೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಸ್ವದೇಶದಲ್ಲಿ ಅಧಿಕಾರದ ಕುರ್ಚಿಯನ್ನು ಉಳಿಸಿಕೊಳ್ಳಲು ಇಂತಹ ಹೇಳಿಕೆಗಳು, ರಾಜಕೀಯ ಆವುಟಗಳು ಅವರಿಗೆ ಅನಿವಾರ್ಯವಾಗಿವೆ. ಈ ಹೇಳಿಕೆಗಳ ಹಿಂದೆ ಅವರ ಪ್ರಾಮಾಣಿಕ ಮನಸ್ಸು ಕೆಲಸಮಾಡಿದ ಸಂದರ್ಭಗಳು ಬಹಳ ಕಡಿಮೆ.

ಹಿರೋಶಿಮಾದಲ್ಲಿ ಕನಸುಗಳು ಸುಟ್ಟು ಬೂದಿಯಾದ ಘೋರ ವಾಸ್ತವವನ್ನು ಮರೆಯಬಯಸುವ ಯಾವುದೇ ಜನನಾಯಕರು ಅಣ್ವಸ್ತ್ರ ನಿಷೇಧದ ಮಾತುಗಳನ್ನು ರಾಜಕೀಯ ದಾಳವನ್ನಾಗಿ ಬಳಸುವುದಿಲ್ಲ. ಬದಲಾಗಿ ಮೊದಲು ಏಕಪಕ್ಷೀಯವಾಗಿ ಅಣ್ವಸ್ತ್ರ ನಿಷೇಧಿಸುವ ಗೈರತ್ತು ತೋರುತ್ತಾನೆ. ಅಂತಹ ದೃಢ ಕ್ರಮಗಳು ಮಾತ್ರ ವಿಶ್ವವನ್ನು ಅಣ್ವಸ್ತ್ರದ ದುರಂತ ದಂಚಿನಿಂದ ಪಾರುಮಾಡಲು ಸಾಧ್ಯ.

ಮುಂಗಾರು

ಶನಿವಾರ, ಅಕ್ಟೋಬರ 24, 1987

ರೋಗದ ಮೂಲಕ್ಕೆ ಹೋಗಿ

ರಾಜ್ಯಧಾನಿ ಬೆಂಗಳೂರು ಮತ್ತು ಅದರ ಸುತ್ತುಮುತ್ತಲಿನ ಕೆಲವು ದೊಡ್ಡ ಊರುಗಳಲ್ಲಿ ಮನೆ ದರೋಡೆಯ ಪ್ರಕರಣಗಳು ಈಗೀಗ ಹೆಚ್ಚಾಗತೊಡಗಿವೆ. ಈ ಒಂದು ವಾರದಲ್ಲಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ದರೋಡೆಗಳಾಗಿವೆ. ಬೆಳಗಾವಿ ಜಿಲ್ಲೆಯಲ್ಲಿ ಶಸ್ತ್ರಧಾರಿ ದರೋಡೆಕೋರರು ರೈಲ್ವೆಯಲ್ಲಿ ಗುಂಡು ಹಾರಿಸಿ ಕೆಲವರನ್ನು ಗಾಯಗೊಳಿಸಿ ಪರಾರಿಯಾದರೆಂಬ ವರದಿ ಬಂದಿದೆ.

ದರೋಡೆಯ ಪ್ರಕರಣಗಳು ಹೆಚ್ಚಿದಂತೆ ಪೊಲೀಸರ ಬಂದೋಬಸ್ತು ಅಥವಾ ಕಾವಲು ಬಿಗುವಾಗುತ್ತಿದೆಯೆಂಬ ವರದಿಗಳೂ ಬರುತ್ತಿವೆ. ಎರಡುವಾರಗಳ ಹಿಂದೆ ಬೆಂಗಳೂರು ನಗರದ ಹೊರವಲಯದಲ್ಲಿ ಡಕಾಯಿತರು ಅಧಿಕಾರಿಯೊಬ್ಬರ ಮನೆಯ ಬಾಗಿಲು ಒಡೆದು ಕಾವಲುಗಾರನ ಕೊಲೆಮಾಡಿ ನಗದುಹಣ ಮತ್ತು ಚಿನ್ನಾಭರಣಗಳನ್ನು ದೋಚಿಕೊಂಡು ಹೋಗಿದ್ದರು. ಭೀಕರವಾದ ಈ ದರೋಡೆ ನಡೆದ ಮೇಲೆ ರಾಜ್ಯದ ಗೃಹ ಸಚಿವರು ದರೋಡೆ ತಡೆಗಟ್ಟಲು ವಿಶೇಷ ಪೊಲೀಸ್ ದಳದ ವ್ಯವಸ್ಥೆ ಮಾಡುವು[illegible]ಾಗಿ ಹೇಳಿದ್ದರು. ಆದರೂ ದರೋಡೆಗಳು ಅಲ್ಲಲ್ಲಿ ನ[illegible]ತ್ತಲೇ ಇವೆ. ದೊಡ್ಡ ಊರುಗಳಲ್ಲಿ ಉಳ್ಳವರಿಗೆ [illegible]ಯಿಂದ ನಿದ್ರೆ ಮಾಡಲು ಸಾಧ್ಯವಾಗದ ಒಂದು ಪರಿಸ್ಥಿತಿ ಈಗ ನಿರ್ಮಾಣವಾಗುತ್ತಿದೆ.

ಕಳೆದ ಒಂದೆರಡು ವರ್ಷಗಳಿಂದ ಕರ್ನಾಟಕದ ಹಲವೆಡೆ ದರೋಡೆ ಪ್ರಕರಣಗಳು ಹೆಚ್ಚುತ್ತಿರುವುದನ್ನು ನಾವು ಕಂಡಿದ್ದೇವೆ. ಈ ಎಲ್ಲಾ ದರೋಡೆ ಪ್ರಕರಣಗಳು ಕೆಲವೇ ಮಂದಿ ಪುಂಡರ ಒಂದೇ ತಂಡದಿಂದ ನಡೆದಿವೆಯೆನ್ನಲಾಗದು. ದರೋಡೆಕೋರರ ತಂಡಗಳು ಅಲ್ಲಲ್ಲಿ ಹುಟ್ಟಿಕೊಳ್ಳುತ್ತಿವೆಯೆಂಬ ಸಾಧಾರವಾದ ತೀರ್ಮಾನಕ್ಕೆ ನಾವೀಗ ಬರಬೇಕಾಗಿದೆ. ವಿಶೇಷ ಪೊಲೀಸ್ ದಳದ ಕಾವಲು ಎಷ್ಟೇ ಬಿಗುವಾದರೂ ದರೋಡೆಗಳನ್ನು ತಡೆಗಟ್ಟಲುಸಾಧ್ಯವಾಗಿಲ್ಲ. ನಡೆಯುತ್ತಲೇ ಇರುವ ದರೋಡೆ ಪ್ರಕರಣಗಳಲ್ಲಿ ಒಂದನ್ನಾದರೂ ಪತ್ತೆಹಚ್ಚಲು ಇದುವರೆಗೆ ಸಾಧ್ಯವಾಗಿಲ್ಲ.

ಇದರಲ್ಲಿ ಪೊಲೀಸರ ಕರ್ತವ್ಯ ಲೋಪವನ್ನು ಕಾಣುವುದು ಒಂದು ವಾಡಿಕೆಯ ವಿಚಾರ. ದರೋಡೆಗಳು ನಡೆಯದಂತೆ ನೋಡಿಕೊಳ್ಳಬೇಕಾದವರು ಪೊಲೀಸರು. ಆದ್ದರಿಂದ ನಡೆಯುತ್ತಿರುವ ಎಲ್ಲ ದರೋಡೆ ಪ್ರಕರಣಗಳಲ್ಲೂ ಪೊಲೀಸರ ಅದಕ್ಷತೆ ಅಥವಾ ಕರ್ತವ್ಯಚ್ಯುತಿಯನ್ನು ಕಾಣುವುದು ತರ್ಕಬದ್ಧ ವಿಚಾರವೆನ್ನಿಸುತ್ತದೆ ನಿಜ.

ಆದರೆ ನಮ್ಮ ದೃಷ್ಟಿಯಲ್ಲಿ ಇದು ಪೊಲೀಸರ ಕಾರ್ಯಾಚರಣೆಯೊಂದರಿಂದಲೇ ತಡೆಗಟ್ಟಬಹುದಾದಂತಹ ಒಂದು ಜಾಡ್ಯವಲ್ಲ. ಅಥವಾ ಇದೊಂದು ಮಾಮೂಲಿಯಾದ ಕಾನೂನು-ವ್ಯವಸ್ಥಾ ಪಾಲನೆಯ ವಿಷಯವೂ ಅಲ್ಲ. ಇದು ನಮ್ಮ ಸಮಾಜದಲ್ಲೀಗ ಉಲ್ಬಣಿಸುತ್ತಿರುವ ಆರ್ಥಿಕ ವಿಷಮತೆಯ ಮೂಲವಾದ ಒಂದು ಹಿಂಸಾ ಪ್ರವೃತ್ತಿ. ಉತ್ತಮಬದುಕಿನ ಆಸೆ ಹೊತ್ತು ಮೀಸೆ ಮೂಡಿಸಿಕೊಂಡ ಯುವಜನಾಂಗದ ಹತಾಶೆಯ ಲಕ್ಷಣವಿದು. ಎಲ್ಲ ದೊಡ್ಡ ಊರುಗಳಲ್ಲಿ ಇಂದು ನಿರುದ್ಯೋಗಿ ಯುವಕರ ಸೇನೆ ಬೆಳೆಯುತ್ತಿದೆ. ಸಭ್ಯ ಜೀವನ ನಡೆಸುವ ಎಲ್ಲ ಅವಕಾಶಗಳ ಬಾಗಿಲುಗಳೂ ಅವರ ಪಾಲಿಗೀಗ ಮುಚ್ಚಿಕೊಳ್ಳುತ್ತಿವೆ. ಸತ್ಪ್ರಜೆಗಳಾಗಿ ಬದುಕುವ ಅವಕಾಶವೇ ಇಲ್ಲವೆಂದಾಗ ವಾಮಮಾರ್ಗಗಳ ಅನುಸರಣೆ ಅನಿವಾರ್ಯವಾಗುತ್ತದೆ. ದರೋಡೆ ಇಂತಹ ವಾಮ ಮಾರ್ಗಗಳಲ್ಲೊಂದು. ತಮ್ಮ ಜೀವಕ್ಕೆ ಬೆಲೆಸಿಗದ ಒಂದು ವಿಷಮ ಆರ್ಥಿಕ ಹಾಗೂ ಸಾಮಾಜಿಕ ಪರಿಸರದಲ್ಲಿ ಹತಾಶರಾದ ಯುವಕರು ತಮ್ಮ ಸುಖಕ್ಕಾಗಿ ಅನ್ಯರ ಜೀವತೆಗೆಯುವ ಪಾಶವೀ ಕೃತ್ಯಕ್ಕಿಳಿಯುತ್ತಾರೆ. ಅದರಲ್ಲಿಯೂ ವಾಮಮಾರ್ಗದಲ್ಲಿ ಶ್ರೀಮಂತಿಕೆಯನ್ನು ಗಳಿಸಿ ಬದುಕಿನ ರೀತಿಗೆ ವೈಭವದ ಮೆರುಗು ಹಾಕಿಕೊಂಡಿರುವ ಜನರು ಇವರ ವಕ್ರ ದೃಷ್ಟಿಗೆ ಮೊದಲು ಬೀಳುತ್ತಾರೆ.

ರಾಜ್ಯದಲ್ಲಿ ನಡೆದಿರುವ ಅಥವಾ ನಡೆಯುತ್ತಿರುವ ಪ್ರತಿಯೊಂದು ದರೋಡೆ ಪ್ರಕರಣದಲ್ಲಿ ನಾವು ಇದನ್ನು ಗುರುತಿಸಬಹುದು. ಈ ಕಾರಣದಿಂದಾಗಿ ದರೋಡೆ ಪ್ರಕರಣಗಳನ್ನು ಪೊಲೀಸ್ ಕಾವಲಿನಿಂದ ತಡೆಗಟ್ಟಲಾಗುವುದಿಲ್ಲ. ದರೋಡೆ ಪ್ರಕರಣಗಳನ್ನು ಕಾನೂನು- ವ್ಯವಸ್ಥಾಪಾಲನೆಯ ಸರಳ ಪ್ರಶ್ನೆಯಾಗಿ ತೆಗೆದುಕೊಳ್ಳುವುದು ಸರಿಯಲ್ಲ. ಇದು ನಮ್ಮ ಸಮಾಜದಲ್ಲಿ ಇಂದು ಉಲ್ಬಣಿಸುತ್ತಿರುವ ಆರ್ಥಿಕ-ಸಾಮಾಜಿಕ ವಿಷಮತೆಯ ಪರಿಣಾಮವೆಂದು ತಿಳಿಯಬೇಕಾಗುತ್ತದೆ. ಉತ್ತಮಬದುಕಿನ ಬಾಯಾರಿಕೆ ಇರುವ ಯುವ ಜನಾಂಗಕ್ಕೆ ಎಲ್ಲ ಅವಕಾಶಗಳ ಬಾಗಿಲು ತೆರೆಯಬೇಕಾಗುತ್ತದೆ. ಉಳ್ಳವರ ಅಟ್ಟಹಾಸಕ್ಕೆ ಸಭ್ಯತೆಯ ಬೇಲಿ ಹಾಕಬೇಕಾಗುತ್ತದೆ. ವಾಮ ಮಾರ್ಗದ ಅನುಸರಣೆ ಅಸಾಧ್ಯವೆನ್ನಿಸುವಂತಹ ವಾತಾವರಣ ನಿರ್ಮಾಣವಾಗಬೇಕಾಗುತ್ತದೆ. ದರೋಡೆ ಪ್ರಕರಣಗಳಿಗೆ ಪುಂಡು ಪ್ರವೃತ್ತಿ ಕಾರಣವಾಗಿರುವಷ್ಟೇ ಅತಿ ಶ್ರೀಮಂತಿಕೆಯ ಪ್ರದರ್ಶನವೂ ಕಾರಣವೆಂಬುದನ್ನು ನಾವು ಮರೆಯಬಾರದು.

ರಾಜ್ಯದ ಆಡಳಿತ ಸೂತ್ರ ಹಿಡಿದಿರುವ ಮಂದಿ ಇನ್ನಾದರೂ ದರೋಡೆ ಪ್ರಕರಣಗಳನ್ನು ಕಾನೂನು-ವ್ಯವಸ್ಥಾ ಪಾಲನೆಯ ಸರಳ ವಿಷಯವಾಗಿ ಪರಿಗಣಿಸಬಾರದು. ಇದಕ್ಕೆ ಆರ್ಥಿಕ ಹಾಗೂ ಸಾಮಾಜಿಕ ವಿಷಮತೆಯ ಆಯಾಮಗಳಿವೆಯೆಂಬುದನ್ನು ಅರಿತುಕೊಳ್ಳಬೇಕು. ದರೋಡೆ ಪ್ರಕರಣವೇ ಒಂದು ರೋಗವೆಂದು ಪರಿಗಣಿಸಿ ಅದಕ್ಕೆ ಪೊಲೀಸ್ ಕಾರ್ಯಾಚರಣೆಯ ಚಿಕಿತ್ಸೆ ಮಾಡಬಾರದು. ಇದನ್ನು ನಮ್ಮ ಸಾಮಾಜಿಕ ರೋಗದ ಲಕ್ಷಣವೆಂದು ತಿಳಿದು ಅದಕ್ಕೊಂದು ಸೂಕ್ತವಾದ ಚಿಕಿತ್ಸೆ ಮಾಡಬೇಕು.

ಅಧಿಕಾರಸ್ಥರು ಮತ್ತು ವಿಚಾರವಂತ ಜನ ಈ ದಿಸೆಯಲ್ಲಿಯೋಚನೆ ಮಾಡದಿದ್ದರೆ ದರೋಡೆಕೋರರ ಗುಂಪುಗಳು ಪ್ರತಿ ಊರಿನಲ್ಲೂ ಹುಟ್ಟಿಕೊಳ್ಳುವ ಅಪಾಯವಿದೆ. ದರೋಡೆಯಂತಹ ಪುಂಡು ಪ್ರವೃತ್ತಿಯನ್ನು ಪೋಷಿಸುತ್ತಿರುವ ನಿರುದ್ಯೋಗವನ್ನು ಮೊದಲು ನಿವಾರಿಸಬೇಕು. ಶ್ರೀಮಂತಿಕೆಯ ಅಟ್ಟಹಾಸಕ್ಕೆ ಮುಟ್ಟುಗೋಲು ಹಾಕಬೇಕು. ಆಗ ಮಾತ್ರ ಎಲ್ಲರಿಗೂ ರಾತ್ರಿ ಹೊತ್ತು ನೆಮ್ಮದಿಯಿಂದ ನಿದ್ರಿಸಲಾದೀತು.

ಮುಂಗಾರು
ಭಾನುವಾರ, 8, ನವಂಬರ್ 1987

ಬೇಕು—ಶಿಕ್ಷಣರಂಗಕ್ಕೆ ಕಾಯಕಲ್ಪ

ಈ ಶತಮಾನದ ಅಂತ್ಯದ ವೇಳೆಗೆ ಮಾನವ ಸಮುದಾಯಕ್ಕೆ ಎದುರಾಗುವ ಸವಾಲುಗಳನ್ನು ಎದುರಿಸಲು ಸನ್ನದ್ಧರಾಗಿಸುವಂತೆ ಶಿಕ್ಷಣ ಪದ್ಧತಿಯನ್ನು ಪುನರೂಪಿಸಬೇಕೆಂದು ಭಾರತದ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಆರ್. ಎಸ್. ಪಾಠಕ್ ಹೇಳಿದ್ದಾರೆ.

'ಸುತ್ತಲೂ ಅರಿವಿನ ಸ್ಫೋಟವಾಗುತ್ತಿದ್ದು, ಅದರ ಪ್ರಯೋಜನ ಪಡೆಯಲು ಈಗಿನ ಶಿಕ್ಷಣ ವಿಧಾನ ಸಮರ್ಥವಿದೆಯೆ ?' ಎಂಬ ಪ್ರಶ್ನೆಯೆತ್ತಿರುವ ಪಾಠಕ್, ಈಗಿನ ಶಿಕ್ಷಣ ವ್ಯವಸ್ಥೆ ಭಾರತೀಯ ಸನ್ನಿವೇಶಕ್ಕೆ ಹೊಂದಿಕೊಳ್ಳುವ ಬಗ್ಗೆ ಚಿಂತನೆ ನಡೆಸಲೂ ಕರೆ ನೀಡಿದ್ದಾರೆ.

ನ್ಯಾಯಮೂರ್ತಿ ಪಾಠಕ್ ಎತ್ತಿರುವ ಪ್ರಶ್ನೆಗಳು ಅತ್ಯಂತ ಮಹತ್ವಪೂರ್ಣ. ಶಿಕ್ಷಣ, ಮನುಷ್ಯನ ಬದುಕನ್ನು ರೂಪಿಸುವ ಮೂಲಸಾಧನ. ಜಡ್ಡುಗಟ್ಟಿದ ನಮ್ಮ ಪ್ರತಿಗಾಮಿ ವ್ಯವಸ್ಥೆಯನ್ನು ಅವಲೋಕಿಸಿದಾಗಲಂತೂ ಇಲ್ಲಿ ಶಿಕ್ಷಣಕ್ಕೆ ನೀಡಬೇಕಾದ ಮಹತ್ವ ಇನ್ನಷ್ಟು ಹೆಚ್ಚಾಗುತ್ತದೆ. ಮನುಷ್ಯನ ಬದುಕನ್ನು ರೂಪಿಸುವ, ಬದುಕಿಗೆ ಒಂದು ಅರ್ಥ ನೀಡುವ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವಾಗ, ಸಮಾಜಕ್ಕಂಟಿದ ಸರ್ವ ರೋಗಗಳ ಎಲ್ಲ ಆಯಾಮಗಳನ್ನು ಎಚ್ಚರದಿಂದ ಪರಿಶೀಲಿಸಿ ರೂಪಿಸಬೇಕಾದ್ದು ಹೊಣೆಗಾರ ಸರ್ಕಾರದ ಕರ್ತವ್ಯ.

ಆದರೆ ನಮ್ಮ ಶಿಕ್ಷಣ ವ್ಯವಸ್ಥೆ ಇವತ್ತು ಅಂತಹ ಮುಕ್ತಮಾರ್ಗವನ್ನು ಹಿಡಿದಿಲ್ಲ. ಭಾರತೀಯ ಸಮಾಜಕ್ಕಂಟಿದ ಸಾಮಾಜಿಕ ಅಸಮತೆಯ ಅರ್ಬುದ ಶಿಕ್ಷಣ ಕ್ಷೇತ್ರಕ್ಕೂ ಅಂಟಿದೆ. ನಮ್ಮ ಸಾರ್ವಜನಿಕ ಜೀವನಕ್ಕಂಟಿದ ಭ್ರಷ್ಟತೆಯ ಪಾಪ ಕೂಡಾ ಶಿಕ್ಷಣ ಕ್ಷೇತ್ರವನ್ನು ಬಿಟ್ಟಿಲ್ಲ. ಶಿಕ್ಷಣ ವ್ಯವಸ್ಥೆ ನಮ್ಮ ರೋಗಗ್ರಸ್ತ ಸಮಗ್ರ ವ್ಯವಸ್ಥೆಯ ಒಂದು ಮುಖವಾಗಿದೆ.

ಇಲ್ಲಿ ವ್ಯವಸ್ಥೆಯನ್ನು ಬದಲಾಯಿಸುವ ಆಶಯವುಳ್ಳವರೆಲ್ಲಾ ಮೊದಲು ಶಿಕ್ಷಣ ರಂಗಕ್ಕೆ ಆದ್ಯ ಗಮನ ನೀಡಬೇಕಾಗುತ್ತದೆ. ಶಿಕ್ಷಣ ಪ್ರತಿಪಾದಿಸಬೇಕಾದ ಮೌಲ್ಯಗಳತ್ತ ನಮ್ಮ ಕಾಳಜಿ ಹೆಚ್ಚಾದಷ್ಟೂ ಒಟ್ಟು ವ್ಯವಸ್ಥೆಯ ಸುಧಾರಣೆಯತ್ತ ನಾವು ಮಹತ್ತರ ಹೆಜ್ಜೆಯಿಟ್ಟಂತಾಗುತ್ತದೆ.

ನಮ್ಮಲ್ಲೀಗ ಪದವಿ ಶಿಕ್ಷಣ ಮಾಮೂಲಾಗಿ ಹೋಗಿದೆ. ಪದವಿ ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ನೀಡಬೇಕಾದ ಮಹತ್ವವನ್ನು ನಾವಿನ್ನೂ ಅರಿತುಕೊಂಡಿಲ್ಲ. 'ನೀರಿಳಿಯದ ಗಂಟಲಿಗೆ ಕಡುಬು ತುರುಕಿದಂತೆ' ನಾವು ವಿದ್ಯಾರ್ಥಿಗಳ ಮನಸ್ಸಿಗೆ ಕಂತೆ ಪುಸ್ತಕಗಳ ಜ್ಞಾನವನ್ನು ಭಟ್ಟಿ ಇಳಿಸುತ್ತಿದ್ದೇವೆ. ವರ್ಷಗಳ ಕಾಲ ವಿದ್ಯಾರ್ಥಿ ಕಲಿತದ್ದೇನು ಎನ್ನುವುದನ್ನು ಪರೀಕ್ಷಿಸಲು ಜ್ಞಾಪಕಶಕ್ತಿಗೆ ಮೊರೆಹೋಗುವಂತೆ ಮಾಡುತ್ತೇವೆ. ಕಂಠಪಾಠ ಹೊಡೆದು, ಕಲಿತ ಅಕ್ಷರಗಳನ್ನು ಚಾಚೂತಪ್ಪದಂತೆ ಗಿಳಿಪಾಠ ಒಪ್ಪಿಸುವ ಜ್ಞಾಪಕಶಕ್ತಿಯನ್ನೇ ಬುದ್ಧಿಮತ್ತೆಯೆಂಬುದಾಗಿ ಗಣಿಸಿ ಸರಾಗವಾಗಿ ಅಂಕಗಳನ್ನು ಕೊಡಿಸುತ್ತೇವೆ. ವಿದ್ಯಾರ್ಥಿಯು ಗ್ರಹಿಸುವ ಶಕ್ತಿ ಹಾಗೂ ನೆನಪಿನ ಶಕ್ತಿಯ ನಡುವಣ ಸೂಕ್ಷ್ಮ ವ್ಯತ್ಯಾಸವನ್ನು ಉದ್ದೇಶ ಪೂರ್ವಕವಾಗಿ ಮರೆತು, ದಡ್ಡ ಹಾಗೂ ಬುದ್ಧಿವಂತನ ನಡುವಣ ಗೆರೆ ಎಳೆಯಲು ನೆನಪಿನ ಶಕ್ತಿಯನ್ನು ಮಾತ್ರ ಆರಿಸಿಕೊಂಡಿದ್ದೇವೆ. ಹಾಗಾಗಿ ಈಗ ವಿಶ್ವವಿದ್ಯಾನಿಲಯಗಳಿಂದ ಹೊರಬೀಳುವ ಪದವೀಧರರು ಹೊರಜಗತ್ತಿನ ಪ್ರಾಯೋಗಿಕ ಬದುಕಿಗೆ ಹೊಂದಿಕೊಳ್ಳಲು, ಬದುಕು ಒಡ್ಡುವ ಮೌಲ್ಯಪರೀಕ್ಷೆಯಲ್ಲಿ ಉತ್ತೀರ್ಣರಾಗಲು ವಿಫಲರಾಗುತ್ತಾರೆ.

ಇದು ಒಂದು ಮಗ್ಗುಲಾಯಿತು. ಇಲ್ಲಿ ಯೋಚಿಸಲೇಬೇಕಾದ ಇನ್ನೊಂದು ಮಗ್ಗುಲೂ ಇದೆ. ಶಿಕ್ಷಣ ಎನ್ನುವುದು ಅರಿವಿನ ಮಾರ್ಗ. ನಾವು ಏನನ್ನು ಅರಿವು ಮೂಡಿಸುತ್ತೇವೆ ಎನ್ನುವುದಕ್ಕಿಂತ ಆ ಅರಿವನ್ನು ಹೇಗೆ ಮೂಡಿಸುತ್ತೇವೆ ಅನ್ನುವುದು ಇಲ್ಲಿ ಅಷ್ಟೇ ಮುಖ್ಯ ಪ್ರಶ್ನೆಯಾಗಬೇಕು. ವಿದ್ಯಾರ್ಥಿಗಳಿಗೆ ತೀರಾ ಅಪರಿಚಿತವಾದ ಭಾಷಾ ಮಾಧ್ಯಮಗಳನ್ನು ಅವರ ಮನಸ್ಸಿನ ಮೇಲೆ ಒತ್ತಾಯಪೂರ್ವಕವಾಗಿ ತುರುಕುವುದರ ಮೂಲಕ ಈ ನೆಲದಲ್ಲಿ ಹರಡಿರುವ ಅವರ ಮನಸ್ಸಿನ ತಾಯಿಬೇರುಗಳನ್ನು ನಾವು ತಬ್ಬಲಿಯಾಗಿಸುತ್ತಿದ್ದೇವೆ. ಶಿಕ್ಷಣ ಎಂದರೆ ಸಮಾಜದಲ್ಲಿ ಹಣ ಗಳಿಸುವ ಒಂದು ವಿಧಾನ ಎಂಬ ತಪ್ಪು ಕಲ್ಪನೆಯ ಜತೆಗೇ ಬದುಕಿನ ಮೌಲ್ಯಗಳ ಜತೆ ಅವರಿಗಿರುವ ಸಂಬಂಧವನ್ನು ಇನ್ನಷ್ಟು ಅಸ್ಪಷ್ಟಗೊಳಿಸುತ್ತೇವೆ. ಹೀಗಾಗಿಯೇ ಇಂದು ಈ ವೇಗದಲ್ಲಿ ಹುಟ್ಟಿ ಉನ್ನತ ಶಿಕ್ಷಣ ಪಡೆದ ಹಲವಾರು ಜನರೂ ಇಲ್ಲಿನ ವಾತಾವರಣದಿಂದ ದಿಗ್ಭ್ರಮೆಗೊಂಡು ಈ ನೆಲಕ್ಕೆ ಅಪರಿಚಿತರಾಗುತ್ತಾರೆ.

ನ್ಯಾಯಮೂರ್ತಿ ಪಾಠಕ್ ಅವರು ಈ ಅಂಶವನ್ನು ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಹಾಗಾಗಿಯೇ ಶಿಕ್ಷಣ ವ್ಯವಸ್ಥೆಯ ಬದಲಾಗಬೇಕೆಂದು ಅವರು ಬಯಸಿದ್ದಾರೆ.

ಆದರೆ ನ್ಯಾಯಮೂರ್ತಿ ಪಾಠಕ್ ಅವರು ಗಮನಿಸಿದ, ಗಮನಿಸಿದರೂ ವ್ಯಾಖ್ಯೆಮಾಡದ ಇನ್ನೂ ಹಲವು ಸಮಸ್ಯೆಗಳು ನಮ್ಮ ಶಿಕ್ಷಣ ರಂಗವನ್ನು ಕಾಡುತ್ತಿವೆ. ಅವುಗಳಲ್ಲಿ ಮುಖ್ಯವಾದದ್ದು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಾಗಿರುತ್ತಿರುವ ಬಂಡವಾಳ ಪ್ರಾಬಲ್ಯ. ಜನಸಮುದಾಯದ ಪ್ರತಿನಿಧಿಕ ಸ್ವರೂಪವಾಗಿದ್ದು ಎಲ್ಲ ಜನರಿಗೆ ಸಮಾನನ್ಯಾಯ ಸಲ್ಲಿಸಬೇಕಾಗಿರುವ ಸರ್ಕಾರ ಇಂದು ಶಿಕ್ಷಣವನ್ನು ಖಾಸಗಿ ವ್ಯಕ್ತಿಗಳ ಕೈಗೊಪ್ಪಿಸುವ ನೀಚ ಕಾರ್ಯದಲ್ಲಿ ತೊಡಗಿದೆ. ಎಲ್ಲರಿಗೂ ಕಡ್ಡಾಯ ಉಚಿತ ಶಿಕ್ಷಣ ಒದಗಿಸುವುದರ ಮೂಲ ಉದ್ದೇಶವೇ ಇದರಿಂದ ಭಗ್ನಗೊಂಡಂತಾಗಿದೆ. ಸಾಮಾಜಿಕ ನ್ಯಾಯ ಪರಿಪಾಲನೆ ಅಸಾಧ್ಯವಾಗಿ ಹೋಗಿದೆ. ಉಳ್ಳವರು ತಮ್ಮದೇ ಆದ ಶಾಲೆಗಳನ್ನು ಸ್ಥಾಪಿಸಿಕೊಂಡು, ಇಲ್ಲದವರನ್ನು ಸುಲಿಯುವ ಕಾರ್ಯದಲ್ಲಿ ತೊಡಗಿದ್ದಾರೆ. ಜತೆಗೆ ಉಳ್ಳವರು ನೀಡುವ ಆಂಗ್ಲ ಮಾಧ್ಯಮ ಶಿಕ್ಷಣ, ಸಮಾಜದ ಕೆಳಸ್ತರದಿಂದ ಬಂದಿರುವ ಸಾಮಾಜಿಕವಾಗಿಯೂ ನಗಣ್ಯರೆನಿಸಿರುವ ಜನಸಮುದಾಯಗಳನ್ನು ಸಾಮಾಜಿಕವಾಗಿ ಮತ್ತಷ್ಟು ಹೀನ ಸ್ಥಿತಿಗೆ ತಳ್ಳತೊಡಗಿವೆ. ಆಂಗ್ಲ ಮಾಧ್ಯಮ ಶಿಕ್ಷಣ ಪಡೆದು, ಆಳುವ ವರ್ಗಕ್ಕೆ ಸೇರಬಹುದಾದ ಉನ್ನತ ಹುದ್ದೆಗಳನ್ನು ಪಡೆಯಬೇಕಿದ್ದರೆ ಸಾವಿರಾರು ರೂಪಾಯಿ ಚೆಲ್ಲಬಲ್ಲ ಮೇಲ್ವರ್ಗದವರಿಗೆ ಮಾತ್ರ ಸಾಧ್ಯವಾಗುವ ಶೋಚನೀಯ ಸ್ಥಿತಿ ನಮ್ಮಲ್ಲಿದೆ. ಈ ಸ್ಥಿತಿ ತಪ್ಪಬೇಕು. ಜನಸಮುದಾಯದ ಮಧ್ಯೆ ಆಳುವ-ಆಳಿಸಿಕೊಳ್ಳುವ ವರ್ಗ ಪ್ರಭೇದಗಳನ್ನು ಸೃಷ್ಟಿಸಲು ಶಿಕ್ಷಣವನ್ನೇ ಆಯುಧವನ್ನಾಗಿ ಬಳಸಿಕೊಳ್ಳುವ ಕುತಂತ್ರ ಶಿಕ್ಷಣದ ಈ ಖಾಸಗೀಕರಣದಿಂದಾಗಿ ಉಂಟಾಗಿದೆ.

ದಿಕ್ಕು ತಪ್ಪುತ್ತಿರುವ ವ್ಯವಸ್ಥೆ, ಹೆಚ್ಚಾಗುತ್ತಿರುವ ಆರ್ಥಿಕ ಅಸಮಾನತೆ, ವಿಜೃಂಭಿಸುತ್ತಿರುವ ಶೋಷಣೆಗಳ ವಿರುದ್ಧ ಮುಖಎತ್ತಿ ಪ್ರತಿಭಟಿಸಲು ತಾಖತ್ತು ನೀಡುವ ಶಿಕ್ಷಣ ಎಲ್ಲರಿಗೂ ಉಚಿತವಾಗಿ ಸಿಗಬೇಕಾಗಿದೆ.